# ಸಮಾಜ ವಿಜ್ಞಾನ

## SSLC

## Exam ಸ್ಕೋರರ್

ರಚನೆ – ಶ್ರೀ ಶರಣಬಸಪ್ಪ ಗುಡೂರು ಸಶಿ
ಸರಕಾರಿ ಪ್ರೌಢ ಶಾಲೆ ಗುಂಡ
ತಾ : ಸಿಂಧನೂರು ಜಿ : ರಾಯಚೂರು
೯೪೮೧೫೪೯೬೯೫

## ಇತಿಹಾಸ

## ಅಧ್ಯಾಯ 1 ಭಾರತಕ್ಕೆ ಯುರೋಪಿಯನ್ನರ ಆಗಮನ

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. ಮಧ್ಯಯುಗದಲ್ಲಿ __________ ನಗರವನ್ನು ಯುರೋಪಿನ ವ್ಯಾಪಾರದ ಹೆಬ್ಬಾಗಿಲು ಎಂದು ಕರೆಯುತ್ತಿದ್ದರು. – **ಕಾನ್‌ಸ್ಟಾಂಟಿನೋಪಲ್ ನಗರ.**
2. ಮಧ್ಯಯುಗದಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ಯುರೋಪಿನ ಹೆಬ್ಬಾಗಿಲು ಎಂದು ಕರೆಯಲು ಕಾರಣ – **ಅಂತರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗಿದ್ದರಿಂದ.**
3. ಮಧ್ಯಯುಗದಲ್ಲಿ ಏಷ್ಯಾ ದೇಶಗಳ ವ್ಯಾಪಾರದ ಮೇಲೆ __________ ರು ಏಕಸ್ವಾಮ್ಯ ಸಾಧಿಸಿದ್ದರು. – **ಅರಬ್ಬರು.**
4. ಮಧ್ಯಯುಗದಲ್ಲಿ ಯುರೋಪಿನ ದೇಶಗಳ ವ್ಯಾಪಾರದ ಮೇಲೆ __________ ವರ್ತಕರು ಏಕಸ್ವಾಮ್ಯ ಸಾಧಿಸಿದ್ದರು. – **ಇಟಲಿಯ ವರ್ತಕರು.**
5. __________ ಸರಕುಗಳು ಇಟಲಿಯ ವರ್ತಕರಿಗೆ ಒಳ್ಳೆಯ ಲಾಭವನ್ನು ತಂದುಕೊಡುತ್ತಿದ್ದವು. – **ಏಷ್ಯಾದ ಸರಕುಗಳು.**
6. ಭಾರತಕ್ಕೆ ________ ರಲ್ಲಿ __________ ರು ಹೊಸ ಜಲಮಾರ್ಗವನ್ನು ಕಂಡುಹಿಡಿದರು. – **1498ರಲ್ಲಿ, ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮ.**
7. ಭಾರತದೊಂದಿಗೆ ಮರುವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ________ ರು ಮೊದಲಿಗರಾದರು. – **ಪೋರ್ಚುಗೀಸರು.**
8. ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು – ಪೋರ್ಚುಗೀಸರು.
9. ವಾಸ್ಕೋಡಿಗಾಮನ ನಂತರ ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ __________ ಭಾರತಕ್ಕೆ ಬಂದನು. – **ಫ್ರಾನ್ಸಿಸ್ಕೋ ಡಿ ಅಲ್ಮೇಡ್.**
10. __________ ನು ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದಾನೆ. – **ಅಲ್ಫೋನ್ಸೊ ಅಲ್ಬುಕರ್ಕ.**
11. ________ ನು ________ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದನು. – **ಅಲ್ಫೋನ್ಸೊ ಅಲ್ಬುಕರ್ಕ. 1510.**
12. ಡಚ್‌ರು ________ ದೇಶದವರು – **ಹಾಲೆಂಡ್ ಅಥವಾ ನೆದರ್‌ಲ್ಯಾಂಡ್.**
13. ಪೂರ್ವ ದೇಶಗಳಲ್ಲಿ ವ್ಯಾಪಾರ ನಡೆಸುವ ಉದ್ದೇಶದಿಂದ __________ರಲ್ಲಿ ಡಚ್ಚರು ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿದರು. **– 1602**
14. ಇಂಗ್ಲೆಂಡಿನ ಎಲಿಜಬೆತ್ ರಾಣಿಯು ________ ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪೂರ್ವದೇಶಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು – **1600.**
15. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಔಪಚಾರಿಕವಾಗಿ ________ ರಲ್ಲಿ ವ್ಯಾಪಾರವನ್ನು ಆರಂಭಿಸಿತು. – **ಸಾ ಶ 1613.**
16. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಮೊಘಲ್ ಸಾಮ್ರಾಟನಾದ __________ ನು ಮೊದಲ ಫ್ಯಾಕ್ಟರಿ ಅಥವಾ ದಾಸ್ತಾನು ಮಳಿಗೆಯನ್ನು ತೆರೆಯಲು ಅನುಮತಿ ನೀಡಿದನು. – **ಜಹಂಗೀರ,**
17. __________ ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ________ ನು ಬಂದನು. – **1617, ಸರ್, ಥಾಮಸ್ ರೋ.**
18. __________ರಲ್ಲಿ ಚಂದ್ರಗಿರಿಯ ರಾಜನಿಂದ ಮದ್ರಾಸ್‌ನಲ್ಲಿ ಭೂಮಿಯನ್ನು ಪಡೆದು ________ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು. – **1639, ಸೆಂಟ್ ಜಾರ್ಜ್ ಫೋರ್ಟ್.**
19. ಇಂಗ್ಲೆಂಡಿನ ರಾಜಕುಮಾರ __________ ನು ಬಾಂಬೆಯನ್ನು ________ ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡ್ಸ ಬಾಡಿಗೆಗೆ ವಹಿಸಿಕೊಟ್ಟನು. – **ಎರಡನೇ ಚಾರ್ಲ್ಸ್, 1668.**
20. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲಿಷರು ________ ನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. – **ಕಲ್ಕತ್ತ.**
21. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಸ್ಥಾಪನೆಯಾದ ವರ್ಷ – **1664.**
22. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ________ ರಲ್ಲಿ ತನ್ನ ಪ್ರಪ್ರಥಮ ದಾಸ್ತಾನು ಮಳಿಗೆ(ಕೋಠಿ)ಯನ್ನು ________ ನಲ್ಲಿ ಆರಂಭಿಸಿತು. – **1668, ಸೂರತ್.**
23. ಫ್ರೆಂಚರ ರಾಜಧಾನಿ ಕೇಂದ್ರ **– ಪಾಂಡಿಚೇರಿ ಅಥವಾ ಪುದುಚೇರಿ.**
24. ಫ್ರೆಂಚರ ಮಹತ್ವಾಕಾಂಕ್ಷಿ ಗವರ್ನರ್ – **ಡೂಪ್ಲೆ.**
25. ಬಂಗಾಳದ ನವಾಬ ಅಲಿವರ್ದಿ ಖಾನನು ______ ರಲ್ಲಿ ನಿಧನನಾದನು. – **1756.**
26. ______ ರಲ್ಲಿ ಮೊಗಲ್ ದೊರೆ __________ ನು ಬಂಗಾಳದಲ್ಲಿ ಬ್ರಿಟಿಷರಿಗೆ ಮುಕ್ತ ವ್ಯಾಪಾರ ನಡೆಸಲು 'ದಸ್ತಕ'(ಪರವಾನಗಿ) ನೀಡಿದನು. – **1717, ಫರೂಕ್ ಸಿಯಾರ.**
27. ಅಲಿವರ್ದಿ ಖಾನನ ನಂತರ ಬಂಗಾಳದ ನವಾಬರಾದವರು – **ಸಿರಾಜ್ ಉದ್ ದೌಲ್.**
28. ಸಿರಾಜ–ಉದ್–ದೌಲನ ನಂತರ ಬಂಗಾಳದ ನವಾಬನಾದವನು – **ಮೀರ್ ಜಾಫರ್.**
29. ಮೀರ್ ಜಾಫರ್‌ನ ನಂತರ ಬಂಗಾಳದ ನವಾಬನಾದವನು – **ಮೀರ್ ಕಾಸಿಂ.**
30. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ 'ದಿವಾನಿ' ಹಕ್ಕನ್ನು ______ ನು ನೀಡಿದನು. – **ಮೊಗಲ್ ದೊರೆ 2ನೇ ಷಾ ಆಲಂ.**
31. ಬಂಗಾಳದಲ್ಲಿ 'ದ್ವಿ ಪ್ರಭುತ್ವ'ವನ್ನು ಜಾರಿಗೆ ತಂದವನು – **ರಾಬರ್ಟ್ ಕ್ಲೈವ್ (1765)**
32. ಪೂರ್ವ ರೋಮನ್ (ಬೈಜಾಂಟಿನ್) ಸಾಮ್ರಾಜ್ಯದ ರಾಜಧಾನಿ **– ಕಾನ್‌ಸ್ಟಾಂಟಿನೋಪಲ್.**
33. ಮಧ್ಯಯುಗದಲ್ಲಿ ಏಷ್ಯಾ ಮತ್ತು ಯುರೋಪಗಳ ನಡುವೆ ವ್ಯಾಪಾರವು ________ ನಗರದ ಮೂಲಕ ನಡೆಯುತ್ತಿತ್ತು. – **ಕಾನ್‌ಸ್ಟಾಂಟಿನೋಪಲ್.**
34. ದಸ್ತಕ ಎಂದರೆ – **ಮುಕ್ತ ವ್ಯಾಪಾರ ಮಾಡಲು ಪರವಾನಗಿ ನೀಡುವುದು.**
35. ಫ್ರಾನ್ಸಿಸ್ಕೋ ಡಿ ಅಲ್ಮೇಡ್ ನೀಲಿ ನೀರಿನ ನೀತಿ ಜಾರಿಗೆ ತಂದ ಉದೇಶ – **ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾ ಶಕ್ತಿಯನ್ನು ಬಲಪಡಿಸಲು.**
36. ಪೋರ್ಚುಗೀಸರ ಪ್ರಧಾನ ವ್ಯಾಪಾರ ಕೇಂದ್ರ – **ಗೋವಾ.**
37. ಮದ್ರಾಸ್‌ನ್ನು ವಶಪಡಿಸಿಕೊಂಡ ಫ್ರೆಂಚ್ ಸೇನಾ ಮುಖ್ಯಸ್ಥ – **ಲಾಬೋರ್ಡಿನಾ.**
38. ಮೊದಲ ಕರ್ನಾಟಿಕ್ ಯುದ್ಧ ________ ಒಪ್ಪಂದದೊಂದಿಗೆ ಕೊನೆಗೊಂಡಿತು. – **ಏಕ್ಸ್–ಲಾ–ಚಾಪಲ್ ಒಪ್ಪಂದ.**
39. ಎರಡನೇ ಕರ್ನಾಟಿಕ್ ಯುದ್ಧ ______ ಒಪ್ಪಂದದೊಂದಿಗೆ ಕೊನೆಗೊಂಡಿತು. – **ಪಾಂಡಿಚೇರಿ ಒಪ್ಪಂದ.**
40. ಮೂರನೇ ಕರ್ನಾಟಿಕ್ ಯುದ್ಧ ___ ಒಪ್ಪಂದದೊಂದಿಗೆ ಕೊನೆಗೊಂಡಿತು. – **ಪ್ಯಾರೀಸ್ ಒಪ್ಪಂದ.**
41. ಮೂರನೇ ಕರ್ನಾಟಿಕ್ ಯುದ್ಧದ ಸಮಯದಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಿದ ಫ್ರೆಂಚ್ ಸೇನಾನಾಯಕ – **ಕೌಂಟ್ ಡಿ ಲಾಲಿ**
42. 3ನೇ ಕರ್ನಾಟಿಕ್ ಯುದ್ಧದಲ್ಲಿ ಫ್ರೆಂಚರನ್ನು ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ – **ಸರ್ ಐರ್‌ಕೂಟ.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಯುರೋಪಿನಲ್ಲಿ ಭಾರತದ ಯಾವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇತ್ತು?**
ಉತ್ತರ : ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.

**2. ಕಾನ್‌ಸ್ಟಾಂಟಿನೋಪಲ್ ನಗರವನ್ನು ಯಾವಾಗ, ಯಾರು ವಶಪಡಿಸಿಕೊಂಡರು?**
ಉತ್ತರ : 1453ರಲ್ಲಿ ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು.

**3. ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ನಾವಿಕರಿಗೆ ನೆರವಾದ ವೈಜ್ಞಾನಿಕ ಉಪಕರಣಗಳು ಯಾವುವು?**
ಉತ್ತರ : ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪಕ) ಸಿಡಿಮದ್ದು ಮೊದಲಾದವುಗಳು ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ನಾವಿಕರ ನೆರವಿಗೆ ಬಂದವು.

**4. ವಾಸ್ಕೋಡಿಗಾಮಾನು ಭಾರತಕ್ಕೆ ಹೊಸಜಲಮಾರ್ಗ ಕಂಡು ಹಿಡಿಯುವಲ್ಲಿ ಹೇಗೆ ಯಶಸ್ವಿಯಾದನು?**
ಉತ್ತರ : ಯುರೋಪಿನ ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೋಡಿಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪದ 'ಕಾಪ್ಪಡ್' ಎಂಬಲ್ಲಿಗೆ ಬಂದು ತಲುಪಿದನು. ಆ ಮೂಲಕ ಭಾರತ ಹಾಗೂ ಯುರೋಪ್ ನಡುವೆ ಹೊಸ ಜಲಮಾರ್ಗ ಕಂಡುಹಿಡಿಯುವಲ್ಲಿ ಯಶಸ್ವಿಯಾದನು.

**5. ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದ ಯುರೋಪಿಯನ್ ಕಂಪನಿಗಳು ಯಾವುವು?**
ಉತ್ತರ : ಪೋರ್ಚುಗೀಸ್, ಡಚ್ಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದವು.

**6. ನೀಲಿ ನೀರಿನ ನೀತಿ ಎಂದರೇನು? ಇದನ್ನು ಜಾರಿಗೆ ತಂದವರು ಯಾರು?**
ಉತ್ತರ : ಭೂಮಿಯ ಮೇಲಿನ ಅಧಿಪತ್ಯಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಬಡಿಸುವ "ನೀಲಿ ನೀರಿನ ನೀತಿ"ಯನ್ನು ಫ್ರಾನ್ಸಿಸ್ಕೋ ಡಿ ಅಲ್ಮೇಡ್ ಜಾರಿಗೆ ತಂದನು.

**7. ಭಾರತದಲ್ಲಿರುವ ಡಚ್ಚರ ವ್ಯಾಪಾರಿ ಕೋಠಿಗಳು ಯಾವುವು?**
ಉತ್ತರ : ಭಾರತದಲ್ಲಿ ಸೂರತ್, ಬ್ರೋಚ್, ಕ್ಯಾಂಬೆ, ಕೊಚ್ಚಿನ್, ನಾಗಪಟ್ಟಣ, ಮಚಲಿಪಟ್ಟಣ, ಚಿನ್ಸೂರ್ ಮೊದಲಾದ ಕಡೆಗಳಲ್ಲಿ ಡಚ್ಚರು ತಮ್ಮ ವ್ಯಾಪಾರಿ ಕೋಠಿಗಳನ್ನು ಸ್ಥಾಪಿಸಿಕೊಂಡರು.

**8. ಡಚ್ಚರು ಭಾರತದ ವ್ಯಾಪಾರವನ್ನು ಬಿಟ್ಟು ಕೇವಲ ಸಾಂಭಾರು ದ್ವೀಪಗಳಿಗೆ ಸೀಮಿತವಾಗಲು ಕಾರಣವೇನು?**
ಉತ್ತರ : ಭಾರತಕ್ಕೆ ಬಂದ ಇಂಗ್ಲಿಷರು ಮತ್ತು ಫ್ರೆಂಚರ ಪೈಪೋಟಿಯನ್ನು ಹೆದರಿಸಲಾಗದೆ ಡಚ್ಚರು ಸಾಂಬಾರು ದ್ವೀಪಗಳಿಗೆ ಮಾತ್ರ ಸೀಮಿತರಾದರು.

**9. ಬ್ರಿಟಿಷರು ಫೋರ್ಟ ವಿಲಿಯಂ ಕೋಟೆಯನ್ನು ಹೇಗೆ ಕಟ್ಟಿತು?**
ಉತ್ತರ : ಬ್ರಿಟಿಷರು 1690ರ ದಶಕದಲ್ಲಿ ಬಂಗಾಳದ ರಾಜ್ಯಪಾಲನಿಂದ ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು ಗೋವಿಂದಪುರ ಎಂಬ ಮೂರು ಹಳ್ಳಿಗಳನ್ನು ಖರೀದಿಸಿ ಫೋರ್ಟ ವಿಲಿಯಂ ಕೋಟೆಯನ್ನು ಕಟ್ಟಿದರು.

**10. 17ನೇ ಶತಮಾನದ ಅಂತ್ಯದ ವೇಳೆಗೆ ಭಾರತದಲ್ಲಿದ್ದ ಬ್ರಿಟಿಷ್ ಪ್ರೆಸಿಡೆನ್ಸಿ ಕೇಂದ್ರಗಳು ಯಾವುವು?**
ಉತ್ತರ : 17ನೇ ಶತಮಾನದ ಅಂತ್ಯದ ವೇಳೆಗೆ ಇಂಗ್ಲಿಷರು ಮದ್ರಾಸ್, ಬಾಂಬೆ ಮತ್ತು ಕಲ್ಕತ್ತಗಳನ್ನು ತಮ್ಮ ಪ್ರೆಸಿಡೆನ್ಸಿ ಕೇಂದ್ರಗಳನ್ನು ಮಾಡಿಕೊಂಡರು.

**11. ಫ್ರೆಂಚರು ಪ್ರಮುಖ ವ್ಯಾಪಾರಿ ಕೇಂದ್ರಗಳಾವುವು?**
ಉತ್ತರ : ಸೂರತ್, ಪಾಂಡಿಚೇರಿ, ಮಚಲಿಪಟ್ಟಣ, ಚಂದ್ರನಗರ, ಮಾಹೆ, ಕಾರೈಕಲ್ಲು, ಕಾಸಿಂಬಜಾರ್ ಮತ್ತು ಬಾಲಸೂರ್‌ಗಳು ಫ್ರಂಚರ ಪ್ರಮುಖ ವ್ಯಾಪಾರಿ ಕೇಂದ್ರಗಳಾಗಿವೆ.

**12. ಫೆಂಚರು ಪಾಂಡಿಚೇರಿಯನ್ನು ಹೇಗೆ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು?**
ಉತ್ತರ : ಫ್ರೆಂಚರು 1674ರಲ್ಲಿ ವಾಲಿಕೊಂಡಪುಂನ ಸ್ಥಳೀಯ ಮುಸ್ಲಿಂ ಅಧಿಕಾರಿಯಿಂದ ಒಂದು ಹಳ್ಳಿಯನ್ನು ಪಡೆದರು. ಕ್ರಮೇಣ ಇದನ್ನೇ ದೊಡ್ಡ ವ್ಯಾಪಾರ ಕೇಂದ್ರವಾಗಿ ಪಾರ್ಪಡಿಸಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು.

**13. ಭಾರತದಲ್ಲಿ ನಡೆದ ಕರ್ನಾಟಿಕ್ ಯುದ್ಧಗಳಿಗೆ ಕಾರಣಗಳೇನು?**
ಉತ್ತರ : ಹೈದರಾಬಾದ್ ಸಂಸ್ಥಾನ ಮತ್ತು ಕಾರ್ನಾಟಿಕ್ ಪ್ರಾಂತ್ಯದಲ್ಲಿನ ರಾಜಕೀಯ ಅಸ್ಥಿರತೆಯ ಲಾಭ ಪಡೆಯಲು ಫ್ರೆಂಚರು ಮತ್ತು ಬ್ರಿಟಿಷರು ಯತ್ನ ನಡೆಸಿದರು. ಅದರ ಪರಿಣಾಮವಾಗಿಯೇ ಮೂರು ಕರ್ನಾಟಿಕ್ ಯುದ್ಧಗಳು ಸಂಭವಿಸಿದವು.

**14. ಬಂಗಾಳದಲ್ಲಿ ಬ್ರಿಟಿಷರ ವ್ಯಾಪಾರ ಹೆಚ್ಚು ಲಾಭದಾಯಕವಾಗಲು ಕಾರಣವೇನು?**
ಉತ್ತರ : 1717ರಲ್ಲಿ ಮೊಗಲ್ ದೊರೆ ಫಾರೂಕ್ ಶಿಯಾರನು ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಕಂಪನಿಗೆ ನೀಡಿದ 'ದಸ್ತಕ'ಗಳೆ ಬ್ರಿಟಿಷರು ಲಾಭ ಗಳಿಸಲು ಕಾರಣವಾಗಿತ್ತು.

**15. ಕಪ್ಪು ಕೋಣೆ ದುರಂತ ಎಂದರೇನು?**
ಉತ್ತರ : ಸಿರಾಜನು ಪೋರ್ಟ ವಿಲಿಯಂ ಕೋಟೆಯನ್ನು ಗೆದ್ದು ಆಕ್ರಮಣದಲ್ಲಿ ಸೆರೆ ಸಿಕ್ಕ 146 ಬ್ರಿಟಿಷರನ್ನು ಚಿಕ್ಕ ಕೋಠಡಿಯೊಂದರಲ್ಲಿ ಬಂಧಿಸಿಟ್ಟನು. ಅದರಲ್ಲಿ 123 ಮಂದಿ ಅಸುನೀಗಿದರು. ಇದನ್ನು ಕಪ್ಪು ಕೋಣೆಯ ದುರಂತ ಎಂದು ಕರೆಯಲಾಗಿದೆ.

**16. ಕಾನ್‌ಸ್ಟಾಂಟಿನೋಪಲ್ ಪತನದ ನಂತರ ವರ್ತಕರಿಗೆ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ ಏಕೆ?**
ಉತ್ತರ : 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡ ಅಟೋಮನ್ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸಿದರು. ಇದರಿಂದಾಗಿ ವರ್ತಕರಿಗೆ ಕಾನ್‌ಸ್ಟಾಂಟಿನೋಪಲ್ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ.

**17. ಯುರೋಪಿನ ದೇಶಗಳ ರಾಜರು ಹೊಸ ಜಲಮಾರ್ಗ ಕಂಡುಹಿಡಿಯಲು ನಾವಿಕರಿಗೆ ಏಕೆ ಪ್ರೋತ್ಸಾಹಿಸಿದರು?**
ಉತ್ತರ : ಇಟಲಿಯ ಏಕಸ್ವಾಮ್ಯವನ್ನು ಮುರಿಯಲು ಯುರೋಪಿನ ದೇಶಗಳ ರಾಜರು ಹೊಸ ಜಲಮಾರ್ಗ ಕಂಡುಹಿಡಿಯಲು ನಾವಿಕರಿಗೆ ಪ್ರೋತ್ಸಾಹಿಸಿದರು.

**18.ಕಾನ್‌ಸ್ಟಾಂಟಿನೋಪಲ್‌ನ್ನು ಟರ್ಕರು ವಶಪಡಿಸಿಕೊಂಡಿದ್ದರಿಂದ ಆದ ಪರಿಣಾಮಗಳೇನು?**
ಉತ್ತರ : 1453ರಲ್ಲಿ ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಂಡಿದ್ದರಿಂದ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಬಂದವು.

**19. ಬಕ್ಸಾರ ಕದನದ ಸಂದರ್ಭದಲ್ಲಿ ಮೀರ್ ಖಾಸಿಂ ಯಾರ ಯಾರ ಜೊತೆ ಒಪ್ಪಂದ ಮಾಡಿಕೊಂಡನು?**
ಉತ್ತರ : ಬಕ್ಸಾರ್ ಕದನದ ಸಂದರ್ಭದಲ್ಲಿ ಮೀರ್ ಖಾಸಿಂನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜ್-ಉದ್-ದೌಲ್‌ರೊಂದಿಗೆ ಒಪ್ಪಂದ ಮಾಡಿಕೊಂಡನು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಮಧ್ಯಕಾಲದಲ್ಲಿ ಯುರೋಪ್, ಭಾರತ ಮತ್ತು ಇತರ ಏಷ್ಯಾ ದೇಶಗಳ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?**
**ಉತ್ತರ : ಮಧ್ಯಕಾಲದಲ್ಲಿ ಭಾರತ ಮತ್ತು ಯುರೋಪಗಳ ನಡುವೆ ವ್ಯಾಪಾರ ಸಂಬಂಧ –**
- ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು.
- ಅಲ್ಲಿಂದ ಇಟಲಿಯ ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಿಗೆ ಮಾರುತ್ತಿದ್ದರು.
- ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯುರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.
- ಏಷ್ಯಾದ ಸರಕುಗಳು ಇಟಲಿಯ ವರ್ತಕರಿಗೆ ಒಳ್ಳೆಯ ಲಾಭವನ್ನು ತಂದು ಕೊಡುತ್ತಿದ್ದವು.

**2. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.**
**ಉತ್ತರ : ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳು –**
- 1453ರಲ್ಲಿ ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡು ಈ ಮಾರ್ಗದ ಮೂಲಕ ನಡೆಯುವ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು.
- ಇದರಿಂದಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ.
- ಇದೇ ವೇಳೆ ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರಿಗೆ ಪ್ರೋತ್ಸಾಹಿಸಲಾರಂಭಿಸಿದರು.
- ಇದಕ್ಕೆ ಪೂರಕವಾಗಿ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪಕ) ಸಿಡಿಮದ್ದು ಮೊದಲಾದವುಗಳು ನೆರವಿಗೆ ಬಂದವು.

**3. "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ" ಈ ಹೇಳಿಕೆಯನ್ನು ಸಮರ್ಥಿಸಿ.**
ಉತ್ತರ : ಜ್ಞಾನ ಪುನರುಜ್ಜೀವನ ಕಾಲದಲ್ಲಿ ಯುರೋಪಿನಲ್ಲಿ ನಡೆದ ಅನೇಕ ವೈಜ್ಞಾನಿಕ ಸಂಶೋಧನೆಗಳು ಹೊಸ ಸಮುದ್ರಮಾರ್ಗಗಳ ಆವಿಷ್ಕಾರಕ್ಕೆ ಕಾರಣವಾದವು. ಇವುಗಳಲ್ಲಿ ಪ್ರಮುಖವಾದವುಗಳೆಂದರೆ – ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಅಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪಕ) ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟ ಇತ್ಯಾದಿಗಳು ಹೊಸ ಜಲಮಾರ್ಗಗಳನ್ನು ಕಂಡು ಹಿಡಿಯಲು ನಾವಿಕರಿಗೆ ಸಹಾಯಕವಾದವು.

**4. ಮೊದಲ ಕರ್ನಾಟಿಕ ಯುದ್ಧ ನಡೆದ ಬಗೆಯನ್ನು ವಿವರಿಸಿ.**
**ಉತ್ತರ : ಮೊದಲ ಕರ್ನಾಟಕ ಯುದ್ಧ ನಡೆದ ಬಗೆ –**
- ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು.
- ಅಸಹಾಯಕರಾದ ಬ್ರಿಟಿಷರು ಕರ್ನಾಟಿಕ್ ನವಾಬ ಅನ್ವರುದ್ದೀನ್‌ನಲ್ಲಿ ಮೊರೆ ಇಟ್ಟರು.
- ಮದ್ರಾಸ್‌ನಿಂದ ಫ್ರೆಂಚರನ್ನು ಹೊರಗಟ್ಟಲು ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು.
- ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣಪಡೆದು ಮದ್ರಾಸನ್ನು ಬಿಟ್ಟುಕೊಟ್ಟು ಮಾರಿಷಸ್‌ಗೆ ಹೊರಟುಹೋದನು.
- ಇದರಿಂದ ಕೋಪಗೊಂಡ ಡುಪ್ಲೆಯು ಮದ್ರಾಸನ್ನು ಮತ್ತೆ ಪಡೆಯುವ ವಿಫಲ ಪ್ರಯತ್ನ ನಡೆಸಿದನು.

- ಅಂತಿಮವಾಗಿ ಈ ಯುದ್ಧವು ಯುರೋಪಿನಲ್ಲಿ ಫ್ರಿನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ 'ಎಕ್ಸ್-ಲಾ-ಚಾಪಲ್ ಒಪ್ಪಂದೊಂದಿಗೆ ಮುಕ್ತಾಯವಾಯಿತು.

**5. ಎರಡನೇ ಕಾರ್ನಾಟಿಕ್ ಯದ್ಧ ನಡೆದ ಬಗೆಯನ್ನು ತಿಳಿಸಿ.**

**ಉತ್ತರ : ಎರಡನೇ ಕಾರ್ನಾಟಿಕ್ ಯದ್ಧ ನಡೆದ ಬಗೆ –**

- ಫ್ರೆಂಚರು ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್‌ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದರು.
- ಅವನ ರಕ್ಷಣೆಗೆ ಫ್ರೆಂಚರು ತಮ್ಮ ಸೈನ್ಯಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು.
- ಮತ್ತೊಂದು ಕಡೆ ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು.
- ಇಂಗ್ಲಿಷರ ರಾಬರ್ಟಕ್ಲೈವನು ಕಾರ್ನಾಟಿಕ್‌ದ ರಾಜದಾನಿ ಆರ್ಕಾಟಿನ ಮೇಲೆ ಆಕ್ರಮಣ ಮಾಡಿ ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು.
- ಈ ಯುದ್ದದಲ್ಲಿ ಚಂದಾಸಾಹೇಬನನ್ನು ಹತ್ಯೆ ಮಾಡಿ ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ನವಾಬನ್ನಾಗಿ ನೇಮಕ ಮಡಲಾಯಿತು.
- ಎರಡನೇ ಕರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.
- ಈ ಯುದ್ದವು ಫ್ರೆಂಚರಿಗೆ ರಾಜಕೀಯ ಹಿನ್ನೆಡೆಯನ್ನು, ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

**6. ಮೂರನೇ ಕಾರ್ನಾಟಿಕ್ ಯದ್ಧ ನಡೆದ ಬಗೆಯನ್ನು ತಿಳಿಸಿ.**

**ಉತ್ತರ : ಮೂರನೇ ಕಾರ್ನಾಟಿಕ್ ಯದ್ಧ ನಡೆದ ಬಗೆ –**

- ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.
- ಈ ನಿರ್ಣಾಯಕ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್ ಐರ್‌ಕೂಟನು ಫ್ರೆಂಚರನ್ನು ಸೋಲಿಸಿದನಲ್ಲದೆ, ಬುಸ್ಸಿಯನ್ನು ಸೆರೆಹಿಡಿದನು.
- ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡನು.
- ಅಂತಿಮವಾಗಿ ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ ಲಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು.
- ಈ ಯುದ್ಧವು ಪ್ಯಾರಿಸ್ ಒಪ್ಪಂದದೊಂದಿಗೆ ಕೊನೆಗೊಂಡಿತು.

**7. ಭಾರತದಲ್ಲಿ ನಡೆದ ಕರ್ನಾಟಿಕ ಯುದ್ಧಗಳ ಪರಿಣಾಮವೇನು?**

**ಉತ್ತರ : ಭಾರತದಲ್ಲಿ ನಡೆದ ಕರ್ನಾಟಿಕ್ ಯುದ್ದಗಳ ಪರಿಣಾಮಗಳು –**

- ಕರ್ನಾಟಿಕ್ ಯುದ್ಧಗಳ ಪರಿಣಾಮವಾಗಿ ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲಾ ನೆಲೆಗಳನ್ನು ಕಳೆದುಕೊಂಡರು.
- 1773ರಲ್ಲಿ ನಡೆದ ಪ್ಯಾರಿಸ್ ಒಪ್ಪಂದದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು.
- ಈ ಬೆಳವಣಿಗೆಯಿಂದ ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು.
- ಬ್ರಿಟಿಷರು ತಮ್ಮ ಇತರ ಯುರೋಪಿಯನ್ ಪ್ರತಿಸ್ಪರ್ಧಿಗಳನ್ನು ದಮನ ಮಾಡಿ ದಕ್ಷಿಣ ಭಾರತವನ್ನು ಗೆಲ್ಲುವ ಕಾರ್ಯದಲ್ಲಿ ಮಗ್ನರಾದರು.

**8. ಪ್ಲಾಸಿ ಕದನಕ್ಕೆ ಕಾರಣಗಳೇನು?**

**ಉತ್ತರ : ಪ್ಲಾಸಿ ಕದನಕ್ಕೆ ಕಾರಣಗಳು –**

- ದಸ್ತಕಗಳ ದುರುಪಯೋಗ – ಕಂಪನಿಯ ವ್ಯಾಪಾರಕ್ಕಾಗಿ ನೀಡಿದ 'ದಸ್ತಕ'ಗಳನ್ನು ಬ್ರಿಟಿಷ್ ನೌಕರರು ದುರುಪಯೋಗ ಪಡಿಸಿಕೊಂಡು ಬಂಗಾಳದ ನವಾಬನಿಗೆ ನಷ್ಟವನ್ನುಂಟುಮಾಡಿದರು.
- ಅನುಮತಿ ಇಲ್ಲದೆ ಕೋಟೆಯ ದುರಸ್ತಿ – ಬಂಗಾಳದ ನವಾಬನ ಅನುಮತಿಯನ್ನು ಪಡೆಯದೆ ಬ್ರಿಟಿಷರು ಫ್ರೆಂಚರ ಭಯದಿಂದ ಕಲ್ಕತ್ತಾದ ಕೋಟೆಯನ್ನು ಬಲಪಡಿಸಿ, ಫಿರಂಗಿಗಳನ್ನು ಇಟ್ಟರು. ಇದು ನವಾಬನ ಕೋಪಕ್ಕೆ ಕಾರಣವಾಯಿತು.
- ಕಪ್ಪು ಕೋಣೆ ದುರಂತ – ಸಿರಾಜನು ಪೋರ್ಟ ವಿಲಿಯಂ ಕೋಟೆಯನ್ನು ಗೆದ್ದು ಆಕ್ರಮಣದಲ್ಲಿ ಸೆರೆ ಸಿಕ್ಕ 146 ಬ್ರಿಟಿಷರನ್ನು ಚಿಕ್ಕ ಕೋಣೆಯೊಂದರಲ್ಲಿ ಬಂಧಿಸಿಟ್ಟನು. ಅದರಲ್ಲಿ 123 ಮಂದಿ ಅಸುನೀಗಿದರು. ಇದನ್ನು ಕಪ್ಪು ಕೋಣೆಯ ದುರಂತ ಎಂದು ಕರೆಯಲಾಗಿದೆ.
- ಈ ಸುದ್ದಿ ಕೇಳಿ ರಾಬರ್ಟ್‌ಕ್ಲೈವ್ ಉಗ್ರ ಕೋಪದಲ್ಲಿ ಬಲಿಷ್ಠ ಸೇನೆಯೊಂದಿಗೆ ಬಂಗಾಳದ ಮೇಲೆ ದಾಳಿ ಮಾಡಿದನು. ಇದೇ ಪ್ಲಾಸಿ ಕದನ.

**9. ಪ್ಲಾಸಿ ಕದನವು ಯಾವಾಗ, ಯಾರ ಯಾರ ನಡುವೆ ನಡೆಯಿತು? ಯುದ್ದದ ಫಲಿತಾಂಶವೇನು?**

ಉತ್ತರ : ಬಂಗಾಳದ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757 ಜೂನ್ 23ರಂದು ಪ್ಲಾಸಿ ಕದನ ನಡೆಯಿತು. ಯುದ್ದದಲ್ಲಿ ಸಿರಾಜ್-ಉದ್-ದೌಲನನ್ನು ಸರೆಹಿಡಿದು ಕೊಲ್ಲಲಾಯಿತು.

**10. ರಾಬರ್ಟ ಕ್ಲೈವ್‌ನು ಪ್ಲಾಸಿ ಕದನದಲ್ಲಿ ಯಶಸ್ಸುಗಳಿಸಲು ಯಾವ ಕಾರ್ಯತಂತ್ರ ರೂಪಿಸಿದನು?**

ಉತ್ತರ : ರಾಬರ್ಟಕ್ಲೈವ್‌ನು ಮೊದಲು ನವಾಬನ ವಿರೋಧಿಗಳಾದ ಮಾಣಿಕಚಂದ್, ಓಮೀಚಾಂದಾ, ಜಗತ್‌ಸೇಠ್ ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು. ಇದರಿಂದ ಧೈರ್ಯಗೊಂಡ ರಾಬರ್ಟಕ್ಲೈವನು 1757 ಜೂನ್ 23ರಂದು ಸಿರಾಜ್-ಉದ್-ದೌಲನ ಮೇಲೆ ಕದನ ಸಾರಿದನು.

**11. ಪ್ಲಾಸಿ ಕದನದ ಪರಿಣಾಮಗಳೇನು?**

**ಉತ್ತರ : ಪ್ಲಾಸಿ ಕದನದ ಪರಿಣಾಮಗಳು –**

- ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
- ಮೀರ್ ಜಾಫರನು ಬಂಗಾಳದ ನವಾಬನಾದನು.
- ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
- ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

**12. ಬಕ್ಸಾರ್ ಕದನಕ್ಕೆ ಕಾರಣಗಳೇನು?**

**ಉತ್ತರ : ಬಕ್ಸಾರ್ ಕದನಕ್ಕೆ ಕಾರಣಗಳು –**

- ಬಂಗಾಳದ ನವಾಬನಾದ ಮೀರ್ ಕಾಸಿಂನು ಬ್ರಿಟಿಷರ ಹಿಡಿತದಿಂದ ಹೊರಬಂದು ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು.
- ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು.
- ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧಿಗಿಳಿದರು.
- ಪರಿಣಾಮವಾಗಿ ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಒಡೆತ ಬಿದ್ದಿತು.
- ಇದರಿಂದ ಬ್ರಿಟಿಷರು ಮೀರ ಕಾಸಿಂನನ್ನು ಕೆಳಗಿಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನನ್ನಾಗಿ ಮಾಡಿದರು.
- ಮೀರ್ ಕಾಸಿಂ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದೇ ಬಕ್ಸಾರ ಕದನಕ್ಕೆ ಕಾರಣವಾಯಿತು.

**13. ಮೀರ್ ಕಾಸಿಂನು ಬ್ರಿಟಿಷರ ವಿರುದ್ಧ ಹೋರಾಡಲು ಹೇಗೆ ಸಿದ್ಧನಾದನು? ಮತ್ತು ಯುದ್ಧದ ಫಲಿತಾಂಶವೇನು?**

**ಬಕ್ಸಾರ ಕದನ ಯಾರ ಯಾರ ನಡುವೆ ನಡೆಯಿತು? ಯುದ್ಧದ ಫಲಿತಾಂಶವೇನು?**

**ಉತ್ತರ : ಬಕ್ಸಾರ ಕದನ ನಡೆದ ರೀತಿ –**

- ಬ್ರಿಟಿಷರ ಕುಟಿಲತೆಯನ್ನೆಲ್ಲ ಅರಿತಿದ್ದ ಮೀರ್ ಕಾಸಿಂನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು.
- ಭಾರತೀಯ ವ್ಯಾಪಾರಿಗಳು ಮತ್ತು ವಿವಿಧ ಕಸುಬುದಾರರು ಅವನ ಬೆಂಬಲಕ್ಕೆ ನಿಂತರು.
- ಮೀರ್ ಕಾಸಿಂನು ಮೊಗಲ್ ದೊರೆ 'ಎರಡನೇ ಷಾ ಆಲಂ' ಮತ್ತು ಔದ್‌ನ ನವಾಬ 'ಷುಜ್-ಉದ್-ದೌಲ'ರೊಂದಿಗೆ ಒಪ್ಪಂದ ಮಾಡಿಕೊಂಡನು.
- ಮೀರ್ ಖಾಸಿಂ ನೇತೃತ್ವದ ಮೂರು ಸಂಯುಕ್ತ ಸೇನೆಗಳು 'ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ 'ಬಕ್ಸರ್' ಎಂಬಲ್ಲಿ ಮುಖಾಮುಖಿಯಾದವು.
- ಅಂತಿಮವಾಗಿ ಯುದ್ಧದಲ್ಲಿ ಮೀರ್ ಖಾಸಿಂ ಸೋತು ಪಲಾಯನ ಮಾಡಿದರೆ, ಷಾ ಆಲಂ ಶರಣಾಗತನಾದನು.
- ಬ್ರಿಟಿಷ್ ಶಕ್ತಿಗೆ ತಡೆಯೊಡ್ಡುವ ಈ ಒಕ್ಕೂಟದ ಪ್ರಯತ್ನ ಸಂಪೂರ್ಣ ವಿಫಲವಾಯಿತು.

**14. ಬಕ್ಸಾರ ಕದನದ ಪರಿಣಾಮಗಳೇನು?**

**ಉತ್ತರ : ಬಕ್ಸಾರ ಕದನದ ಪರಿಣಾಮಗಳು –**

- ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
- ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು.

- ಔದ್‌ನ ನವಾಬನಾದ ಷುಜ್–ಉದ್–ದೌಲನು ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
- ಮೀರ್ ಜಾಫರ್ ಮರಣ ಹೊಂದದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು.
- ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು.

**15. ರಾಬರ್ಟ್‌ಕ್ಲೈವ್ ಜಾರಿಗೆ ತಂದ 'ದ್ವಿ ಪ್ರಭುತ್ವ' ಪದ್ಧತಿಯನ್ನು ವಿವರಿಸಿ.**

**ಉತ್ತರ : ದ್ವಿ ಪ್ರಭುತ್ವ ಪದ್ಧತಿ –**

- 1765ರಲ್ಲಿ ರಾಬರ್ಟ್ ಕ್ಲೈವ್‌ನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.
- ಈ ಪದ್ಧತಿಯಂತೆ ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು.
- ಆದರೆ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.
- ಹೀಗೆ ಬ್ರಿಟಿಷರು ತಮ್ಮ ವಾಣಿಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಭಾರತದಲ್ಲಿ ರಾಜಕೀಯ ಪರಮಾಧಿಕಾರವನ್ನು ಸ್ಥಾಪಿಸಿದರು.

## ಅಧ್ಯಾಯ – 2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು.**

1. ಸಿಖ್‌ರನ್ನು ಯಶಸ್ವಿಯಾಗಿ ಸಂಘಟಿಸಿದ ಸಿಖ್ ದೊರೆ – **ರಣಜಿತ್‌ಸಿಂಗ್.**
2. ಮೊದಲ ಆಂಗ್ಲೋ–ಮರಾಠ ಯುದ್ಧವು ______ ಒಪ್ಪಂದದೊಂದಿಗೆ ಕೊನೆಗೊಂಡಿತು. – **ಸಾಲ್‌ಬಾಯ್ ಒಪ್ಪಂದ.**
3. ಸಹಾಯಕ ಸೈನ್ಯ ಪದ್ಧತಿಯನ್ನು _____ರಲ್ಲಿ _____ ರು ಜಾರಿಗೆ ತಂದವರು – **1798, ಲಾರ್ಡ್ ವೆಲ್ಲಸ್ಲಿ.**
4. ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ – **ಹೈದರಾಬಾದ ಸಂಸ್ಥಾನ.**
5. ಸಿಖ್ ದೊರೆ ರಣಜಿತ ಸಿಂಗ್‌ನು _ ರಲ್ಲಿ ಮರಣ ಹೊಂದಿದನು. – **1839.**
6. ಡಾಲ್‌ಹೌಸಿಯು ಭಾರತಕ್ಕೆ ________ ರಲ್ಲಿ ಗವರ್ನರ್ ಜನರಲ್ ಆಗಿ ಬಂದನು. – **1848.**
7. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು _____ – **ಲಾರ್ಡ್ ಡಾಲ್‌ಹೌಸಿ.**
8. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ________ ರಲ್ಲಿ ಜಾರಿಗೆ ತರಲಾಯಿತು. – **1848.**
9. ಪೇಶ್ವೆಯು ________ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. – **ಬೆಸ್ಸಿನ್ ಒಪ್ಪಂದ.**
10. ಸಿಖ್‌ರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ – ಲಾಹೋರ ಒಪ್ಪಂದ.
11. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದ ಗವರ್ನರ್ – **ಲಾರ್ಡ್ ಡಾಲ್‌ಹೌಸಿ.**
12. ಎರಡನೇ ಬಾಜಿರಾಯನು ಸಹಾಯಕ ಸೈನ್ಯ ಪದ್ಧತಿಗೆ ಒಳಪಡಲು ಕಾರಣ – **ಹೋಳ್ಕರನ ಸೈನ್ಯ ಎರಡನೇ ಬಾಜಿರಾಯನ ಸೈನ್ಯವನ್ನು ಸೋಲಿಸಿದ್ದರಿಂದ.**
13. ಮರಾಠರ ಕೊನೆಯ ಪೇಶ್ವೆ – **ಎರಡನೇ ಬಾಜಿರಾಯ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಬ್ರಿಟಿಷರು ಯಾವ ಕದನಗಳ ಮೂಲಕ ಬಂಗಾಳ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದರು?**

ಉತ್ತರ : ಬ್ರಿಟಿಷರು ಪ್ಲಾಸಿ ಮತ್ತು ಬಕ್ಸರ್ ಕದನಗಳ ಮೂಲಕ ಬಂಗಾಳ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದರು.

**2. ಬ್ರಿಟಿಷ್‌ರ ಸಾಮ್ರಾಜ್ಯ ವಿಸ್ತರಿಸಲು ಲಾರ್ಡ್ ವೆಲ್ಲಸ್ಲಿ ಅನುಸರಿಸಿದ ವಿಧಾನಗಳು ಯಾವುವು?**

ಉತ್ತರ : ಬ್ರಿಟಿಷ್‌ರ ಸಾಮ್ರಾಜ್ಯ ವಿಸ್ತರಿಸಲು ಲಾರ್ಡ್ ವೆಲ್ಲಸ್ಲಿ ಮೂರು ವಿಧಾನಗಳನ್ನು ಅನುಸರಿಸಿದನು. ಅವುಗಳೆಂದರೆ –

- ಸಹಾಯಕ ಸೈನ್ಯ ಪದ್ಧತಿ,
- ಹೊಸ ರಾಜ್ಯಗಳ ಮೇಲೆ ಯುದ್ಧಗಳು ಮತ್ತು
- ಈಗಾಗಲೇ ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದು.

**3. ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ದೇಶಿಯ ಸಂಸ್ಥಾನಗಳು ಯಾವುವು?**

ಉತ್ತರ : ಸಹಾಯಕ ಸೈನ್ಯ ಪದ್ಧತಿಯ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ ಸಂಸ್ಥಾನ. ಆನಂತರ ಮೈಸೂರು, ಔದ್, ತಂಜಾವೂರು, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು.

**4. ಲಾರ್ಡ್ ಡಾಲ್ ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತರಲು ಕಾರಣವೇನು?**

ಉತ್ತರ : ಲಾರ್ಡ್ ಡಾಲ್ ಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ಪ್ರಕಾರ ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.

**5. ಲಾರ್ಡ್ ಡಾಲ್ ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗೆ ಒಳಪಟ್ಟ ದೇಶಿಯ ಸಂಸ್ಥಾನಗಳು ಯಾವುವು?**

ಉತ್ತರ : ಲಾರ್ಡ್ ಡಾಲ್ ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದವು ಪ್ರಮುಖವಾಗಿವೆ.

**6. ಲಾರ್ಡ್ ವೆಲ್ಲಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು?**

ಉತ್ತರ : ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಲಾರ್ಡ್ ವೆಲ್ಲಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.

**7. ಲಾರ್ಡ್ ವೆಲ್ಲಸ್ಲಿಯು ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಲು ಕಾರಣವೇನು?**

ಉತ್ತರ : ಲಾರ್ಡ್‌ವೆಲ್ಲಸ್ಲಿಯ ಯುದ್ಧಪ್ರೀಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದ ಲಾರ್ಡ್ ವೆಲ್ಲಸ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಿದನು.

**8. ಲಾರ್ಡ್ ವೆಲ್ಲೆಸ್ಲಿಯ ಕಾಲದಲ್ಲಿ ಬ್ರಿಟಿಷ್ ಆಡಳಿತ ವಿಸ್ತರಣೆ ಸುಲಭವಾಯಿತು. ಏಕೆ?**

ಉತ್ತರ : ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿ ಜಾರಿಗೆ ತಂದು ಭಾರತೀಯ ಸಂಸ್ಥಾನಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರಿಂದ ಬ್ರಿಟಿಷ್ ಆಡಳಿತದ ವಿಸ್ತರಣೆ ಸುಲಭವಾಯಿತು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಮೊದಲ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೊದಲ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಮರಾಠ ಬಲಿಷ್ಠ ಪೇಶ್ವೆ ಮಾಧವರಾಯನು ತೀರಿಕೊಂಡದ್ದು ಮರಾಠರಿಗೆ ತುಂಬಲಾರದ ನಷ್ಟವಾಯಿತು.
- ಅವನ ತಮ್ಮ ನಾರಾಯಣರಾಯನು ಅಧಿಕಾರಕ್ಕೆ ಬಂದರೂ ಅವನ ಚಿಕ್ಕಪ್ಪ ರಘೋಬನು ಕೊಲೆ ಮಾಡಿದನು.
- ನಾನಾ ಪಡ್ನವೀಸನ ನೇತೃತ್ವದಲ್ಲಿ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟ ಪಟ್ಟ ಕಟ್ಟಿತು.
- ರಘೋಬನು ಬ್ರಿಟಿಷರ ಬೆಂಬಲ ಕೋರಿದನು.
- ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು.
- ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775–1782ರವರೆಗೆ ನಡೆದ ದೀರ್ಘ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರೂ, ಅಂತಿಮವಾಗಿ ಅಹಮದಾಬಾದ್‌ನ್ನು ಕಳೆದುಕೊಂಡರು.
- ಮರಾಠ ಒಕ್ಕೂಟವು ಯುದ್ಧ ಮುಂದುವರೆಸಲಾಗದೆ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು.
- ಎರಡನೇ ಮಾಧವರಾಯನನ್ನು ಪೇಶ್ವೆಯಾಗಿ ನೇಮಿಸಲಾಯಿತು.

**2. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ತಿಳಿಸಿ.**

**ಉತ್ತರ : ಲಾರ್ಡ್ ವೆಲ್ಲಸ್ಲಿಯು ಜಾರಿಗೆ ತಂದ ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು –**

- ಭಾರತೀಯ ರಾಜನು ಬ್ರಿಟಿಷ್ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೇ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
- ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.

➢ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.

➢ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

➢ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**3. ಎರಡನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಎರಡನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು**

➢ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು.

➢1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು.

➢ಪೇಶ್ವೆ ಬ್ರಿಟಿಷರ ಸಹಾಯವನ್ನು ಯಾಚಿಸಿದ ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.

➢ಲಾರ್ಡ್ ವೆಲ್ಲಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು.

➢ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂದಿಯಾ ಮೊದಲಾದ ಮರಾಠ ಮತೆತನಗಳು ಒಗ್ಗೂಡಿದರು.

➢1803–1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲಸ್ಲಿಯು ಅನೇಕ ಯುದ್ಧಗಳಲ್ಲಿ ಸೋಲಿಸಿದನು.

**4. ಮೂರನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೂರನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

➢ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು, ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು.

➢1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು.

➢ನಾಗಪುರದ ಅಪ್ಪಾಸಾಹೇಬ ಮತ್ತು ಮಲ್ಹಾರರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು.

➢ಅಂತಿಮವಾಗಿ ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೆಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು.

➢ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು.

**5. ಆಂಗ್ಲೋ–ಸಿಖ್ ಯುದ್ಧಗಳನ್ನು ಕುರಿತು ವಿವರಿಸಿ. ಅಥವಾ ಬ್ರಿಟಿಷರು ಸಿಖ್ ಪ್ರದೇಶಗಳನ್ನು ಹೇಗೆ ವಶಪಡಿಸಿಕೊಂಡರು?**

**ಉತ್ತರ : ಆಂಗ್ಲೋ–ಸಿಖ್ ಯುದ್ಧಗಳು –**

➢1839ರಲ್ಲಿ ರಣಜಿತ್‌ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು.

➢1809ರಲ್ಲಿ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.

➢1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು.

➢ವಿದೇಶಿಯರಿಂದ ಇರಬಹುದಾದ ಅಪಾಯವನ್ನರಿತ ಹಿಂದೂ, ಮುಸಲ್ಮಾನ ಹಾಗೂ ಸಿಖ್ಖರೆಲ್ಲರೂ ಒಂದಾಗಿ ಶೌರ್ಯವನ್ನು ಮೆರೆದರು.

➢ಆದರೆ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು.

➢ಅವಮಾನಕರ ಲಾಹೋರ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು.

➢ಹೀಗೆ ಪಂಜಾಬ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು.

**6. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?**

ಉತ್ತರ :

➢ಲಾರ್ಡ್ ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು.

➢ಈ ನೀತಿಯ ಪ್ರಕಾರ ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ.

➢ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.

➢ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದವು ಪ್ರಮುಖವಾಗಿವೆ.

➢ಹೀಗೆ ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಸಹಕಾರಿಯಾಯಿತು.

## ಅಧ್ಯಾಯ – 3 ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. ದೇಶಿಯ ಸಂಸ್ಥಾನಗಳನ್ನು ಅಧೀನಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ______ ಮತ್ತು ______ ಮಾರ್ಗಗಳನ್ನು ಸಮರ್ಥವಾಗಿ ಬಳಸಿಕೊಂಡರು. **– ಸಂಧಾನ ಮತ್ತು ಯುದ್ಧ.**
2. ______ ನು ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು. – **ಲಾರ್ಡ್ ಕಾರ್ನ್‌ವಾಲಿಸ್.**
3. ____ ರಲ್ಲಿ ಇಂಗ್ಲೆಂಡಿನ ಸರಕಾರವು ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೊಳಿಸಿತು. – **1773.**
4. ಇಂಗ್ಲೆಂಡಿನ ಸರಕಾರವು ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೊಳಿಸಿದ ಉದ್ದೇಶ – **ಕಂಪನಿಯ ಮೇಲೆ ನಿಯಂತ್ರಣವನ್ನು ಹೇರುವುದು.**
5. ______ ನು 1800ರಲ್ಲಿ ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಲ್ಕತ್ತಾದಲ್ಲಿ ____ ಕಾಲೇಜನ್ನು ಸ್ಥಾಪಿಸಿದನು. – **ಲಾರ್ಡ್ ಕಾರ್ನವಾಲೀಸ್, ಫೋರ್ಟ್ ವಿಲಿಯಂ ಕಾಲೇಜು.**
6. ______ ನು ಪ್ರಥಮತಃ ವ್ಯವಸ್ಥಿತವಾದ ಪೋಲಿಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು. – **ಲಾರ್ಡ್ ಕಾರ್ನವಾಲಿಸ್.**
7. 'ಸುಪರಿಡೆಂಟೆಂಟ್ ಆಫ್ ಪೋಲಿಸ್' ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದವರು – **ಲಾರ್ಡ್ ಕಾರ್ನ್‌ವಾಲಿಸ್.**
8. ___ ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು. – **1781.**
9. ____ ರಲ್ಲಿ '**ಪೋಲಿಸ್ ಕಾಯ್ದೆ**'ಯನ್ನು ಜಾರಿಗೊಳಿಸಲಾಯಿತು. – **1861.**
10. 1902ರ ______ ಕಾಯ್ದೆಯು ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು. – **ಪೋಲಿಸ್ ಕಮಿಷನ್ ಕಾಯ್ದೆ.**
11. ______ ರಲ್ಲಿ ______ ನು ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದನು. – **1793, ಲಾರ್ಡ್ ಕಾರ್ನವಾಲೀಸ್.**
12. ರೈತವಾರಿ ಪದ್ಧತಿಯನ್ನು ______ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ____ ರ ನಂತರ ಜಾರಿಗೊಳಿಸಿದನು. – **ಥಾಮಸ್ ಮನ್ರೋ, 1801.**
13. ಮಹಲ್‌ವಾರಿ ಪದ್ಧತಿಯನ್ನು ಪ್ರಯೋಗಿಸಿದವರು – **ಆರ್.ಎಂ.ಬರ್ಡ್ ಮತ್ತು ಜೇಮ್ಸ್ ಥಾಮ್ಸನ್.**
14. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ – **ವಾರನ್ ಹೇಸ್ಟಿಂಗ್ಸ್.**
15. ವಾರನ್ ಹೇಸ್ಟಿಂಗ್ಸ್‌ನು ____ರಲ್ಲಿ ಕಲ್ಕತ್ತಾ ಮದರಸಾವನ್ನು ಪ್ರಾರಂಭಿಸಿದನು. – **1781.**
16. ______ ನು ____ ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು. – **ಜೊನಾಥನ್ ಡಂಕನ್, 1792.**
17. ವಿಲಿಯಂ ಬೆಂಟಿಂಕ್‌ನು ____ ರಲ್ಲಿ ಗವರ್ನರ್ ಜನರಲ್ ಆಗಿ ಬಂದನು. **– 1828.**
18. ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನು ______ ನನ್ನು ಕಾನೂನು ಸದಸ್ಯನನ್ನಾಗಿ ನೇಮಿಸಿದನು. – **ಮೆಕಾಲೆ.**
19. ಪಿಟ್ಸ್ ಇಂಡಿಯಾ ಕಾಯ್ದೆ ______ ರಲ್ಲಿ ಜಾರಿಗೆ ಬಂದಿತು. – **1784.**
20. ಮುಸ್ಲಿಂರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ – **1909ರ ಭಾರತೀಯ ಪರಿಷತ್ ಕಾಯ್ದೆ.**
21. ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯವನ್ನು ಸ್ಥಾಪಿಸಿದವನು– **ವಾರನ್ ಹೇಸ್ಟಿಂಗ್ಸ್.**

22. ಫೌಜದಾರಿ ಅದಾಲತ್ ಎಂಬ ಅಪರಾಧ ನ್ಯಾಯಾಲಯವನ್ನು ಸ್ಥಾಪಿಸಿದವನು – **ವಾರನ್ ಹೇಸ್ಟಿಂಗ್ಸ್.**

23. ಅಲೆಗ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ – **ರೈತವಾರಿ ಪದ್ಧತಿ. (1792)**

24. ಹಿಂದುಸ್ತಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ ಎಂದು ಪ್ರತಿಪಾದಿಸಿದವರು – **ಲಾರ್ಡ ಕಾರ್ನವಾಲೀಸ್.**

25. ಬ್ರಿಟಿಷರ ಕಾಲದಲ್ಲಿ ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ – **ಸುಬೇದಾರ್ ಹುದ್ದೆ.**

26. ಮಹಲ್ ಎಂದರೆ ________ ಎಂದರ್ಥ. – **ತಾಲ್ಲೂಕು.**

27. __________ ಶಾಸನದ ಮೇರೆಗೆ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪನೆ ಮಾಡಲಾಯಿತು. – **1773ರ ರೆಗ್ಯುಲೇಟಿಂಗ್ ಕಾಯ್ದೆ.**

28. ಚರ್ಚಗಳಿಗೆ ಭಾರತಕ್ಕೆ ಪ್ರವೇಶ ಮಾಡಲು ಅಧಿಕೃತ ಅವಕಾಶವನ್ನು ನೀಡಿದ ಶಾಸನ – **1813ರ ಚಾರ್ಟರ್ ಕಾಯ್ದೆ.**

29. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಿದ ಶಾಸನ – **1833ರ ಚಾರ್ಟರ್ ಕಾಯ್ದೆ.**

30. ಭಾರತದ ಮೊದಲ ವೈಸರಾಯ್ – **ಲಾರ್ಡ ಕ್ಯಾನಿಂಗ್.**

31. ಭಾರತದ ಸಂವಿಧಾನದ ರಚನೆಗೆ ಬುನಾದಿಯಾದ ಶಾಸನ– **1935ರ ಭಾರತ ಸರ್ಕಾರದ ಶಾಸನ.**

32. ಭಾರತೀಯ ರಿಜರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ – **1935ರ ಭಾರತ ಸರ್ಕಾರದ ಶಾಸನ.**

33. ಭಾರತದಲ್ಲಿ ________ ಕೋರ್ಟ ಸ್ಥಾಪನೆಗೆ 1935ರ ಭಾರತ ಸರ್ಕಾರದ ಕಾಯ್ದೆಯು ಅವಕಾಶ ನೀಡಿತು. – **ಫೆಡರಲ್ ಕೋರ್ಟ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಬ್ರಿಟಿಷ್ ಆಡಳಿತದಲ್ಲಿ ಭಾರತೀಯರಿಗೆ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ಏಕೆ ನೀಡಲಾಯಿತು?**

ಉತ್ತರ : ಕಾರ್ನವಾಲೀಸನು "ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ" ಎಂದು ಪ್ರತಿಪಾದಿಸಿದನು. ಇದರಿಂದಾಗಿ ಭಾರತೀಯರಿಗೆ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ನೀಡಲಾಯಿತು.

**2. ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ನ್ಯಾಯಾಂಗ ವ್ಯವಸ್ಥೆಯನ್ನು ತಿಳಿಸಿ.**

ಉತ್ತರ : 1772ರಲ್ಲಿ ಗೌವರ್ನರ್ ಆಗಿ ಅಧಿಕಾರ ವಹಿಸಿಕೊಂಡ ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ – 'ದಿವಾನಿ ಅದಾಲತ್' ಎಂಬ ನಾಗರೀಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು.

**3. ಬ್ರಿಟಿಷರು ಜಾರಿಗೆ ತಂದ ಭೂಕಂದಾಯ ನೀತಿಗಳು ಯಾವುವು?**

ಉತ್ತರ : ಬ್ರಿಟಿಷರು ಜಾರಿಗೆ ತಂದ ಭೂಕಂದಾಯ ನೀತಿಗಳೆಂದರೆ – ಖಾಯಂ ಜಮೀನ್ದಾರಿ ಪದ್ಧತಿ, ಮಹಲ್ವಾರಿ ಪದ್ಧತಿ, ರೈತವಾರಿ ಪದ್ಧತಿ.

**4. ಖಾಯಂ ಜಮೀನ್ದಾರಿ ಪದ್ಧತಿಯನ್ನು ದೇಶದ ಯಾವ ಭಾಗದಲ್ಲಿ ಜಾರಿಗೆ ತರಲಾಯಿತು?**

ಉತ್ತರ : ಲಾರ್ಡ ಕಾರ್ನವಾಲಿಸ್‌ನು 1793ರಲ್ಲಿ ಖಾಯಂ ಜಮೀನ್ದಾರಿ ಪದ್ಧತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದನು.

**5. ಖಾಯಂ ಜಮೀನ್ದಾರಿ ಪದ್ಧತಿ ಬಗ್ಗೆ ಚಾರ್ಲ್ಸ್ ಮೆಟಕಾಫ್‌ನ ಹೇಳಿಕೆಯೇನು?**

ಉತ್ತರ : ಚಾರ್ಲ್ಸ್ ಮೆಟಕಾಫ್ ಹೇಳುವಂತೆ ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಹೇಳಿದ್ದಾರೆ.

**6. ಮಹಲ್ವಾರಿ ಪದ್ಧತಿಯು ದೇಶದ ಯಾವ ಭಾಗಗಳಲ್ಲಿ ಜಾರಿಗೆ ಬಂದಿತು?**

ಉತ್ತರ : ಮಹಲ್ವಾರಿ ಪದ್ಧತಿಯು ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಜಾರಿಗೆ ಬಂದಿತು.

**7. ರೈತವಾರಿ ಪದ್ಧತಿಯನ್ನು ಮೊದಲು ಯಾರು, ಯಾವಾಗ ಜಾರಿಗೊಳಿಸಿದರು?**

ಉತ್ತರ : ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.

**8. ಆಧುನಿಕ ಭಾರತದ ಶಿಕ್ಷಣಕ್ಕೆ ಯಾವ ವರದಿಯು ತಳಹದಿಯಾಯಿತು?**

ಉತ್ತರ : 1835ರಲ್ಲಿ ಇಂಗ್ಲೀಷ ಶಿಕ್ಷಣ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯೆ ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.

**9. ಮೆಕಾಲೆ ಯೋಜನೆಯ ಪ್ರಮುಖ ಅಂಶವೇನು?**

ಉತ್ತರ : ಮೆಕಾಲೆ ಯೋಜನೆಯ ಪ್ರಮುಖ ಅಂಶವೆಂದರೆ – "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ" ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದು.

**10. ಶಿಕ್ಷಣಕ್ಕೆ ಸಂಬಂಧಿಸಿದ ಚಾರ್ಲ್ಸ್ ವುಡ್ಸ್‌ನ ಆಯೋಗದ ಶಿಫಾರಸ್ಸುಗಳೇನು?**

ಉತ್ತರ : ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಮುಖ ಬೆಳವಣಿಗೆಯೆಂದರೆ ಸರ್. ಚಾರ್ಲ್ಸ್ ವುಡ್‌ನ (1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾಲಯಗಳನ್ನು 1857ರಲ್ಲಿ ಸ್ಥಾಪಿಸಿದನು.

**11. ಚಾರ್ಟರ್ ಕಾಯ್ದೆಯ ಪ್ರಮುಖ ಉದ್ದೇಶವೇನು?**

ಉತ್ತರ : ಚಾರ್ಟರ್ ಕಾಯ್ದೆಯ ಪ್ರಮುಖ ಉದ್ದೇಶ ಭಾರತದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಪರವಾನಗಿಯನ್ನು ವಿಸ್ತರಿಸುವುದು.

**12. ಬ್ರಿಟಿನ್ ಸರಕಾರವು 1858ರ ಭಾರತ ಸರ್ಕಾರದ ಕಾಯ್ದೆಯನ್ನು ಜಾರಿಗೆ ತರಲು ಕಾರಣವೇನು?**

ಉತ್ತರ : 1857ರ ಸೈನಿಕ ಮತ್ತು ನಾಗರಿಕ ಕ್ರಾಂತಿಯ ಪರಿಣಾಮವಾಗಿ ಭಾರತೀಯರನ್ನು ಸಂತೈಸಲು ಬ್ರಿಟನ್ ಸರಕಾರ 1858ರ ಭಾರತ ಸರ್ಕಾರದ ಕಾಯ್ದೆಯನ್ನು ಜಾರಿಗೆ ತಂದಿತು. ಇದರ ಪರಿಣಾಮವಾಗಿ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ರದ್ದಾಗಿ, ಬ್ರಿಟನ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡುವಂತಾಯಿತು. ನವಂಬರ್ 1, 1858ರಂದು ಬ್ರಿಟನ್ ರಾಣಿ ವಿಕ್ಟೋರಿಯಾ ಒಂದು ಘೋಷಣೆ ಹೊರಡಿಸಿ ತಮ್ಮ ಆಡಳಿತದ ಅವಧಿಯಲ್ಲಿ ಭಾರತದ ಎಲ್ಲಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದೆಂದು ಘೋಷಿಸಿದರು.

**13. 1861ರ ಭಾರತೀಯ ಪರಿಷತ್ ಕಾಯ್ದೆಯು ಭಾರತೀಯರಿಗೆ ಅತಿ ಪ್ರಮುಖ ಕಾಯ್ದೆಯಾಗಿದೆ ಏಕೆ?**

ಉತ್ತರ : 1861ರ ಭಾರತೀಯ ಪರಿಷತ್ ಕಾಯ್ದೆಯು ಭಾರತೀಯರಿಗೆ ಅತಿ ಪ್ರಮುಖ ಕಾಯ್ದೆಯಾಗಿದೆ ಏಕೆಂದರೆ ಈ ಕಾಯ್ದೆಯು ಭಾರತೀಯರಿಗೆ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಸ್ಥಾನವನ್ನು ಕಲ್ಪಿಸಿತು.

**14. 1909ರ ಭಾರತೀಯ ಪರಿಷತ್ ಕಾಯ್ದೆಯನ್ನು ಯಾರು ರೂಪಿಸಿದರು?**

ಉತ್ತರ : 1909ರ ಭಾರತೀಯ ಪರಿಷತ್ ಕಾಯ್ದೆಯನ್ನು ಭಾರತದ ವೈಸರಾಯ್ ಲಾರ್ಡ ಮಿಂಟೋ ಮತ್ತು ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ ಮಾರ್ಲೆ ರೂಪಿಸಿದರು. ಆದ್ದರಿಂದ ಈ ಕಾಯ್ದೆಯನ್ನು 'ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ' ಎಂತಲೂ ಕರೆಯುವರು.

**15. 1919ರ ಭಾರತೀಯ ಪರಿಷತ್ ಕಾಯ್ದೆಯನ್ನು ರೂಪಿಸಿದವರು ಯಾರು?**

ಉತ್ತರ : 1919ರ ಭಾರತೀಯ ಪರಿಷತ್ ಕಾಯ್ದೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗೋ ಮತ್ತು ವೈಸರಾಯ ಚೆಮ್ಸ್‌ಫರ್ಡ್ ರೂಪಿಸಿದರು.

**16. 1919ರ ಭಾರತೀಯ ಪರಿಷತ್ ಕಾಯ್ದೆಯನ್ನು ಯಾವ ಉದ್ದೇಶದಿಂದ ರೂಪಿಸಲಾಯಿತು?**

ಉತ್ತರ : ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೆಪಿಸಿದ ಹಿನ್ನೆಲೆಯಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಯಿತು.

**17. ಕೊತ್ವಾಲರ ಕಾರ್ಯಗಳೇನು?**

ಉತ್ತರ : ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳ ನಿಯಂತ್ರಣ ಮಾಡುವುದು ಕೊತ್ವಾಲರ ಕೆಲಸವಾಗಿದೆ.

**18. ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲು ನೇಮಕವಾದ ಸಮಿತಿ ಯಾವುದು?**

ಉತ್ತರ : ಸೈನಿಕ ವ್ಯವಸ್ಥೆಯನ್ನು ಮರುವಿನ್ಯಾಸಗೊಳಿಸಲು ಪೀಲ್ ಎಂಬುವವರ ನೇತೃತ್ವದ ಸಮಿತಿ ರಚನೆಯಾಯಿತು.

**19. ಖಾಯಂ ಜಮೀನ್ದಾರಿ ಪದ್ಧತಿ ಎಂದರೇನು?**

ಉತ್ತರ : ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದ ಹೊಸ ಕಂದಾಯ ಪದ್ಧತಿಯನ್ನು ಖಾಯಂ ಜಮೀನ್ದಾರಿ ಪದ್ಧತಿ ಎನ್ನುವರು.

**20. ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು "ಅಪರಾಧ ತೆರಿಗೆ" ಎಂದು ತೀಕ್ಷ್ಣವಾಗಿ ಟೀಕಿಸಿದವರು ಯಾರು?**

ಉತ್ತರ : ಇಂಗ್ಲೆಂಡಿನ ಶಾಸನ ಸಭೆಯ ಸದಸ್ಯನಾದ ಎಡ್ಮಂಡ್ ಬರ್ಕ್‌ನು ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾದ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದನು.

21. Policy of Association ಎಂದರೇನು? ಅಥವಾ

ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿಯಿಂದ ಭಾರತೀಯರ ಮತ್ತು ಬ್ರಿಟಿಷರ ನಡುವಿನ ಅಂತರ ಕಡಿಮೆಯಾಯಿತು?

ಉತ್ತರ : 1861ರ ಕಾಯ್ದೆಯ ಮೂಲಕ ಭಾರತೀಯರಿಗೆ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಸ್ಥಾನವನ್ನು ಕಲ್ಪಿಸಲಾಯಿತು. ಭಾರತೀಯರು ಬ್ರಿಟಿಷರ ಬಗೆಗೆ ತಿಳಿದಿರುವ ಅಭಿಪ್ರಾಯಗಳನ್ನು ತಿಳಿಯಲು ಭಾರತೀಯರಿಗೆ ಪ್ರಾತಿನಿಧ್ಯ

ನೀಡಲಾಯಿತು. ಇದರಿಂದ ಭಾರತೀಯರ ಮತ್ತು ಬ್ರಿಟಿಷರ ನಡುವಿನ ಅಂತರ ಕಡಿಮೆಯಾಯಿತು. ಇದನ್ನು ಇಂಗ್ಲಿಷಿನಲ್ಲಿ Policy of Association ಎಂದು ಕರೆಯುತ್ತಾರೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದಲ್ಲಿ ರಾಜ್ಯ ವ್ಯವಸ್ಥೆಗೆ ಏಕರೂಪ ನೀಡುವಲ್ಲಿ ಬ್ರಿಟಿಷರು ಹೇಗೆ ಸಫಲವಾದರು?**

**ಉತ್ತರ : ಭಾರತದಲ್ಲಿ ರಾಜ್ಯ ವ್ಯವಸ್ಥೆಗೆ ಏಕರೂಪ ವ್ಯವಸ್ಥೆ –**

- ಭಾರತ ಒಂದು ದೇಶವೆಂಬ ಸಾಮೂಹಿಕ ಕಲ್ಪನೆಯು ಇಲ್ಲದಿದ್ದ ಆ ಸಂದರ್ಭದಲ್ಲಿ ಅದು ವಿವಿಧ ರಾಜ್ಯಾಡಳಿತಗಳಲ್ಲಿ ಹರಿದು ಹಂಚಿಹೋಗಿತ್ತು.
- ಅನೇಕ ರಾಜ್ಯಗಳನ್ನು ವಿವಿಧ ಕಾರಣಗಳಿಂದ ಒಂದುಗೂಡಿಸಿ ಬ್ರಿಟಿಷರು ಏಕರೂಪ ರಾಜಕೀಯ ವ್ಯವಸ್ಥೆಗೆ ಮತ್ತು ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು.
- ಶಿಕ್ಷಣ, ನ್ಯಾಯಾಂಗ ವ್ಯವಸ್ಥೆ, ಭೂಕಂದಾಯ, ವ್ಯಾಪಾರ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಹೊಸ ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಅವರು ಕಟ್ಟಿದ ರಾಜ್ಯ ವ್ಯವಸ್ಥೆಗೆ ಏಕರೂಪವನ್ನು ನೀಡುವಲ್ಲಿ ಸಫಲವಾದರು.
- ಏಕರೂಪ ವ್ಯವಸ್ಥೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಕಂಪನಿಯು ಆಡಳಿತದ ಕ್ಷೇತ್ರದಲ್ಲಿ ವಿವಿಧ ಪ್ರಯೋಗಗಳನ್ನು ಜಾರಿಗೊಳಿಸಿತು.

**2. ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ.**

**ಉತ್ತರ : ಈಸ್ಟ್ ಇಂಡಿಯಾ ಕಂಪನಿಯು ರೂಪಿಸಿದ ನ್ಯಾಯಾಂಗ ವ್ಯವಸ್ಥೆ –**

- 1772ರಲ್ಲಿ ಗೌವರ್ನರ್ ಆಗಿ ಅಧಿಕಾರ ವಹಿಸಿಕೊಂಡ ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ – 'ದಿವಾನಿ ಅದಾಲತ್' ಎಂಬ ನಾಗರೀಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು.
- ನಾಗರಿಕ ನ್ಯಾಯಾಲಯಗಳು ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು.
- ಅಪರಾದ ನ್ಯಾಯಾಲಯಗಳು 'ಕಾಜಿ'ಗಳ ಅಧೀನದಲ್ಲಿದ್ದರೂ ಯುರೋಪಿಯನ್ನು ಮೇಲ್ವಿಚಾರಣೆಯಲ್ಲಿಯೇ ಕಾರ್ಯ ನಿರ್ವಹಿಸಬೇಕಾಗಿತ್ತು.

**3. ಬ್ರಿಟಿಷರು ಜಾರಿಗೆ ತಂದ ನಾಗರಿಕ ಸೇವೆಗಳನ್ನು ವಿವರಿಸಿ.**

**ಉತ್ತರ : ನಾಗರೀಕ ಸೇವೆಗಳು –**

- ಲಾರ್ಡ ಕಾರ್ನವಾಲಿಸನು ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು.
- ಬ್ರಿಟಿಷ್ ನೌಕರರ ಅನೈತಿಕ ಮಾರ್ಗದಲ್ಲಿ ಹಣ ಸಂಪಾದಿಸುವುದನ್ನು ತಡೆಯುವ ಸಲುವಾಗಿ 1773ರಲ್ಲಿ ಇಂಗ್ಲೆಂಡಿನ ಸರಕಾರವು ರೆಗ್ಯುಲೇಟಿಂಗ್ ಕಾಯ್ದೆಯನ್ನು ಭಾರತದಲ್ಲಿ ಜಾರಿಗೊಳಿಸಿತು.
- 1800ರಲ್ಲಿ ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಲ್ಕತ್ತಾದಲ್ಲಿ ಫೋರ್ಟ ವಿಲಿಯಂ ಕಾಲೇಜನ್ನು ಸ್ಥಾಪಿಸಿದನು.
- 1853ರ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು.
- ಇದರಿಂದ ಭಾರತೀಯರಿಗೆ ಹೆಚ್ಚಿನ ಪ್ರಯೋಜನವಾಗಲಿಲ್ಲ. ಜೊತೆಗೆ ಬ್ರಿಟಿಷರು ಭಾರತೀಯರ ಸಾಮರ್ಥ್ಯವನ್ನು ಅನುಮಾನಿಸಿ ನೋಡಿದರು.

**4. ಬ್ರಿಟಿಷರ ಕಾಲದಲ್ಲಿ ಪೋಲಿಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು? ಅಥವಾ ಲಾರ್ಡ ಕಾರ್ನವಾಲಿಸನು ಪೋಲಿಸ್ ವ್ಯವಸ್ಥೆಯನ್ನು ಹೇಗೆ ಸುಧಾರಿಸಿದನು?**

**ಉತ್ತರ : ಬ್ರಿಟಿಷರ ಕಾಲದಲ್ಲಿ ಪೋಲಿಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳು**

- ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುವ ವರ್ಗವೆ ಪೋಲಿಸರು.
- ಲಾರ್ಡ ಕಾರ್ನವಾಲಿಸನು ಪ್ರಥಮತಃ ವ್ಯವಸ್ಥಿತವಾದ ಪೋಲಿಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು.
- ಇವನು 'ಸೂಪರಿಂಟೆಂಟೆಂಟ್ ಆಫ್ ಪೋಲಿಸ್' (SP) ಎನ್ನುವ ಹುದ್ದೆಯನ್ನು ಸೃಷ್ಟಿಸಿದನು.
- 1793ರಲ್ಲಿ ಪ್ರತಿ ಜಿಲ್ಲೆಯನ್ನು ಠಾಣೆಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನದಲ್ಲೂ, ಹಳ್ಳಿಗಳು 'ಚೌಕಿದಾರ'ರ ಅಧೀನದಲ್ಲೂ ಇರುವಂತೆ ಮಾಡಿದನು.
- ಕೊತ್ವಾಲರು ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿದ್ದರು.
- 1861ರಲ್ಲಿ 'ಪೋಲೀಸ್ ಕಾಯ್ದೆ'ಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯ ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯ.
- ಅಧಿಕಾರಿಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ.
- 1902ರಲ್ಲಿ ಪೋಲಿಸ್ ಕಮಿಷನ್ ಕಾಯ್ದೆಯು ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸತು.

**5. ಬ್ರಿಟಿಷರ ಕಾಲದ ಸೈನ್ಯ ವ್ಯವಸ್ಥೆಯನ್ನು ವಿವರಿಸಿ.**

**ಉತ್ತರ : ಬ್ರಿಟಿಷರ ಕಾಲದ ಸೈನ್ಯ ವ್ಯವಸ್ಥೆ**

- ಬ್ರಿಟಿಷರ ಕಾಲದಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಸೈನ್ಯವು ಆಧಾರಸ್ತಂಬವಾಗಿತ್ತು.
- ಭಾರತೀಯರನ್ನೇ ಸೈನ್ಯದಲ್ಲಿ ಸೇರಿಸಿಕೊಂಡು ಅವರ ನೆರವಿನಿಂದಲೇ ಬ್ರಿಟಿಷರು ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು.
- ಸೈನ್ಯದ ಶಕ್ತಿಯನ್ನು ಬಳಸಿಕೊಂಡು ಭಾರತದ ಒಳಗಡೆಯ ತಮ್ಮ ವಿರೋಧ ಶಕ್ತಿಗಳಿಂದ ಮತ್ತು ವಿದೇಶಿ ಶಕ್ತಿಗಳಿಂದ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು.
- ಅಧಿಕಾರಿಗಳು ಬ್ರಿಟಿಷರೇ ಆಗಿದ್ದರು.
- ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆಯೆಂದರೆ ಸುಬೇದಾರ್ ಸ್ಥಾನ.

**6. ಖಾಯಂ ಜಮೀನ್ದಾರಿ ಪದ್ಧತಿಯ ಲಕ್ಷಣಗಳೇನು?**

**ಉತ್ತರ : ಖಾಯಂ ಜಮೀನ್ದಾರಿ ಪದ್ಧತಿಯ ಲಕ್ಷಣಗಳು –**

- ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ ಕಾರ್ನವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೊಳಿಸಿದನು.
- ಈ ಕಂದಾಯ ಪದ್ಧತಿಯ ಪ್ರಕಾರ ಜಮೀನ್ದಾರರು ಭೂಮಾಲಿಕರಾಗಿ ಪ್ರತಿವರ್ಷವೂ ನಿರ್ದಿಷ್ಟ ದಿನಕ್ಕೆ ಮೊದಲೇ ಅವನು ಒಪ್ಪಿಕೊಂಡಿದ್ದ ಕಂದಾಯದ ಮೊತ್ತವನ್ನು ಸರಕಾರಕ್ಕೆ ಸಲ್ಲಿಸಬೇಕಿತ್ತು.
- ಭೂಮಾಲಿಕರಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು. ಏಕೆಂದರೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡಿದ ಹಣವನ್ನು ತಮ್ಮಲ್ಲೇ ಇಟ್ಟುಕೊಳ್ಳಬಹುದಾಗಿತ್ತು.
- ಈ ಪದ್ಧತಿಯಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಃ ರೈತರಿಗಾಗಲಿಲ್ಲ.
- ಚಾರ್ಲ್ಸ್ ಮೆಟಕಾಫ್ ಹೇಳುವಂತೆ ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಹೇಳಿದ್ದಾರೆ.

**7. ಮಹಲ್ವಾರಿ ಪದ್ಧತಿಯ ಲಕ್ಷಣಗಳನ್ನು ತಿಳಿಸಿ.**

**ಉತ್ತರ : ಮಹಲ್ವಾರಿ ಪದ್ಧತಿಯ ಲಕ್ಷಣಗಳು –**

- ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದ ಮಾಡಿಕೊಂಡು, ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು.
- ಈ ಪದ್ಧತಿಯನ್ನು ಆರ್.ಎಂ.ಬರ್ಡ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು.
- ಮಹಲ್ ಎಂದರೆ ತಾಲ್ಲೂಕು ಎಂದರ್ಥ.
- ಕಂಪನಿಯ ಸರ್ಕಾರದ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿಕತ್ವವನ್ನು ಕಳೆದುಕೊಂಡರು.
- ಅವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

**8. ರೈತವಾರಿ ಪದ್ಧತಿಯ ಲಕ್ಷಣಗಳನ್ನು ತಿಳಿಸಿ.**

**ಉತ್ತರ : ರೈತವಾರಿ ಪದ್ಧತಿಯ ಲಕ್ಷಣಗಳು –**

- ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಗ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.
- ಈ ಪದ್ಧತಿಯನ್ನು ಥಾಮಸ್ ಮನ್ರೋ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದನು.
- ಈ ಪದ್ಧತಿಯ ಪ್ರಕಾರ ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕವನ್ನು ಕಲ್ಪಿಸಲಾಯಿತು.

- ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರಕಾರ ಮಾನ್ಯಮಾಡಿತು.
- ಅವನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇ. 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು.
- ರೈತರ ಒಳಿತಿಗಾಗಿ ರೈತವಾರಿ ಪದ್ಧತಿಯನ್ನು ಜಾರಿಗೊಳಿಸಲಾಗಿದೆ ಎಂದು ಬ್ರಿಟಿಷ್ ಸರ್ಕಾರ ಹೇಳಿದರೂ, ಹೆಚ್ಚಿನ ಕಂದಾಯ ನಿಗದಿಪಡಿಸಿದ್ದರಿಂದ ರೈತರು ಸಾಲದ ಸುಳಿಗೆ ಸಿಲುಕುವಂತಾಯಿತು.

**9. ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳಾವುವು?**

**ಉತ್ತರ : ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು –**

- ನಿಜವಾದ ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
- ಜಮೀನ್ದಾರರ ಶೋಷಣೆಗೆ ಒಳಗಾದ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು. ಕ್ರಮೇಣ ನಿರ್ಗತಿಕರಾದರು.
- ಭೂಮಿ ಮಾರಾಟದ ವಸ್ತುವಾಯಿತು. ಇದನ್ನು ಪರಭಾರೆ ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು.
- ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
- ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರಿಕಾಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
- ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.

**10. ಭಾರತೀಯ ಮೇಲೆ ಬ್ರಿಟಿಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳನ್ನು ವಿವರಿಸಿ.**

**ಉತ್ತರ : ಭಾರತೀಯ ಮೇಲೆ ಬ್ರಿಟಿಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳು –**

- ಭಾರತೀಯರು ಆಧುನಿಕತೆ, ಜಾತ್ಯಾತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣುತ್ತೇವೆ.
- ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು. ಇವು ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
- ಹೊಸ ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿಗಳು ಹುಟ್ಟಿಕೊಂಡವು.
- ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
- ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯ ಮೇಲೂ ಆಯಿತು.
- ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.
- ಭಾರತದಲ್ಲಿ ಜಾರಿಗೊಂಡ ಪಾಶ್ಚಾತ್ಯ ವಿದ್ಯಾಭ್ಯಾಸದ ಕ್ರಮದಿಂದ ಸೃಷ್ಟಿಯಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ಹೊಸ ತಲೆಮಾರುಗಳನ್ನು ಸೃಷ್ಟಿಸುತ್ತಾ ಹೋಯಿತು.

**11. 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆ ತರಲು ಕಾರಣವೇನು?**

**ಉತ್ತರ : 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆ ತರಲು ಕಾರಣಗಳು –**

- 1765ರಲ್ಲಿ ಜಾರಿಗೊಂಡ ದಿವಾನಿ ಹಕ್ಕಿನ ನಂತರ ಕಂಪನಿ ಅಧಿಕಾರಿಗಳು ಅಪರಿಮಿತ ದುರಾಸೆಗೆ ಒಳಗಾಗಿ ಅಧಿಕಾರವನ್ನು ತಮ್ಮ ವೈಯಕ್ತಿಕ ಶ್ರೀಮಂತಿಕೆಯನ್ನು ಹೆಚ್ಚುಮಾಡಿಕೊಳ್ಳಲು ಬಳಸಿಕೊಂಡರು.
- ಭ್ರಷ್ಟಾಚಾರ ವಿಪರೀತವಾಯಿತು.
- ಇವರು ಸಂಪಾದಿಸಿದ ಹಣದ ಪ್ರಮಾಣ ಎಷ್ಟಿತ್ತೆಂದರೆ ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಬಹುದೆನ್ನುವ ಆತಂಕ ಇಂಗ್ಲೆಂಡಿನಲ್ಲಿ ಅನೇಕರಿಗಿತ್ತು.
- ಈ ಹಿನ್ನೆಲೆಯಲ್ಲಿ ಕಂಪನಿಯ ವ್ಯವಹಾರವನ್ನು ನಿಯಂತ್ರಿಸುವುದು.
- ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಉದ್ದೇಶದಿಂದ 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆ ತಂದರು.

**12. 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳೇನು?**

**ಉತ್ತರ : 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳು –**

- ಈ ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳಾದ ಮುಂಬಯಿ ಮತ್ತು ಮದ್ರಾಸುಗಳ ಮೇಲೆ ಅಧಿಕಾರವನ್ನು ಪಡೆಯಿತು.
- ಬಂಗಾಳದ ಗವರ್ನರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಆದನು.
- ಗವರ್ನರ್ ಜನರಲ್‌ನಿಗೆ ಬಾಂಬೆ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಈ ಕಾನೂನು ನೀಡಿತು.
- ಬಂಗಾಳ ಸರ್ಕಾರದ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ ಪೂರ್ವಾನುಮತಿಯಿಲ್ಲದೆ ಬಾಂಬೆ ಮತ್ತು ಮದ್ರಾಸ್ ಸರ್ಕಾರಗಳು ಯಾರ ಮೇಲೂ ಯುದ್ಧ ಘೋಷಿಸುವಂತಿಲ್ಲ. ಅಥವಾ ಶಾಂತಿ ಸಂಧಾನವನ್ನು ನಡೆಸುವಂತಿಲ್ಲ.
- ಕಲ್ಕತ್ತಾದಲ್ಲಿ ಈ ಕಾಯ್ದೆಯ ಮೇರೆಗೆ "ಸುಪ್ರಿಂಕೋರ್ಟ" ಅನ್ನು ಸ್ಥಾಪಿಸಲಾಯಿತು.

**13. 1784ರ ಪಿಟ್ಸ್ ಇಂಡಿಯಾ ಕಾಯ್ದೆಯ ಪ್ರಮುಖ ಅಂಶಗಳೇನು?**

**ಉತ್ತರ : 1784ರ ಪಿಟ್ಸ್ ಇಂಡಿಯಾ ಕಾಯ್ದೆಯ ಪ್ರಮುಖ ಅಂಶಗಳು –**

- ಬ್ರಿಟಿಷ್ ಸರ್ಕಾರದ ಅಧಿಕಾರವನ್ನು ಮತ್ತು ಕಂಪನಿ ಸರ್ಕಾರಕ್ಕಿದ್ದ ಅಧಿಕಾರದ ಮಿತಿಗಳನ್ನು ಸ್ಪಷ್ಟಪಡಿಸುವುದು ಈ ಕಾಯ್ದೆಯ ಉದ್ದೇಶವಾಗಿತ್ತು.
- ನಿಯಂತ್ರಣ ಮಂಡಳಿ ಎನ್ನುವ ಆರು ಜನ ಕಮಿಷನರ್‌ಗಳನ್ನೊಳಗೊಂಡ ಹೊಸ ಸಂಸ್ಥೆಯನ್ನು ಹುಟ್ಟುಹಾಕಲಾಯಿತು.
- ಈ ಮಂಡಳಿಯು ನಾಗರಿಕ, ಮಿಲಿಟರಿ, ಕಂದಾಯದ ವಿಷಯಗಳಲ್ಲಿ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ ಹೊಂದಿತ್ತು.
- ಈ ಕಾಯ್ದೆಯು ಭಾರತದಲ್ಲಿದ್ದ ಕಂಪನಿಯ ಅಧೀನದ ಪ್ರದೇಶಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮನೆಂದು ಘೋಷಿಸಿತು.

**14. 1813ರ ಚಾರ್ಟರ್ ಕಾಯ್ದೆಯ ನಿಬಂಧನೆಗಳೇನು? ಅಥವಾ 1813ರ ಕಾಯ್ದೆಯು ಚಾರಿತ್ರಿಕವಾದುದು ಏಕೆ?**

**ಉತ್ತರ : 1813ರ ಚಾರ್ಟರ್ ಕಾಯ್ದೆಯ ನಿಬಂಧನೆಗಳು –**

- ಈ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರುವ ಅಧಿಕಾರವನ್ನು ನೀಡಿತು.
- ಈ ಕಾಯ್ದೆಯು ಇಚ್ಛೆಯಿದ್ದವರೆಲ್ಲರಿಗೂ ವ್ಯಾಪಾರ ಮಾಡುವ ಅವಕಾಶವನ್ನು ಮುಕ್ತವಾಗಿಸಿತು.. ಇದರ ಪರಿಣಾಮವಾಗಿ ಮುಕ್ತ ವ್ಯಾಪಾರದ ಹೊಸ ಶಕೆ ಆರಂಭವಾಯಿತು.
- ಅನುಮತಿ ಮತ್ತು ಪರವಾನಿಗೆಯ ಹೊಸ ಕಾಲ ಆರಂಭವಾಯಿತು.
- ಗವರ್ನರ್ ಜನರಲ್ ಮತ್ತು ಸೇನೆಯ ಮಹಾ ಮುಖ್ಯಸ್ಥರನ್ನು ನಿರ್ದೇಶಕ ಮಂಡಳಿಯು ನೇಮಿಸುವ ಅಧಿಕಾರವನ್ನು ಹೊಂದಿತು.
- ಚರ್ಚಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು. ಇದರಿಂದ ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ ಹೆಚ್ಚಾಯಿತು.

**15. 1833 ರ ಚಾರ್ಟರ್ ಕಾಯ್ದೆಯ ನಿಬಂಧನೆಗಳೇನು?**

**ಉತ್ತರ : 1833ರ ಚಾರ್ಟರ್ ಕಾಯ್ದೆಯ ನಿಬಂಧನೆಗಳು –**

- ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಲಾಯಿತು.
- ಭಾರತದ ಎಲ್ಲಾ ವ್ಯಾಪಾರಿ ಸರಕುಗಳನ್ನು "ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ" ಅಧಿಕಾರವನ್ನು ಗವರ್ನರ್ ಜನರಲ್‌ನು ಪಡೆದನು.
- ದೇಶಿಯ ಸಂಸ್ಥಾನಗಳ ಜೊತೆಗೆ ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ಸಂಬಂಧದ ಎಲ್ಲಾ ವಿಷಯಗಳನ್ನು ಬಂಗಾಳದ ಕೇಂದ್ರ ಸರ್ಕಾರವೇ ತಿರ್ಮಾನಿಸುವ ಹಕ್ಕನ್ನು ಹೊಂದಿತ್ತು.
- ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ ಎನ್ನುವುದನ್ನು ಈ ಕಾಯ್ದೆಯು ನಿರ್ದೇಶಿಸಿತು.

➢ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ನ್ಯಾಯಾಂಗ ಪರಿಣಿತನನ್ನು ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬೇಕಾಯಿತು.

➢ಎಲ್ಲಾ ಬ್ರಿಟಿಷ್ ವ್ಯಾಪಾರಿ ಕಂಪನಿಗಳಿಗೆ ಭಾರತಕ್ಕೆ ಬರಲು ಮುಕ್ತ ಪರವಾನಗಿಯನ್ನು ನೀಡಲಾಯಿತು.

**16. 1858ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳೇನು? ಅಥವಾ 1858ರ ಕಾಯ್ದೆಯು ಬ್ರಿಟಿಷ್ ಆಳ್ವಿಕೆಯಲ್ಲಿ ಅತ್ಯಂತ ಮಹತ್ವದ ಬದಲಾವಣೆಯನ್ನು ತಂದಿತು. ಈ ಹೇಳಿಕೆಯನ್ನು ವಿಶ್ಲೇಷಿಸಿ.**

**ಉತ್ತರ : 1858ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳು –**

1858ರ ಭಾರತ ಸರ್ಕಾರದ ಕಾಯ್ದೆಯು ಬ್ರಿಟಿಷ್ ಆಳ್ವಿಕೆಯಲ್ಲಿ ಅತ್ಯಂತ ಮಹತ್ವದ ಬದಲಾವಣೆಯನ್ನು ತಂದಿತು ಹೇಗೆಂದರೆ –

➢1. ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.

➢ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸರಾಯ್" ಎಂಬ ಪದನಾಮವನ್ನು ನೀಡಿದರು. ವೈಸರಾಯ್ ಆಗಿ ಲಾರ್ಡ್ ಕ್ಯಾನಿಂಗ್ ನೇಮಕಗೊಂಡರು.

➢"ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ" ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು. ಬ್ರಿಟಿಷ್ ಮಂತ್ರಿಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದರು.

➢ಇವರಿಗೆ ಸಹಾಯ ಮಾಡಲು 15 ಸದಸ್ಯರನ್ನೊಳಗೊಂಡ ಭಾರತ ಮಂಡಲಿ ಅಸ್ತಿತ್ವಕ್ಕೆ ಬಂದಿತು.

**17. 1909ರ ಭಾರತೀಯ ಪರಿಷತ್ ಕಾಯ್ದೆ (ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳೇನು?**

**ಉತ್ತರ : 1909ರ ಭಾರತೀಯ ಪರಿಷತ್ ಕಾಯ್ದೆ (ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳು –**

➢ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ 60ಕ್ಕೆ ಹೆಚ್ಚಿಸಲಾಯಿತು.

➢ಪ್ರಾಂತ್ಯದಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.

➢ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ನೀಡಲಾಯಿತು.

➢ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ 'ಪ್ರತ್ಯೇಕ ಚುನಾವಣಾ ಮತಗಟ್ಟೆ' ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

**18. 1919ರ ಭಾರತೀಯ ಪರಿಷತ್ ಕಾಯ್ದೆ (ಮಾಂಟೆಗೋ–ಚೇಮ್ಸ್‌ಫರ್ಡ್ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳೇನು?**

**ಉತ್ತರ : 1919ರ ಭಾರತೀಯ ಪರಿಷತ್ ಕಾಯ್ದೆ (ಮಾಂಟೆಗೋ–ಚೇಮ್ಸ್‌ಫರ್ಡ್ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳು –**

➢ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ ನೀಡಲಾಯಿತು. ಅವುಗಳೆಂದರೆ ಶಾಸಕಾಂಗ ಸಭೆ(ಕೆಳಮನೆ), ರಾಜ್ಯಗಳ ಪರಿಷತ್ತು(ಮೇಲ್ಮನೆ).

➢ಪ್ರಾಂತ್ಯಗಳಲ್ಲಿ "ದ್ವಿಸರಕಾರ" ಪದ್ಧತಿಗೆ ಅವಕಾಶ ನೀಡಲಾಯಿತು.

➢ಭಾರತಕ್ಕೆ ಒಬ್ಬ ಹೈಕಮಿಷನರ್‌ರನ್ನು ನೇಮಕ ಮಾಡಲಾಯಿತು.

➢ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.

➢ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.

➢"ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಮುಸಿಂ, ಸಿಖ, ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್ನರಿಗೆ ವಿಸ್ತರಿಸಲಾಯಿತು.

**19. 1935ರ ಭಾರತ ಸರ್ಕಾರದ ಕಾಯ್ದೆಯು ಭಾರತದ ಸಂವಿಧಾನದ ರಚನೆಗೆ ಬುನಾದಿಯಾಗಿದೆ ಎಂದು ಹೇಗೆ ಹೇಳುವಿರಿ.**

ಉತ್ತರ : 1935ರ ಭಾರತ ಸರ್ಕಾರದ ಕಾಯ್ದೆಯು ಭಾರತದ ಸಂವಿಧಾನದ ರಚನೆಗೆ ಬುನಾದಿಯಾಗಿದೆ ಹೇಗೆಂದರೆ. ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು.

**20. 1935ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳೇನು?**

**ಉತ್ತರ : 1935ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳು =**

➢ಬ್ರಿಟಿಷ್ ಪ್ರಾಂತ್ಯಗಳು, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.

➢ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು ಸ್ಥಾಪಿಸಲಾಯಿತು.

➢ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.

➢ಪ್ರಾಂತ್ಯಗಳಲ್ಲಿ 'ದ್ವಿ ಸರಕಾರ' ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.

➢ಭಾರತದಲ್ಲಿ "ಫೆಡರಲ್ ಕೋರ್ಟ" ಸ್ಥಾಪನೆಗೆ ಅವಕಾಶ ನೀಡಲಾಯಿತು.

**20. ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು 'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು ಹೇಗೆ? ವಿಮರ್ಶಿಸಿ.**

ಉತ್ತರ : ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು 'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು ಹೇಗೆಂದರೆ – ಈ ಪದ್ಧತಿಯಿಂದ ರೈತರಿಗಿಂತ ಭೂಮಾಲೀಕನಿಗೆ ಹೆಚ್ಚಿನ ಲಾಭವಾಯಿತು. ಏಕೆಂದರೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡಿ ರೈತರನ್ನು ಶೋಷಿಸುತ್ತಿದ್ದರು. ಚಾರ್ಲ್ಸ ಮೆಟ್‌ಕಾಫ್ ಹೇಳುವಂತೆ ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಹೇಳಿದ್ದಾರೆ.

**21. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು ಯಾವುವು?**

**ಉತ್ತರ : ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು –**

➢ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿಯೆಂದರೆ ವಾರನ್ ಹೇಸ್ಟಿಂಗ್ಸ್.

➢ವಾರನ್ ಹೇಸ್ಟಿಂಗ್ಸ್‌ನು ಕಲ್ಕತ್ತಾದಲ್ಲಿ ಮದರಸಾವನ್ನು ಪ್ರಾರಂಭಿಸಿದನು.

➢ಜೋನಾಥನ್ ಡಂಕನ್ ಎಂಬ ಮತ್ತೊಬ್ಬ ಬ್ರಿಟಿಷ್ ವ್ಯಕ್ತಿಯು ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.

➢ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು ಚಾರ್ಲ್ಸ್ ಗ್ರಾಂಟ್.

➢1828ರಲ್ಲಿ ವಿಲಿಯಂ ಬೆಂಟಿಂಕನು ಗವರ್ನರ್ ಜನರಲ್ ಆಗಿ ನೇಮಕಗೊಂಡ ನಂತರ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಮತ್ತಷ್ಟು ಪ್ರೋತ್ಸಾಹ ದೊರೆಯಿತು.

➢ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯು ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.

➢ಭಾರತದಲ್ಲಿ ವಿದ್ಯಾಭ್ಯಾಸವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಕೊಡಲು ಪ್ರಾರಂಭವಾಯಿತು.

➢ಸರ್ ಚಾರ್ಲ್ಸ್ ವುಡ್ ವರದಿಯ ಶಿಫಾರಸ್ಸುಗಳ ಆಧಾರದ ಮೇಲೆ ಗವರ್ನರ್ ಜನರಲ್ ಲಾರ್ಡ್ ಡಾಲ್ ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ನೂತನ ವಿಶ್ವವಿದ್ಯಾಲಯಗಳನ್ನು 1857ರಲ್ಲಿ ಸ್ಥಾಪಿಸಿದನು.

➢ಹೀಗೆ ಪಾಶ್ಚಾತ್ಯ ವಿದ್ಯಾಭ್ಯಾಸ ಕ್ರಮವು ದೇಶಾದ್ಯಂತ ಜಾರಿಯಾಯಿತು.

## ಅಧ್ಯಾಯ – 4 ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

**ಪ್ರಶ್ನೆ 1] ಬಹು ಆಯ್ಕೆ ಪ್ರಶ್ನೆಗಳು**

1. ಭಾರತೀಯ ಚರಿತ್ರೆಯಲ್ಲಿ ________ ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲಪಟ್ಟಿದೆ. – **18ನೇ ಶತಮಾನ**
2. _____ ರಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನು ಮರಣ ಹೊಂದಿದನು. – **1707.**
3. ______ ರ ಮರಣದಿಂದಾಗಿ ಮೊಘಲರ ರಾಜಕೀಯ ಸರ್ವಭೌಮತ್ವವನ್ನು ಕುಗ್ಗಿಸಿತು. – **ಔರಂಗಜೇಬ.**
4. ಮೈಸೂರಿನ ಚಿಕ್ಕದೇವರಾಜ ಒಡೆಯರ್ ಮರಣ ಹೊಂದಿದ್ದು ______ ರಲ್ಲಿ – **1704.**
5. ________ ರ ಮರಣ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ದುಷ್ಪರಿಣಾಮಗಳನ್ನು ಬೀರಿತು. – **ಚಿಕ್ಕದೇವರಾಜ ಒಡೆಯರ.**
6. ಮೊದಲನೇ ಆಂಗ್ಲೋ–ಮೈಸೂರು ಯುದ್ಧವು ______ ರಲ್ಲಿ ________ ಒಪ್ಪಂದದೊಂದಿಗೆ ಕೊನೆಗೊಂಡಿತು. – **1769, ಮದ್ರಾಸ್ ಒಪ್ಪಂದ.**
7. 2ನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣ – **ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು.**
8. 1781ರಲ್ಲಿ ___ ಎಂಬಲ್ಲಿ ನಡೆದ ಯುದ್ಧದಲ್ಲಿ ಹೈದರ್ ಪರಾಭವಗೊಂಡನು.– **ಪೋರ್ಟೋನೋವೆ.**
9. ಹೈದರಾಲಿಯು _____ ರಲ್ಲಿ ಅನಾರೋಗ್ಯದಿಂದ ಮೃತನಾದನು. – **1782.**
10. ಎರಡನೇ ಆಂಗ್ಲೋ–ಮೈಸೂರು ಯುದ್ಧವು _______ ರಲ್ಲಿ _______ ಒಪ್ಪಂದದೊಂದಿಗೆ ಕೊನೆಗೊಂಡಿತು. – **1784, ಮಂಗಳೂರು ಒಪ್ಪಂದ.**
11. ದೊಂಡಿಯಾ ಚನ್ನಗಿರಿಯ ________ ಕುಟುಂಬದಲ್ಲಿ ಜನಿಸಿದನು. – **ಮರಾಠ ಕುಟುಂಬ.**

12. ಮರಾಠಿಯಲ್ಲಿ ವಾಘ್ ಎಂದರೆ ________ ಎಂದರ್ಥ. – **ಹುಲಿ.**

13. ಬ್ರಿಟಿಷ್ ಸೈನ್ಯ ದೊಂಡಿಯಾನನ್ನು ________ ಎಂಬ ಸ್ಥಳದಲ್ಲಿ ಹತ್ಯೆಗೈದಿತು. – **ಕೋಣಗಲ್.**

14. ಕಿತ್ತೂರು ಚೆನ್ನಮ್ಮ ________ ಎಂಬ ಹುಡುಗನನ್ನು ದತ್ತು ತೆಗೆದುಕೊಂಡಳು. – **ಶಿವಲಿಂಗಪ್ಪ**

15. ಥ್ಯಾಕರೆ ಧಾರವಾಡದ ______ ಏಜೆಂಟನಾಗಿದ್ದನು. – **ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟ್.**

16. ಸಂಗೊಳ್ಳಿ ರಾಯಣ್ಣನನ್ನು ______ ರಲ್ಲಿ ____ದಲ್ಲಿ ಗಲ್ಲಿಗೇರಿಸಲಾಯಿತು. – **1831, ನಂದಗಡ.**

17. ಕಿತ್ತೂರು ಚೆನ್ನಮ್ಮನ ಸಂಸ್ಥಾನದ ರಾಯಣ್ಣನ ಊರು – **ಸಂಗೊಳ್ಳಿ.**

18. ಸುರಪುರವು ಈಗಿನ ________ ಜಿಲ್ಲೆಯಲ್ಲಿದೆ. – **ಯಾದಗಿರಿ ಜಿಲ್ಲೆ.**

19. ಅಮರ ಸುಳ್ಯ ಬಂಡಾಯವು ಮೂಲತಃ ________ ಬಂಡಾಯ – **ರೈತ ಬಂಡಾಯ.**

20. ಮೂರನೇ ಆಂಗ್ಲೋ–ಮೈಸೂರು ಯುದ್ಧ ______ ಒಪ್ಪಂದದೊಂದಿಗೆ ಕೊನೆಗೊಂಡಿತು. – **ಶ್ರೀರಂಗಪಟ್ಟಣ ಒಪ್ಪಂದ.(1792)**

21. ಸುರುಪುರದ ಬಂಡಾಯದ ನಾಯಕ – **ವೆಂಕಟಪ್ಪ ನಾಯಕ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. 18ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ತಮ್ಮ ಅಸ್ತಿತ್ವ ಮತ್ತು ಮೇಲ್ಮೈ ಸಾಧನೆಗಾಗಿ ಯಾರ ಯಾರ ನಡುವೆ ಪೈಪೋಟಿ ಆರಂಭವಾಯಿತು?**

ಉತ್ತರ : 18ನೇ ಶತಮಾನದಲ್ಲಿ ಹೈದರಾಲಿ, ಮರಾಠರು, ಹೈದರಾಬಾದಿನ ನಿಜಾಮ ಮತ್ತು ಆರ್ಕಾಟಿನ ನವಾಬ ಮತ್ತು ಬ್ರಿಟಿಷರ ನಡುವೆ ತಮ್ಮ ಅಸ್ತಿತ್ವ ಮತ್ತು ಸಾಧನೆಗಾಗಿ ಪೈಪೋಟಿ ನಡೆದವು.

**2. ಬ್ರಿಟಿಷರು ಹೈದರಾಲಿಯೊಂದಿಗೆ ಮದ್ರಾಸ್ ಒಪ್ಪಂದ ಮಾಡಿಕೊಳ್ಳುವುದು ಅನಿವಾರ್ಯವಾಯಿತು ಏಕೆ?**

ಉತ್ತರ : ಮೊದಲ ಆಂಗ್ಲೋ–ಮೈಸೂರು ಯುದ್ಧದ ಸಂದರ್ಭದಲ್ಲಿ ಹೈದರನ ಸೈನ್ಯ ಮದ್ರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು. ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ ಚರ್ಚೆ ಮತ್ತು ಸಂಧಾನಗಳ ಮೂಲಕ 1769ರಲ್ಲಿ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು.

**3. ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ಬಂಡೇಳಲು ಕಾರಣವೇನು?**

ಉತ್ತರ : ಕಿತ್ತೂರು ಚೆನ್ನಮ್ಮ ಬ್ರಿಟಿಷರು ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ವಿರೋಧಿಸಿ ಅವರ ವಿರುದ್ಧ ಬಂಡೆದ್ದಳು.

**4. ಮೂರನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಮುಖ್ಯ ಕಾರಣವೇನು?**

ಉತ್ತರ : ಮೂರನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಮುಖ್ಯ ಕಾರಣ ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ.

**5. ಅಮರ ಸುಳ್ಯದ ಬಂಡಾಯದ ಕೇದ್ರ ಸ್ಥಾನಗಳು ಯಾವುವು?**

ಉತ್ತರ : ಅಮರ ಸುಳ್ಯದ ಬಂಡಾಯದ ಕೇಂದ್ರ ಸ್ಥಾನಗಳೆಂದರೆ – ಸುಳ್ಯ, ಬೆಳ್ಳಾರೆ, ಪುತ್ತೂರು.

**6. ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಸಿಡಿದೆದ್ದರು?**

ಉತ್ತರ : ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶದಿಂದ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ನಿರಾಕರಿಸಿ ಬ್ರಿಟಿಷರ ವಿರುದ್ಧ ಸಿಡಿದೆದ್ದರು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಇದಕ್ಕೆ ಕಾರಣಗಳೇನು?**

**ಉತ್ತರ : ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಇದಕ್ಕೆ ಕಾರಣಗಳೇಂದರೆ –**

- ➢1707ರಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ ಹೊಂದಿದ್ದು, ಮೊಘಲರ ರಾಜಕೀಯ ಸರ್ವಭೌಮತ್ವವನ್ನು ಕುಗ್ಗಿಸಿತು.
- ➢ಇದರಿಂದಾಗಿ ದಕ್ಷಿಣ ಭಾರತದ ಮೇಲೆ ಮೊಘಲರ ಹತೋಟಿ ತಪ್ಪಿತು.
- ➢ಕರ್ನಾಟಿಕ್ ಪ್ರದೇಶದಲ್ಲಿ ಅಧಿಕಾರಕ್ಕಾಗಿ ಕಿತ್ತಾಟಗಳು ಆರಂಭಗೊಂಡವು.
- ➢1704ರ ಚಿಕ್ಕದೇವರಾಜ ಒಡೆಯರ ಮರಣ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ದುಷ್ಪರಿಣಾಮಗಳನ್ನು ಬೀರಿತು.
- ➢ಮೈಸೂರಿನಲ್ಲಿ ಉತ್ತರಾಧಿಕಾರತ್ವ ಸಮಸ್ಯೆ ಕಂಡುಬಂದಿದ್ದರ ಜೊತೆಗೆ ಆಡಳಿತವ ಕುಸಿಯಿತು.

**2. ಹೈದರಾಲಿಯು ಮೈಸೂರಿನಲ್ಲಿ ಹೇಗೆ ಪ್ರವರ್ಧಮಾನಕ್ಕೆ ಬಂದನು? ಅಥವಾ ಹೈದರಾಲಿ ಹೇಗೆ ಅಧಿಕಾರಕ್ಕೆ ಬಂದನು?**

**ಉತ್ತರ : ಮೈಸೂರಿನಲ್ಲಿ ಹೈದರಾಲಿಯ ಪ್ರಾಭಲ್ಯ –**

- ➢ಸಾಮಾನ್ಯ ಸೈನಿಕನಾಗಿ ಮೈಸೂರು ರಾಜ್ಯದ ಸೇವೆಗೆ ಸೇರಿದ ಹೈದರಾಲಿಯು ಮೈಸೂರಿನ ರಾಜಕೀಯ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ದೇವನಹಳ್ಳಿಯ ಮುತ್ತಿಗೆ ಸಂದರ್ಭ ಮತ್ತು ಆರ್ಕಾಟಿನ ನಿಜಾಮನ ವಿಷಯಕ್ಕೆ ಸಂಬಂಧಿಸಿದ ಸೈನಿಕ ಕಾರ್ಯಾಚರಣೆಯಲ್ಲಿ ಪ್ರವರ್ಧಮಾನಕ್ಕೆ ಬಂದನು.
- ➢ಸೈನಿಕರನ್ನು ತನ್ನ ವಿಶ್ವಾಸಕ್ಕೆ ಪಡೆದುಕೊಳ್ಳುವಲ್ಲಿ ಸಫಲನಾದನು.
- ➢ಶಸ್ತ್ರಾಸ್ತ್ರ ಉಪಯೋಗ ಮತ್ತು ಪ್ರಯೋಗದಲ್ಲಿ ಖ್ಯಾತಿಗಳಿಸಿದನು.
- ➢ಚುರುಕಿನ ಕಾರ್ಯಾಚರಣೆಗಳ ಮೂಲಕ ದಳವಾಯಿಗಳ ಬಲ ಕುಂದಿಸಿದನು.
- ➢ಅರಸನಾಗಿದ್ದ ಕೃಷ್ಣರಾಜ ಒಡೆಯರನ್ನು ಮೂಲೆಗುಂಪಾಗಿಸಿ ಅಧಿಕಾರದ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿದನು.
- ➢ಬಹುಬೇಗನೇ ನವಾಬ್ ಹೈದರಾಲಿಖಾನ್ ಎಂದು ಹೆಸರಾದನು.

**3. ಮೊದಲನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೊದಲನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ➢ಮೊದಲನೇ ಮೈಸೂರು ಯುದ್ಧವು ಕ್ರಿಶ 1767ರಲ್ಲಿ ಪ್ರಾರಂಭವಾಗಿ 1769ರಲ್ಲಿ ಕೊನೆಗೊಂಡಿತು.
- ➢ದಕ್ಷಿಣ ಭಾರತದಲ್ಲಿ ಹೈದರಾಲಿ ಗಳಿಸುತ್ತಿದ್ದ ರಾಜಕೀಯ ಪ್ರಾಭಲ್ಯ ಬ್ರಿಟಿಷರು, ಹೈದರಾಬಾದ ನಿಜಾಮ ಮತ್ತು ಮರಾಠರಲ್ಲಿ ರಾಜಕೀಯ ಅಸಹನೆ ಮೂಡಿಸಿತು.
- ➢ಹೈದರಾಲಿಯನ್ನು ಮಣಿಸುವ ಸಲುವಾಗಿ ಬ್ರಿಟಿಷರು ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡರು.
- ➢ಹೈದರಾಲಿಯು ಚಾಣಾಕ್ಷತೆಯಿಂದ ಈ ಮೈತ್ರಿಕೂಟವನ್ನು ಬೇರ್ಪಡಿಸಿದನು.
- ➢1767ರಲ್ಲಿ ಹೈದರಾಲಿ ಮತ್ತು ನಿಜಾಮರು ಬ್ರಿಟಿಷ್ ಆಶ್ರಿತ ದೇಶಿಯ ರಾಜ್ಯವಾಗಿದ್ದ ಆರ್ಕಾಟಿಗೆ ಮುತ್ತಿಗೆ ಹಾಕಿದರು. ಇದರಿಂದಾಗಿ ಯುದ್ಧ ಆರಂಭವಾಯಿತು.
- ➢ಈ ಯುದ್ಧದಲ್ಲಿ ಹೈದರಾಲಿಗೆ ತಾತ್ಕಾಲಿಕ ಹಿನ್ನಡೆ ಅನುಭವಿಸಿದರೂ ತನ್ನ ಪ್ರತಿಷ್ಠೆಯ ಸಂಕೇತವೆಂದು ಭಾವಿಸಿ ಕಾರ್ಯಾಚರಣೆಯನ್ನು ಮುಂದುವರೆಸಿದನು.
- ➢1769ರ ವೇಳೆಗೆ ಹೈದರಾಲಿಯ ಸೈನ್ಯ ಮದ್ರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು.
- ➢ ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ ಚರ್ಚೆ ಮತ್ತು ಸಂಧಾನಗಳ ಮೂಲಕ 1769ರಲ್ಲಿ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು.

**4. ಎರಡನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಎರಡನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ➢ತಿರುವಾಂಕೂರು ಮತ್ತು ತಂಜಾವೂರು ರಾಜ್ಯಗಳಲ್ಲಿನ ರಾಜಕೀಯ ಸನ್ನಿವೇಶಗಳು ಈ ಯುದ್ಧಕ್ಕೆ ಕಾರಣವಾದವು.
- ➢ಮಾಹೆಯು ಫ್ರೆಂಚರ ವಸಾಹತುವಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು.
- ➢ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು ಎರಡನೆಯ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣವಾಯಿತು.
- ➢1780ರಲ್ಲಿ ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಆರಂಭವಾಯಿತು.
- ➢ಯುದ್ಧದ ಪ್ರಾರಂಭದಲ್ಲಿ ಹೈದರ್ ಕರ್ನಾಟಿಕ್ ಪ್ರಾಂತ್ಯದ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು.
- ➢ಆದರೆ 1781ರ ಪೋರ್ಟೋನೋವೆ ಎಂಬಲ್ಲಿ ನೆಡೆದ ಕದನದಲ್ಲಿ ಹೈದರ್ ಪರಾಭವಗೊಂಡನು.
- ➢ನಂತರ ಪುಲಿಕಾಟ್ ಮತ್ತು ಸೋಲಿಗನೂರ ಕದನದಲ್ಲಿಯೂ ಆರ್ಥಿಕ ಹಾನಿ ಅನುಭವಿಸಿದನು.
- ➢ಯುದ್ಧದ ಮಧ್ಯದಲ್ಲಿ 1782ರಲ್ಲಿ ಅನಾರೋಗ್ಯದಿಂದ ಮರಣಹೊಂದಿದನು. ಆತನ ಮಗ ಟಿಪ್ಪು ಯುದ್ಧವನ್ನು ಮುನ್ನೆಡೆಸಿದನು.

- ಟಿಪ್ಪು ಮಂಗಳೂರಿನತ್ತ ಮುನ್ನಡೆದು ಬ್ರಿಟಿಷರ ಸೈನ್ಯವನ್ನು ಸೋಲಿಸಿದನು.
- ಕೊನೆಗೆ 1784ರಲ್ಲಿ 'ಮಂಗಳೂರು ಒಪ್ಪಂದ'ದ ಮೂಲಕ ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಕೊನೆಗೊಂಡಿತು.

**5. ಬ್ರಿಟಿಷರ ಪ್ರಾಬಲ್ಯ ಕುಂದಿಸಲು ಟಿಪ್ಪು ಹೇಗೆ ಪ್ರಯತ್ನಿಸಿದನು? ಅಥವಾ ಬ್ರಿಟಿಷರಿಗೆ ಟಿಪ್ಪುವಿನ ಮೇಲೆ ದ್ವೇಷ ಭಾವನೆಗಳು ಮೂಡಲು ಕಾರಣಗಳೇನು?**

**ಉತ್ತರ :**

- ಬ್ರಿಟಿಷರನ್ನು ತನ್ನ ರಾಜ್ಯ ವಿಸ್ತರಣೆಯ ನೀತಿಗೆ ಅಡ್ಡಿಪಡಿಸುತ್ತಿರುವ ಶತ್ರುಗಳು ಎಂದು ಭಾವಿಸಿ ಅವರನ್ನು ಓಡಿಸುವ ಗಂಭೀರ ಪ್ರಯತ್ನಗಳನ್ನು ಮಾಡಿದನು.
- ಬ್ರಿಟಿಷರಿಗೆ ವ್ಯಾಪಾರದಲ್ಲಿ ನಷ್ಟವಾದಲ್ಲಿ ಅದು ಅವರ ರಾಜಕೀಯ ಸ್ವಾಮ್ಯವನ್ನು ಕುಂದಿಸುತ್ತದೆ ಎಂದು ಅರಿತಿದ್ದನು.
- ಅವನು ಬ್ರಿಟಿಷ್‌ರನ್ನು ವಿರೋಧಿಸುತ್ತಿದ್ದವರನ್ನು ಸಂಘಟಿಸುವ ಮತ್ತು ಅವರ ನೆರವನನು ಅಪೇಕ್ಷಿಸಲು ಪ್ರಯತ್ನಿಸಿದನು.
- ಬ್ರಿಟಿಷರಿಗೆ ವ್ಯಾಪಾರದಲ್ಲಿ ಲಾಭವಾಗದಂತೆ ನೋಡಿಕೊಳ್ಳುವ ಮೂಲಕ ವ್ಯಾಪಾರದ ಮೇಲೆ ಅವರು ಸಾಧಿಸಿದ್ದ ಏಕಸ್ವಾಮ್ಯವನ್ನು ಮುರಿಯುವ ಪ್ರಯತ್ನಗಳನ್ನು ನಡೆಸಿದನು.
- ಇವು ಬ್ರಿಟಿಷರಲ್ಲಿ ಟಿಪ್ಪುವಿನ ವಿರುದ್ಧ ಮತ್ತಷ್ಟು ದ್ವೇಷ ಭಾವನೆಗಳನ್ನು ಮೂಡಿಸಿದವು.

**6. ಮೂರನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೂರನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಈ ಯುದ್ಧಕ್ಕೆ ನೇರ ಕಾರಣ ಯಾವುದೆಂದರೆ ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ್ದು.
- ಲಾರ್ಡ್ ಕಾರ್ನವಾಲಿಸ್‌ನು ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡು ಯದ್ಧದ ಗತಿಯನ್ನು ಬದಲಾಯಿಸಿದನು.
- ಟಿಪ್ಪುವನ್ನು ಸೋಲಿಸಲು ಬ್ರಿಟಿಷರು ಹೈದರಬಾದಿನ ನಿಜಾಮ ಮತ್ತು ಮರಾಠರ ಸಹಾಯದಿಂದ ಟಿಪ್ಪುವಿನ ಅನೇಕ ಪ್ರದೇಶಗಳನ್ನು ವಶಪಡಿಸಿ ಕೊಂಡರು.
- 1792ರಲ್ಲಿ ಸಂಘಟಿತ ಸೈನ್ಯ ಒಂದೊಂದಾಗಿ ಕೋಟೆಗಳನ್ನು ವಶಪಡಿಸಿಕೊಂಡು ಶ್ರೀರಂಗಪಟ್ಟಣದ ಕಡೆ ಸಾಗಿತು.
- ರಾತ್ರಿ ವೇಳೆ ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಲಾಯಿತು.
- ಇದರಿಂದ ವಿಚಲಿತನಾದ ಟಿಪ್ಪು ಬ್ರಿಟಿಷರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ನಿರ್ಧರಿಸಿದನು. ಇದು ಆತನಿಗೆ ಅನಿವಾರ್ಯವೂ ಆಗಿತ್ತು.
- ಟಿಪ್ಪು 1792 ರಲ್ಲಿ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಮೂರನೆ ಆಂಗ್ಲೊ–ಮೈಸೂರು ಯುದ್ಧ ಕೊನೆಗೊಂಡಿತು.

**7. ಶ್ರೀರಂಗಪಟ್ಟಣದ ಒಪ್ಪಂದದ ಷರತ್ತುಗಳೇನು?**

**ಉತ್ತರ : ಟಿಪ್ಪುವನ್ನು ಮಣಿಸಲು ಬ್ರಿಟಿಷರು ಶ್ರೀರಂಗಪಟ್ಟಣ ಒಪ್ಪಂದದಲ್ಲಿ ಅಸಮಾನ ಷರತ್ತುಗಳು ಇರುವಂತೆ ನೋಡಿಕೊಂಡರು. ಆ ಷರತ್ತುಗಳೆಂದರೆ –**

- ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು.
- ಮೂರು ಕೋಟಿ ರೂಪಾಯಿಗಳನ್ನು ಯುದ್ಧನಷ್ಟ ಭರ್ತಿಯಾಗಿ ಕೊಡುವುದು.
- ಯುದ್ಧನಷ್ಟ ಭರ್ತಿಗೆ ಗ್ಯಾರಂಟಿಯಾಗಿ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ನೀಡುವುದು.
- ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆ ಮಾಡುವುದು.

**8. ನಾಲ್ಕನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ನಾಲ್ಕನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಲಾರ್ಡ್ ವೆಲ್ಲೆಸ್ಲಿಯು 1798ರಲ್ಲಿ ಭಾರತದ ಗವರ್ನರ್ ಜನರಲ್‌ನಾಗಿ ನೇಮಕಗೊಂಡನು.
- ಟಿಪ್ಪು ಭಾರತೀಯ ರಾಜರ ಒಕ್ಕೂಟವನ್ನು ತನ್ನಡೆಗೆ ಸೆಳೆಯಲು ಮಾಡುತ್ತಿದ್ದ ಪ್ರಯತ್ನಗಳು ಹಾಗೂ ತಮ್ಮ ಬದ್ಧ ವೈರಿಗಳಾದ ಫ್ರೆಂಚರೊಂದಿಗೆ ಟಿಪ್ಪು ಹೊಂದಿದ್ದ ಸಂಬಂಧಗಳು ವೆಲ್ಲೆಸ್ಲಿಯಲ್ಲಿ ಟಿಪ್ಪುವಿನ ವಿಚಾರದಲ್ಲಿ ದ್ವೇಷ ಭಾವನೆಯನ್ನು ಮೂಡಿಸಿದವು.
- ಟಿಪ್ಪು ಬ್ರಿಟಿಷರ ವಿರುದ್ಧವಾಗಿದ್ದ ಫ್ರೆಂಚರ ಸಹಕಾರ ಪಡೆಯಲು ಪ್ರಯತ್ನಿಸಿ ರಾಯಭಾರಿಗಳನ್ನು ಕಳುಹಿಸಿದ್ದನು.
- ಟಿಪ್ಪು ಮತ್ತು ಫ್ರೆಂಚರ ನಡುವಿನ ಸ್ನೇಹ ಮುಂದಕ್ಕೆ ತಮ್ಮ ಅಧಿಪತ್ಯಕ್ಕೆ ಮುಳುವಾಗಬಹುದೆಂಬ ಭಾವನೆಗಳು ಬ್ರಿಟಿಷರಲ್ಲಿ ಬೆಳೆಯಿತು.
- ಹೊಸ ಷರತ್ತುಗಳನ್ನು ಒಳಗೊಂಡಿರುವ ಒಪ್ಪಂದವನ್ನು ಟಿಪ್ಪುವಿನ ಮೇಲೆ ಹೇರಲಾಯಿತು.
- ಟಿಪ್ಪು ಈ ಒಪ್ಪಂದವನ್ನು ಒಪ್ಪಿಕೊಳ್ಳಲು ನಿರಾಕರಿಸಿದನು. ಇದು ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣವಾಯಿತು.
- 1799 ರಲ್ಲಿ ಯುದ್ಧ ಆರಂಭವಾಯಿತು. ಟಿಪ್ಪು ತನ್ನ ಸೈನ್ಯವನ್ನು ಹುರಿದುಂಬಿಸುತ್ತ ಹೋರಾಡಿ 1799ರಲ್ಲಿ ಹತನಾದನು.
- ಬ್ರಿಟಿಷರು ಆತನ ಹತೋಟಿಯಲ್ಲಿದ್ದ ಭೌಗೋಳಿಕ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು.

**9. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ವಿಮರ್ಶಿಸಿ.**

**ಉತ್ತರ : ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ಹೇಗೆಂದರೆ –**

- ನಾಲ್ಕನೇ ಮೈಸೂರು ಯುದ್ಧವು 1799ರಲ್ಲಿ ಆರಂಭವಾಯಿತು.
- ಟಿಪ್ಪು ತನ್ನ ಸೈನ್ಯವನ್ನು ಹುರುದುಂಬಿಸುತ್ತ ಹೋರಾಟಿ ಹತನಾದನು.
- ಆತನ ಮರಣ ಬ್ರಿಟಿಷರಿಗೆ ಇಡೀ ಭಾರತವೇ ತಮ್ಮ ಕೈವಶವಾದ ಸಂತೋಷವನ್ನು ತಂದಿತು.
- ಬ್ರಿಟಿಷರು ಆತನ ಹತೋಟಿಯಲ್ಲಿದ್ದ ಭೌಗೋಳಿಕ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು.
- ಒಂದು ಸಣ್ಣ ಭೌಗೋಳಿಕ ಪ್ರದೇಶವು ಮೈಸೂರು ಒಡೆಯರಿಗೆ ವರ್ಗಾಹಿಸಲಾಯಿತು. ಹೀಗೆ ಬ್ರಿಟಿಷರನ್ನು ಈ ಯುದ್ಧವು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು.

**10. ದೊಂಡಿಯ ವಾಘ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ.**

**ಉತ್ತರ :**

- ದೊಂಡಿಯ ವಾಘ ಸೈನ್ಯವನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಸೈನಿಕ ಕಾರ್ಯಾಚರಣೆಯನ್ನು ಪ್ರಾರಂಭಿಸಿದನು.
- ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು.
- ಗವರ್ನರ್ ಜನರಲ್‌ನಾಗಿದ್ದ ಲಾರ್ಡ್ ವೆಲ್ಲಸ್ಲಿ ವಾಘನ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು.
- ದೊಂಡಯಾನ ನಿಯಂತ್ರಣದಲ್ಲಿದ್ದ ಶಿವಮೊಗ್ಗ, ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಬ್ರಿಟಿಷ್ ಸೇನೆ ಆಕ್ರಮಣ ನಡೆಸಿತು.
- ದೊಂಡಿಯಾ ತನ್ನ ನೆಲೆಯನ್ನು ಕಳೆದುಕೊಂಡನು.
- ಬ್ರಿಟಿಷ್ ಸೈನ್ಯ ಇವನ ಬೆನ್ನೆತ್ತಿದರೂ ಧೃತಿಗೆಡದ ದೊಂಡಿಯಾ ತನ್ನ ಹೋರಾಟವನ್ನು ಮುಂದುವರೆಸಿದನು.
- ದೊಂಡಿಯಾನನ್ನು ಕೊನೆಗಾಣಿಸಲು ದೇಶಿಯ ಸಂಸ್ಥಾನಗಳ ರಾಜರ ಸಹಾಯವನ್ನು ಬ್ರಿಟಿಷರು ಕೋರಿದರು.
- ಎಲ್ಲಾ ದಿಕ್ಕುಗಳಿಂದಲೂ ಆತನನ್ನು ಬ್ರಿಟಿಷ್ ಸೈನ್ಯ ಸುತ್ತುವರೆಯಿತು.
- ನಿಜಾಮ ಮತ್ತು ಮರಾಠರ ಸೈನದ ನಡುವೆ ಸಿಲುಕಿದ ದೊಂಡಿಯಾನ ಮೇಲೆ ಬ್ರಿಟಿಷರು ಯಾಪಲಪರವಿ ಎಂಬ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ಕೋಣಗಲ್ ಎಂಬ ಸ್ಥಳದಲ್ಲಿ ಆತನನ್ನು ಹತ್ಯೆಗೈದರು.

**11. ಕಿತ್ತೂರು ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಬಂಡಾಯವೇಳಲು ಕಾರಣವೇನು? ಅದರ ಪರಿಣಾಮವೇನು?**

**ಉತ್ತರ : ಕಿತ್ತೂರು ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಬಂಡಾಯವೇಳಲು ಕಾರಣ –**

- ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು.
- ಥ್ಯಾಕರೆ ಆಗ ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದನು.
- ಥ್ಯಾಕರೆಯು ಬಾಂಬೆಯ ಗವರ್ನರನಿಗೆ ದತ್ತಕದ ಬಗ್ಗೆ ವರದಿಯನ್ನು ಸಲ್ಲಿಸಿ ದತ್ತು ಮಕ್ಕಳಿಗೆ ಹಕ್ಕನ್ನು ನೀಡುವುದನ್ನು ನಿರಾಕರಿಸಿ ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.
- ಕಿತ್ತೂರಿನ ಖಜಾನೆ, ಕೋಟೆ ಕೊತ್ತಲಗಳ ಸುಪರ್ದಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು.

- ಇದರಿಂದಾಗಿ ಕಿತ್ತೂರಿನ ಸೈನ್ಯ ಚೆನ್ನಮ್ಮಳ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ದಾಳಿ ಮಾಡಿತು.
- ಥ್ಯಾಕರೆ ಗುಂಡೇಟಿಗೆ ಬಲಿಯಾದ. ಅನೇಕ ಬ್ರಿಟಿಷ್ ಸೈನಿಕರನ್ನು ಸೆರೆಮನೆಗೆ ದೂಡಲಾಯಿತು.
- ಕಿತ್ತೂರನ್ನು ವಶಪಡಿಸಿಕೊಳ್ಳಲು ಲೆಫ್ಟಿನೆಂಟ್ ಕರ್ನಲ್ ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿತು.
- ಬ್ರಿಟಿಷರ ಸೈನ್ಯ ಚೆನ್ನಮ್ಮನನ್ನು ಸೆರೆಹಿಡಿದು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು.
- ಚೆನ್ನಮ್ಮ ಸರೆಮನೆಯಲ್ಲೇ ಮರಣ ಹೊಂದಿದಳು.

**12. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.**

**ಉತ್ತರ : ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರ –**

- ರಾಯಣ್ಣ ವೀರ ಯಾಧ. ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದನು.
- ರಾಯಣ್ಣನು ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆ ಹೋರಾಡಿದ್ದನು. ಯುದ್ಧದಲ್ಲಿ ಸೆರೆಯಾಳಾಗಿ ಬಂದಿಸ್ಪಟ್ಟು ತರುವಾಯ ಬಿಡುಗಡೆ ಹೊಂದಿದ್ದನು.
- ಸೈನಿಕರನ್ನು ಸಂಘಟಿಸುತ್ತ ಸ್ವಾತಂತ್ರ್ಯದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡನು.
- ತಕ್ಷಣದ ಅವನ ಉದ್ದೇಶಗಳೆಂದರೆ ಬ್ರಿಟಿಷರ ಆಡಳಿತ ಯಂತ್ರದ ಪ್ರಮುಖ ಅಂಗವಾಗಿದ್ದ ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡುವುದು.
- ಮೊದಲು ನಂದಗಡ ಮತ್ತು ಖಾನಾಪುರ ತರುವಾಯ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು.
- ರಾಯಣ್ಣನನ್ನು ಸೆರೆಹಿಡಿಯಲು ಬ್ರಿಟಿಷರು ಒಂದು ಸಂಚನ್ನು ರೂಪಿಸಿದರು.
- ಕಿತ್ತೂರಿನ ಚೆನ್ನಮ್ಮಳನ್ನು ವಿರೋಧಿಸುತ್ತಿದ್ದ ಅಮಲ್ದಾರ ಕೃಷ್ಣರಾಯನ ಸಹಾಯದಿಂದ ರಾಯಣ್ಣನನ್ನು ಬಂಧಿಸಿ ಧಾರವಾಡಕ್ಕೆ ತಂದರು.
- ಮುಖ್ಯ ಅಪರಾಧಿ ಎಂದು ಘೋಷಿಸಿ 1831ರಲ್ಲಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು.

**13. ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಿಂದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿ.**

**ಉತ್ತರ : ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಿಂದ ಪುಟ್ಟಬಸಪ್ಪನ ಪಾತ್ರ –**

- ಕೊಡಗಿನ ಪ್ರಾಂತ್ಯದಲ್ಲಿ ಪುಟ್ಟಬಸಪ್ಪನು ಬಂಡುಕೋರರನ್ನು ಸಂಘಟಿಸಿ ಜನರನ್ನು ಸಂತೈಸಿದನು.
- ಬೆಳ್ಳಾರೆಯಲ್ಲಿ ಸರ್ಕಾರಿ ಕಛೇರಿಯನ್ನು ವಶಪಡಿಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದ್ದು ಬಂಡಾಯದ ಪ್ರಥಮ ಹೆಜ್ಜೆಯಾಗಿದೆ.
- ಸುಳ್ಯ ಮತ್ತು ಆಸುಪಾಸಿನಲ್ಲಿ ಸಾಮಾನ್ಯ ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನೊವನ ಹತ್ಯೆ ಪುಟ್ಟಬಸಪ್ಪನ ಜನಪ್ರಿಯತೆಯನ್ನು ಹೆಚ್ಚಿಸಿತು.
- ಹೋರಾಟಗಾರರು ಪುತ್ತೂರಿನಿಂದ ಮಂಗಳೂರಿನ ಕಡೆಗೆ ತೆರಳಿ ಪಾಣೆಮಂಗಳೂರು ಮತ್ತು ಬಂಟ್ವಾಳದಲ್ಲಿ ಕಾರ್ಯಾಚರಣೆಗಳನ್ನು ನಡೆಸಿದರು.
- ಬಂಟ್ವಾಳದ ಜೈಲು ಮತ್ತು ಖಜಾನೆ ಲೂಟಿಗೈದರು.
- ಇದನ್ನು ಹತ್ತಿಕ್ಕಲು ಬ್ರಿಟಿಷರು ಕಣ್ಣಾನೂರು, ತಲ್ಲಿಚೇರಿ ಮತ್ತು ಬಾಂಬೆಯ ಸೈನ್ಯವನ್ನು ಅಪೇಕ್ಷಿಸಿದರು.
- ಇದನ್ನು ಅರಿತ ಪುಟ್ಟಬಸಪ್ಪ ಮತ್ತು ಆತನ ಸಂಗಡಿಗರು ಸುಳ್ಯಕ್ಕೆ ಪಲಾಯನ ಮಾಡಿದರು.
- ಬ್ರಿಟಿಷ್ ಸೈನ್ಯ ಕೊಡಗಿನಲ್ಲಿ ಸ್ಥಳೀಯರ ಸಹಕಾರದಿಂದ ಪುಟ್ಟಬಸಪ್ಪ ಮತ್ತು ಆತನ ಸಹಚರರನ್ನು ಸೆರೆಹಿಡಿದು ಗಲ್ಲಿಗೇರಿಸಲಾಯಿತು.

**14. ಅಮರ ಸುಳ್ಯ ಬಂಡಾಯಕ್ಕೆ ಕಾರಣಗಳೇನು?**

**ಉತ್ತರ : ಅಮರ ಸುಳ್ಯ ಬಂಡಾಯಕ್ಕೆ ಕಾರಣಗಳು –**

- ಕೊಡಗಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದ ಹಾಲೇರಿ ರಾಜವಂಶದ ಚಿಕ್ಕವೀರರಾಜೇಂದ್ರನನ್ನು ಬ್ರಿಟಿಷರು 1834ರಲ್ಲಿ ಪದಚ್ಯುತಗೊಳಿಸಿ ಗಡಿಪಾರು ಮಾಡಿದರು.
- ಆತನ ಪದಚ್ಯುತಿ ಕೊಡಗಿನಲ್ಲಿ ರಾಜಕೀಯ ಅಸಮಾಧಾನವನ್ನು ಸೃಷ್ಟಿಸಿತು.
- ಇದರಿಂದಾಗಿ ಕೊಡಗಿನಲ್ಲಿ ಸ್ವಾಮಿ ಅಪರಾಂಪರ, ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಸಶಸ್ತ್ರ ಬಂಡಾಯವನ್ನು ಸಂಘಟಿಸಿದರು.
- ಸ್ವಾಮಿ ಅಪರಾಂಪರ ಬಂಡಾಯದ ಮುಖಂಡನಾದನು.
- ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರುಗಳು 'ಅಮರಸುಳ್ಯ' ಬಂಡಾಯದ ಕೇಂದ್ರ ಸ್ಥಾನಗಳಾದವು.

**15. ಸುರಪುರದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ಸುರಪುರದ ದಂಗೆ –**

- 1853ರಲ್ಲಿ ವೆಂಕಟಪ್ಪನಾಯಕ ಸುರಪರದಲ್ಲಿ ಅಧಿಕಾರಕ್ಕೆ ಬಂದನು.
- 1857ರ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡುಬಂದಿತು.
- ಇದರಿಂದಾಗಿ ಬ್ರಿಟಿಷರು ರಾಜನ ಅವಧಿಯಲ್ಲಿನ ಆಡಳಿತದ ಬಗ್ಗೆ ವರದಿ ನೀಡಲು ಬ್ರಿಟಿಷ್ ಸರ್ಕಾರ ಕ್ಯಾಂಪ್‌ಬೆಲ್ ಎಂಬ ಅಧಿಕಾರಿಯನ್ನು ನೇಮಿಸಿತು.
- ಇವನು ರಾಜನು ಆಡಳಿತ ದುರ್ವ್ಯವಹಾರದಲ್ಲಿ ನಿರತನಾಗಿದ್ದಾನೆ ಎಂಬ ಅಂಶವನ್ನು ವರದಿಯಲ್ಲಿ ಕಾಣಿಸಿ ಹೈದರಾಬಾದ ರೆಸಿಡೆಂಟ್‌ಗೆ ಸಲ್ಲಿಸಿದನು.
- 1858ರಲ್ಲಿ ಬ್ರಿಟಿಷ್ ಸೈನ್ಯ ಸುರಪುರವನ್ನು ಆಕ್ರಮಿಸಿತು.
- ಯುದ್ಧ ಮುಂದುವರೆಯಿತು. ಬ್ರಿಟಿಷರು ಸುರಪುರ ಕೋಟೆಯನ್ನು ವಶಪಡಿಸಿಕೊಂಡರು.
- ವೆಂಕಟಪ್ಪ ನಾಯಕನ ಅಂತ್ಯಕ್ಕೆ ಸಂಭಂದಿಸಿದಂತೆ ಅನೇಕ ಗೊಂದಲಗಳಿವೆ.

**16. ಕೊಪ್ಪಳದ ವೀರಪ್ಪನು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು?**

**ಉತ್ತರ :**

- ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ ಕೊಪ್ಪಳದ ಜಮಿನ್ದಾರ ವೀರಪ್ಪನು ಬಂಡೆದ್ದು ಕೊಪ್ಪಳ ಮತ್ತು ಸನಿಹದ ಕೋಟೆಗಳನ್ನು ತನ್ನ ಸುಪರ್ದಿಗೆ ವಹಿಸಿಕೊಂಡನು.
- ವೀರಪ್ಪನ ಮರ್ಮ ಅರಿತ ಅನೇಕ ರೈತರು ಮತ್ತು ಜಮೀನ್ದಾರರು ಆತನೊಂದಿಗೆ ಕೈ ಜೋಡಿಸಿದರು.
- ನಿಜಾಮರೊಂದಿಗೆ ಸಂಪರ್ಕವನ್ನು ಸಾಧಿಸಿದ ಬ್ರಿಟಿಷರು ವೀರಪ್ಪನ ನೇತೃತ್ವದಲ್ಲಿನ ಬಂಡಾಯವನ್ನು ಸದೆಬಡಿಯಲು ಸೈನ್ಯವನ್ನು ನಿಯೋಜಿಸಿದರು.
- ಕಡಿಮೆ ಸೈನಿಕರ ಬೆಂಬಲವನ್ನು ಹೊಂದಿದ್ದ ವೀರಪ್ಪ ಸತತವಾಗಿ ಹೋರಾಟವನ್ನು ನಡೆಸಿ ಮರಣ ಹೊಂದಿದನು.

**17. ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.**

**ಉತ್ತರ : ಹಲಗಲಿಯ ಬೇಡರ ದಂಗೆ –**

- ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ.
- 1857ರ ಬಂಡಾಯದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು.
- ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದುಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ.
- ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು.
- ಇವರ ಬಂಡಾಯವನ್ನು ಹತ್ತಿಕ್ಕಲು ನವೆಂಬರ್‌ನಲ್ಲಿ ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು.
- ಬಂಡಾಯವೆದ್ದ ಬೇಡರನ್ನು ನಿಷ್ಕಾರುಣ್ಯವಾಗಿ ಅತ್ಯಂತ ದಮನಕಾರಿಯಾಗಿ ಇಂಗ್ಲಿಷರು ಹತ್ತಿಕ್ಕಿದರು.
- ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು.

## ಅಧ್ಯಾಯ – 5 ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು

### ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು

1. ಭಾರತೀಯ ಇತಿಹಾಸದಲ್ಲಿ ________ ನೇಯ ಶತಮಾನವನ್ನು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. – **19ನೇ ಶತಮಾನ.**
2. 'ಬಿಳಿಯನ ಮೇಲಿನ ಹೊರೆ' ಸಿದ್ಧಾಂತವನ್ನು ಪ್ರಚುರಪಡಿಸಿದವರು – **ಬ್ರಿಟಿಷರು.**
3. ಆಧುನಿಕ ಕಾಲ ಘಟ್ಟದಲ್ಲಿ ಭಾರತದಲ್ಲಿ ಸಮಾಜ ಸುಧಾರಣೆಗೆ ಚಾಲನೆಯನ್ನು ನೀಡಿದವರು. – **ರಾಜಾ ರಾಮಮೋಹನರಾಯರು.**
4. ಕಲ್ಕತ್ತಾದಲ್ಲಿ ಆತ್ಮೀಯ ಸಭಾವನ್ನು ಆರಂಭಿಸಿದವರು – **ರಾಜಾ ರಾಮಮೋಹನರಾಯರು.**
5. ಬ್ರಹ್ಮ ಸಮಾಜದ ಸ್ಥಾಪಕರು – **ರಾಜಾ ರಾಮಮೋಹನರಾಯರು.**
6. ರಾಜಾ ರಾಮಮೋಹನರಾಯರು ಬಂಗಾಳಿ ಭಾಷೆಯಲ್ಲಿ ಆರಂಭಿಸಿದ ಪತ್ರಿಕೆ – **ಸಂವಾದ ಕೌಮುದಿ.**
7. ಯುವಬಂಗಾಳಿ ಚಳುವಳಿಯನ್ನು ಪ್ರಾರಂಭಿಸಿದವರು – **ಹೆನ್ರಿ ವಿವಿಯನ್ ಡಿರೋಜಿಯೋ.**
8. ಹೆನ್ರಿ ವಿವಿಯನ್ ಡಿರೋಜಿಯೋ ಹುಟ್ಟು ಹಾಕಿದ ಚರ್ಚಾವೇದಿಕೆ – **ಅಕಾಡೆಮಿಕ್ ಅಸೋಸಿಯೇಷನ್ (1828)**
9. ಹೆನ್ರಿ ವಿವಿಯನ್ ಡಿರೋಜಿಯೋ __ ರಲ್ಲಿ ಕಾಲರಾ ರೋಗಕ್ಕೆ ತುತ್ತಾಗಿ ತೀರಿಕೊಂಡರು. – **1831.**
10. ದಯಾನಂದ ಸರಸ್ವತಿಯವರು ____ ರಲ್ಲಿ ____ ದಲ್ಲಿ ಜನಿಸಿದರು. – **1824, ಕಾಠೇವಾಡ.**
11. ದಯಾನಂದ ಸರಸ್ವತಿಯವರ ಆರಂಭಿಕ ಹೆಸರು – **ಮೂಲಶಂಕರ.**
12. ದಯಾನಂದ ಸರಸ್ವತಿಯವರು ______ ನೇ ವಯಸ್ಸಿನಲ್ಲಿ ಮನೆಬಿಟ್ಟರು. – **21ನೇ ವಯಸ್ಸು.**
13. ದಯಾನಂದ ಸರಸ್ವತಿಯವರು ತಮ್ಮ ಆಲೋಚನಾ ಕ್ರಮವನ್ನು ______ ಎಂಬ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ. – **ಸತ್ಯಾರ್ಥ ಪ್ರಕಾಶ.**
14. ದಯಾನಂದ ಸರಸ್ವತಿಯವರು ______ ರಲ್ಲಿ ಆರ್ಯ ಸಮಾಜದ ಕೇಂದ್ರ ಕಚೇರಿಯನ್ನು ______ ನಲ್ಲಿ ತೆರೆದರು. – **1877, ಲಾಹೋರ.**
15. ದಯಾನಂದ ಸರಸ್ವತಿಯವರು ಗೋವುಗಳ ರಕ್ಷಣೆಗಾಗಿ ______ ಸಂಘವನ್ನು ಆರಂಭಿಸಿದರು. – **ಗೋ ರಕ್ಷಣಾ ಸಂಘ.**
16. ದಯಾನಂದ ಸರಸ್ವತಿಯವರ ಮರಣಾನಂತರ ಕ್ರಿ ಶ _____ ರಲ್ಲಿ ______ ಕಾಲೇಜನ್ನು ಪ್ರಾರಂಭಿಸಲಾಯಿತು. – **1886, ದಯಾನಂದ ಆಂಗ್ಲೋ–ವೈದಿಕ ಕಾಲೇಜು.**
17. ಗುರುಕುಲ ವಿಶ್ವವಿದ್ಯಾಲಯವನ್ನು ______ ದಲ್ಲಿಆರಂಭಿಸಲಾಯಿತು. – **ಹರಿದ್ವಾರ.**
18. ಭಾರತೀಯ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ತೀವ್ರವಾದಿಗಳಾದ ________ ರು ಆರ್ಯ ಸಮಾಜದ ತತ್ವಗಳಿಂದ ಪ್ರೇರಣೆ ಪಡೆದಿದ್ದರು. – **ಲಾಲಾ ಲಜಪತ್‌ರಾಯ್.**
19. ಶುದ್ಧಿ ಚಳುವಳಿಯನ್ನು ಆರಂಭಿಸಿದ್ದು – **ದಯಾನಂದ ಸರಸ್ವತಿ.**
20. 1857ರ ಘಟನೆಯ ನಂತರ ಮುಸ್ಲಿಂ ಸಮುದಾಯದಲ್ಲಿ _____ ವ್ಯಾಪಕವಾಗಿ ಬೆಳೆಯಲು ಆರಂಭಿಸಿತು. – **ಬ್ರಿಟಿಷ್ ವಿರೋಧಿ ಮನೋಧರ್ಮ.**
21. ಮಹಮಡನ್ ಲಿಬರ್ಟಿ ಚಳುವಳಿಯು _____ ರಲ್ಲಿ ಆರಂಭವಾಯಿತು. – **1863.**
22. ಸರ್ ಸೈಯದ್ ಅಹಮ್ಮದ ಖಾನರು _____ ರಲ್ಲಿ _____ ಕಾಲೇಜನ್ನು ಅಲಘರ್‌ನಲ್ಲಿ ಸ್ಥಾಪಿಸಿದರು. – **1875, ಮಹಮದನ್ ಆಂಗ್ಲೋ–ಓರಿಯಂಟಲ್ ಕಾಲೇಜು.**
23. _____ ಕಾಲೇಜು ಮುಂದೆ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಯಿತು. – **ಮಹಮದನ್ ಆಂಗ್ಲೋ–ಓರಿಯಂಟಲ್ ಕಾಲೇಜು.**
24. ಅಲಿಘರ್ ಚಳುವಳಿಯನ್ನು ಹುಟ್ಟು ಹಾಕಿದವರು – **ಸರ್ ಸೈಯದ್ ಅಹಮ್ಮದ ಖಾನ**
25. ರಾಮಕೃಷ್ಣ ಪರಮಹಂಸರ ಶಿಷ್ಯ – **ಸ್ವಾಮಿ ವಿವೇಕಾನಂದರು.**
26. ರಾಮಕೃಷ್ಣ ಪರಮಹಂಸರು ________ ಆರಾಧಕರು. – **ಕಾಳಿಮಾತೆ.**
27. ಸ್ವಾಮಿ ವಿವೇಕಾನಂದರು ಜನಿಸಿದ್ದು _____ – **ಕಲ್ಕತ್ತಾದ ಕಾಯಸ್ಥ ಕುಟುಂಬ.**
28. ವಿವೇಕಾನಂದರು _____ ರಲ್ಲಿ ಅಮೇರಿಕದ ______ ನಗರದಲ್ಲಿ ನಡೆದ ವಿಶ್ವಧಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದರು. – **1893, ಚಿಕಾಗೋ.**
29. ವಿವೇಕಾನಂದರು _____ ರಲ್ಲಿ ಪ್ಯಾರಿಸ್‌ನಲ್ಲಿ ನಡೆದ _____ ಸಮ್ಮೇಳನದಲ್ಲೂ ಭಾಗವಹಿಸಿದ್ದರು. – **1900, ಕಾಂಗ್ರೆಸ್ ಆಫ್ ರಿಲಿಜಿಯನ್ಸ್.**
30. ಸ್ವಾಮಿ ವಿವೇಕಾನಂದರ ಸಲಹೆಯಂತೆ ಮೈಸೂರು ಒಡೆಯರಾದ _____ ರು ಅಸ್ಪೃಶ್ಯ ವರ್ಗದ ಮಕ್ಕಳಿಗೆ ಶಾಲೆಗಳನ್ನು ಪ್ರಾರಂಭಿಸಿದರು. – **ಹತ್ತನೇ ಚಾಮರಾಜ ಒಡೆಯರು.**
31. ಐರಿಶ್ ಮಹಿಳೆ ಅನಿಬೆಸೆಂಟರು _____ ರಲ್ಲಿ ಭಾರತಕ್ಕೆ ಬಂದರು – **1893.**
32. ಅನಿಬೆಸೆಂಟರ ಜನನ – **ಲಂಡನ್ (1847ರಲ್ಲಿ)**
33. ಐಹಿಕ ಸಂಪತ್ತಿನ ಮೇಲೆ ನಿಂತಿರುವ ಪಶ್ಚಿಮದ ಸಂಸ್ಕೃತಿಗಿಂತ ಆಧ್ಯಾತ್ಮಿಕ ಶಕ್ತಿಯ ಮೇಲೆ ನಿಂತಿರುವ ಭಾರತ ಸಂಸ್ಕೃತಿ ಶ್ರೇಷ್ಠವಾದ್ದೆಂದು ಪ್ರತಿಪಾದಿಸಿದವರು – ಅನಿಬೆಸೆಂಟ್.
34. ಅನಿಬೆಸೆಂಟರನ್ನು ಶ್ವೇತ ಸರಸ್ವತಿ ಎಂದು ಕರೆಯಲು ಕಾರಣ – **'ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದಿಸಿದ್ದರಿಂದ.**
35. ಅನಿಬೆಸೆಂಟರು 1898ರಲ್ಲಿ ________ ಕಾಲೇಜನ್ನು ಬನಾರಸ್‌ನಲ್ಲಿ ಪ್ರಾರಂಭಿಸಿದರು. – **ಸೆಂಟ್ರಲ್ ಹಿಂದೂ ಕಾಲೇಜು.**
36. ಅನಿಬೆಸೆಂಟರು ಪ್ರಾರಂಭಿಸಿದ ಸೆಂಟ್ರಲ್ ಹಿಂದೂ ಕಾಲೇಜು _____ ರ ಪ್ರಯತ್ನದ ಫಲವಾಗಿ 1916ರಲ್ಲಿ ಹಿಂದೂ ವಿಶ್ವವಿದ್ಯಾಲಯವಾಗಿ ಪರಿವರ್ತನೆಯಾಯಿತು.– **ಮದನಮೋಹನ ಮಾಳವೀಯ.**
37. ಹೋಮ್ ರೂಲ್‌ಲೀಗ್‌ನ್ನು ಪ್ರಾರಂಭಿಸಿದವರು – **ಅನಿಬೆಸೆಂಟ್ (1916)**
38. ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ – **ಅನಿಬೆಸೆಂಟ್.**
39. ಶ್ರೀ ನಾರಾಯಣಗುರು ಅವರು 1903ರಲ್ಲಿ ________ ಸುಧಾರಣಾ ಸಂಘಟನೆಯನ್ನು ಆರಂಭಿಸಿದರು. – **ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ.**
40. ಶ್ರೀ ನಾರಾಯಣಗುರು ಜನಿಸಿದ ಸ್ಥಳ – **ಕೇರಳದ ಈಳವು.**
41. ಆತ್ಮಗೌರವ ಚಳುವಳಿಯನ್ನು ಆರಂಭಿಸಿದವರು – **ಇ ವಿ ರಾಮಸ್ವಾಮಿ ನಾಯ್ಕರ್.**
42. ಸೆಲ್ಫ್ ರೆಸ್ಪೆಕ್ಟ್ ಲೀಗ್‌ನ್ನು ಆರಂಭಿಸಿದವರು – **ಇ ವಿ ರಾಮಸ್ವಾಮಿ ನಾಯ್ಕರ್ (1926ರಲ್ಲಿ)**
43. ಇ ವಿ ರಾಮಸ್ವಾಮಿ ನಾಯ್ಕರ್‌ರವರನ್ನು ಜನ ಪ್ರೀತಿಯಿಂದ ________ ಎಂದು ಕರೆದರು. – **ಪರಿಯಾರ್ (ಹಿರಿಯರು)**
44. ತಮಿಳುನಾಡಿನಲ್ಲಿ ದ್ರಾವಿಡ ಚಳುವಳಿಯನ್ನು ಹುಟ್ಟುಹಾಕಿದವರು– **ಇ.ವಿ.ರಾಮಸ್ವಾಮಿ ನಾಯ್ಕರ್.**
45. ಪರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆ – **ದ್ರಾವಿಡ ಕಳಗಂ.**
46. ಪರಿಯಾರ್‌ರವರು _______ ಪತ್ರಿಕೆಯನ್ನು ಹುಟ್ಟುಹಾಕಿದರು. – **ಜಸ್ಟೀಸ್ ಪತ್ರಿಕೆ.**
47. ವೇದಗಳಿಗೆ ಮರಳಿ ಎಂದು ಕರೆಕೊಟ್ಟವರು – **ದಯಾನಂದ ಸರಸ್ವತಿ.**
48. ರಾನಡೆಯವರು _____ ಸಮಾಜವನ್ನು ಜನಪ್ರಿಯಗೊಳಿಸಿದರು. – **ಪ್ರಾರ್ಥನಾ ಸಮಾಜ.**
49. ಸತಿ ಪದ್ಧತಿಯನ್ನು ನಿಷೇದಿಸಿದರವರು – **ವಿಲಿಯಂ ಬೆಂಟಿಂಕ್ (1829ರಲ್ಲಿ)**
51. ಫುಲೆಯವರ ಆಶಯಗಳಿಂದ ಪ್ರೇರಣೆ ಪಡೆದವರಲ್ಲಿ ______ ಪ್ರಮುಖರು. – **ಬಾಬಾಸಾಹೇಬ ಅಂಬೇಡ್ಕರ್.**
52. ಸತ್ಯಶೋಧಕ ಸಮಾಜದ ಸ್ಥಾಪಕರು – **ಜ್ಯೋತಿಭಾ ಫುಲೆ (1773ರಲ್ಲಿ)**
53. ವೈಕಂ ಸತ್ಯಾಗ್ರಹವನ್ನು ಆರಂಭಿಸಿದವರು – **ಶ್ರೀ ನಾರಾಯಣಗುರು.**
54. 'ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು ___ರ ಆಶಯ. – **ಶ್ರೀ ನಾರಾಯಣಗುರು.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಸಾಮಾಜಿಕ ಸುಧಾರಣೆ ಎಂದರೇನು?**

ಉತ್ತರ : ಮಾನವೀಯ ಮೌಲ್ಯಗಳಿಂದ ಮೌಢ್ಯಮುಕ್ತ ಸಮಾಜದ ಕಡೆಗೆ ಕೊಂಡೊಯ್ಯುವ ಪ್ರಯತ್ನವೇ ಸಮಾಜ ಸುಧಾರಣೆಯಾಗಿದೆ.

**2. 'ಬಿಳಿಯನ ಮೇಲಿನ ಹೊರೆ ಸಿದ್ಧಾಂತ ಎಂದರೇನು?**

ಉತ್ತರ : ಬ್ರಿಟಿಷರು ಭಾರತೀಯ ಸಮಾಜ ಸುಧಾರಣೆಯಲ್ಲಿ ಆಸಕ್ತಿಯನ್ನು ತಳೆದರು. ತಮ್ಮನ್ನು ನಾಗರಿಕರು ಎಂದು ಚಿತ್ರಿಸಿಕೊಳ್ಳುತ್ತ ತಾವು ಇಲ್ಲಿಗೆ

ಬಂದಿರುವುದೇ ಭಾರತೀಯರನ್ನು ನಾಗರಿಕರನ್ನಾಗಿ ಮಾಡಲು ಎನ್ನುವ 'ಬಿಳಿಯನ ಮೇಲಿನ ಹೊರೆ' ಸಿದ್ಧಾಂತವನ್ನು ಪ್ರಚುರಪಡಿಸಿದರು.

**3. 19ನೇ ಶತಮಾನದ ಕಾಲಘಟ್ಟದ ಸುಧಾರಣೆಯ ಪ್ರಮುಖ ಲಕ್ಷಣವೇನು?**

ಉತ್ತರ : 19ನೇ ಶತಮಾನದ ಕಾಲಘಟ್ಟದ ಸುಧಾರಣೆಯ ಪ್ರಮುಖ ಲಕ್ಷಣವೇಂದರೆ – ಸಮಾಜಕ್ಕೆ ಹಾನಿಕಾರಕವಾದ ಪದ್ಧತಿಗಳನ್ನು ಕಾನೂನಿನ ಮೂಲಕ ನಿಷೇಧಿಸಲು ಪ್ರಯತ್ನಿಸಲಾಯಿತು.

**4. ರಾಜಾ ರಾಮಮೋಹನರಾಯರು ಬೈಬಲನ್ನು ಮೂಲದಲ್ಲಿ ಅರ್ಥಮಾಡಿಕೊಳ್ಳಲು ಯಾವ ಭಾಷೆಗಳನ್ನು ಕಲಿತರು?**

ಉತ್ತರ : ರಾಜಾ ರಾಮಮೋಹನರಾಯರು ಬೈಬಲನ್ನು ಮೂಲದಲ್ಲಿ ಅರ್ಥಮಾಡಿಕೊಳ್ಳಲು ಹಿಬ್ರೂ ಮತ್ತು ಗ್ರೀಕ್ ಭಾಷೆಗಳನ್ನು ಕಲಿತರು.

**5. ರಾಜಾ ರಾಮಮೋಹನರಾಯರು ಆರಂಭಿಸಿದ 'ಆತ್ಮೀಯ ಸಭಾ'ದ ಪ್ರಮುಖ ಆಶಯವೇನು?**

ಉತ್ತರ : ರಾಜಾ ರಾಮಮೋಹನರಾಯರು ಆರಂಭಿಸಿದ 'ಆತ್ಮೀಯ ಸಭಾ'ದ ಪ್ರಮುಖ ಆಶಯವೇಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗಾಣಿಸುವುದು.

**6. ರಾಜಾರಾಮಮೋಹನರಾಯರ ಸೇವೆಯನ್ನು ರವೀಂದ್ರನಾಥ ಠಾಗೂರರ ಹೇಗೆ ವಿಶ್ಲೇಷಿಸಿದ್ದಾರೆ?**

ಉತ್ತರ : ರವೀಂದ್ರನಾಥ ಠಾಗೂರರು 'ರಾಜಾ ರಾಮಮೋಹನರಾಯರು ಆಧುನಿಕ ಭಾರತದ ಹರಿಕಾರ, ಭಾರತದ ಪುನರುಜ್ಜೀವನದ ಜನಕ ಮತ್ತು ಭಾರತೀಯ ರಾಷ್ಟ್ರೀಯತೆಯ ಪ್ರವಾದಿ' ಎಂದು ಹೇಳುವ ಮೂಲಕ ರಾಜಾ ರಾಮಮೋಹನರಾಯರು ಮತ್ತು ಬ್ರಹ್ಮಸಮಾಜವು ಮಾಡಿದ ಸೇವೆಯನ್ನು ವಿಶ್ಲೇಷಿಸಿದ್ದಾರೆ.

**7. ಯುವ ಬಂಗಾಳಿ ನೇತಾರ ಹನ್ರಿ ವಿವಿಯನ್ ಡಿರೇಜಿಯೋ ಅವರನ್ನು ಆಂಗ್ಲೋ–ಇಂಡಿಯನ್ ಎಂದು ಏಕೆ ಕರೆಯುತ್ತಾರೆ?**

ಉತ್ತರ : ಯುವ ಬಂಗಾಳಿ ನೇತಾರ ಹನ್ರಿ ವಿವಿಯನ್ ಡಿರೇಜಿಯೋರವರ ತಂದೆ ಪೋರ್ಚುಗೀಸ್, ತಾಯಿ ಭಾರತೀಯಳು. ಹೀಗಾಗಿ ಡಿರೇಜಿಯೋ ಅವರನ್ನು ಆಂಗ್ಲೋ–ಇಂಡಿಯನ್ ಎಂದು ಕರೆಯುತ್ತಾರೆ.

**8. ಆರ್ಯ ಸಮಾಜವನ್ನು ಯಾರು, ಯಾವಾಗ ಆರಂಭಿಸಿದರು?**

ಉತ್ತರ : 1875ರಲ್ಲಿ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು ಕಾಥೇವಾಡದಲ್ಲಿ ಆರಂಭಿಸಿದರು.

**9. ದಯಾನಂದ ಸರಸ್ವತಿಯವರ ತಂದೆ – ತಾಯಿ ಯಾರು?**

ಉತ್ತರ : ದಯಾನಂದ ಸರಸ್ವತಿಯವರ ತಂದೆ – ಅಂಬಾಶಂಕರ ತಿವಾರಿ, ತಾಯಿ – ಅಮೃತಾಬಾಯಿ.

**10. ದಯಾನಂದ ಸರಸ್ವತಿಯವರು 'ವೇದಗಳಿಗೆ ಮರಳಿ' ಎಂದು ಕರೆ ಕೊಡಲು ಕಾರಣವೇನು?**

ಉತ್ತರ : ದಯಾನಂದ ಸರಸ್ವತಿಯವರು ವೇದಗಳ ಅಧ್ಯಯನದಿಂದ ಕಂಡುಕೊಂಡ ಅಂಶವೇಂದರೆ ಆಧುನಿಕ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ ಅವರು ವೇದಗಳಿಗೆ ಮರಳಿ ಎಂದು ಘೋಷಿಸಿದರು.

**11. ಶುದ್ಧಿ ಚಳುವಳಿ ಎಂದರೇನು?**

ಉತ್ತರ : ಆರ್ಯ ಸಮಾಜದ ಮತ್ತೊಂದು ಪ್ರಮುಖ ಕಾರ್ಯಸೂಚಿ ಎಂದರೆ 'ಶುದ್ಧಿ ಚಳುವಳಿ. ಶುದ್ಧಿ ಚಳುವಳಿ ಎಂದರೆ ಹಿಂದೂ ಧರ್ಮದಿಂದ ಇಸ್ಲಾಂ ಮತ್ತು ಕ್ರೈಸ್ತಧರ್ಮಕ್ಕೆ ಮತಾಂತರಗೊಂಡವರನ್ನು ಮತ್ತೆ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳುವುದಾಗಿದೆ.

**12. ಪ್ರಾರ್ಥನಾ ಸಮಾಜವನ್ನು ಆತ್ಮರಾಮ ಪಾಂಡುರಂಗರವರು ಏಕೆ ಸ್ಥಾಪಿಸಿದರು?**

ಉತ್ತರ : ಮಹಿಳೆಯರ ಸಮಸ್ಯೆಗಳನ್ನಷ್ಟೇ ಅಲ್ಲದೆ ಶೂದ್ರಾತಿಶೂದ್ರ ಸಮುದಾಯಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಡಾ. ಆತ್ಮಾರಾಮ್ ಪಾಂಡುರಂಗರವರು ಮುಂಬೈಯಲ್ಲಿ 1867ರಲ್ಲಿ ಪ್ರಾರ್ಥನಾ ಸಮಾಜವನ್ನು ಪ್ರಾರಂಭಿಸಿದರು.

**13. 1857ರ ನಂತರ ಮುಸ್ಲಿಂರಲ್ಲಿ ಬ್ರಿಟಿಷ್ ವಿರೋಧಿ ಮನೋಧರ್ಮ ಬೆಳೆದಿದ್ದರ ಪರಿಣಾಮವೇನು?**

ಉತ್ತರ : ಬ್ರಿಟಿಷರ ವಿರೋಧಿ ಮನೋಧರ್ಮವು 1857ರ ಘಟನೆಯ ನಂತರ ಮುಸ್ಲಿಂ ಸಮುದಾಯದಲ್ಲಿ ವ್ಯಾಪಕವಾಗಿ ಬೆಳೆಯಲು ಆರಂಭಿಸಿತು. ಇದರ ಪರಿಣಾಮವಾಗಿ ಇಂಗ್ಲಿಷ್ ಶಿಕ್ಷಣದಿಂದ ದೂರಾಗತೊಡಗಿ ಶಿಕ್ಷಣದ ಅರ್ಹತೆಯಿಂದ ದೊರೆಯಬಹುದಾದ ಅವಕಾಶಗಳನ್ನು ಕಳೆದುಕೊಂಡರು.

**14. ರಾಮಕೃಷ್ಣ ಆಶ್ರಮವನ್ನು ಯಾರು, ಎಲ್ಲಿ ಸ್ಥಾಪಿಸಿದರು?**

ಉತ್ತರ : ಸ್ವಾಮಿ ವಿವೇಕಾನಂದರು 1897ರಲ್ಲಿ ಕಲ್ಕತ್ತಾದ ಬಳಿಯ ಬೇಲೂರಿನಲ್ಲಿ ರಾಮಕೃಷ್ಣ ಆಶ್ರಮವನ್ನು ಸ್ಥಾಪಿಸಿದರು.

**15. ರಾಮಕೃಷ್ಣ ಮಠವನ್ನು ಸ್ಥಾಪಿಸಿದ ಉದ್ದೇಶವೇನು?**

ಉತ್ತರ : ರಾಮಕೃಷ್ಣ ಮಠವನ್ನು ಸ್ಥಾಪಿಸಿದ ಉದ್ದೇಶವೆಂದರೆ ಸ್ವಾಮಿ ವಿವೇಕಾನಂದರ ಗುರುಗಳಾದ ರಾಮಕೃಷ್ಣ ಪರಮಹಂಸರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲುಪಿಸುವುದು.

**16. ರಾಮಕೃಷ್ಣ ಪರಮಹಂಸರು ತಮ್ಮ ಬದುಕಿನ ಮೂಲಕ ಜಗತ್ತಿಗೆ ನೀಡಿದ ಸಂದೇಶವೇನು?**

ಉತ್ತರ : ಸನ್ಯಾಸ, ಧ್ಯಾನ ಮತ್ತು ಭಕ್ತಿಯ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯಬೇಕೆಂದು ತಮ್ಮ ಬದುಕಿನ ಉದಾಹರಣೆಯ ಮೂಲಕ ತೋರಿಸಿಕೊಟ್ಟರು.

**17. ಸ್ವಾಮಿ ವಿವೇಕಾನಂದರು ಯಾವ ಬಗೆಯ ಕೃತಿಗಳನ್ನು ರಚಿಸಿದ್ದಾರೆ?**

ಉತ್ತರ : ಸ್ವಾಮಿ ವಿವೇಕಾನಂದರು ಜ್ಞಾನಯೋಗ, ರಾಜಯೋಗ, ಕರ್ಮಯೋಗ ಮತ್ತು ಭಕ್ತಿಯೋಗಗಳ ಬಗೆಗೆ ಕೃತಿಗಳನ್ನು ರಚಿಸಿದ್ದಾರೆ.

**18. ಥಿಯೋಸಾಫಿಕಲ್ ಸೈಸೈಟಿಯನ್ನು ಎಲ್ಲಿ, ಯಾವಾಗ, ಯಾರು ಆರಂಭಿಸಿದವರು ಯಾರು?**

ಉತ್ತರ : ಥಿಯೋಸಾಫಿಕಲ್ ಸೋಸೈಟಿಯನ್ನು ಮೇಡಂ ಬ್ಲವಾಟ್ಸ್ಕೆ ಮತ್ತು ಅಮೇರಿಕನ್ನರಾದ ಕರ್ನಲ್ ಎಚ್ ಎಸ್ ಅಲ್ಕಾಟ್ ಪ್ರಾರಂಭಿಸಿದರು. ಇವರು ಭಾರತಕ್ಕೆ ಬಂದು ಮದರಾಸಿನ ಹತ್ತಿರವಿರುವ ಅಡ್ಯಾರ್ ಎಂಬಲ್ಲಿ ಇದರ ಕೇಂದ್ರ ಕಚೇರಿಯನ್ನು 1886ರಲ್ಲಿ ಆರಂಭಿಸಿದರು.

**19. ಥಿಯೋಸಾಫಿಕಲ್ ಸೊಸೈಟಿ ಸ್ಥಾಪನೆಯ ಉದ್ದೇಶವೇನು?**

ಉತ್ತರ : ಥಯೋಸಾಫಿಕಲ್ ಸೊಸೈಟಿ ಸ್ಥಾಪನೆಯ ಉದ್ದೇಶವೆಂದರೆ ವಿವಿಧ ಧರ್ಮಗಳು, ದರ್ಶನಗಳ ಮತ್ತು ವಿಜ್ಞಾನಗಳ ತುಲನಾತ್ಮಕ ಅಧ್ಯಯನ ಮಾಡುವುದು. ಮನುಷ್ಯನ ಅಂತರ್ಯದಲ್ಲಿರು ಅದಮ್ಯ ಚೇತನ ಶಕ್ತಿಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದು.

**20. ಅನಿಬೆಸೆಂಟರು ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿ ಯಾವ ಯಾವ ಪತ್ರಿಕೆಗಳನ್ನು ಆರಂಭಿಸಿದರು?**

ಉತ್ತರ : ಅನಿಬೆಸೆಂಟರು ಸಮಕಾಲೀನ ಸಮಸ್ಯೆಗಳನ್ನು ಚರ್ಚೆ ಮತ್ತು ಸಂವಾದಕ್ಕೆ ಈಡುಮಾಡಲು 'ನ್ಯೂ ಇಂಡಿಯಾ' ಮತ್ತು 'ಕಾಮನ್ ವೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.

**21. ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಪ್ರಮುಖ ಉದ್ದೇಶವೇನು?**

ಉತ್ತರ : ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಪ್ರಮುಖ ಉದ್ದೇಶವೇಂದರೆ – ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ ಮಾಡುವುದು.

**22. ಬ್ರಾಹ್ಮಣೇತರ ಚಳುವಳಿಯನ್ನು ತಮಿಳುನಾಡಿನಲ್ಲಿ ಮುನ್ನೆಡಿಸಿದವರು ಯಾರು?**

ಉತ್ತರ : ತಮಿಳುನಾಡಿನಲ್ಲಿ 1916ರಲ್ಲಿ ಪ್ರಾರಂಭವಾದ 'ಜಸ್ಟೀಸ್ ಪಾರ್ಟಿ'ಯು ಈ ಚಳುವಳಿಯನ್ನು ಮುನ್ನೆಡಿಸಿತು.

**23. ಸತ್ಯಶೋಧಕ ಸಮಾಜದ ಸ್ಥಾಪನೆಯ ಉದ್ದೇಶವೇನು?**

ಉತ್ತರ : 1873ರಲ್ಲಿ ಜ್ಯೋತಿಭಾ ಫುಲೆಯವರು ಸ್ಥಾಪಿಸಿದ ಸತ್ಯಶೋಧಕ ಸಮಾಜವು ಬ್ರಾಹ್ಮಣೇತರ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವ ಉದ್ದೇಶದಿಂದ ಸ್ಥಾಪನೆಯಾಯಿತು.

**24. ಜ್ಯೋತಿಭಾ ಫುಲೆಯವರು ರಚಿಸಿದ ಗ್ರಂಥಗಳು ಯಾವುವು?**

ಉತ್ತರ : ಜ್ಯೋತಿಭಾ ಫುಲೆಯವರು ಸೈದ್ಧಾಂತಿಕ ಹೋರಾಟವನ್ನು ಕಟ್ಟುವ ಹಿನ್ನೆಲೆಯಲ್ಲಿ 'ಗುಲಾಮಗಿರಿ' ಮತ್ತು 'ಶೇಟ್ಕಾರ್ಯಚಾ ಅಸೂದ' ಎನ್ನುವ ಗಂಥ ರಚಿಸಿದರು.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. 19ನೆಯ ಶತಮಾನವನ್ನು ಭಾರತೀಯ ಇತಿಹಾಸದಲ್ಲಿ ಸಮಾಜ ಸುಧಾರಣಾ ಕಾಲ ಮತ್ತು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. ವಿಮರ್ಶಿಸಿ.**

**ಉತ್ತರ : 19ನೆಯ ಶತಮಾನವನ್ನು ಭಾರತೀಯ ಇತಿಹಾಸದಲ್ಲಿ ಸಮಾಜ ಸುಧಾರಣಾ ಕಾಲ ಮತ್ತು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. ಯಾಕೆಂದರೆ –**

- ಬ್ರಿಟಿಷರು ಇಂಗ್ಲಿಷ್ ಶಿಕ್ಷಣವನ್ನು ಜಾರಿಗೊಳಿಸಿದ ನಂತರ ಭಾರತೀಯ ಇಂಗ್ಲಿಷ್ ವಿದ್ಯಾವಂತ ವರ್ಗವೊಂದು ಸೃಷ್ಟಿಯಾಯಿತು.
- ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಸಮಾನತೆ ಮುಂತಾದ ಯುರೋಪಿಯನ್ ಪರಿಕಲ್ಪನೆಗಳು ಭಾರತೀಯ ಸಮಾಜಕ್ಕೆ ಪರಿಚಯವಾಗಲಾರಂಭಿಸಿದವು.
- ಇದು ಮೂಢನಂಬಿಕೆಗಳನ್ನು ಪ್ರಶ್ನಿಸುವಂತೆ ಮಾಡಿತು.
- ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದ ಅನೇಕ ಭಾರತೀಯರು ತಮ್ಮ ಸಮಾಜವನ್ನು ವಿಶ್ಲೇಷಿಸಲು ಆರಂಭಿಸಿದರು.

➢ಭಾರತೀಯರು ತಮ್ಮ ಪರಂಪರೆಯನ್ನು ಹೊಸ ದೃಷ್ಟಿಕೋನಗಳಲ್ಲಿ ನೋಡಲು ಆರಂಭಿಸಿದರು.

➢ಭಾರತೀಯತೆ ಎಂಬ ಹೊಸ ಅಸ್ಮಿತೆಯು ಹುಟ್ಟಿಕೊಂಡಿತು.

**2. 19ನೇ ಶತಮಾನದ ಪ್ರಮುಖ ಸಮಾಜ ಸುಧಾರಕರನ್ನು ಪಟ್ಟಿಮಾಡಿರಿ.**

ಉತ್ತರ : 19ನೇ ಶತಮಾನದ ಪ್ರಮುಖ ಸಮಾಜ ಸುಧಾರಕರೆಂದರೆ – ರಾಜಾರಾಮಮೋಹನರಾಯ್, ದಯಾನಂದ ಸರಸ್ವತಿ, ಎಂ.ಜಿ.ರಾನಡೆ, ಜ್ಯೋತಿಭಾಫುಲೆ, ಸ್ವಾಮಿ ವಿವೇಕಾನಂದ, ಅನಬೆಸೆಂಟ್, ಸರ್ ಸಯ್ಯದ್ ಅಹ್ಮದ್ ಖಾನ್, ಪೆರಿಯಾರ್, ನಾರಾಯಣಗುರು ಮೊದಲಾದವರು.

**3. 19ನೇ ಶತಮಾನದ ಭಾರತೀಯ ಸಾಮಾಜಿಕ ಸ್ಥಿತಿಗತಿಗಳು ಹೇಗಿದ್ದವು?**

**ಉತ್ತರ : 19ನೇ ಶತಮಾನದ ಭಾರತೀಯ ಸಮಾಜದ ಸ್ಥಿತಿಗತಿಗಳು –**

➢ಭಾರತೀಯ ಸಮಾಜದಲ್ಲಿ ಮಹಿಳೆಯ ಹಾಗೂ ಶೂದ್ರ, ಶೂದ್ರಾತಿ ಸಮುದಾಯಗಳು ಅನೇಕ ಹಕ್ಕುಗಳಿಂದ ವಂಚಿತರಾಗಿದ್ದರು.

➢ಜಾತಿಪದ್ಧತಿ, ಲಿಂಗ ಅಸಮಾನತೆ, ಸತಿಪದ್ಧತಿ, ನಿರ್ಬಂಧ ಪದ್ಧತಿ, ಶೂದ್ರಾತಿಶೂದ್ರರು ಶಿಕ್ಷಣದಿಂದ ವಂಚಿತರಾಗಿದ್ದರು.

➢ಅಂದಿನ ಸಮಾಜವು ಅನೇಕ ಮೌಢ್ಯತೆಗಳಿಂದ ಕೂಡಿತ್ತು.

➢ಅನೇಕ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ನಿರ್ಬಂಧಗಳನ್ನು ಹೇರಲಾಗಿತ್ತು.

**4. ರಾಜಾ ರಾಮಮೋಹನರಾಯರು ಭಾರತೀಯ ಸಮಾಜವನ್ನು ಸುಧಾರಿಸಲು ಹೇಗೆ ಶ್ರಮಿಸಿದರು?**

**ಉತ್ತರ :**

➢ರಾಜಾ ರಾಮಮೋಹನರಾಯರು ಆರಂಭಿಸಿದ 'ಆತ್ಮೀಯ ಸಭಾ'ದ ಪ್ರಮುಖ ಆಶಯವೇಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗಾಣಿಸುವುದು.

➢1828ರಲ್ಲಿ ಬ್ರಹ್ಮಸಮಾಜವನ್ನು ಪ್ರಾರಂಭಿಸಿದರು.

➢ಜಾತಿಪದ್ಧತಿ ಮತ್ತು ಮೂಢನಂಬಿಕೆಗಳಿಂದ ಹಿಂದೂ ಧರ್ಮವನ್ನು ಶುದ್ಧಿಗೊಳಿಸುವುದು ಇವರ ಕಾಳಜಿಯಾಗಿತ್ತು.

➢ರಾಜಾ ರಾಮಮೋಹನರಾಯರು ಉಪನಿಷತ್‌ಗಳು ಸಾರುವ ತಾತ್ವಿಕ ತಳಹದಿಯ ಮೇಲೆ ಹಿಂದು ಸಮಾಜವನ್ನು ಪುನರ್ ರೂಪಿಸುವ ಪ್ರಯತ್ನವನ್ನು ಮಾಡಿದರು.

➢ಇವರ ಪ್ರಯತ್ನದ ಫಲವಾಗಿ ಅಂದಿನ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನ ಬೆಂಬಲದಿಂದ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇದಿಸಲಾಯಿತು.

➢ಬಂಗಾಳದಲ್ಲಿ ಸಂವಾದ ಕೌಮುದಿ ಎನ್ನುವ ಪತ್ರಿಕೆಯನ್ನು ಆರಂಭಿಸುವ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಲು ಪ್ರಯತ್ನಿಸಿದರು.

**5. ರಾಜಾರಾಮಮೋಹನರಾಯರು ಸ್ಥಾಪಿಸಿದ ಬ್ರಹ್ಮ ಸಮಾಜದ ಪ್ರಮುಖ ಅಂಶಗಳಾವುವು? ಅಥವಾ**

**ಭಾರತದ ಸಾಮಾಜಿಕ ಸುಧಾರಣಾ ಚಳುವಳಿಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು?**

**ಉತ್ತರ : ರಾಜಾರಾಮಮೋಹನರಾಯರು ಸ್ಥಾಪಿಸಿದ ಬ್ರಹ್ಮ ಸಮಾಜದ ಪ್ರಮುಖ ಅಂಶಗಳು. –**

➢ಏಕದೇವತಾರಾಧನೆಯನ್ನು ಪ್ರತಿಪಾದಿಸುವುದು.

➢ಅರ್ಥಹೀನ ಆಚರಣೆಗಳನ್ನು ವಿರೋಧಿಸುವುದು.

➢ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು. ಮತ್ತು ಯಾವ ನಿಯಮ ಮತ್ತು ಆಚರಣೆಗಳು ಇದಕ್ಕೆ ಕೇಡುಂಟು ಮಾಡಬಾರದೆನ್ನುವುದು ಅವರ ನಿಲುವಾಗಿತ್ತು.

➢ಬಹುಪತ್ನಿತ್ವ ಪದ್ಧತಿಯನ್ನು ವಿರೋಧಿಸುವ ಮೂಲಕ ಸ್ತ್ರೀಯರಿಗೆ ಸಮಾನತೆ ದೊರಕಬೇಕೆಂದು ಬ್ರಹ್ಮ ಸಮಾಜವು ಆಶಿಸಿತು.

➢ವಿಶೇಷವಾಗಿ ವಿಧವೆಯರಿಗೆ ದುಸ್ಥಿತಿಯನ್ನು ದೂರ ಮಾಡುವ ಸಲುವಾಗಿ ಅವರಿಗೆ ಆಸ್ತಿಯಲ್ಲಿ ಪಾಲು ಇರಬೇಕೆಂದು ಪ್ರತಿಪಾದಿಸಿತು.

➢ಬ್ರಹ್ಮ ಸಮಾಜವು ಬಾಲ್ಯವಿವಾಹವನ್ನು ವಿರೋಧಿಸಿತು.

➢ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬಹುದು ಎಂದು ಬ್ರಹ್ಮಸಮಾಜವು ಸಾರಿತು.

➢ಪಶ್ಚಿಮದ ನಾಗರಿಕತೆಯಲ್ಲಿ ಒಳ್ಳೆಯದಿದ್ದರೆ ಅದೂ ಕೂಡ ಸ್ವೀಕಾರಾರ್ಹ ಎನ್ನುವುದು ಈ ಸಮಾಜದ ನಿಲುವಾಗಿತ್ತು.

**6. ಸಮಾಜ ಸುಧಾರಣೆಯಲ್ಲಿ ಯುವಬಂಗಾಳಿ ಚಳುವಳಿಯು ವಹಿಸಿದ ಪಾತ್ರವನ್ನು ವಿವರಿಸಿ.**

**ಉತ್ತರ : ಸಮಾಜ ಸುಧಾರಣೆಯಲ್ಲಿ ಯುವಬಂಗಾಳಿ ಚಳುವಳಿಯು ವಹಿಸಿದ ಪಾತ್ರ–**

➢ಯುವಬಂಗಾಳಿ ಚಳುವಳಿಯನ್ನು ಪ್ರಾರಂಭಿಸಿದವರು ಹೆನ್ರಿ ವಿವಿಯನ್ ಡಿರೋಜಿಯೋ.

➢ಯುವಬಂಗಾಳಿ ಚಳುವಳಿಯು ಪ್ರಕೃತಿ, ಮಾನವೀಯತೆ, ದೇವರು ಮುಂತಾದ ವಿಷಯಗಳನ್ನು ಕುರಿತು ಚರ್ಚೆ ಮತ್ತು ಸಂವಾದಗಳನ್ನು ನಡೆಸಿತು.

➢ಮಹಿಳಾ ಹಕ್ಕುಗಳ ಪ್ರತಿಪಾದಕರಾಗಿದ್ದು ಜಾತಿಪ್ರೇರಿತ ಶೋಷಣೆಯ ವಿರೋಧಿಯಾಗಿದ್ದರು.

➢ಮೂಢನಂಬಿಕೆಗಳಿಂದ ತುಂಬಿದ್ದ ಸಾಮಾಜಿಕ ಮೌಢ್ಯಾಚಾರಗಳಲ್ಲೇ ಮುಳುಗಿದ್ದ ಸಮಾಜಕ್ಕೆ ಪರಿಹಾರವಿರುವುದು ಎಲ್ಲವನ್ನೂ ಎಲ್ಲರೂ ವೈಜ್ಞಾನಿಕವಾಗಿ ನೋಡುವ ದೃಷ್ಟಿಕೋನವನ್ನು ಬೆಳೆಸಿಕೊಂಡಾಗ ಮಾತ್ರ ಎಂದು ಡಿರೋಜಿಯೋ ಪ್ರತಿಪಾಧಿಸಿದರು.

**7. ಆರ್ಯ ಸಮಾಜದ ಪ್ರಮುಖ ಉದ್ದೇಶಗಳನ್ನು ತಿಳಿಸಿ.**

**ಉತ್ತರ : ಆರ್ಯ ಸಮಾಜದ ಪ್ರಮುಖ ಉದ್ದೇಶಗಳು –**

➢ಎಲ್ಲ ಹಿಂದುಗಳು ರೂಪವಿಲ್ಲದ ಒಬ್ಬನೇ ದೇವರಲ್ಲಿ ನಂಬಿಕೆಯಿಡಬೇಕು.

➢ಹುಟ್ಟಿನಿಂದ ಯಾರೂ ಶೂದ್ರರೂ ಅಲ್ಲ ಅಥವಾ ಬ್ರಾಹ್ಮಣರೂ ಅಲ್ಲವೆಂದು ಜಾತಿ ಆಧಾರವನ್ನು ತಿರಸ್ಕರಿಸಿರು.

➢ಅಂತರ್ಜಾತಿಯ ವಿವಾಹಗಳನ್ನು ಪ್ರೋತ್ಸಾಹಿಸುವುದು.

➢ಬಹುಪತ್ನತ್ವ ಮತ್ತು ಬಾಲ್ಯವಿವಾಹ ಪದ್ಧತಿಯನ್ನು ತಿರಸ್ಕರಿಸುವುದು.

➢ಸ್ತ್ರೀ ಮತ್ತು ಪುರುಷರು ಸಮಾನರು.

**8. ಪ್ರಾರ್ಥನಾ ಸಮಾಜವು ತತ್ವಗಳನ್ನು ತಿಳಿಸಿ.**

**ಉತ್ತರ : ಪ್ರಾರ್ಥನಾ ಸಮಾಜದ ತತ್ವಗಳು –**

➢ಪಶ್ಚಿಮದ ಆಧುನಿಕ ಆಲೋಚನೆಗಳ ಹಿನ್ನೆಲೆಯಲ್ಲಿ ಹಿಂದೂ ಧರ್ಮವನ್ನು ಪುನರ್ ವಿಮರ್ಶಿಸಿಕೊಳ್ಳುವ ಅಗತ್ಯವಿದೆಯೆಂದು ಈ ಸಂಘಟನೆ ಪ್ರತಿಪಾದಿಸಿತು.

➢ಸಮಾಜ ಸುಧಾರಣೆಯೆಂಬುದು ಕೇವಲ ನಂಬಿಕೆಯಾಗಿ ಉಳಿಯದೆ ವಾಸ್ತವದಲ್ಲಿ ಅನುಷ್ಠಾನಗೊಳ್ಳಬೇಕು ಎಂದು ಒತ್ತಾಯಿಸಿತು.

➢ಈ ಸಂಸ್ಥೆಯ ನೇತೃತ್ವದಲ್ಲಿ ಸ್ತ್ರೀಯರ ಶಿಕ್ಷಣ, ನಿರ್ಗತಿಕರಿಗೆ ಬದುಕುವ ಆಸರೆಯನ್ನು ಕಲ್ಪಿಸುವುದು ಮುಂತಾದ ಕಾರ್ಯಕ್ರಮಗಳು ಅನುಷ್ಠಾನಗೊಂಡವು.

**9. ಪ್ರಾರ್ಥನಾ ಸಮಾಜಕ್ಕೆ ರಾನಡೆಯವರು ನೀಡಿದ ಕೊಡುಗೆಯನ್ನು ತಿಳಿಸಿ.**

**ಉತ್ತರ : ಪ್ರಾರ್ಥನಾ ಸಮಾಜಕ್ಕೆ ರಾನಡೆಯವರು ನೀಡಿದ ಕೊಡುಗೆ –**

➢ರಾನಡೆಯವರ ನೇತೃತ್ವದಲ್ಲಿ ಪ್ರಾರ್ಥನಾ ಸಮಾಜದ ಸುಧಾರಣಾ ವ್ಯಾಪ್ತಿಯು ಮತ್ತಷ್ಟು ಹೆಚ್ಚಾಯಿತು.

➢ರಾನಡೆಯವರು ಬಾಲ್ಯವಿವಾಹ, ವಿಧವೆಯರನ್ನು ತಿರಸ್ಕೃತ ಬದುಕಿನಿಂದ ಹೊರತರುವುದು.

➢ಉನ್ನತಜಾತಿಗಳಲ್ಲಿ ವಿಧವಾ ಪುನರ್‌ವಿವಾಹ ನಿಷೇಧಗಳನ್ನು ಸುಧಾರಣೆಗೆ ಕಾನೂನಿನ ಕ್ರಮ ಅತ್ಯವಶ್ಯಕವೆಂದು ಭಾವಿಸಿದರು.

➢ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸರಕಾರದ ನೆರವನ್ನು ಪಡೆಯುವುದು ಸರಿಯಾದ ಕ್ರಮವೆಂದರು.

**10. ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರವೇನು? ಅಥವಾ**

**ಅಲಿಘರ್ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರವೇನು?**

**ಉತ್ತರ : ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರ –**

➢ಅಲಿಘರ್‌ಚಳುವಳಿಯ ನಾಯಕತ್ವವನ್ನು ಸರ್ ಸಯದ್ ಅಹಮದ್‌ಖಾನರವರು ವಹಿಸಿದ್ದರು.

➢ಸರ್ ಅಹಮದ್ ಖಾನ್‌ರು ತಮ್ಮ ಇಡೀ ಬದುಕಿನ ಉದ್ದಕ್ಕೂ ಸಂಪ್ರದಾಯ, ಮೌಢ್ಯಗಳು, ಅಜ್ಞಾನ ಮತ್ತು ಅವೈಜ್ಞಾನಿಕ ಮನೋಧರ್ಮದ ವಿರುದ್ಧ ಹೋರಾಡಿದರು.

➢ತೆರೆದ ಮನಸ್ಸು ಇಲ್ಲದಿದ್ದರೆ ಯಾವ ಸಾಮಾಜಿಕ ಮತ್ತು ಬೌದ್ಧಿಕ ಪ್ರಗತಿ ಸಾಧ್ಯವಿಲ್ಲವೆಂದರು.

➢ಸಮುದಾಯದಲ್ಲಿದ್ದ ಪರದಾಪದ್ಧತಿಯನ್ನು ಬೆಂಬಲಿಸಲಿಲ್ಲ.

- ಮುಸ್ಲಿಂ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು ಎಂದು ಸಾರಿದರು.
- ಬಹುಪತ್ನಿತ್ವವನ್ನು ಒಪ್ಪಲಿಲ್ಲ.
- ತಮ್ಮ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲು 1875ರಲ್ಲಿ ಮಹಮದನ್ ಆಂಗ್ಲೋ–ಓರಿಯಂಟಲ್ ಕಾಲೇಜನ್ನು ಅಲಿಘರ್‌ನಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯೇ ಅನಂತರದಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಯಿತು.

**11. ರಾಮಕೃಷ್ಣಮಿಷನ್ ದೃಷ್ಟಿಕೋನವನ್ನು ವಿವರಿಸಿ.**

**ಉತ್ತರ : ರಾಮಕೃಷ್ಣಮಿಷನ್‌ನ ದೃಷ್ಟಿಕೋನ (ಸೇವೆಗಳು)**

- ರಾಮಕೃಷ್ಣ ಮಿಷನ್‌ನ್ನು ಸ್ಥಾಪಿಸಿದ ಉದ್ದೇಶ ಸ್ವಾಮಿ ವಿವೇಕಾನಂದರ ಗುರುಗಳಾದ ರಾಮಕೃಷ್ಣ ಪರಮಹಂಸರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲುಪಿಸುವುದು.
- ಸನ್ಯಾಸ, ಧ್ಯಾನ ಮತ್ತು ಭಕ್ತಿಯ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯುವುದು.
- ಭಾರತೀಯ ದಾರ್ಶನಿಕತೆಯ ವಿವಿಧ ದೃಷ್ಟಿಕೋನಗಳನ್ನು ಭಾರತೀಯರಿಗೆ ಮತ್ತು ಪಾಶ್ಚಿಮಾತ್ಯರಿಗೆ ತಿಳಿಸುವುದು.
- ಭಾರತದ ಸಮಾಜಕ್ಕೆ ಶೋಷಣೆಮುಕ್ತ ರೂಪವನ್ನು ಕೊಡುವುದು.

**12. ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕ ರಾಗಿದ್ದರು. ಹೇಗೆ ಎಂಬುದನ್ನು ವಿವರಿಸಿ.**

**ಉತ್ತರ : ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕ ರಾಗಿದ್ದರು ಹೇಗೆಂದರೆ –**

- ಸ್ವಾಮಿ ವಿವೇಕಾನಂದರು ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.
- ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಬಯಸಿದರು.
- ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೋಗ ಸಾಧನೆಗಳಲ್ಲದೆ ಸಮಾಜ ಸೇವೆಯೇ ಮುಖ್ಯವೆಂದರು.
- ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು.
- ಯುವಜನತೆಯೇ ದೇಶದ ಭವಿಷ್ಯವೆಂದು ತಿಳಿದಿದ್ದ ಸ್ವಾಮಿ ವಿವೇಕಾನಂದರು 'ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂದು ಕರೆಕೊಟ್ಟರು.
- ಭಾರತೀಯ ಸಂಸ್ಕೃತಿಯ ಘನತೆಯನ್ನು ವಿಶ್ವಕ್ಕೆ ಪರಿಚಯಿಸುವ ಮೂಲಕ ಅಸಂಖ್ಯಾತ ಯುವಕರಿಗೆ ಪ್ರೇರಣಾಶಕ್ತಿಯಾಗಿದ್ದಾರೆ.

**13. ಸಮಾಜ ಸುಧಾರಣಾ ಚಳುವಳಿಯಲ್ಲಿ ಸ್ವಾಮಿ ವಿವೇಕಾನಂದರ ಕೊಡುಗೆಗಳನ್ನು ತಿಳಿಸಿ.**

**ಉತ್ತರ : ಸಮಾಜ ಸುಧಾರಣಾ ಚಳುವಳಿಯಲ್ಲಿ ಸ್ವಾಮಿ ವಿವೇಕಾನಂದರ ಕೊಡುಗೆಗಳು –**

- ಸಮಾಜ ಸುಧಾರಣೆಗೆ ಸಂಬಂಧಿಸಿದಂತೆ ವಿವೇಕಾನಂದರ ಆಶಯವೆಂದರೆ, ಮೊದಲು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಮತ್ತು ಆ ಮೂಲಕ ಅವರೇ ಸುಧಾರಣೆಗಳನ್ನು ಬಯಸುತ್ತಾರೆ.
- ಶಾಸನ ರೂಪಿಸುವ ಸಂಸ್ಥೆಗಳು ರೂಪುಗೊಳ್ಳಬೇಕು. ಮತ್ತು ಅವುಗಳ ಮುಖಾಂತರ ಸಮಾಜ ಸುಧಾರಣಾ ಕಾನೂನುಗಳು ಜಾರಿಗೊಳ್ಳಬೇಕು ಎಂದು ಬಯಸಿದರು.
- ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕೆಂದರು.
- ಧರ್ಮದ ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಬೇಕು. ಇಲ್ಲದಿದ್ದರೆ ಅದು ಧರ್ಮವೇ ಅಲ್ಲ ಎಂದರು.
- ಯಾರ ಆತ್ಮ ಬಡವರಿಗಾಗಿ ನಿಡಿಯುವುದೋ ಅವನೇ ಮಹಾತ್ಮ. ಇಲ್ಲದಿದ್ದರೆ ಅವನು ದುರಾತ್ಮ ಎಂದರು.
- ತಮ್ಮ ಜೀವನದುದ್ದಕ್ಕೂ ಅವರು ಜಾತಿಯತೆಯನ್ನು, ಅಸ್ಪೃಶ್ಯತೆಯನ್ನು, ಜಾತಿಮೂಲದಿಂದ ಪ್ರೇರಣೆಗೊಂಡ ಶ್ರೇಷ್ಠತೆಯ ವ್ಯಸನವನ್ನು ಮತ್ತು ಧರ್ಮದ ಹೆಸರಿನಲ್ಲಿ ಶೋಷಣೆಯನ್ನು ವಿರೋಧಿಸಿದರು.

**14. ಸ್ವಾಮಿ ವಿವೇಕಾನಂದರು ಜಗತ್ತಿಗೆ ಭಾರತೀಯ ಸಂಸ್ಕೃತಿಯನ್ನು ಹೇಗೆ ಪರಿಚಯಿಸಿದರು?**

**ಉತ್ತರ :**

- ವಿವೇಕಾನಂದರು 1893ರಲ್ಲಿ ಅಮೇರಿಕದ ಚಿಕಾಗೋ ನಗರದಲ್ಲಿ ನಡೆದ ವಿಶ್ವಧಾರ್ಮಿಕ ಸಮ್ಮೇಳನದ ಸಂದರ್ಭದಲ್ಲಿ ಮಾಡಿದ ಭಾಷಣದಿಂದ ಭಾರತದ ಸಾಂಸ್ಕೃತಿಕ ಹಿರಿಮೆಯನ್ನು ಪರಿಚಯ ಮಾಡಿಕೊಳ್ಳಲು ಸಾಧ್ಯವಾಯಿತು.
- 1900ರಲ್ಲಿ ಪ್ಯಾರಿಸ್‌ನಲ್ಲಿ ನಡೆದ 'ಕಾಂಗ್ರೆಸ್ ಆಫ್ ರಿಲಿಜಿಯನ್ಸ್' ಸಮ್ಮೇಳನದಲ್ಲೂ ಅಮೆರಿಕದಲ್ಲಿ ಮಾತನಾಡಿದ ರೀತಿಯಲ್ಲೇ ಮಾತನಾಡಿ ಜನರನ್ನು ಸಮ್ಮೋಹನಗೊಳಿಸಿದರು.
- ಅವರ ಭಾಷಣಗಳು ಅವರ ರಾಷ್ಟ್ರೀಯತೆಯ ಆಲೋಚನೆಗಳಿಗೆ ಕೈಗನ್ನಡಿಯಾಗಿವೆ.

**15. ಸಮಾಜ ಸುಧಾರಣೆಯಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಪಾತ್ರವನ್ನು ವಿವರಿಸಿ.**

**ಉತ್ತರ : ಸಮಾಜ ಸುಧಾರಣೆಯಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಪಾತ್ರ –**

- ಮನುಷ್ಯನಿಗೆ 'ವಿಶ್ವಭ್ರಾತೃತ್ವ' ಪ್ರಜ್ಞೆ ಮುಖ್ಯವಾದದ್ದೆಂದು ಥಿಯೋಸಾಫಿಕಲ್ ಸೊಸೈಟಿಯು ಘೋಷಿಸಿತು.
- ಥಿಯೋಸಾಫಿಕಲ್ ಸೊಸೈಟಿಯು ಹಿಂದು ಧರ್ಮಕ್ಕೆ ಸೇರಿದ ಗ್ರಂಥಗಳಾದ ವೇದಗಳು, ಉಪನಿಷತ್ತುಗಳು, ಸಾಂಖ್ಯಯೋಗ ಮತ್ತು ವೇದಾಂತ ತಾತ್ವಿಕ ಚಿಂತನೆಗಳಿಂದ ತನ್ನ ಮೂಲತತ್ವಗಳನ್ನು ಪಡೆದುಕೊಂಡು ಪ್ರಚುರಪಡಿಸಿತು.
- ಈ ಸೊಸೈಟಿಯು ಭಾರತದ ಧಾರ್ಮಿಕ ಮತ್ತು ತಾತ್ವಿಕ ಅಥವಾ ದಾರ್ಶನಿಕ ಪರಂಪರೆಗಳನ್ನು ಅಧ್ಯಯನ ಮಾಡುವ ಮೂಲಕ ಸಮಕಾಲೀನ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಿತು.
- ಈ ಸೊಸೈಟಿಯು ನಡೆಸಿದ ಪ್ರಯತ್ನಗಳನ್ನು ಹಿಂದು ಧರ್ಮದ ಪುನರುತ್ಥಾನ ಚಳವಳಿ ಎಂದು ಕರೆಯಲಾಗಿದೆ.

**16. ಅನಿಬೆಸೆಂಟರ ಸುಧಾರಣಾ ಕ್ರಮಗಳಾವುವು? ಅಥವಾ ಥಿಯೋಸಾಫಿಕಲ್ ಸೊಸೈಟಿಗೆ ಅನಿಬೆಸೆಂಟರ್ ಕೊಡುಗೆ ಏನು?**

**ಉತ್ತರ : ಅನಿಬೆಸೆಂಟರ ಸುಧಾರಣಾ ಕ್ರಮಗಳು ಅಥವಾ ಥಿಯೋಸಾಫಿಕಲ್ ಸೊಸೈಟಿಗೆ ಅನಿಬೆಸೆಂಟರ್ ಕೊಡುಗೆ –**

- ಅನಿಬೆಸೆಂಟರು ಐಹಿಕ ಸಂಪತ್ತಿನ ಮೇಲೆ ನಿಂತಿರುವ ಪಶ್ಚಿಮದ ಸಂಸ್ಕೃತಿಗಿಂತ ಆಧ್ಯಾತ್ಮಿಕ ಶಕ್ತಿಯ ಮೇಲೆ ನಿಂತಿರುವ ಭಾರತ ಸಂಸ್ಕೃತಿ ಶ್ರೇಷ್ಠವಾದ್ದೆಂದು ಪ್ರತಿಪಾದಿಸಿದವರು.
- ಈ ಅರ್ಥದಲ್ಲಿ ಇವರ ಚಳುವಳಿಯು ಹಿಂದೂ ಧರ್ಮದ ಪುನರುತ್ಥಾನ ಚಳುವಳಿಯಾಗಿತ್ತು.
- ಅನಿಬೆಸೆಂಟರ ಪ್ರಮುಖ ಸಾಧನೆಗಳೆಂದರೆ 'ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದ ಮಾಡಿ 'ಶ್ವೇತ ಸರಸ್ವತಿ' ಎನಿಸಿಕೊಂಡರು.
- ಎಲ್ಲ ವರ್ಗಗಳಿಗೂ ಶಿಕ್ಷಣ ಸಿಗಬೇಕೆಂಬುದು ಇವರ ಆಶಯವಾಗಿತ್ತು.
- 1898ರಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಬನಾರಸ್‌ನಲ್ಲಿ ಪ್ರಾರಂಭಿಸಿದರು. ಮುಂದೆ ಈ ಸಂಸ್ಥೆಯು ಮದನಮೋಹನ ಮಾಳವೀಯ ಅವರ ಪ್ರಯತ್ನದಿಂದ 1916ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯವಾಗಿ ಪರಿವರ್ತನೆಯಾಯಿತು.
- ಸಮಕಾಲೀನ ಸಮಸ್ಯೆಗಳನ್ನು ಚರ್ಚೆ ಮತ್ತು ಸಂವಾದಕ್ಕೆ ಈಡುಮಾಡಲು 'ನ್ಯೂ ಇಂಡಿಯಾ' ಮತ್ತು 'ಕಾಮನ್ ವ್ಹೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.
- ಅನಿಬೆಸೆಂಟರಿಗೆ 20ನೇ ಶತಮಾನದ ಆರಂಭಿಕ ಕಾಲಘಟ್ಟದ ಭಾರತದಲ್ಲಿ ಹೊಸ ಧಾರ್ಮಿಕ ಮತ್ತು ಸಾಮಾಜಿಕ ಸಂವೇದನೆ ರೂಪಿಸಿದ ಕೀರ್ತಿ ಸಲ್ಲಬೇಕು.

**17. ಕೇರಳದಲ್ಲಿದ್ದ ಸಾಮಾಜಿಕ ಸ್ಥಿತಿಗತಿಗಳು ಶ್ರೀ ನಾರಾಣಗುರು ಅವರಿಗೆ ಧರ್ಮ ಪರಿಪಾಲನಾ ಯೋಗಂ ಸಂಘಟನೆಯನ್ನು ಪ್ರಾರಂಭಿಸಲು ಕಾರಣವಾದವು ಹೇಗೆ?**

**ಉತ್ತರ : ಕೇರಳದಲ್ಲಿದ್ದ ಸಾಮಾಜಿಕ ಸ್ಥಿತಿಗತಿಗಳು ಶ್ರೀ ನಾರಾಣಗುರು ಅವರಿಗೆ ಧರ್ಮ ಪರಿಪಾಲನಾ ಯೋಗಂ ಸಂಘಟನೆಯನ್ನು ಪ್ರಾರಂಭಿಸಲು ಕಾರಣವಾದವು ಹೇಗೆಂದರೆ –**

- ಕೇರಳದ ಸಮಾಜದಲ್ಲೂ ಅತಿ ಜಾತಿ ಅಂತರಗಳ ಸಮಸ್ಯೆ ವ್ಯಾಪಕವಾಗಿದ್ದು, ಅನೇಕ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ನಿರ್ಬಂಧಗಳನ್ನು ಹೇರಲಾಗಿತ್ತು.
- ಈ ಕಾಲಘಟ್ಟದಲ್ಲಿ ಈ ಸಮುದಾಯಗಳು ಎಲ್ಲರೂ ಬಳಸಲು ಇದ್ದ ಕೆರೆ ಬಾವಿಗಳಲ್ಲಿ ನೀರನ್ನು ತೆಗೆದುಕೊಳ್ಳುವಂತಿರಲಿಲ್ಲ.
- ಈ ಸಮುದಾಯಗಳು ರಸ್ತೆಗಳ ಮೂಲಕ ಓಡಾಡುವಂತಿರಲಿಲ್ಲ, ಚಪ್ಪಲಿಗಳನ್ನು ಹಾಕುವಂತಿರಲಿಲ್ಲ. ದೇವಸ್ಥಾನಕ್ಕೆ ಪ್ರವೇಶಿಸುವಂತಿರಲಿಲ್ಲ.
- ಮಹಿಳೆಯರ ಉಡುಪುಗಳ ಮೇಲು ನಿರ್ಬಂಧಗಳನ್ನು ಹೇರಲಾಗಿತ್ತು.
- ಶಾಲೆಗಳಿಗೂ ಇವರಿಗೆ ಪ್ರವೇಶವಿರಲಿಲ್ಲ.
- ಕನಿಷ್ಠ ಪ್ರಮಾಣದ ಮಾನವ ಹಕ್ಕುಗಳನ್ನು ಪಡೆಯದ ಈ ಸಮುದಾಯಗಳು ಉಸಿರುಗಟ್ಟಿ ಬದುಕಬೇಕಾದ ಪರಿಸ್ಥಿತಿ ಇತ್ತು.

- ಈ ವಿಷಯಗಳನ್ನು ಕೈಗೆತ್ತಿಕೊಂಡ ನಾರಾಯಣಗುರು ಅವರು ಧರ್ಮ ಪರಿಪಾಲನಾ ಯೋಗಂ ಮೂಲಕ ಸಾಮಾಜಿಕ ಪ್ರತಿರೋಧದ ಚಳುವಳಿಗಳನ್ನು ಪ್ರಾರಂಭಿಸಿದರು.

**18. ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.**

**ಉತ್ತರ : ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳು –**

- ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಆಗುತ್ತಿದ್ದ ಶೋಷಣೆಯನ್ನು ಹೋಗಲಾಡಿಸುವ ಉದ್ದೇಶದಿಂದ ಶ್ರೀ ನಾರಾಯಣಗುರು ಅವರು ಧರ್ಮಪರಿಪಾಲನಾ ಯೋಗಂ ಚಳುವಳಿಯನ್ನು ಆರಂಭಿಸಿದರು.
- ಮನುಷ್ಯ ಘನತೆಯಿಂದ ಬದುಕುವ ಸಮಾಜದ ನಿರ್ಮಾಣವೇ ಈ ಸಂಘಟನೆಯ ಉದ್ದೇಶವಾಗಿತ್ತು.
- ನಾರಾಯಣಗುರು ಅವರ ಪ್ರಮುಖ ಆಶಯ ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು.
- ಇದನ್ನು ಸಾಧಿಸಲು ಶಿಕ್ಷಣವೇ ಮಾರ್ಗವೆಂದು ಸಾರಿದರು.
- ಕೆಳ ಸಮುದಾಯಗಳ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳನ್ನು ಕಟ್ಟಿದರು.

**19. ಬ್ರಹ್ಮಣೇತರ ಚಳುವಳಿಯ ಮುಖ್ಯ ಉದ್ದೇಶಗಳೇನು?**

**ಉತ್ತರ : ಬ್ರಹ್ಮಣೇತರ ಚಳುವಳಿಯ ಮುಖ್ಯ ಉದ್ದೇಶಗಳು –**

- ಬಹುಸಂಖ್ಯಾತರಾಗಿದ್ದ ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ಇದ್ದ ಅವಕಾಶಗಳಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ತಮ್ಮ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟವನ್ನು ಆರಂಭಿಸಿದರು.
- ಬ್ರಾಹ್ಮಣೇತರ ಸಮುದಾಯಗಳು ತಮ್ಮ ಮೇಲೆ ಹೇರಲಾಗಿದ್ದ ಸಾಮಾಜಿಕ ನಿರ್ಬಂಧಗಳನ್ನು ವಿರೋಧಿಸತೊಡಗಿದರು. ಇದಕ್ಕೆ ಕಾರಣವಾದದ್ದು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ.
- ಇದರ ಜೊತೆಗೆ ಬ್ರಿಟಿಷರು 1870ರ ನಂತರ ತಂದ ಜನಗಣತಿ ವರದಿಗಳು, ಬ್ರಾಹ್ಮಣೇತರರಿಗೆ ತಮ್ಮ ಜನಸಂಖ್ಯೆಯ ಅರಿವನ್ನು ತಂದುಕೊಟ್ಟವು.
- ತಮಿಳುನಾಡಿನಲ್ಲಿ 1916ರಲ್ಲಿ ಪ್ರಾರಂಭವಾದ 'ಜಸ್ಟಿಸ್ ಪಾರ್ಟಿ'ಯು ಈ ಚಳುವಳಿಯನ್ನು ಮುನ್ನೆಡಿಸಿತು.

**20. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.**

**ಉತ್ತರ : ಪೆರಿಯಾರ್ ಚಳವಳಿಯ ಮುಖ್ಯಾಂಶಗಳು –**

- ಪೆರಿಯಾರ್‌ರವರು ವರ್ಣಾಶ್ರಮ ಧರ್ಮಕ್ಕೆ ಪರ್ಯಾಯವಾಗಿ ದ್ರಾವಿಡ ಚಳವಳಿಯೆಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳುವಳಿಯನ್ನು ರೂಪಿಸತೊಡಗಿದರು.
- ಆರ್ಯ, ಬ್ರಾಹ್ಮಣ ಎನ್ನುವ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಆಲೋಚನೆಗಳನ್ನು ಇಡಿಯಾಗಿ ತಿರಸ್ಕರಿಸಿದರು.
- ತಮಿಳು ಭಾಷೆಯನ್ನು ದ್ರಾವಿಡರ ಭಾಷೆಯೆಂದರು.
- ರಾಮಾಯಣ ಮಹಾಕಾವ್ಯದಲ್ಲಿ ಬರುವ ರಾವಣನನ್ನು ದ್ರಾವಿಡರ ನಾಯಕನೆಂದು ಬಿಂಬಿಸಿ, ರಾಮನನ್ನು ವೈದಿಕ ವರ್ಗದ ದೇವರೆಂದು ತಿರಸ್ಕರಿಸಿದರು.
- ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿಹಿಡಿದರು.
- 1924ರಲ್ಲಿ ಕೇರಳದ ವೈಕಂನಲ್ಲಿ ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶದ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದ್ದರು.

**21. ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.**

**ಉತ್ತರ : ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳು –**

- ಸತ್ಯಶೋಧಕ ಸಮಾಜವು ಬ್ರಾಹ್ಮಣೇತರ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡಲು ಪ್ರಯತ್ನಿಸಿತು.
- ಸೈದ್ಧಾಂತಿಕ ಹೋರಾಟವನ್ನು ಕಟ್ಟುವ ಹಿನ್ನೆಲೆಯಲ್ಲಿ 'ಗುಲಾಮಗಿರಿ' ಮತ್ತು ಶೇಟ್ಕಾರ್ಯಾಚಾ ಅಸೂದ್ ಎನ್ನುವ ಗ್ರಂಥ ರಚಿಸಿದರು.
- ಫುಲೆಯವರು ಶಾಲೆಗಳನ್ನು ಆರಂಭಿಸಿ ಶೂದ್ರರಿಗೆ ಮತ್ತು ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ನೀಡಿದರು.
- ಮಾಲಿ ಸಮುದಾಯಕ್ಕೆ ಸೇರಿದ ಫುಲೆಯವರು ತಮ್ಮ ಬಾವಿಯಲ್ಲಿ ಅಸ್ಪೃಶ್ಯರು ಮತ್ತು ಎಲ್ಲಾ ಜಾತಿಯವರಿಗೆ ನೀರು ಸೇದಿಕೊಳ್ಳಲು ಅವಕಾಶವನ್ನು ಕೊಟ್ಟರು.
- ಹೆಣ್ಣುಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿಸಲಾಯಿತು.
- ಸಮಾನತೆಯ ಆಶಯದ ತಳಹದಿಯ ಮೇಲೆ ಹೊಸ ಸಮಾಜವನ್ನು ನಿಮಿಸುವ ಪ್ರಯತ್ನಗಳಲ್ಲಿ ಫುಲೆ ದಂಪತಿಗಳ ಪ್ರಯತ್ನ ಮುಖ್ಯವಾದುದು.

## ಅಧ್ಯಾಯ – 6 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. 1857ರ ದಂಗೆಯನ್ನು ಭಾರತೀಯ ಇತಿಹಾಸಕಾರರು ________ ಎಂದು ಕರೆದರು. – **ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ.**
2. 1857ರ ದಂಗೆಯನ್ನು ಇಂಗ್ಲಿಷ್ ಇತಿಹಾಸಕಾರರು ____ ಎಂದು ಕರೆದಿದ್ದಾರೆ. – **ಸಿಪಾಯಿ ದಂಗೆ.**
3. 1857ರ ದಂಗೆಯ ಸಮಯದಲ್ಲಿ ಬ್ಯಾರಕ್‌ಪುರದಲ್ಲಿ ಬ್ರಿಟಿಷರ ಅಧಿಕಾರಿಯನ್ನು ಕೊಂದವನು __ **ಮಂಗಳಪಾಂಡೆ.**
4. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ____ ನ್ನು ವಶಕ್ಕೆ ಪಡೆದಳು – **ಗ್ವಾಲಿಯರ್.**
5. ಡಾಲ್ ಹೌಸಿಯು ಜಾರಿಗೆ ತಂದ ನೀತಿ ________– **ದತ್ತು ಮಕ್ಕಳಿಗೆ ಹಕ್ಕಿಲ್ಲ.**
6. ಇಂಗ್ಲೆಂಡಿನಲ್ಲಾದ _____ ಕ್ರಾಂತಿಯ ಪರಿಣಾಮವಾಗಿ ಭಾರತದ ಕರಕುಶಲತೆ ಮತ್ತು ದೇಶಿಯ ಗೃಹ ಕೈಗಾರಿಕೆಗಳು ಕ್ಷೀಣಿಸಿದವು. – **ಕೈಗಾರಿಕಾ ಕ್ರಾಂತಿ.**
7. ನಾನಾಸಾಹೇಬನ ಆಪ್ತ ಸಹಾಯಕ – **ತಾತ್ಯಾಟೋಪಿ.**
8. ಕಾನ್ಪುರದಲ್ಲಿ ದಂಗೆಯ ನಾಯಕತ್ವವನ್ನು ವಹಿಸಿಕೊಂಡವನು – **ನಾನಾಸಾಹೇಬ.**
9. 1857ರ ಸಂದರ್ಭದಲ್ಲಿ ಅತ್ಯಂತ ಶೂರ ಮಹಿಳೆ ಎಂದು ಕರೆಸಿಕೊಂಡವರು – **ಝಾನ್ಸಿ ರಾಣಿ ಲಕ್ಷ್ಮೀಬಾಯಿ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಭಾರತದಲ್ಲಿ ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಇಂಗ್ಲಿಷರು ಯಾವ ನೀತಿಗಳನ್ನು ಜಾರಿಗೆ ತಂದಿದ್ದರು?**

ಉತ್ತರ : ಭಾರತದಲ್ಲಿ ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಇಂಗ್ಲಿಷರು ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗಳನ್ನು ಜಾರಿಗೆ ತಂದಿದ್ದರು.

**2. 1857ರ ದಂಗೆಗೆ ಕಾರಣವಾದ ವದಂತಿ ಯಾವುದು?**

ಉತ್ತರ : ರಾಯಲ್ ಎನ್‌ಫೀಲ್ಡ್ ಎಂಬ ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ & ಹಸುವಿನ ಕೊಬ್ಬನ್ನು ಸವರಿದ್ದಾರೆ ಎಂಬ ವದಂತಿಯು 1857ರ ದಂಗೆಗೆ ಕಾರಣವಾಯಿತು.

**3. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯಿಂದ ತಮ್ಮ ಅಸ್ತಿತ್ವ ಕಳೆದುಕೊಂಡ ಪ್ರಮುಖ ಸಂಸ್ಥಾನಗಳು ಯಾವುವು?**

ಉತ್ತರ : ಸತಾರ, ಝಾನ್ಸಿ, ಉದಯಪುರ, ಜೈಪುರಗಳು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯಿಂದ ತಮ್ಮ ಅಸ್ತಿತ್ವ ಕಳೆದುಕೊಂಡ ಪ್ರಮುಖ ಸಂಸ್ಥಾನಗಳಾಗಿವೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳಾವುವು?**
**ಅಥವಾ**
**ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳಾವವು? ವಿಶ್ಲೇಷಿಸಿ.**

**ಉತ್ತರ : ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು.**
**ಅಥವಾ**
**ದಂಗೆಗೆ ರಾಜಕೀಯ ಕಾರಣಗಳು.–**

- ಬ್ರಿಟಿಷ್‌ರು ಜಾರಿಗೆ ತಂದಿದ್ದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾಗಿ ಹಲವು ದೇಶೀ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಳ್ಳಬೇಕಾಯಿತು.
- ಈ ನೀತಿಯಿಂದಾಗಿ ಸತಾರ, ಝಾನ್ಸಿ, ಜೈಪುರ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು.
- ಡಾಲ್‌ಹೌಸಿಯು ತಂಜಾವೂರು ಮತ್ತು ಕಾರ್ನಾಟಿಕ್ ನವಾಬರಿಗಿದ್ದ ರಾಜಪದವಿಯನ್ನು ರದ್ದುಪಡಿಸಿದನು.
- ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಅಧಿಕಾರದಿಂದ ಪದಚ್ಯುತಗೊಳಿಸಿದರು.
- ಇವರನ್ನು ಅವಲಂಬಿಸಿದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.
- ಇದು ಬ್ರಿಟಿಷರ ವಿರುದ್ಧದ 1857ರ ಪ್ರತಿಭಟನೆಗೆ ಪ್ರೇರಕವಾಯಿತು.

**2. ಕ್ರಿಶ 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಸಹ ಕಾರಣ ಸಮರ್ಥಿಸಿ.**

**ಉತ್ತರ : ಕ್ರಿಶ 1857ರ ದಂಗೆಗೆ ಆರ್ಥಿಕ ಕಾರಣಗಳು**

- ಇಂಗ್ಲಂಡಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದಾಗಿ ಭಾರತದ ಕರಕುಶಲತೆ ಮತ್ತು ದೇಶಿಯ ಗೃಹಕೈಗಾರಿಕೆಗಳು ಅವನತಿ ಹೊಂದಿದವು.
- ಭಾರತದಲ್ಲಿದ್ದ ಕರಕುಶಲಗಾರರು ನಿರುದ್ಯೋಗಿಗಳಾದರು.
- ವಿಶೇಷವಾಗಿ ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿ ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು.
- ಗೃಹ ಕೈಗಾರಿಕೆಗಳು ಇದೇ ಬಗೆಯ ತೀವ್ರ ಆರ್ಥಿಕ ನಷ್ಟ ಅನುಭವಿಸಿ ಶಿಥಿಲಗೊಂಡವು.
- ಭಾರತದ ವಸ್ತುಗಳನ್ನು ಇಂಗ್ಲೆಂಡಿನಲ್ಲಿ ಮಾರಟವಾಗದಂತೆ ಇಂಗ್ಲಿಷರು ದುಬಾರಿ ಸುಂಕವನ್ನು ಹೇರಿದರು.
- ಜಮಿನ್ದಾರಿ ಪದ್ದತಿ ಜಾರಿಗೆ ತಂದು ರೈತರನ್ನು ಶೋಷಣೆಗೆ ಒಳಪಡಿಸಿದರು.
- ಈ ಅಂಶಗಳು ಬ್ರಿಟಿಷರ ವಿರುದ್ಧದ 1857ರ ಪ್ರತಿಭಟನೆಗೆ ಕಾರಣವಾದವು.

**3. 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳಾವವು?**

**ಉತ್ತರ : 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳು –**

- ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು.
- ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು.
- ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯದಾನ ನೀಡುತ್ತಿದ್ದರು.
- ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಗಿದ್ದರಿಂದ ಇದು ಜನಸಾಮಾನ್ಯರಿಗೆ ಸಮಸ್ಯೆಯಾಯಿತು.
- ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**4. 1857ರ ದಂಗೆಗೆ ಸೈನಿಕ ಕಾರಣಗಳಾವುವು?**

**ಉತ್ತರ : 1857ರ ದಂಗೆಗೆ ಸೈನಿಕ ಕಾರಣಗಳು –**

- ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು.
- ಬ್ರಿಟಿಷ್ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

**5. 1857ರ ದಂಗೆಗೆ ತಕ್ಷಣದ ಕಾರಣವೇನು?**

**ಉತ್ತರ : 1857ರ ದಂಗೆಗೆ ತಕ್ಷಣದ ಕಾರಣ –**

- ಇಂಗ್ಲಿಷ್ ಸೇನೆಯಲ್ಲಿದ್ದ ಹೆಚ್ಚಿನ ಪ್ರಮಾಣದ ಭಾರತೀಯ ಸಿಪಾಯಿಗಳು ಒಂದಾಗಿ ಹೋರಾಡಿದರೆ ಇಂಗ್ಲಿಷರನ್ನು ಭಾರತದಿಂದ ಓಡಿಸಬಹುದು ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದರು.
- ಭಾರತದಲ್ಲಿನ ಸೈನಿಕರಿಗೆ ರಾಯಲ್ ಎನ್‌ಫೀಲ್ಡ್ ಎಂಬ ಹೊಸ ಬಂದೂಕುಗಳನ್ನು ನೀಡಲಾಗಿತ್ತು.
- ಈ ಬಂದೂಕುಗಳಿಗೆ ಬಳಸುತ್ತಿದ್ದ ತುಪಾಕಿಗಳಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತು.
- ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು.
- ಈ ವದಂತಿಯು ದಂಗೆಗೆ ತಕ್ಷಣದ ಕಾರಣವಾಯಿತು.

**6. ಬ್ಯಾರಕ್‌ಪುರ ಘಟನೆಯು 1857ರ ದಂಗೆಯಲ್ಲಿ ಮಹತ್ವದ ಪಾತ್ರವಹಿಸಿತು. ಈ ಹೇಳಿಕೆಯನ್ನು ವಿಶ್ಲೇಷಿಸಿ. ಅಥವಾ 1857ರ ದಂಗೆಯಲ್ಲಿ ಮಂಗಳಪಾಂಡೆಯ ಪಾತ್ರವೇನು?**

**ಉತ್ತರ :**

- ತುಪಾಕಿಗಳಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದಾರೆಂಬ ವದಂತಿಯು ಬ್ಯಾರಕಪುರದಲ್ಲಿನ ಸೈನಿಕ ಪಡೆಯಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಯಿತು.
- ಸೈನಿಕರಿಗೆ ತುಪಾಕಿಗಳನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಬ್ರಿಟಿಷರು ಆದೇಶಿಸಿದಾಗ ಇದನ್ನು ತಿರಸ್ಕರಿಸಿ ಮೇಲಾಧಿಕಾರಿಯ ವಿರುದ್ಧ ಬ್ಯಾರಕಪುರ ಸೈನಿಕರು ದಂಗೆಯೆದ್ದರು.
- ಇದೇ ಸಂದರ್ಭದಲ್ಲಿ ಮಂಗಲ ಪಾಂಡೆ ಎಂಬ ಸೈನಿಕನು ಬ್ರಿಟಿಷ್ ಸೈನ್ಯದ ಮೇಲಾಧಿಕಾರಿಯೊಬ್ಬನನ್ನು ಕೊಂದನು.
- ಇದರ ಪರಿಣಾಮವಾಗಿ ಮಂಗಲ ಪಾಂಡೆಯನ್ನು ಬಂಧಿಸಿ ವಿಚಾರಣೆಗೊಳಪಡಿಸಿ ಗಲ್ಲಿಗೇರಿಸಲಾಯಿತು.
- ಪರಿಣಾಮವಾಗಿ ದಂಗೆಯು ಎಲ್ಲೆಡೆ ತೀವ್ರವಾಗಿ ಹಬ್ಬಿತು.

**7. 1857ರ ದಂಗೆಯು ನಡೆದ ರೀತಿಯನ್ನು ವಿವರಿಸಿ.**

**ಉತ್ತರ : 1857ರ ದಂಗೆ ಹರಡುವಿಕೆ –**

- ಮೀರತ್ ಸೇನಾನೆಲೆಯಲ್ಲಿ ಇಂಗ್ಲಿಷರು ಭಾರತೀಯ ಸೈನಿಕರಿಗೆ ತುಪಾಕಿಗಳನ್ನು ಬಳಸಲು ಆದೇಶಿದಾಗ ಭಾರತೀಯ ಸೈನಿಕರು ಅದನ್ನು ನಿರಾಕರಿಸಿ ದಂಗೆಯೆದ್ದರು.
- ಸೈನಿಕರು ಸೆರೆಮನೆಗೆ ನುಗ್ಗಿ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು.
- ಮೀರತ್‌ನ ಸೈನಿಕರು ಕೆಂಪುಕೋಟೆಗೆ ನುಗ್ಗಿ ಮೊಘಲ್ ದೊರೆ ಎರಡನೇ ಬಹದ್ದೂರ್ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು.
- ಪ್ರತಿಭಟನೆಯು ತೀವ್ರ ಸ್ವರೂಪ ತಾಳಿ ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು.
- ಕಾನ್ಪುರದಲ್ಲಿ ನಾನಾ ಸಾಹೇಬನು ಸಿಡಿದೆದ್ದನು. ಈತನಿಗೆ ತಾತ್ಯಾ ಟೊಪೆಯ ಸಹಾಯಕನಾಗಿದ್ದನು.
- ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಕೆರಳಿದ ಝಾನ್ಸಿಯಲ್ಲಿ ರಾಣಿ ಲಕ್ಷ್ಮಿಬಾಯಿಯು ಇಂಗ್ಲಿಷರ ವಿರುದ್ಧ ಯುದ್ಧ ಸಾರಿದಳು.
- ಆದರೆ ಈ ಎಲ್ಲಾ ಹೋರಾಟವನ್ನು ಬ್ರಿಟಿಷರು ದೇಶಿಯ ಅರಸರ ಸಹಾಯದಿಂದ ಹತ್ತಿಕ್ಕಿದರು.

**8. 1857ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ. ಅಥವಾ 1857ರ ದಂಗೆಯು ಬ್ರಿಟಿಷರನ್ನು ಭಾರತದಿಂದ ಹೊರ ಹಾಕುವಲ್ಲಿ ವಿಫಲವಾಯಿತು ಏಕೆ?**

**ಉತ್ತರ : 1857 ರ ದಂಗೆಯ ವೈಫಲ್ಯಕ್ಕೆ ಕಾರಣಗಳು**

- ಇದು ದೇಶದ ಬಿಡುಗಡೆಗಾಗಿ ನಡೆದಿದ್ದಕ್ಕಿಂತ ರಾಜರ/ರಾಣಿಯರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು.
- ಇದು ಯೋಜಿತ ದಂಗೆಯಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು.
- ಬ್ರಿಟಿಷ್ ಸೈನಿಕರಲ್ಲಿನ ಒಗ್ಗಟ್ಟು ಮತ್ತು ಭಾರತೀಯ ಸೈನಿಕರಲ್ಲಿದ್ದ ಭಿನ್ನತೆಯು ದಂಗೆಯ ವಿಫಲತೆಗೆ ಕಾರಣವಾಯಿತು.
- ದಂಗೆಗೆ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು.
- ಭಾರತೀಯರಲ್ಲಿ ಯುದ್ಧ ತಂತ್ರ, ಸೈನಿಕ ಪರಿಣತಿ, ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತು ಮುಂತಾದವುಗಳ ಕೊರತೆ ಇತ್ತು.
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.
- ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆಯಿಂದಾಗಿ ಸಿಪಾಯಿಗಳಿಗೆ ಬೆಂಬಲ ಸಿಗಲಿಲ್ಲ.
- ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

**9. 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವವು? ಅಥವಾ 1857ರ ದಂಗೆಯ ಪರಿಣಾಮಗಳಾವವು?**

**ಉತ್ತರ : 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳು ಅಥವಾ 1857ರ ದಂಗೆಯ ಪರಿಣಾಮಗಳು**

- ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತವು ವರ್ಗಾವಣೆಗೊಂಡಿತು.
- ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
- ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
- ಕಾನೂನಿನ ಮುಂದೆ ಸಮಾನತೆ.
- ಧಾರ್ಮಿಕ ಸಹಿಷ್ಣುತೆಯೊಂದಿಗೆ ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.
- ಭಾರತೀಯರ ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ನಾವು ಶಾಂತಿಯಿಂದ ಆಳ್ವಿಕೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು.

## ಅಧ್ಯಾಯ – 7 ಸ್ವಾತಂತ್ರ್ಯ ಹೋರಾಟ

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು.**

1. ರಾಷ್ಟ್ರೀಯತೆ ಎಂಬ ಪರಿಕಲ್ಪನೆ ________ ಶತಮಾನದ ಕೊನೆಯ ಭಾಗದಲ್ಲಿ ತೀವ್ರವಾಗಿ ಬೆಳೆಯತೊಡಗಿತು. – **19ನೇ ಶತಮಾನ.**

2. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧ್ಯಕ್ಷರು – **W C ಬ್ಯಾನರ್ಜಿ.**

3. ಸಾಂಪ್ರದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ 20 ವರ್ಷಗಳನ್ನು ________ ಯುಗ ಎನ್ನುತ್ತಾರೆ. – **ಮಂದಗಾಮಿಗಳ ಯುಗ.**

4. ಮಂದಗಾಮಿಗಳ ಕಾಲವನ್ನು ____ ಕಾಲವೆಂದು ಹೇಳಲಾಗಿದೆ. – **ಉದಾರ ರಾಷ್ಟ್ರವಾದದ ಕಾಲ.**

5. ________ ರಿಂದ ________ ರ ನಡುವಿನ ಕಾಲಘಟ್ಟವನ್ನು ಮಂದಗಾಮಿಗಳ ಯುಗ ಎಂದು ಚರಿತ್ರೆಕಾರರು ಗುರುತಿಸಿದ್ದಾರೆ. – **1885ರಿಂದ 1905ರ ಕಾಲಘಟ್ಟ.**

6. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ಪ್ರತಿಪಾದಿಸಿದವರು – **ದಾದಾಬಾಯಿ ನವರೋಜಿಯವರು.**

7. ತೀವ್ರವಾದಿಗಳು ಮಂದಗಾಮಿಗಳನ್ನು 'ರಾಜಕೀಯ ಭಿಕ್ಷುಕರು' ಎಂದು ಕರೆಯಲು ಕಾರಣ – **ಮಂದಗಾಮಿಗಳು ಬ್ರಿಟಿಷರ ಬಗೆಗೆ ಮೃದುಧೋರಣೆ ಹೊಂದಿದ್ದರಿಂದ.**

8. ಬಂಗಾಳದ ವಿಭಜನೆಯನ್ನು ವೈಸರಾಯ್ ________ ನು ______ ರಲ್ಲಿ ಮಾಡಿದನು. – **ಲಾರ್ಡ ಕರ್ಜನ್, 1905.**

9. ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು ______ ರಲ್ಲಿ ಬ್ರಿಟಿಷ್ ಸರ್ಕಾರ ಹಿಂಪಡೆಯಿತು. – **1911.**

10. ಮುಸ್ಲಿಂ ಲೀಗ್ ಹುಟ್ಟಿಕೊಂಡದ್ದು ______ ರಲ್ಲಿ – **1906.**

11. ತಿಲಕರು ಜೈಲಿನಲ್ಲಿ ರಚಿಸಿದ ಗ್ರಂಥ – ಗೀತಾರಹಸ್ಯ.

12. ಅಭಿನವ ಭಾರತ ಎಂಬ ರಹಸ್ಯ ಸಂಘಟನೆಯನ್ನು ______ ಗಳು ಹೊಂದಿದ್ದರು. – **ಕ್ರಾಂತಿಕಾರಿಗಳು.**

13. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕರು – **ಎ.ಓ.ಹ್ಯೂಮ್.**

14. 1905ರಲ್ಲಿ ಬಂಗಾಳವನ್ನು ವಿಭಜಿಸಲು ಕಾರಣ – **ಹಿಂದೂ ಮುಸಲ್ಮಾನರನ್ನು ಬೇರ್ಪಡಿಸುವುದು.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಭಾರತೀಯ ರಾಷ್ಟ್ರೀಯ ಕಾಂಗ್ಲೆಸ್‌ನ ಸ್ಥಾಪನೆಗೆ ಮೊದಲು ಇದ್ದ ಸಂಘಟನೆಗಳು ಯಾವುವು?**

ಉತ್ತರ : ಭಾರತೀಯ ರಾಷ್ಟ್ರೀಯ ಕಾಂಗ್ಲೆಸ್‌ನ ಸ್ಥಾಪನೆಗೆ ಮೊದಲು ರಾಷ್ಟ್ರೀಯ ದೃಷ್ಟಿಕೋನವನ್ನು ಹೊಂದಿದ್ದ ಅನೇಕ ಹೊಸ ಸಂಘಟನೆಗಳು ವಿದ್ಯಾವಂತ ಭಾರತೀಯರ ನೇತೃತ್ವದಲ್ಲಿ ಪ್ರಾರಂಭವಾದವು. 'ದ ಹಿಂದೂ ಮೇಳ', 'ದ ಈಸ್ಟ್ ಇಂಡಿಯನ್ ಅಸೋಸಿಯೇಷನ್', 'ಪೂನಾ ಸಾರ್ವಜನಿಕ ಸಭಾ' ಮತ್ತು ' ದ ಇಂಡಿಯನ್ನ ಅಸಿಸಿಯೇಷನ್ ಮುಂತಾದವು ಪ್ರಮುಖವಾದವು.

**2. ವೈಸರಾಯ್ ಲಾರ್ಡ ಲಿಟ್ಟನ್ ಪತ್ರಿಕಾ ಸ್ವಾತಂತ್ರ್ಯ ಮೊಕಟುಗೊಳಿಸಲು ಯಾವ ಕಾಯ್ದೆ ಜಾರಿಗೊಳಿಸಿದನು?**

ಉತ್ತರ : ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ವರ್ನಾಕ್ಯೂಲರ್ ಪ್ರೆಸ್ ಕಾಯ್ದೆಯನ್ನು ವೈಸರಾಯ್ ಲಾರ್ಡ ಲಿಟ್ಟನ್ ಜಾರಿಗೊಳಿಸಿದನು.

**3. ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಎಲ್ಲಿ, ಯಾವಾಗ ಹುಟ್ಟಿಕೊಂಡಿತು?**

ಉತ್ತರ : ಭಾರತದ ರಾಜಕೀಯ ದಿಕ್ಕನ್ನು ಬದಲಿಸಿದ 'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್' ಡಿಸೆಂಬರ್ 1885ರಲ್ಲಿ ಬಾಂಬೆ ನಗರದಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಹುಟ್ಟಿಕೊಂಡಿತು.

**4. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಮೂಲ ಕಾರಣಕರ್ತರು ಯಾರು?**

ಉತ್ತರ : ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಘಟನೆಯ ಹುಟ್ಟಿನ ಹಿನ್ನೆಲೆಯಲ್ಲಿ ಅವಿರತ ಪ್ರಯತ್ನ ನಡೆಸಿದವರು ನಿವೃತ್ತ ಬ್ರಿಟಿಷ್ ನಾಗರಿಕ ಸೇನಾಧಿಕಾರಿ ಎ.ಓ.ಹ್ಯೂಮ್‌ರವರು,

**5. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯ ಉದ್ದೇಶವೇನು?**

ಉತ್ತರ : ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿ ಬೆಳೆಸುವುದು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಉದ್ದೇಶವಾಗಿದೆ.

**6. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯರನ್ನು ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂದು ಹೇಗೆ ಗುರುತಿಸಲಾಗುತ್ತದೆ?**

ಉತ್ತರ : ಕಾರ್ಯತಂತ್ರ, ನಂಬಿಕೆಗಳು ಸೈದ್ಧಾಂತಿಕತೆ ಮತ್ತು ಹೋರಾಟದ ಮಾದರಿಗಳಿಂದಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯರನ್ನು ಮಂದಗಾಮಿಗಳು ಮತ್ತು ತೀವ್ರಗಾಮಿಗಳೆಂದು ಗುರುತಿಸುತ್ತಾರೆ.

**7. ಮಂದಗಾಮಿ ನಾಯಕರುಗಳು ಯಾರು ಯಾರು?**

ಉತ್ತರ : ಡಬ್ಲ್ಯು ಸಿ ಬ್ಯಾನರ್ಜಿ, ಎಂ.ಜಿ.ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ ಇವರುಗಳನ್ನು ಮಂದಗಾಮಿ ನಾಯಕರುಗಳು ಎಂದು ಕರೆಯುತ್ತಾರೆ.

**8. ತೀವ್ರವಾದಿಗಳು ಎಂದರೆ ಯಾರು? ತೀವ್ರವಾದಿಗಳನ್ನು ಪಟ್ಟಿ ಮಾಡಿ.**

ಉತ್ತರ : ಮಂದಗಾಮಿಗಳ ಮೃದುಧೋರಣೆಯನ್ನು ಟೀಕೆ ಮಾಡುತ್ತಾ, ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಗುರುತಿಸಲಾಗಿದೆ. ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲ ಲಜಪತರಾಯ್ ಮತ್ತು ಬಾಲಗಂಗಾಧರ ತಿಲಕ್ ಮುಂತಾದವರು ಈ ಬಣದ ಪ್ರಮುಖರಾಗಿದ್ದರು.

**9. ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಲಕರ ಘೋಷಾವಾಕ್ಯವೇನು?**

ಉತ್ತರ : ಸ್ವಾತಂತ್ರ್ಯ ಹೋರಾಟದಲ್ಲಿ ಬಾಲಗಂಗಾಧರ ತಿಲಕರು 'ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು. ಅದನ್ನು ಪಡೆದೇ ತಿರುವೆ' ಎಂದು ಘೋಷಿಸುವ ಮೂಲಕ ಬಹುಸಂಖ್ಯಾತ ಭಾರತೀಯರ ಮನದಾಳದ ಭಾವನೆಯನ್ನು ಹೊರಹಾಕಿದರು.

**10. ತಿಲಕರು ಆರಂಭಿಸಿದ ಪತ್ರಿಕೆಗಳು ಯಾವುವು?**

ಉತ್ತರ : ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಬಳಸಿಕೊಂಡರು.

**11. ಇಂಗ್ಲಂಡಿನಲ್ಲಿ ಹುಟ್ಟಿಕೊಂಡ ಗುಪ್ತ ಸಂಘಟನೆಗಳು ಯಾವುವು?**

ಉತ್ತರ : ಇಂಗ್ಲೆಂಡಿನಲ್ಲಿ 'ಲೋಟಸ್' ಮತ್ತು 'ಡಾಗರ್' ಎನ್ನುವ ಗುಪ್ತ ಸಂಘಟನೆ ಹುಟ್ಟಿಕೊಂಡವು.

**12. ಭಾರತದಲ್ಲಿದ್ದ ಪ್ರಮುಖ ಕ್ರಾಂತಿಕಾರಿ ಸಂಘಟನೆಗಳು ಯಾವುವು?**

ಉತ್ತರ : ಭಾರತದಲ್ಲಿದ್ದ 'ಅನುಶೀಲನ ಸಮಿತಿ' ಮತ್ತು ಅಭಿನವ ಭಾರತ' ಪ್ರಮುಖ ಕ್ರಾಂತಿಕಾರಿ ಸಂಘಟನೆಗಳಾಗಿವೆ.

**13. ಸಂಪತ್ತಿನ ಸೋರಿಕೆ ಸಿದ್ಧಾಂತ ಎಂದರೇನು?**

ಉತ್ತರ : ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ಅವರು ವಿವರಿಸಿದರು. ದಾದಾಬಾಯಿ ನವರೋಜಿಯವರು ಅದನ್ನು 'ಸಂಪತ್ತಿನ ಸೋರುವಿಕೆ ಸಿದ್ಧಾಂತ' ಎಂದು ಕರೆದರು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತೀಯರಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಭಾರತ ರಾಷ್ಟ್ರೀಯ ಕಾಂಗೆಸ್ ಹೇಗೆ ಶ್ರಮಿಸಿತು?**

**ಉತ್ತರ :**

- ಆರಂಭಿಕ ಸಭೆಯಲ್ಲಿಯೇ ಕಾಂಗ್ರೆಸ್ ತನ್ನ ಪ್ರಮುಖ ಉದ್ದೇಶ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿ ಬೆಳೆಸುವುದು ಎಂದು ಸಾರಿತು.
- ಸಾಮಾಜಿಕವಾಗಿ ಮತ್ತು ಸಾಸ್ಕೃತಿಕವಾಗಿ ಬಹುಮುಖಿ ಧಾರೆಗಳನ್ನು ಹೊಂದಿದ್ದ ಭಾರತೀಯರಲ್ಲಿ ಅವುಗಳಲ್ಲಿ ಐಕ್ಯತೆಯನ್ನು ಸಾಧಿಸಲು ಹಂತಹಂತವಾಗಿ ಪ್ರಯತ್ನಿಸಿತು.
- ದೇಶಿ ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸಿ ಆ ಮೂಲಕ ರಾಜಕೀಯ ಸಮಸ್ಯೆಗಳ ಚರ್ಚೆ ಆರಂಭಿಸಿತು.
- ಇದರಿಂದಾಗಿ ರಾಜಕೀಯ ಸಮಸ್ಯೆಗಳು ಮತ್ತು ವಿಚಾರಗಳು ಜನರ ಮನಮುಟ್ಟಿದವು.
- ಭಾರತೀಯ ಕಾಂಗ್ರೆಸ್ ರಾಷ್ಟ್ರೀಯ ವಿಚಾರದಾರೆಗಳಿಗೆ ಸಂಬಂಧಪಟ್ಟಂತೆ ರಚನಾತ್ಮಕವಾದ ಕಾರ್ಯತಂತ್ರಗಳನ್ನು ರೂಪಿಸಿತು.

**2. ಮಂದಗಾಮಿಗಳ ಕಾರ್ಯತಂತ್ರವನ್ನು ವಿವರಿಸಿ.**

**ಉತ್ತರ : ಮಂದಗಾಮಿಗಳ ಕಾರ್ಯತಂತ್ರ –**

- ಮಂದಗಾಮಿಗಳು ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು.
- ಸಾಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು.
- ಮಂದಗಾಮಿಗಳು ಜನರಲ್ಲಿ ರಾಜಕೀಯ ಎಚ್ಚರವನ್ನು ತರುವ ಪ್ರಯತ್ನ ಮಾಡಿದರು.
- ಇವರು ಭಾರತೀಯರಿಗೆ ಸಲ್ಲಬೇಕಾದ ನ್ಯಾಯವನ್ನು ಕುರಿತು ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು.

**3. ಮಂದಗಾಮಿಗಳು ಬ್ರಿಟಿಷ್ ಸರ್ಕಾರದ ಮುಂದಿಟ್ಟ ಬೇಡಿಕೆಗಳು ಯಾವುವು?**

**ಉತ್ತರ : ಮಂದಗಾಮಿಗಳು ಬ್ರಿಟಿಷ್ ಸರ್ಕಾರದ ಮುಂದಿಟ್ಟ ಬೇಡಿಕೆಗಳು –**

- ದೇಶದ ಕೈಗಾರಿಕೆಗಳ ಅಭಿವೃದ್ಧಿ,
- ಸೈನಿಕ ವೆಚ್ಚ ಕಡಿಮೆ ಮಾಡುವುದು,
- ಉತ್ತಮ ಶಿಕ್ಷಣ ಕೊಡುವುದು,

➢ಬಡತನ ಬಗ್ಗೆ ಅಧ್ಯಯನ ಮತ್ತು ಪರಿಹಾರ ಕಾರ್ಯಕ್ರಮಗಳನ್ನು ಬ್ರಿಟಿಷ್ ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸುವುದು.

**4. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ.**

**ಉತ್ತರ : ಸಂಪತ್ತಿನ ಸೋರಿಕೆ ಸಿದ್ಧಾಂತ –**

➢ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಿಂದಾದ ದುಷ್ಪರಿಣಾಮಗಳನ್ನು ಮೊಟ್ಟಮೊದಲ ಬಾರಿಗೆ ಮಂದಗಾಮಿಗಳು ಕೂಲಂಕುಷವಾಗಿ ಅವಲೋಕಿಸುವ ಪ್ರಯತ್ನ ಮಾಡಿದರು.

➢ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ಅವರು ವಿವರಿಸಿದರು.

➢ದಾದಾಬಾಯಿ ನವರೋಜಿಯವರು ಅದನ್ನು 'ಸಂಪತ್ತಿನ ಸೋರುವಿಕೆ ಸಿದ್ಧಾಂತ' ಎಂದು ಕರೆದರು.

➢ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿಯಲು ಕಾರಣವಾಯಿತೆಂದು ಅವರು ಪ್ರತಿಪಾದಿಸಿದರು.

➢ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ, ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾದ ಹಿನ್ನೆಲೆಯಲ್ಲಿ ಅಪಾರವಾದ ಸಂಪತ್ತು ಬ್ರಿಟನ್ನಿಗೆ ಪರೋಕ್ಷವಾಗಿ ಹರಿದು ಹೋಗುತ್ತಿತ್ತು ಎಂಬುದನ್ನು ಅವರು ವಿವರವಾಗಿ ವಿಶ್ಲೇಷಿಸಿ ಜನರ ಮುಂದಿಟ್ಟರು.

➢ದಾದಾಬಾಯಿ ನವರೋಜಿಯವರಂತೆ ಆರ್.ಸಿ. ದತ್ ಅವರೂ ತಮ್ಮ ಕೃತಿಗಳ ಮೂಲಕ ಭಾರತದ ಸಂಪತ್ತನ್ನು ಬ್ರಿಟಿಷರು ಬರಿದು ಮಾಡಿದ ರೀತಿಯನ್ನು ವಿವರಿಸಿದರು.

**5. ಬಂಗಾಳದ ವಿಭಜನೆಗೆ ಕಾರಣಗಳನ್ನು ತಿಳಿಸಿ. ಅಥವಾ ಬಂಗಾಳದ ವಿಭಜನೆಯ ಮೂಲಕ ಬ್ರಿಟಿಷರು ಸ್ವಾತಂತ್ರ್ಯದ ಹೋರಾಟವನ್ನು ಕುಗ್ಗಿಸಲು ಹೇಗೆ ಪ್ರಯತ್ನಿಸಿದರು?**

**ಉತ್ತರ : ಬಂಗಾಳದ ವಿಭಜನೆಗೆ ಕಾರಣಗಳು –**

➢ಬಂಗಾಳವು ತೀವ್ರ ಸ್ವರೂಪದ ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು.

➢ಇದನ್ನು ಹತ್ತಿಕ್ಕಲು ವೈಸರಾಯ್ ಲಾರ್ಡ್ ಕರ್ಜನ್ನನು ಆಡಳಿತಾತ್ಮಕ ನೆಪವನ್ನು ಮುಂದಿಟ್ಟುಕೊಂಡು ಬಂಗಾಳ ವಿಭಜನೆಯ ಯೋಜನೆಯನ್ನು ರೂಪಿಸಿದನು.

➢ಪೂರ್ವ ಬಂಗಾಳದಲ್ಲಿ ಮುಸ್ಲಿಂರು ಹಾಗೂ ಪಶ್ಚಿಮ ಬಂಗಾಳದಲ್ಲಿ ಹಿಂದೂಗಳು ಹೆಚ್ಚಾಗಿದ್ದರು.

➢ಜನಗಣತಿಯ ವರದಿಯಿಂದ ಈ ಅಂಶವನ್ನು ತಿಳಿದ ಬ್ರಿಟಿಷ್ ಸರ್ಕಾರವು ಈ ಪ್ರಾಂತ್ಯದ ಭೌಗೋಳಿಕ ವೈಶಾಲ್ಯತೆಯನ್ನು ನೆಪವಾಗಿಸಿಕೊಂಡು 1905ರಲ್ಲಿ ವಿಭಜಿಸಿದರು.

➢ಹೀಗೆ ಸಮುದಾಯಗಳ ನಡುವೆ ಕಂದಕವನ್ನುಂಟು ಮಾಡಿ ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕುಗ್ಗಿಸುವ ಸಂಚನ್ನು ರೂಪಿಸಿದರು.

**6. ಬಂಗಾಳದ ವಿಭಜನೆಯಿಂದಾದ ಪರಿಣಾಮಗಳನ್ನು ತಿಳಿಸಿ. ಅಥವಾ ಬಂಗಾಳದ ವಿಭಜನೆಯನ್ನು ವಿರೋಧಿಸಲು ತೀವ್ರವಾದಿಗಳು ಅನುಸರಿಸಿದ ಕಾರ್ಯತಂತ್ರವೇನು? ಬಂಗಾಳದ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?**

**ಉತ್ತರ : ಬಂಗಾಳ ವಿಭಜನೆಯ ಪರಿಣಾಮಗಳು –**
**ಬ್ರಿಟಿಷರು ಬಂಗಾಳದ ವಿಭಜನೆಯನ್ನು ಹಿಂಪಡೆಯಲು ಕಾರಣಗಳು.**

➢ಬ್ರಿಟಿಷರ ಒಡೆದು ಆಳುವ ನೀತಿಯ ಪ್ರತೀಕವಾಗಿದ್ದ 1905ರ ಬಂಗಾಳದ ವಿಭಜನೆಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿತು.

➢ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಸಾಧಿಸಲು ರಕ್ಷಾಬಂಧನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

➢ಬಂಗಾಳದ ವಿಭಜನೆಯ ವಿರುದ್ಧ ದೇಶಾದ್ಯಂತ ಪ್ರತಿರೋಧಗಳು ವ್ಯಕ್ತವಾದವು.

➢ಪ್ರತಿರೋಧದ ಒಂದು ಬಗೆಯಾಗಿ ಸ್ವದೇಶಿ ಚಳುವಳಿಯನ್ನು ತೀವ್ರವಾದಿಗಳು ಪ್ರಾರಂಭಿಸಿದರು.

➢ತೀವ್ರವಾದಿಗಳು ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನಕ್ಕೆ ಕರೆ ನೀಡಿದರು.

➢ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು 1911ರಲ್ಲಿ ಬ್ರಿಟಿಷ್ ಸರ್ಕಾರವು ಹಿಂಪಡೆಯಿತು.

**7. ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.**

**ಉತ್ತರ : ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲ ಗಂಗಾಧರ ತಿಲಕರ ಪಾತ್ರ. –**

➢ತಿಲಕರು 'ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ನಾನು ಪಡೆದೇ ತೀರುತ್ತೇನೆ' ಎಂದು ಘೋಷಿಸಿದರು.

➢ಪೂರ್ಣ ಸ್ವರಾಜ್ಯವನ್ನು ಪಡೆಯುವುದು ತೀವ್ರವಾದಿಗಳ ಗುರಿಯಾಗಿತ್ತು.

➢ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು.

➢ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜುಗೊಳಿಸಿದರು.

➢ಗಣೇಶ, ಶಿವಾಜಿ, ದುರ್ಗಾ ಮುಂತಾದ ಉತ್ಸವಗಳ ಮೂಲಕ ಜನರನ್ನು ಹೋರಾಟಕ್ಕೆ ಪ್ರೇರೇಪಿಸಿದರು.

➢ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಬಳಸಿಕೊಂಡರು.

➢ತಿಲಕರ ಕ್ರಾಂತಿಕಾರಿ ಬರವಣಿಗೆಗಳು ಜನರನ್ನು ಕೆರಳಿಸಿದವು. ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸರಕಾರವು ತಿಲಕರನ್ನು ಬಂಧಿಸಿತು.

➢ಜೈಲಿನಲ್ಲಿಯ ಈ ಸಂದರ್ಭವನ್ನು ಸದುಪಯೋಗಪಡಿಸಿಕೊಂಡ ತಿಲಕರು 'ಗೀತಾ ರಹಸ್ಯ' ಗ್ರಂಥವನ್ನು ರಚಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟರು.

**8. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಕ್ರಾಂತಿಕಾರಿಗಳು ಅನುಸರಿಸಿದ ಮಾರ್ಗ ಯಾವುದು?**

ಉತ್ತರ : ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳೆಂದರೆ – ವಿ.ಡಿ.ಸಾವರ್ಕರ್, ಅರಬಿಂದೋ ಘೋಷ್, ಅಶ್ವಿನಿಕುಮಾರದತ್ತ, ಶ್ಯಾಮಾಜಿ ಕೃಷ್ಣವರ್ಮ, ರಾಸ್ ಬಿಹಾರಿ ಬೋಸ್, ಮ್ಯಾಡಮ್ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಭಗತ್‌ಸಿಂಗ್, ಅಶ್ವಖುಲ್ಲಾಖಾನ್, ಚಂದ್ರಶೇಖರ್ ಅಜಾದ್, ಜತಿನ್ ದಾಸ್ ಇವರುಗಳು ಕ್ರಾಂತಿಕಾರಿಗಳಲ್ಲಿ ಪ್ರಮುಖರಾಗಿದ್ದರು.

**9. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಕ್ರಾಂತಿಕಾರಿಗಳ ಪಾತ್ರವನ್ನು ವಿವರಿಸಿ.**

**ಉತ್ತರ : ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಕ್ರಾಂತಿಕಾರಿಗಳ ಪಾತ್ರ –**

➢ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ಕ್ರಾಂತಿಕಾರಿಗಳು ನಂಬಿದ್ದರು.

➢ಇವರುಗಳು ರಹಸ್ಯಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು.

➢ಇಂಗ್ಲೆಂಡಿನಲ್ಲಿ 'ಲೋಟಸ್' ಮತ್ತು 'ಡಾಗರ್' ಎನ್ನುವ ಗುಪ್ತ ಸಂಘಟನೆ ಹುಟ್ಟಿತು.

➢ಅದರ ಮೂಲಕ ಅಲ್ಲಿದ್ದ ಅರಬಿಂದೋ ಘೋಷ್ ಮುಂತಾದ ಕ್ರಾಂತಿಕಾರಿಗಳು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಒತ್ತಾಸೆಯನ್ನು ನೀಡಿದರು.

➢ಭಾರತದಲ್ಲಿದ್ದ 'ಅನುಶೀಲನ ಸಮಿತಿ' ಮತ್ತು 'ಅಭಿನವ ಭಾರತ' ರಹಸ್ಯ ಸಂಘಟನೆಗಳು ಮುಖ್ಯವಾದವು.

➢ಇವರು ತಮ್ಮ ಸಾಧನೆಗಾಗಿ ಬಾಂಬುಗಳು ಮತ್ತು ಬಂದೂಕುಗಳನ್ನು ಪ್ರಯೋಗ ಮಾಡಿದರು.

➢ಸರ್ಕಾರವು ಇವರನ್ನು ಹತ್ತಿಕ್ಕಲು ಸರ್ವ ಪ್ರಯತ್ನವನ್ನು ಮಾಡಿತು.

➢ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಅವರುಗಳನ್ನು ತಪ್ಪಿತಸ್ಥರನ್ನಾಗಿ ಗುರುತಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಈ ಸಂದರ್ಭದಲ್ಲಿ ಅನೇಕರನ್ನು ಗಲ್ಲಿಗೇರಿಸಲಾಯಿತು.

## ಅಧ್ಯಾಯ – 8

## ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

ಪ್ರಶ್ನೆ 1] ಬಹು ಆಯ್ಕೆ ಪ್ರಶ್ನೆಗಳು

1. ಮಹಾತ್ಮ ಗಾಂಧಿಯವರು ರಾಷ್ಟ್ರೀಯ ಹೋರಾಟದಲ್ಲಿ ______ ವಿಧಾನವನ್ನು ರೂಪಿಸಿದರು. –
**ಗಾಂಧಿಯನ್ ಮಾದರಿ ಅಥವಾ ಗಾಂಧಿಯನ್ ವಿಧಾನ.**

2. ಮಹಾತ್ಮ ಗಾಂಧೀಜಿಯವರ ರಾಜಕೀಯ ಗುರು –
**ಗೋಪಾಲ ಕೃಷ್ಣ ಗೋಖಲೆ.**

3. ಗಾಂಧೀಜಿಯವರು 1917ರಲ್ಲಿ ಚಂಪಾರಣ್ಯ ಚಳುವಳಿಯನ್ನು ಆರಂಭಿಸಲು ಕಾರಣ – **ನೀಲಿ ಬೆಳೆಯಿಂದ ಸಂತ್ರಸ್ತರಾದ ರೈತರಿಗೆ ನ್ಯಾಯ ಒದಗಿಸಲು.**

4. ಬ್ರಿಟಿಷ್ ಸರಕಾರವು ರೌಲೆಟ್ ಕಾಯ್ದೆಯನ್ನು ____ ರಲ್ಲಿ ಜಾರಿಗೆ ತಂದಿತು. – **ಮಾರ್ಚ 1919.**

5. ಗಾಂಧೀಜಿಯವರು 'ಸತ್ಯಾಗ್ರಹ ಸಭಾ' ಎನ್ನುವ ಸಂಸ್ಥೆಯನ್ನು ಸ್ಥಾಪಿಸಲು ಕಾರಣ – **ರೌಲೆಟ್ ಕಾಯ್ದೆಯನ್ನು ವಿರೋಧಿಸುವ ಸಲುವಾಗಿ.**

6. ಗಾಂಧೀಜಿಯವರು ರೌಲೆಟ್ ಕಾಯ್ದೆಯ ವಿರುದ್ಧ ____ ರಂದು ಬೃಹತ್ ಹರತಾಳಕ್ಕೆ ಕರೆ ನೀಡಿದರು. – **1919 ಎಪ್ರಿಲ್ 06ರಂದು.**

7. ರೌಲೆಟ್ ಕಾಯ್ದೆಯನ್ನು ವಿರೋಧಿಸಿ ಪಂಜಾಬನ ____ ನಲ್ಲಿ ____ ರಂದು ಪ್ರತಿಭಟನಾ ಸಭೆ ಸೇರಿದರು. – **ಅಮೃತಸರದ ಜಲಿಯನ್ ವಾಲಾಬಾಗ್, 1919 ಎಪ್ರಿಲ್ 13.**

8. ಜಲಿಯನ್ ವಾಲಾಬಾಗ್‌ನಲ್ಲಿ ಪ್ರತಿಭಟನಾಕಾರರ ಮೇಲೆ ಗುಂಡಿನ ದಾಳಿ ಮಾಡಿದ ಬ್ರಿಟಿಷ್ ಸೈನ್ಯಾಧಿಕಾರಿ – **ಜನರಲ್ ಡಯರ್.**

9. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ರೂವಾರಿ ಜನರಲ್ ಡಯರ್‌ನನ್ನು ಹತ್ಯೆ ಮಾಡಿದ ಕ್ರಾಂತಿಕಾರಿ – **ಉದಮ್‌ಸಿಂಗ್.**

10. ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ಪ್ರತಿಭಟಿಸಿ ರವಿಂದ್ರನಾಥ ಠಾಗೋರರು ತಮ್ಮ ____ ಪದವಿಯನ್ನು ಬ್ರಿಟಿಷ್ ಸರಕಾರಕ್ಕೆ ವಾಪಾಸ್ ಮಾಡಿದರು.– **'ನೈಟ್‌ಹುಡ್' ಪದವಿ.**

11. ಖಿಲಾಫತ್ ಚಳವಳಿಯನ್ನು ಆರಂಭಿಸಿದ ಉದ್ದೇಶ – **ಖಲೀಫರ ಮೇಲೆ ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ.**

12. ____ರಲ್ಲಿ ಬ್ರಿಟಿಷ್ ಸರ್ಕಾರವು ಸೈಮನ್ ಕಮಿಷನ್ ಅನ್ನು ನೇಮಿಸಿತು. – **1927.**

13. ಸೈಮನ್ ಕಮಿಷನ್ ಭಾರತಕ್ಕೆ ಬಂದದ್ದು ____ ರಲ್ಲಿ – **ಫೆಬ್ರುವರಿ 3, 1928.**

14. ಸೈಮನ್ ಕಮಿಷನ್ ವಿರೋಧಿಸಿ ಲಾಹೋರ್‌ನಲ್ಲಿ ನಡೆದ ಹೋರಾಟದ ಸಂದರ್ಭದಲ್ಲಿ – ಮೇಲೆ ಲಾಠಿಜಾರ್ಜ ಮಾಡಿದ ಕಾರಣ ಅವರು ಮರಣ ಹೊಂದಿದರು. – **ಲಾಲಾ ಲಜಪತರಾಯ್.**

15. ಲಾಹೋರ ಕಾಂಗ್ರೆಸ್ ಅಧಿವೇಶನ ನಡೆದದ್ದು ____ ರಲ್ಲಿ – **1929.**

16. ಲಾಹೋರ ಅಧಿವೇಶನದ ಅಧ್ಯಕ್ಷತೆ ವಹಿಸಿದವರು – **ಜವಾಹರಲಾಲ್ ನೆಹರು.**

17. ಲಾಹೋರ ಕಾಂಗ್ರೆಸ್ ಅಧಿವೇಶನವು ____ ದಿನವನ್ನು ಸ್ವಾತಂತ್ರ್ಯ ದಿನವೆಂದು ಘೋಷಿಸಿತು. – **1930, ಜನವರಿ 26.**

18. ಗಾಂಧೀಜಿಯವರು ____ ರಂದು ಹನ್ನೊಂದು ಅಂಶಗಳುಳ್ಳ ಬೇಡಿಕೆಗಳ ಪತ್ರವನ್ನು ವೈಸರಾಯ್‌ಗೆ ಬರೆದರು. – **ಮಾರ್ಚ 2, 1930.**

19. ಕಾರ್ಮಿಕರ ಹೋರಾಟವು ____ ರಲ್ಲಿ ಕಲ್ಕತ್ತದಲ್ಲಿ ಆರಂಭವಾಯಿತು. – **1827.**

20. ಮಹಮದ್ ಅಲಿ ಜಿನ್ನಾರವರು ____ ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. – **1906.**

21. ಸುಭಾಷ್ ಚಂದ್ರ ಬೋಸ್‌ರಿಗೆ ಇದ್ದ ಬಿರುದು – **ನೇತಾಜಿ.**

22. 1938ರ ಹರಿಪುರ ಅಧಿವೇಶನದಲ್ಲಿ ಸುಭಾಷ್ ಚಂದ್ರ ಬೋಸರು ____ ರ ವಿರೋಧದ ನಡುವೆಯು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಗೊಂಡರು.– **ಗಾಂಧೀಜಿ.**

23. ಸುಭಾಷ್‌ರು ____ ರೇಡಿಯೋ ಮುಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು. – **'ಅಜಾದ್ ಹಿಂದ್ ರೇಡಿಯೋ'.**

24. ಜಪಾನಿನಲ್ಲಿ ಸುಭಾಷ್‌ರ ಜೊತೆ ಕೈಜೋಡಿಸಿದ ಕ್ರಾಂತಿಕಾರಿ – **ರಾಸ್ ಬಿಹಾರಿ ಬೋಸ್.**

25. ಜಪಾನಿನಲ್ಲಿ ರಾಸ್ ಬಿಹಾರಿ ಬೋಸ್ ಸ್ಥಾಪಿಸಿದ ಸೇನಾವಿಭಾಗ – **'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್'.**

26. ಸುಭಾಷರು ____ ಸೇನೆಯ ಮುಖಂಡತ್ವವನ್ನು ವಹಿಸಿದರು. – **ಭಾರತೀಯ ರಾಷ್ಟ್ರೀಯ ಸೇನೆ (ಐ ಎನ್ ಎ)**

27. ಭಾರತೀಯ ರಾಷ್ಟ್ರೀಯ ಸೇನೆ (ಐ ಎನ್ ಎ)ಯ ಝಾನ್ಸಿ ರೆಜಿಮೆಂಟ್‌ನ ನೇತೃತ್ವವಹಿಸಿದವರು – **ಕ್ಯಾಪ್ಟನ್ ಲಕ್ಷ್ಮಿ ಸಹಗಲ್.**

28. ಭಾರತದ ಶ್ರೇಣಿಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೂ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂದು ವಾದಿಸಿದವರು –**ಡಾ. ಬಿ.ಆರ್ ಅಂಬೇಡ್ಕರ್.**

29. ಅಂಬೇಡ್ಕರರು ಕಾಂಗ್ರೆಸ್ ಪಕ್ಷವನ್ನು ಸೇರದೆ ____ ಎಂಬ ಸಂಘಟನೆಯನ್ನು ಆರಂಭಿಸಿದರು. – **ಬಹಿಷ್ಕೃತ ಹಿತಕಾರಣಿ ಸಭಾ.**

30. ಸ್ವತಂತ್ರ ಭಾರತದಲ್ಲಿ ಅಂಬೇಡ್ಕರರು ____ ಮಂತ್ರಿಯಾದರು. – **ಕಾನೂನು ಮಂತ್ರಿ.**

31. ಅಂಬೇಡ್ಕರರ ಜೀವಮಾನದ ಸಾಧನೆಗಾಗಿ ಭಾರತ ಸರಕಾರವು ಇವರಿಗೆ ಮರಣೋತ್ತರವಾಗಿ ____ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. – **ಭಾರತರತ್ನ.**

32. ಪಂಡಿತ್ ಜವಾಹರಲಾಲ್ ನೆಹರುರವರು ____ ಚಳವಳಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದರು. – **ಹೋಂರೂಲ್ ಚಳವಳಿ.**

33. 1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಕಟ್ಟಿದವರು – **ಜವಾಹರಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಸರು**

34. ಜವಾಹರಲಾಲ ನೆಹರುರವರು ನಿಧನರಾದದ್ದು – **1964ರಲ್ಲಿ.**

35. ಮುಸ್ಲಿಂ ಲೀಗ್ ____ ರಂದು ಪ್ರತ್ಯೇಕ ರಾಷ್ಟ್ರಕ್ಕಾಗಿ ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿತು. – **1946 ಅಗಸ್ಟ್ 16.**

36. ____ ರಲ್ಲಿ ಲಾರ್ಡ ಮೌಂಟ್ ಬ್ಯಾಟನ್ ಕೊನೆಯ ವೈಸರಾಯ್ ಆಗಿ ಭಾರತಕ್ಕೆ ಬಂದನು. – **1946ರ ಮಾರ್ಚ.**

37. ಭಾರತ ಮತ್ತು ಪಾಕಿಸ್ತಾನ ದೇಶಗಳ ಗಡಿಗಳನ್ನು ಗುರುತಿಸಿದ ಆಯೋಗ – **ರ್‍ಯಾಡ್ ಕ್ಲಿಪ್ ಆಯೋಗ.**

38. ____ ರಂದು ಗಾಂಧೀಜಿವರು ಪ್ರಾರ್ಥನಾ ಸಭೆಗೆ ನಡೆದು ಹೋಗುತ್ತಿದ್ದಾಗ ____ ಎಂಬುವವನು ಹತ್ಯೆ ಮಾಡಿದನು. – **1948 ಜನವರಿ 30, ನಾಥೋರಾಮ್ ಗೂಡ್ಸೆ.**

39. ಜಲಿಯನ್ ವಾಲಾಬಾಗ್ ಹತ್ಯಾಕಾಂಡವು ____ ಕಾಯ್ದೆಗೆ ವಿರುದ್ಧ ನಡೆದ ಹೋರಾಟದ ಪರಿಣಾಮ. – **ರೌಲೆಟ್ ಕಾಯ್ದೆ.**

40. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ____ ರವರು ಮಂಡಿಸಿದರು. – **ಮಹಮ್ಮದ್ ಅಲಿ ಜಿನ್ನಾ.**

41. ಮಹದ್ ಕರೆ ಮತ್ತು ಕಾಲರಾಂ ದೇವಾಲಯ ಚಳವಳಿಯನ್ನು ರೂಪಿಸಿದವರು – **ಡಾ. ಬಿ.ಆರ್. ಅಂಬೇಡ್ಕರ್.**

42. ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿ ___ ಎಂಬಲ್ಲಿ ನಡೆಸಿದರು. – **ದಂಡಿ.**

43. ಕ್ವಿಟ್ ಇಂಡಿಯಾ ಚಳವಳಿಯು ____ ರಲ್ಲಿ ನಡೆಯಿತು. – **1942.**

44. ಮೊದಲ ದುಂಡುಮೇಜಿನ ಪರಿಷತ್ ಸಮಾವೇಶ ____ ರಲ್ಲಿ ನಡೆಯಿತು. – **1930**

45. ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು – **ಸರ್ದಾರ್ ವಲ್ಲಭಭಾಯಿ ಪಟೇಲ್.**

46. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದದ್ದು ____ ನಲ್ಲಿ. – **ಪಂಜಾಬ್‌ನ ಅಮೃತಸರ.**

47. 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಕರಿಸುತ್ತೇನೆ ಎಂದು ಕರೆ ನೀಡಿದವರು – **ಸುಭಾಷ್ ಚಂದ್ರ ಬೋಸರು.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಗಾಂಧಿಯುಗ ಎಂದರೇನು?**

ಉತ್ತರ : 1920 – 1947ರ ಅವಧಿಯಲ್ಲಿ ಗಾಂಧಿಯ ವಿಚಾರಗಳು ಅವರ ಹೋರಾಟದ ಸೈದ್ಧಾಂತಿಕ ತಳಹದಿಯನ್ನು ರೂಪಿಸಿದ ಕಾರಣ ಹಾಗೂ ಅವರ ಹೋರಾಟದ ಮಾದರು ಭಾರತದ ರಾಷ್ಟೀಯ ಹೋರಾಟದ ದಿಕ್ಕನ್ನು ಗಣನೀಯವಾಗಿ ರೂಪಿಸಿದ್ದರಿಂದ ಈ ಅವಧಿಯನ್ನು ಗಾಂಧಿಯುಗವೆಂದೂ ಕರೆಯುತ್ತೇವೆ.

**2. ಗಾಂಧೀಜಿಯವರ ಬಗ್ಗೆ ಆಫ್ರಿಕನ್ನರಿಗೆ ಇರುವ ಹೆಮ್ಮೆ ಏನು?**

ಉತ್ತರ : ಗಾಂಧೀಜಿಯವರ ಬಗ್ಗೆ ಅನೇಕ ಆಫ್ರಿಕನ್‌ರಿಗೆ ಇರುವ ಹೆಮ್ಮೆಯೆಂದರೆ 'ನೀವು ಏನು ಆಗಿರದ ಗಾಂಧಿಯನ್ನು ಕಳುಹಿಸಿದಿರಿ, ನಾವು ನಿಮಗೆ ಈ ಗಾಂಧಿಯನ್ನು ಕೊಟ್ಟೆವು' ಎಂಬುದು.

**3. ಗಾಂಧೀಜಿಯವರು ಎಲ್ಲಿ, ಯಾವಾಗ ಜನಿಸಿದರು?**

ಉತ್ತರ : ಗಾಂಧೀಜಿಯವರು 1869 ಅಕ್ಟೋಬರ್ 2ರಂದು ಗುಜರಾತ್‌ನ ಕಾಥೆವಾಡ್ ಜಿಲ್ಲೆಯ ಪೋರ್‌ಬಂದರ್‌ನಲ್ಲಿ ಜನಿಸಿದರು.

**4. ಗಾಂಧೀಜಿಯವರು ಕಾನೂನು ಪದವಿಯನ್ನು ಎಲ್ಲಿ ಯಾವಾಗ ಪಡೆದರು?**

ಉತ್ತರ : ಗಾಂಧೀಜಿಯವರು 1888ರಲ್ಲಿ ಇಂಗ್ಲೆಂಡ್‌ನಲ್ಲಿ ಕಾನೂನು ಅಧ್ಯಯನ ಮಾಡಲು ಹೋಗಿ "ಬಾರ್ ಅಟ್ ಲಾ" ಮುಗಿಸಿ ಭಾರತಕ್ಕೆ ವಾಪಾಸ್ಸಾದರು.

**5. ಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ಹೋಗಲು ಕಾರಣವೇನು?**

ಉತ್ತರ : ಗಾಂಧೀಜಿಯವರು 1893ರಲ್ಲಿ ದಾದಾ ಅಬ್ದುಲ್ಲಾ ಮತ್ತು ಕಂಪನಿಯ ವಕಾಲತ್ತು ವಹಿಸಲು ದಕ್ಷಿಣ ಆಫ್ರಿಕಾದ 'ನಟಾಲ್'ಗೆ ಹೋದರು.

**6. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರು ಯಾವ ತಂತ್ರಗಳನ್ನು ಬಳಸಿಕೊಂಡರು?**

ಉತ್ತರ : ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರು ಪರೋಕ್ಷ ಪ್ರತಿರೋಧ, ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹವನ್ನು ಪ್ರಮುಖ ತಂತ್ರಗಳಾನ್ನಾಗಿ ಬಳಸಿಕೊಂಡರು.

**7. ಗಾಂಧೀಜಿಯವರು ತಮ್ಮ ಸಿದ್ಧಾಂತಗಳನ್ನು ಯಾವ ಪತ್ರಿಕೆಗಳಲ್ಲಿ ವ್ಯಕ್ತಪಡಿಸಿದರು?**

ಉತ್ತರ : ಗಾಂಧೀಜಿಯವರು ತಮ್ಮ ಸಿದ್ಧಾಂತಗಳನ್ನು 'ಹರಿಜನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ವ್ಯಕ್ತಪಡಿಸಿದರು.

**8. ಖಿಲಾಫತ್ ಚಳುವಳಿಯನ್ನು ಪ್ರಾರಂಭಿಸಿದವರು ಯಾರು?**

ಉತ್ತರ : ಭಾರತದಲ್ಲಿ ಖಿಲಾಫತ್ ಚಳುವಳಿಯನ್ನು ಮಹಮದ್ ಅಲಿ ಮತ್ತು ಶೌಕತ್ ಅಲಿ ಸಹೋದರರು 1919ರಲ್ಲಿ ಪ್ರಾರಂಭಿಸಿದರು.

**9. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಸಹಕಾರ ಚಳುವಳಿಯ ಗೊತ್ತುವಳಿಯನ್ನು ಯಾವಾಗ ಅನುಮೋದಿಸಿತು?**

ಉತ್ತರ : 1920 ಸೆಪ್ಟೆಂಬರ್ 4ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಲ್ಕತ್ತಾ ವಿಶೇಷ ಅಧಿವೇಶನದಲ್ಲಿ ಅಸಹಕಾರ ಚಳವಳಿಯನ್ನು ಆರಂಭಿಸಲು ಗೊತ್ತುವಳಿಯನ್ನು ಅನುಮೋದಿಸಿತು.

**10. ಚೌರಿ ಚೌರಾ ಘಟನೆ ಎಲ್ಲಿ ಯಾವಾಗ ನಡೆಯಿತು?**

ಉತ್ತರ : ಚೌರಿ ಚೌರ ಘಟನೆಯು ಫೆಬ್ರುವರಿ 5, 1922ರಂದು ಉತ್ತರ ಪ್ರದೇಶದ ಗೋರಕ್‌ಪುರ ಜಿಲ್ಲೆಯ ಚೌರಿ ಚೌರ ಎಂಬಲ್ಲಿ ನಡೆಯಿತು.

**11. ಸ್ವರಾಜ್ ಪಕ್ಷವನ್ನು ಯಾರು, ಯಾವಾಗ ಸ್ಥಾಪಿಸಿದರು?**

ಉತ್ತರ : ಸ್ವರಾಜ್ಯ ಪಕ್ಷವನ್ನು ಸೆಪ್ಟೆಂಬರ್ 1923ರಲ್ಲಿ ಸಿ.ಆರ್.ದಾಸ್ ಮತ್ತು ಮೋತಿಲಾಲ್ ನೆಹರೂರಿಂದ ಸ್ವರಾಜ್ ಪಕ್ಷ ಸ್ಥಾಪಿಸಿದರು.

**12. ಸ್ವರಾಜ್ ಪಕ್ಷದವರು 1923ರಲ್ಲಿ ನಡೆದ ಚುನಾವಣೆಯಲ್ಲಿ ಎಷ್ಟು ಸ್ಥಾನಗಳನ್ನು ಗೆದ್ದರು?**

ಉತ್ತರ : ನವೆಂಬರ್ 1923ರಲ್ಲಿ ನಡೆದ ಚುನಾವಣೆಯಲ್ಲಿ ಸ್ವರಾಜ್ ಪಕ್ಷದವರು 101 ಸ್ಥಾನಗಳ ಪೈಕಿ 42 ಸ್ಥಾನಗಳನ್ನು ಗೆದ್ದರು.

**13. ಬ್ರಿಟನ್ ಸರ್ಕಾರ ಸೈಮನ್ ಕಮಿಷನ್ ಅನ್ನು ನೇಮಿಸಲು ಕಾರಣವೇನು?**

ಉತ್ತರ : 1927ರಲ್ಲಿ ಬ್ರಿಟಿಷ್ ಸರ್ಕಾರವು ಸೈಮನ್ ಕಮಿಷನ್ ಅನ್ನು ನೇಮಿಸಿತು. 1919ರಲ್ಲಿ ಜಾರಿಗೊಂಡ ಭಾರತ ಸರ್ಕಾರ ಕಾಯ್ದೆಯ ಅನುಷ್ಠಾನ ಮತ್ತು ಅದರ ಪರಿಣಾಮಗಳನ್ನು ವಿಮರ್ಶಿಸುವ ಸಲುವಾಗಿ ಸೈಮನ್ ಕಮಿಷನ್ ನೇಮಕವಾಯಿತು.

**14. ಕಾನೂನುಭಂಗ ಚಳವಳಿಯನ್ನು ಹಮ್ಮಿಕೊಳ್ಳುವ ನಿರ್ಣಯವನ್ನು ಎಲ್ಲಿ, ಯಾವಾಗ ನಿರ್ಣಯಿಸಲಾಯಿತು?**

ಉತ್ತರ : 1930 ಫೆಬ್ರುವರಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಬರ್‌ಮತಿಯಲ್ಲಿ ಸಭೆ ಸೇರಿ ಕಾನೂನುಭಂಗ ಚಳವಳಿಯನ್ನು ಹಮ್ಮಿಕೊಳ್ಳಲು ನಿರ್ಣಯಿಸಿತು.

**15. ಸ್ಟಾಫರ್ಡ್ ಕ್ರಿಪ್ಸ್ ಆಯೋಗ ಭಾರತಕ್ಕೆ ಬರಲು ಕಾರಣವೇನು?**

ಉತ್ತರ : ಎರಡನೆಯ ಮಹಾಯುದ್ಧ ಆರಂಭಗೊಂಡಾಗ ಭಾರತದ ವೈಸರಾಯ್ ಏಕಪಕ್ಷೀಯವಾಗಿ ಭಾರತದ ಪರವಾಗಿ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿದನು. ಇದನ್ನು ಕಾಂಗ್ರೆಸ್ ಪ್ರತಿಭಟಿಸಿ ಮಂತ್ರಿಮಂಡಲದಿಂದ ಹೊರಬಂದಿತು. ವೈಸರಾಯನ ತೀರ್ಮಾನವನ್ನು ವಿರೋಧಿಸಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಸಾರಿದರು. ಆಗ ಭಾರತೀಯರನ್ನು ತೃಪ್ತಿಪಡಿಸಲು ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಸಂಧಾನಕ್ಕಾಗಿ ಕಳುಹಿಸಲಾಯಿತು.

**16. ಕ್ವಿಟ್ ಇಂಡಿಯಾ ಚಳವಳಿಯ ಆಶಯವೇನು?**

ಉತ್ತರ : 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವುದು ಕ್ವಿಟ್ ಇಂಡಿಯಾ ಚಳವಳಿಯ ಆಶಯವಾಗಿತ್ತು.

**17. ಬ್ರಿಟಿಷರ ವಿರುದ್ಧ ದಂಗೆಯೆದ್ದ ಬುಡಕಟ್ಟು ಬಂಡಾಯಗಳು ಯಾವುವು?**

ಉತ್ತರ : ಬ್ರಿಟಿಷರ ವಿರುದ್ಧ ನಡೆದ ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ, ಕೋಲರ ದಂಗೆ ಮತ್ತು ಮುಂಡ ಚಳವಳಿಗಳು ಪ್ರಮುಖವಾಗಿವೆ.

**18. ಬ್ರಿಟಿಷ್ ಸರ್ಕಾರವು ಸುಭಾಷ್ ಚಂದ್ರ ಬೋಸರನ್ನು ಗೃಹಬಂಧನದಲ್ಲಿಡಲು ಕಾರಣವೇನು?**

ಉತ್ತರ : ಬ್ರಿಟಿಷರ ಯುದ್ಧ ತಯಾರಿಕೆಯನ್ನು ಹಾಗೂ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ಸುಭಾಷರು ವಿರೋಧಿಸಿದರು. ಪರಿಣಾಮವಾಗಿ ಬ್ರಿಟಿಷ್ ಸರಕಾರವು ಸುಭಾಷ್ ಚಂದ್ರ ಬೋಸರನ್ನು ಬಂಧಿಸಿ ಗೃಹಬಂಧನದಲ್ಲಿಟ್ಟಿತು.

**19. ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೆ ಕಾರಣವಾದ ಅಂಶ ಯಾವುದು?**

ಉತ್ತರ : ಅಂಬೇಡ್ಕರರು ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೂ ಕಾರಣವಾಯಿತು.

**20. ಅಂಬೇಡ್ಕರರು ಹೊರಡಿಸಿದ ಪತ್ರಿಕೆಗಳು ಯಾವುವು?**

ಉತ್ತರ : ಅಂಬೇಡ್ಕರರು 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಎಂಬ ಪತ್ರಿಕೆಗಳನ್ನು ಹೊರಡಿಸಿದರು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ರೌಲೆಟ್ ಕಾಯ್ದೆಯು ಸ್ವಾತಂತ್ರ್ಯ ಹೋರಾಟಗಾರರ ಸ್ವಾತಂತ್ರ್ಯವನ್ನು ಕಿತ್ತುಕೊಂಡಿತು ಎಂದು ಹೇಗೆ ಹೇಳುವಿರಿ.**

ಉತ್ತರ :

- ಬ್ರಿಟಿಷ್ ಸರಕಾರ ರೌಲೆಟ್ ಕಾಯ್ದೆಯನ್ನು ಮಾರ್ಚ 1919ರಲ್ಲಿ ಜಾರಿಗೆ ತಂದಿತು.
- ಇದರ ಮೂಲಕ ಬ್ರಿಟಿಷರು ಭಾರತೀಯ ರಾಷ್ಟ್ರೀಯವಾದಿಗಳನ್ನು ನಿಯಂತ್ರಿಸಲು ಪ್ರಾರಂಭಿಸಿದರು.
- ಈ ಕಾಯ್ದೆಯಡಿ ಯಾವುದೇ ವ್ಯಕ್ತಿಯನ್ನು ವಿಚಾರಣೆ ಇಲ್ಲದೆ ಬಂಧಿಸಿ, ಕೋರ್ಟ್‌ನ ಮೂಲಕ ಅಪರಾಧಿ ಎಂದು ನಿರ್ಣಯಿಸಿ ಶಿಕ್ಷೆ ವಿಧಿಸಬಹುದಾಗಿತ್ತು.
- ಇದು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಸಭೆ ಸೇರುವುದನ್ನು, ಸಂಘಟನೆ ಮಾಡುವುದನ್ನು ಮತ್ತು ಮುಕ್ತವಾಗಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ಕಿತ್ತುಕೊಂಡಿತು.

**2. ಗಾಂಧಿಜಿಯವರ ಹೋರಾಟದ ಅಂತಃಸತ್ವದ ಸಾಧನಗಳಾವುವು? ವಿವರಿಸಿ.**

ಉತ್ತರ : ಗಾಂಧಿಜಿಯವರ ಹೋರಾಟದ ಅಂತಃಸತ್ವದ ಸಾಧನಗಳು –

- **ಸತ್ಯಾಗ್ರಹ** – ಗಾಂಧೀಜಿಯವರ ಹೋರಾಟದ ಬಹುಮುಖ್ಯವಾದ ವಿಧಾನವೇ ಸತ್ಯಾಗ್ರಹ. ಸತ್ಯಾಗ್ರಹ ಎನ್ನುವ ಪದದ ಅರ್ಥ, ಸತ್ಯವನ್ನು ಆಗ್ರಹಿಸುವುದಾಗಿದೆ. ಸತ್ಯಾಗ್ರಹವು ಅಹಿಂಸೆಯನ್ನು ಆಧರಿಸಿದ್ದು, ತಪ್ಪು, ಹಿಂಸೆ ಮತ್ತು ಅಸತ್ಯವನ್ನು ಖಡಾಖಂಡಿತವಾಗಿ ನಿರಾಕರಿಸುವ ಕ್ರಮವೂ ಆಗಿದೆ.
- **ಅಹಿಂಸೆ** – ಗಾಂಧೀಜಿಯವರ ಹೋರಾಟದ ಮೂಲಭೂತ ಆಶಯ ಅಹಿಂಸೆಯಾಗಿದೆ. ಬ್ರಿಟಿಷ್ ದರ್ಪದ ಆಯುಧಗಳಿಂದ ಮಿಲಿಟರಿ, ಪೋಲಿಸ್, ಕಾನೂನು ಮುಂತಾದವುಗಳ ವಿರುದ್ಧ ಸತ್ಯ, ಅಹಿಂಸೆ, ಉಪವಾಸವೆಂಬ ಮಾತ್ರತ್ವದ ಮಾಂತ್ರಿಕತೆಯ ಆಯುಧಗಳನ್ನು ಬಳಸಿ ಅವರನ್ನು ಮಣಿಸಿದ್ದು ಗಾಂಧೀಜಿಯವರ ಹೋರಾಟದ ಚಾರಿತ್ರಿಕ ಸಂದೇಶವಾಗಿದೆ.
- **ಹಿಂದೂ–ಮುಸ್ಲಿಂ ಏಕತೆ** – ಭಾರತೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂ–ಮುಸ್ಲಿಂ ಏಕತೆಯನ್ನು ಅತ್ಯಂತ ಬಲವಾಗಿ ಪ್ರತಿಪಾದಿಸಿದ ವ್ಯಕ್ತಿಯೆಂದರೆ ಗಾಂಧಿ. ಈ ಸಮುದಾಯಗಳ ನಡುವೆ ಏಕತೆ ಇಲ್ಲದಿದ್ದರೆ ಭಾರತ ಸ್ವಾತಂತ್ರ್ಯ ಸಾಧಿಸುವುದು ಮತ್ತು ಭವಿಷ್ಯದಲ್ಲಿ ರಾಷ್ಟ್ರವಾಗಿ ಬಾಳುವುದು ಕಷ್ಟವೆಂದೇ ಅವರ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ 1919ರ ಸಂದರ್ಭದಲ್ಲಿ ಖಿಲಾಫತ್ ಚಳುವಳಿಗೆ ಕಾಂಗ್ರೆಸ್ ಸಂಘಟನೆಯಿಂದ ಬೆಂಬಲವನ್ನು ವ್ಯಕ್ತಪಡಿಸಿದರು.

**3. ಖಿಲಾಫತ್ ಚಳುವಳಿಯನ್ನು ವಿವರಿಸಿ.**

**ಉತ್ತರ : ಖಿಲಾಫತ್ ಚಳುವಳಿ–**

- ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಖಲೀಫರ ಮೇಲೆ ನಡೆಯುತ್ತಿದ್ದ ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ ಮುಸ್ಲಿಂರು ಜಗತ್ತಿನಾದ್ಯಂತ ಪ್ರತಿಭಟಿಸಿದರು.
- ಅಂತೆಯೇ ಮಹಮದ್ ಅಲಿ ಮತ್ತು ಶೌಕತ್ ಅಲಿ ಸಹೋದರರು ಭಾರತದಲ್ಲಿ ಟರ್ಕರ ಪರವಾದ ಖಿಲಾಫತ್ ಚಳವಳಿಯನ್ನು 1919ರಲ್ಲಿ ಪ್ರಾರಂಭಿಸಿದರು.
- ಹಿಂದೂ ಮುಸ್ಲಿಮರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಬಂಡೆದ್ದರೆ ಮಾತ್ರ ಬ್ರಿಟಿಷರು ಹಿಮ್ಮೆಟ್ಟುತ್ತಾರೆ ಎನ್ನುವುದು ಗಾಂಧೀಜಿಯವರ ನಂಬಿಕೆಯಾಗಿತ್ತು.
- ಪರಿಣಾಮವಾಗಿ ಗಾಂಧೀಜಿ ಖಿಲಾಫತ್ ಚಳವಳಿಗೆ ತಮ್ಮ ಬೆಂಬಲವನ್ನು ನೀಡಿದರು.
- ಈ ಚಳವಳಿಯು ಹಿಂದೂ ಮುಸ್ಲಿಮರು ಒಂದುಗೂಡಿ ನಡೆಸಿದ ರಾಷ್ಟ್ರವ್ಯಾಪಿ ಅಂದೋಲನವಾಗಿದೆ.

**4. ಅಸಹಕಾರ ಚಳವಳಿಯಿಂದಾದ ಪರಿಣಾಮಗಳೇನು?**

**ಉತ್ತರ : ಅಸಕಾರ ಚಳವಳಿಯ ಪರಿಣಾಮಗಳು –**

- ರಾಷ್ಟ್ರೀಯ ಹೋರಾಟ ಜನರ ಹೋರಾಟವಾಗಿ ರೂಪಾಂತರವಾಯಿತು.
- ಹಿಂದೂ ಮುಸ್ಲಿಂ ಭ್ರಾತೃತ್ವವನ್ನು ತಾತ್ಕಾಲಿಕವಾಗಿಯಾದರೂ ಸೃಷ್ಟಿಸಿತು.
- ರಾಷ್ಟ್ರೀಯ ಹೋರಾಟ ನಗರಗಳನ್ನು ದಾಟಿ ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಲು ಪ್ರಾರಂಭಿಸಿತು.

➢ ಅಸ್ಪೃಶ್ಯತೆ ನಿವಾರಣೆ, ಮಹಿಳೆಯರಿಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಮುಂತಾದವು ಗಮನಿಸಲೇಬೇಕಾದ ಪರಿಣಾಮಗಳಾಗಿವೆ.

**5. ಸ್ವರಾಜ್ಯ ಪಕ್ಷ ಸ್ಥಾಪಿಸಲು ಕಾರಣಗಳೇನು?**

**ಉತ್ತರ : ಸ್ವರಾಜ್ಯ ಪಕ್ಷ ಸ್ಥಾಪಿಸಲು ಕಾರಣಗಳು –**

➢ ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಂಡಿದ್ದರ ಪರಿಣಾಮ ಕಾಂಗ್ರೆಸ್ಸಿಗರಲ್ಲಿ ಉತ್ಸಾಹವನ್ನು ಕುಂದಿಸಿತು.

➢ ಸಿ ಆರ್ ದಾಸ್ ಮತ್ತು ಮೋತಿಲಾಲ ನೆಹರು ಅವರು ಶಾಸನಸಭೆಗಳನ್ನು ಬಹಿಷ್ಕರಿಸುವುದನ್ನು ಕೊನೆಗೊಳಿಸಿ ಅವುಗಳಿಗೆ ಪ್ರವೇಶ ಮಾಡಬೇಕೆಂದು ವಾದಿಸಿದರು.

➢ ಶಾಸನಸಭೆಗಳನ್ನು ಪ್ರವೇಶಿಸಿ ಅಲ್ಲಿಯೇ ಕಲಾಪಗಳಿಗೆ ಅಡ್ಡಿಯುಂಟು ಮಾಡಬೇಕು. ಇದರಿಂದ ಸ್ವಾತಂತ್ರ್ಯ ಚಳವಳಿ ಇನ್ನಷ್ಟು ಗಟ್ಟಿಗೊಳ್ಳುತ್ತದೆ ಎಂದು ವಾದಿಸಿದರು.

➢ ಸೆಪ್ಟಂಬರ್ 1923ರಲ್ಲಿ ಸಿ ಆರ್ ದಾಸ್ ಮತ್ತು ಮೋತಿಲಾಲ್ ನೆಹರೂರಿಂದ ಸ್ವರಾಜ್ ಪಕ್ಷ ಸ್ಥಾಪಿಸಲಾಯಿತು.

**6. ಮೋತಿಲಾಲ ನೆಹರು ಸಮಿತಿಯು ಸಿದ್ಧಪಡಿಸಿದ ವರದಿಯ ಮುಖ್ಯಾಂಶಗಳೇನು?**

**ಉತ್ತರ : ಮೋತಿಲಾಲ ನೆಹರು ಸಮಿತಿಯು ಸಿದ್ಧಪಡಿಸಿದ ವರದಿಯ ಮುಖ್ಯಾಂಶಗಳು –**

➢ ನೆಹರು ವರದಿಯು ಭಾರತಕ್ಕೆ ಡೋಮಿನಿಯನ್ ಸ್ಟೇಟಸ್ ಜೊತೆಗೆ ಫೆಡರಲ್ ರಾಜ್ಯ ವ್ಯವಸ್ಥೆ ತರಬೇಕೆಂದು ಹೇಳಿತು.

➢ ಅಲ್ಪಸಂಖ್ಯಾತರಿಗೆ ಇದ್ದ ಪ್ರತ್ಯೇಕ ಮತಕ್ಷೇತ್ರಗಳ ಕೊನೆಯಾಗಬೇಕೆಂದು ಹೇಳಿತು.

➢ ಬ್ರಿಟಿಷ್ ಪ್ರಾಂತ್ಯಗಳನ್ನು ಭಾಷಾವಾರು ಪ್ರಾಂತ್ಯಗಳಾ ವಿಂಗಡಿಸುವುದು.

➢ ಭಾರತೀಯರಿಗೆ ಮೂಲಭೂತ ಹಕ್ಕುಗಳನ್ನು ನೀಡುವುದು.

➢ ಭಾರತಕ್ಕೆ ಜನತಾಂತ್ರಿಕ ಪ್ರಜಾಪ್ರಭುತ್ವವನ್ನು ತರುವುದು ಮುಂತಾದವುಗಳನ್ನು ಶಿಫಾರಸ್ಸು ಮಾಡಿತು.

**7. 1929ರ ಲಾಹೋರ ಅಧಿವೇಶನದಲ್ಲಿ ಕೈಗೊಂಡ ನಿರ್ಣಯಗಳೇನು?**

**ಉತ್ತರ : 1929ರ ಲಾಹೋರ ಅಧಿವೇಶನದಲ್ಲಿ ಕೈಗೊಂಡ ನಿರ್ಣಯಗಳು –**

➢ ಈ ಸಮ್ಮೇಳನವು ಭಾರತೀಯ ರಾಷ್ಟ್ರೀಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟಿತು.

➢ ಜವಾಹರಲಾಲ್ ನೆಹರೂ ಅಧ್ಯಕ್ಷತೆಯಲ್ಲಿ ನಡೆದ ಅಧಿವೇಶನದಲ್ಲಿ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಹೋರಾಟದ ಪರಮಗುರಿಯಾದ 'ಪೂರ್ಣ ಸ್ವರಾಜ್ಯ' ಅನ್ನು ಅಂಗೀಕರಿಸಲಾಯಿತು.

➢ 1930 ಜನವರಿ 26ನ್ನು ಸ್ವಾತಂತ್ರ್ಯ ದಿನವೆಂದು ಘೋಷಿಸಲಾಯಿತು.

➢ ಈ ಅಧಿವೇಶನವು ಬ್ರಿಟಿಷರ ವಿರುದ್ಧ ಹಮ್ಮಿಕೊಳ್ಳಲಾಗುವ ಕಾನೂನುಭಂಗ ಚಳವಳಿಯ ಪೂರ್ಣ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಿತು.

**8. ಮೊದಲನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದ ಫಲಿತಾಂಶವೇನು?**

**ಉತ್ತರ :**

➢ ಲಂಡನ್ನಿನಲ್ಲಿ ಭಾರತೀಯ ಜನಪ್ರತಿನಿಧಿಗಳ ಸಮಾವೇಶವನ್ನು 1930ರಲ್ಲಿ ಕರೆಯಲಾಯಿತು.

➢ ಇದರಲ್ಲಿ ಭಾರತೀಯರನ್ನು ಹೊರತುಪಡಿಸಿ ಸರ್ಕಾರ ಏಕಮುಖವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದು ವ್ಯಕ್ತವಾಯಿತು.

➢ ಈ ಸಮಾವೇಶದಲ್ಲಿ ಮೊಟ್ಟಮೊದಲನೆಯ ಬಾರಿಗೆ ಅಸ್ಪೃಶ್ಯ ಸಮುದಾಯವನ್ನು ಪ್ರತ್ಯೇಕವಾಗಿ ಪ್ರತಿನಿಧಿಸುವ ಅವಕಾಶವನ್ನು ಕಲ್ಪಿಸಲಾಯಿತು.

➢ ಈ ಸಮಾವೇಶದಲ್ಲಿ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳು ಮತ್ತು ವಿವಿಧ ಸಮುದಾಯಗಳ ಮುಖಂಡರು ಭಾಗವಹಿಸಿದ್ದರು.

➢ ಡೊಮಿನಿಯನ್ ಸ್ಟೇಟಸ್, ಜವಾಬ್ದಾರಿಯುತ ಸರ್ಕಾರ ಮತ್ತು ಮತೀಯ ಪ್ರಾತಿನಿಧ್ಯಗಳನ್ನು ಕುರಿತಂತೆ ಈ ಸಮಾವೇಶದಲ್ಲಿ ಸಮ್ಮತಿಸಲಾಯಿತು.

➢ ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮೊದಲನೆಯ ದುಂಡುಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸದ ಹಿನ್ನೆಲೆಯಲ್ಲಿ ಸಮಾವೇಶವು ಪೂರ್ಣಗೊಳ್ಳಲಿಲ್ಲ.

**9. ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆ ಪೂನಾ ಒಪ್ಪಂದವಾಗಲು ಕಾರಣವೇನು? ಅದರ ಫಲಿತಾಂಶವೇನು?**

**ಉತ್ತರ :**

➢ ಎರಡನೇ ದುಂಡು ಮೇಜಿನ ಸಮಾವೇಶದ ತೀರ್ಮಾನದಂತೆ ಬ್ರಿಟಿಷರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಕ್ಕೆ ಸಂಬಂಧಿಸಿದ 'ಮತೀಯ ಮಸೂದೆ'ಗೆ 1932ರಲ್ಲಿ ಚಾಲ್ತಿ ನೀಡಿದರು.

➢ ಇದನ್ನು ವಿರೋಧಿಸಿ ಮಹಾತ್ಮ ಗಾಂಧೀಜಿಯವರು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು.

➢ ಈ ಸಮಯದಲ್ಲಿ ಅಂಬೇಡ್ಕರ್ ಅವರ ಮನವೊಲಿಸುವ ಪ್ರಯತ್ನಗಳು ನಡೆದವು.

➢ ಇದರ ಫಲವಾಗಿ ಗಾಂಧೀಜಿ ಮತ್ತು ಅಂಬೇಡ್ಕರ್‌ರ ಮಧ್ಯೆ ಪೂನಾ ಒಪ್ಪಂದವಾಯಿತು.

➢ ಇದರ ಪ್ರಕಾರ ಪ್ರತ್ಯೇಕ ಮತಕ್ಷೇತ್ರದ ಬದಲಾಗಿ ಸಾಮಾನ್ಯ ಮತಕ್ಷೇತ್ರಗಳಲ್ಲಿಯೇ ಕೆಲವು ಕ್ಷೇತ್ರಗಳನ್ನು ಅಸ್ಪೃಶ್ಯರಿಗೆ ಮೀಸಲಿಡಲಾಯಿತು.

➢ ಅಂತಹ ಕಡೆಗಳಲ್ಲಿ ಅಸ್ಪೃಶ್ಯ ಪ್ರತಿನಿಧಿ ಎಲ್ಲಾ ಜನರ ಪ್ರತಿನಿಧಿಯಾಗಿರುತ್ತಿದ್ದರು.

**10. ದುಂಡು ಮೇಜಿನ ಸಮ್ಮೇಳನಗಳ ಪರಿಣಾಮಗಳೇನು?**

**ಉತ್ತರ : ದುಂಡುಮೇಜಿನ ಸಮ್ಮೇಳನದ ಪರಿಣಾಮಗಳು –**

➢ ದುಂಡುಮೇಜಿನ ಪರಿಷತ್ತುಗಳ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು 1935ರ ಭಾರತ ಸರ್ಕಾರ ಶಾಸನವನ್ನು ಜಾರಿಗೊಳಿಸಿತು.

➢ ಈ ಶಾಸನವು ಭಾರತ ಒಕ್ಕೂಟ ರಚನೆ ಮತ್ತು ಪ್ರಾಂತೀಯ ಸ್ವಾಯತ್ತತೆಯ ಅವಕಾಶಗಳನ್ನು ಕಲ್ಪಿಸಿತು.

➢ ಭಾರತೀಯರಿಗೆ ರಾಜಕೀಯ ಹಕ್ಕುಗಳು ದೊರೆತವು.

➢ ಇದರಿಂದಾಗಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಚುನಾವಣೆಯಲ್ಲಿ ಸ್ಪರ್ಧಿಸಿದವು.

➢ ಕಾಂಗ್ರೆಸ್ ಬಹುಮತ ಪಡೆದು ಒಕ್ಕೂಟ ಸರ್ಕಾರವನ್ನು ರಚಿಸಿತು.

**11. 1942ರಲ್ಲಿ ಸ್ಟಾಫರ್ಡ್ ಕ್ರಿಪ್ಸ್ ಆಯೋಗವು ಭಾರತೀಯರಿಗೆ ನೀಡಿದ ಸಲಹೆಗಳೇನು?**

**ಉತ್ತರ :**

➢ ಬ್ರಿಟಿಷ್ ಸರ್ಕಾರವು ಭಾರತೀಯ ನಾಯಕರೊಂದಿಗೆ ಸಂಧಾನಕ್ಕಾಗಿ ಕಳುಹಿಸಿದ್ದ ಸ್ಟಾಫರ್ಡ್ ಕ್ರಿಪ್ಸ್ ಆಯೋಗವು 1942ರಲ್ಲಿ ಕೆಲವು ಸಲಹೆಗಳನ್ನು ಭಾರತೀಯರ ಮುಂದಿಟ್ಟಿತು.

➢ ಈ ಆಯೋಗವು ಭಾರತೀಯರಿಗೆ ಡೊಮಿನಿಯನ್ ಸ್ಥಾನಮಾನ ನೀಡುವುದು.

➢ ಅದಕ್ಕಾಗಿ ಸಂವಿಧಾನ ರಚಿಸಲು ಸಭೆ ಕರೆಯುವುದು.

➢ ಹೊಸ ಸಂವಿಧಾನದಲ್ಲಿ ಭಾರತ ಒಕ್ಕೂಟವನ್ನು ಸೇರುವ ಅಥವಾ ಬಿಡುವ ಸ್ವಾತಂತ್ರ್ಯವನ್ನು ಸಂಬಂಧಿಸಿದ ರಾಜ್ಯಗಳಿಗೆ ಬಿಡುವಂತಹ ಸಲಹೆಗಳನ್ನು ನೀಡಿತು.

**12. ಮಹಮ್ಮದ್ ಅಲಿ ಜಿನ್ನಾ ವ್ಯಕ್ತಿತ್ವವನ್ನು ವಿವರಿಸಿ.**

**ಉತ್ತರ : ಮಹಮ್ಮದ್ ಅಲಿ ಜಿನ್ನಾ ವ್ಯಕ್ತಿತ್ವ**

➢ ಮಹಮ್ಮದ್ ಅಲಿ ಜಿನ್ನಾರವರು 1906ರಲ್ಲಿ ಕಾಂಗ್ರೆಸ್‌ನೊಂದಿಗೆ ಸೇರಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.

➢ ಅನೇಕ ಸಮಾವೇಶಗಳಲ್ಲಿ ಹಿಂದೂ & ಮುಸ್ಲಿಂರ ನಡುವಿನ ಏಕತೆಯ ಅಗತ್ಯವನ್ನು ತಿಳಿಸಿದರು.

➢ ರೌಲೆಟ್ ಕಾಯ್ದೆಯನ್ನು ವಿರೋಧಿಸಿ ತಮ್ಮ ಕೇಂದ್ರಿಯ ಶಾಸನ ಸಲಹಾ ಸಮಿತಿಗೆ ರಾಜಿನಾಮೆಯನ್ನಿತ್ತರು.

➢ 1937ರ ಚುನಾವಣೆಯ ನಂತರ ಕಾಂಗ್ರೆಸ್ & ಮುಸ್ಲಿಂ ಲೀಗ್ ಸಮ್ಮಿಶ್ರ ಸರ್ಕಾರವನ್ನು ರೂಪಿಸಲು ವಿಫಲವಾದಾಗ ಜಿನ್ನರವರು ತಮ್ಮ ಕಾರ್ಯತಂತ್ರವನ್ನು ಬದಲಾಯಿಸಿದರು.

➢ ಬ್ರಿಟಿಷರ ಮುಂದೆ ಪ್ರತ್ಯೇಕ ಪಾಕಿಸ್ತಾನದ ಬೇಡಿಕೆಯನ್ನಿಟ್ಟು ಚಳುವಳಿಯನ್ನು ತೀವ್ರಗೊಳಿಸಿದರು.

➢ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ದೇಶವನ್ನು ವಿಭಜಿಸಿ ಪಾಕಿಸ್ತಾನವನ್ನು ಪಡೆದರು.

**13. ಮಹಾತ್ಮ ಗಾಂಧಿಯವರ ಆರಂಭಿಕ ಜೀವನ ಮತ್ತು ಬೆಳವಣಿಗೆಯನ್ನು ವಿವರಿಸಿ.**

ಉತ್ತರ : ಮಹಾತ್ಮ ಗಾಂಧಿಯವರ ಆರಂಭಿಕ ಜೀವನ ಮತ್ತು ಬೆಳವಣಿಗೆ –

➢ ಮೋಹನದಾಸ್ ಕರಮಚಂದ್ ಗಾಂಧಿಯವರು 1869 ಅಕ್ಟೋಬರ್ 2ರಂದು ಗುಜರಾತ್‌ನ ಕಾಥೆವಾಡ್ ಜಿಲ್ಲೆಯ ಪೋರ್‌ಬಂದರ್‌ನಲ್ಲಿ ಜನಿಸಿದರು.

➢ ತಂದೆ – ಕರಮಚಂದಗಾಂಧಿ, ತಾಯಿ– ಪುತಲಿಬಾಯಿ.

➢ ಪುತಲಿಬಾಯಿಯವರು ಗಾಂಧೀಜಿಯವರ ಮೇಲೆ ನೈತಿಕ ಪ್ರಭಾವ ಬೀರಿದ್ದರು.

- ಆರಂಭಿಕ ಶಿಕ್ಷಣವನ್ನು ಪೋರ್‌ಬಂದರ್‌ನಲ್ಲಿಯೇ ಮುಗಿಸಿದ ಗಾಂಧೀಜಿಯವರು 1888ರಲ್ಲಿ ಇಂಗ್ಲೆಂಡಿಗೆ ಕಾನೂನು ಅಧ್ಯಯನ ಮಾಡಲು ಹೋಗಿ "ಬಾರ್ ಅಟ್ ಲಾ" ಮುಗಿಸಿ ಭಾರತಕ್ಕೆ ವಾಪಸ್ಸಾದರು.
- 1893ರಲ್ಲಿ ದಾದಾ ಅಬ್ದುಲ್ಲಾ ಮತ್ತು ಕಂಪನಿಯ ವಕಾಲತ್ತು ವಹಿಸಲು ದಕ್ಷಿಣ ಆಫ್ರಿಕಾದ 'ನಟಾಲ್'ಗೆ ಹೋದರು.
- ಗಾಂಧಿ ಬರಿ ಮೂರು ತಿಂಗಳು ಇರಬೇಕಾಗಿದ್ದವರು ಸುಮಾರು 20 ವರ್ಷಗಳನ್ನು ಕಳೆದರು.
- ಕರಿಯರ ಮತ್ತು ಭಾರತೀಯರ ಬಗೆಗೆ ಅಲ್ಲಿನ ಬ್ರಿಟಿಷ್ ಸರ್ಕಾರ ತೋರಿದ್ದ ಅಸಹನೀಯ ವರ್ಣಭೇದ ನೀತಿ ಮತ್ತು ಜನಾಂಗೀಯ ತಾರತಮ್ಯದ ನೀತಿಯನ್ನು ವಿರೋಧಿಸಿದರು.
- ಈ ಹೋರಾಟದ ಮೂಲಕ ಗಾಂಧೀಜಿಯವರು 'ಸತ್ಯಾಗ್ರಹ' ಎನ್ನುವ ಹೊಸ ಸಾಮಾಜಿಕ ಆವಿಷ್ಕಾರವನ್ನು ಮಾಡಿ ಅದರ ನೀತಿ ನಿರೂಪಣೆಯನ್ನು ಸೃಷ್ಟಿಸಿದರು.

**14. ಮಹಾತ್ಮ ಗಾಂಧೀಜಿಯವರ ಭಾರತದಲ್ಲಿನ ಆರಂಭಿಕ ಹೋರಾಟಗಳನ್ನು ವಿವರಿಸಿ.**

ಉತ್ತರ : ಮಹಾತ್ಮ ಗಾಂಧೀಜಿಯವರ ಭಾರತದಲ್ಲಿನ ಆರಂಭಿಕ ಹೋರಾಟಗಳು –

- 1916ರಲ್ಲಿ ಗಾಂಧೀಜಿಯವರು ಅಹಮದಾಬಾದ್‌ನಲ್ಲಿ ಸಬರಮತಿ ಆಶ್ರಮವನ್ನು ಸ್ಥಾಪಿಸುವ ಮೂಲಕ ತಮ್ಮ ಹೋರಾಟಕ್ಕೆ ಒಂದು ತಾತ್ವಿಕ ರೂಪವನ್ನು ಕೊಟ್ಟರು.
- ರೈತರ, ದಲಿತರ, ಬುಡಕಟ್ಟು ಜನರ, ಕಾರ್ಮಿಕರ ಬಡಜನರ ಸಂಕಷ್ಟ ಮತ್ತು ಸಮಸ್ಯೆಗಳನ್ನು ಆಲಿಸಿದರು.
- 1917ರಲ್ಲಿ ಬಿಹಾರದ ಚಂಪಾರಣ್ಯನಲ್ಲಿ ನೀಲಿ ಬೆಳೆಯಿಂದ ಸಂತ್ರಸ್ತರಾದ ರೈತರ ಪರವಾಗಿ ಚಂಪಾರಣ್ಯ ಚಳವಳಿ ಆರಂಭಿಸಿ ಬ್ರಿಟಿಷ್ ಸರ್ಕಾರ ಮಣಿಯುವಂತೆ ಮಾಡಿದರು.
- 1918ರಲ್ಲಿ ಅಹಮದಾಬಾದ್‌ನ ಹತ್ತಿ ಗಿರಣಿಯ ಕಾರ್ಮಿಕರ ಸಂಬಳ ಹೆಚ್ಚಿಸುವ ಸಲುವಾಗಿ ಅವರ ಜೊತೆಗೂಡಿ ಚಳವಳಿ ಆರಂಭಿಸಿ ಯಶಸ್ಸು ಪಡೆದರು.
- ಇದೇ ವರ್ಷ ಗುಜರಾತ್‌ನ ಖೇಡಾ ಎಂಬಲ್ಲಿ ನಡೆದ ರೈತರ ಮೇಲಿನ ತೆರಿಗೆಸಂಬಂಧಿತ ಹೋರಾಟವೂ ಕೂಡಾ ಯಶಸ್ವಿಯಾಯಿತು.
- ಈ ಎಲ್ಲಾ ಹೋರಾಟಗಳಲ್ಲೂ ಗಾಂಧಿ ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹದ ಮಾರ್ಗವನ್ನು ಪರಿಚಯಿಸಿ ಪ್ರಯೋಗಿಸಿದರು.
- ಗಾಂಧೀಜಿಯವರ ಪ್ರವೇಶದಿಂದಾಗಿ ಸ್ವಾತಂತ್ರ್ಯ ಚಳವಳಿಯು ಹೊಸ ಆಯಾಮವನ್ನು ಪಡೆಯಿತು.
- ತಮ್ಮ ಸಿದ್ಧಾಂತಗಳನ್ನು ಅವರು 'ಹರಿಜನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ವ್ಯಕ್ತಪಡಿಸಿದರು.

**15. ಜಲಿಯನ ವಾಲಾಬಾಗ ದುರಂತವನ್ನು ವಿವರಿಸಿ.**

**ಉತ್ತರ : ಜಲಿಯನ್ ವಾಲಾಬಾಗ ದುರಂತ –**

- ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕಲು ಬ್ರಿಟಿಷರು ರೌಲೆಟ್ ಕಾಯ್ದೆಯನ್ನು ಜಾರಿಗೆ ತಂದರು.
- ಇದನ್ನು ವಿರೋಧಿಸಲು 1919 ಎಪ್ರಿಲ್ 13ರಂದು ಪಂಜಾಬ್‌ನ ಅಮೃತಸರದ ಜಲಿಯನ್ ವಾಲಾ ಬಾಗ್‌ನಲ್ಲಿ ಜನರು ಬೈಸಾಕೀ ಹಬ್ಬದಂದು ಪ್ರತಿಭಟನಾ ಸಭೆ ಸೇರಿದರು.
- ಸಭೆ ಶಾಂತಿಯುತವಾಗಿ ನಡೆಯುತ್ತಿತ್ತು.
- ಅಮೃತಸರದ ಸೈನ್ಯಾಧಿಕಾರಿ ಜನರಲ್ ಡಯರ್ ಅಲ್ಲಿ ನೆರೆದ ಜನರ ಮೇಲೆ ಹತ್ತು ನಿಮಿಷಗಳ ಅವ್ಯಾಹತ ಗುಂಡಿನ ದಾಳಿ ನಡೆಸಿದನು.
- ಈ ಗುಂಡಿನ ದಾಳಿಗೆ ಸುಮಾರು 380 ಜನರು ಸತ್ತು ಸಾವಿರಾರು ಜನರು ಗಾಯಗೊಂಡರು.
- ಈ ಘಟನೆಯು ಗಾಂಧೀಜಿಯನ್ನು ಸೇರಿದಂತೆ ಅನೇಕ ಭಾರತೀಯರನ್ನು ಶೋಕತಪ್ತರನ್ನಾಗಿಸಿತು.
- ಈ ಘಟನೆಯನ್ನು ಜಲಿಯನ್ ವಾಲಾಬಾಗ್ ದುರಂತ ಎಂದು ಕರೆಯುತ್ತಾರೆ.
- ಈ ಹತ್ಯಾಕಾಂಡವನ್ನು ವಿರೋಧಿಸಿ ರವೀಂದ್ರನಾಥ ಠಾಗೋರ್‌ರು ತಮ್ಮ 'ನೈಟ್‌ಹುಡ್' ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ವಾಪಾಸ್ ಮಾಡಿದರು.
- ಮುಗ್ಧ ಭಾರತೀಯರನ್ನು ಹತ್ಯೆಗೈದ ಜನರಲ್ ಡಯರ್‌ನನ್ನು ಭಾರತದ ಕ್ರಾಂತಿಕಾರಿ ಉದಮ್‌ಸಿಂಗ್‌ನು ಹತ್ಯೆ ಮಾಡಿದನು.

**16. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಸಹಕಾರ ಚಳುವಳಿಗೆ ಕರೆ ಕೊಡಲು ಕಾರಣಗಳೇನು?**

**ಉತ್ತರ : ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಸಹಕಾರ ಚಳುವಳಿಗೆ ಕರೆ ಕೊಡಲು ಕಾರಣಗಳು –**

- 1920 ಸೆಪ್ಟೆಂಬರ್ 4ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಲ್ಕತ್ತಾ ವಿಶೇಷ ಅಧಿವೇಶನದಲ್ಲಿ ಅಸಹಕಾರ ಚಳವಳಿಯನ್ನು ಆರಂಭಿಸಲು ಗೊತ್ತುವಳಿಯನ್ನು ಅನುಮೋದಿಸಿತು.
- ಅಹಿಂಸೆಯ ಮೂಲಕ ಸ್ವರಾಜ್‌ಗಳಿಕೆ, ಬ್ರಿಟಿಷರ ನಿರ್ದಯಿ ಆಡಳಿತದ ವಿಕೃತ ಸ್ವರೂಪವನ್ನು ಜನರಿಗೆ ಪರಿಚಯಿಸುವುದು.
- ಮುಖ್ಯವಾಗಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದಂತಹ ಘಟನೆಗಳು ಭವಿಷ್ಯತ್ತಿನಲ್ಲಿ ನಡೆಯದಂತೆ ವಿರೋಧಿಸುವುದು.
- ಬ್ರಿಟಿಷ್ ಆಡಳಿತವನ್ನು ಸಂಪೂರ್ಣ ವಿರೋಧಿಸುವುದು ಪ್ರಮುಖ ಗುರಿಯಾಗಿತ್ತು.
- ರೌಲೆಟ್ ಕಾಯ್ದೆಯನ್ನು ಬ್ರಿಟಿಷ್ ಸರಕಾರ ಹಿಂತೆಗೆದುಕೊಳ್ಳುವುದು.
- ಹೊಸ ರಾಜಕೀಯ ಸುಧಾರಣೆಗಳನ್ನು ಜಾರಿಗೊಳಿಸುವ ಮೂಲಕ ಸ್ವರಾಜ್ಯವನ್ನು ಭಾರತಕ್ಕೆ ನೀಡಬೇಕೆಂಬುದು ಪ್ರಮುಖ ಬೇಡಿಕೆಯಾಗಿತ್ತು.

**17. ಅಸಹಕಾರ ಚಳವಳಿಯ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ.**

**ಉತ್ತರ : ಅಸಹಕಾರ ಚಳವಳಿಯ ಪ್ರಮುಖ ಕಾರ್ಯಕ್ರಮಗಳು –**

- ಶಾಲಾ ಕಾಲೇಜುಗಳನ್ನು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು.
- 1919ರ ಕಾಯ್ದೆಯನ್ವಯ ಪ್ರಾಂತೀಯ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಯನ್ನು ಬಹಿಷ್ಕರಿಸುವುದು.
- ಬ್ರಿಟಿಷರು ನೀಡಿರುವ ಗೌರವ ಪದವಿಗಳನ್ನು ಮತ್ತು ಸ್ಥಾನಗಳನ್ನು ವಾಪಸ್ಸು ಮಾಡುವುದು.
- ಸ್ಥಳೀಯ ಸಭೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರು ರಾಜಿನಾಮೆ ನೀಡುವುದು.
- ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸದೆ ಬಹಿಷ್ಕರಿಸುವುದು.
- ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು.
- ಕೈಮಗ್ಗದ ನೇಕಾರಿಕೆಯನ್ನು ಉತ್ತೇಜಿಸುವುದು. ಮತ್ತು ಖಾದಿಯನ್ನು ತಯಾರಿಸುವುದು.
- ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು.
- ಹಿಂದೂ ಮತ್ತು ಮುಸ್ಲಿಂರ ನಡುವೆ ಐಕ್ಯತೆಯನ್ನು ಸಾಧಿಸುವುದು.
- ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು.
- ಮಹಿಳೆಯರನ್ನು ಶೋಚನೀಯ ಸ್ಥಿತಿಯಿಂದ ಪಾರು ಮಾಡಿ ಅವರಲ್ಲಿ ಸಬಲೀಕರಣವನ್ನು ತರುವುದು.

**18. ಅಸಹಕಾರ ಚಳವಳಿಯ ಸಂದರ್ಭದಲ್ಲಿ ಆದ ಪ್ರಮುಖ ಬೆಳವಣಿಗೆಗಳೇನು?**

**ಉತ್ತರ : ಅಸಹಕಾರ ಚಳವಳಿಯ ಸಂದರ್ಭದಲ್ಲಿ ಆದ ಪ್ರಮುಖ ಬೆಳವಣಿಗೆಗಳು –**

- ದೇಶಬಂಧು ಚಿತ್ತರಂಜನ್‌ದಾಸ್, ಮೋತಿಲಾಲ್ ನೆಹರೂ, ರಾಜೇಂದ್ರ ಪ್ರಸಾದ್ ಮೊದಲಾದ ಹಿರಿಯ ವಕೀಲರು ತಮ್ಮ ವಕೀಲಿ ವೃತ್ತಿಯನ್ನು ಬಿಟ್ಟರು.
- ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತೊರೆದರು.
- ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸದೆ ಕಾಂಗ್ರೆಸ್ 1919ರ ಕಾಯ್ದೆಯ ಅಡಿಯಲ್ಲಿ ಪ್ರಾಂತ್ಯಗಳಿಗೆ ನಡೆದ ಚುನಾವಣೆಯನ್ನು ಬಹಿಷ್ಕರಿಸಿತು.
- ಕಾಶಿ ವಿದ್ಯಾಪೀಠ, ಗುಜರಾತ್ ವಿದ್ಯಾಪೀಠ, ಬಿಹಾರ ವಿದ್ಯಾಪೀಠ ಮತ್ತು ಜಾಮೀಯಾ ಮಿಲಿಯಾ ಇಸ್ಲಾಮಿಯಾ ರಾಷ್ಟ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.
- ರವಿಂದ್ರನಾಥ ಠಾಗೂರರು ತಮ್ಮ 'ನೈಟ್ ವುಡ್' ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂದಿರುಗಿಸಿದರು.
- ಮಹಿಳೆಯರೂ ಸೇರಿದಂತೆ ಜನಸಾಮಾನ್ಯರು ಕಾಂಗ್ರೆಸ್ ಹೋರಾಟಕ್ಕೆ ದೇಣಿಗೆ ನೀಡಿದರು.
- ವಿದೇಶಿ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳ ಮುಂದೆ ಮುಷ್ಕರ ನಡೆಸಲಾಯಿತು. ಮತ್ತು ವಿದೇಶಿ ಬಟ್ಟೆಗಳನ್ನು ಸುಡಲಾಯಿತು.
- 1921ರಲ್ಲಿ 'ಪ್ರಿನ್ಸ್ ಆಫ್ ವೇಲ್ಸ್' ರಾಜಕುಮಾರ ಬರುವ ಕಾರ್ಯಕ್ರಮವನ್ನು ವಿರೋಧಿಸಲಾಯಿತು.

**19. ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಳ್ಳು ಕಾರಣವೇನು? ಅಥವಾ ಚೌರಿಚೌರಾ ಘಟನೆಯನ್ನು ವಿವರಿಸಿ.**

**ಉತ್ತರ : ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಳ್ಳು ಕಾರಣಗಳು ಅಥವಾ ಚೌರಿಚೌರಾ ಘಟನೆ –**

- ಫೆಬ್ರುವರಿ 5, 1922ರಂದು ಉತ್ತರ ಪ್ರದೇಶದ ಘೋರಕ್‌ಪುರ ಜಿಲ್ಲೆಯ ಚೌರಿ ಚೌರ ಎಂಬಲ್ಲಿ ಸುಮಾರು 3000 ರೈತನ್ನೊಳಗೊಂಡ ದೊಡ್ಡ ಗುಂಪು ಪೋಲಿಸ್ ಸ್ಟೇಷನ್ನಿನ ಮುಂದೆ ಸೇರಿತು.
- ಅವರ ಪ್ರಮುಖ ಉದ್ದೇಶ ಮದ್ಯದ ಅಂಗಡಿಯ ಮುಂದೆ ಮುಷ್ಕರ ನಡೆಸುತ್ತಿದ್ದ ಕಾಂಗ್ರೆಸ್ ಹೋರಾಟಗಾರರನ್ನು ತಳಿಸಿದ ಪೋಲಿಸ್ ಅಧಿಕಾರಿಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುವುದು.
- ಇದನ್ನು ಸಹಿಸದ ಪೋಲೀಸರು ಅಲ್ಲಿ ನೆರೆದಿದ್ದವರ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದರು.
- ಇದು ಜನರನ್ನು ಕೆರಳಿಸಿತು. ಅವರು ಪೋಲಿಸ್ ಸ್ಟೇಷನ್ನಿಗೆ ಬೆಂಕಿ ಇಟ್ಟರು. ಇದರಿಂದಾಗಿ ಒಳಗಡೆ ಇದ್ದ 22 ಪೋಲಿಸರು ಸಜೀವವಾಗಿ ಸುಟ್ಟುಹೋದರು.
- ಈ ಹಿಂಸಾತ್ಮಕ ಘಟನೆಯಿಂದ ನೊಂದ ಗಾಂಧೀಜಿಯವರು ಫೆಬ್ರುವರಿ 12, 1922ರಂದು ಅಸಹಕಾರ ಹೋರಾಟವನ್ನು ಹಿಂತೆಗೆದುಕೊಂಡರು.
- ಗಾಂಧೀಜಿಯವರು ಜನರನ್ನು ಪ್ರಚೋದಿಸುತ್ತಿದ್ದಾರೆ ಎನ್ನುವ ಆರೋಪದಡಿ ಮಾರ್ಚ 10, 1922ರಂದು ಅವರನ್ನು ಬಂಧಿಸಿ 6 ವರ್ಷಗಳ ಕಾರಾಗೃಹ ವಾಸಕ್ಕೆ ಬ್ರಿಟಿಷರು ಕಳುಹಿಸಿದರು.
- ಆದರೆ ಅವರ ಅನಾರೋಗ್ಯದ ಕಾರಣದಿಂದ ಎರಡು ವರ್ಷಗಳ ನಂತರ ಜೈಲಿನಿಂದ ಬಿಡುಗಡೆ ಮಾಡಲಾಯಿತು.
- ಗಾಂಧೀಜಿಯವರ ಈ ತಿರ್ಮಾನದಿಂದ ರಾಜಕೀಯ ಶೂನ್ಯತೆ ಸೃಷ್ಟಿಯಾಯಿತು.

**20. ಸವಿನಯ ಕಾನೂನುಭಂಗ ಚಳವಳಿಯನ್ನು ವಿವರಿಸಿ. ಅಥವಾ ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿಯವರು ರಾಷ್ಟ್ರೀಯ ಚಳವಳಿಯನ್ನಾಗಿ ಹೇಗೆ ಬದಲಾಯಿಸಿದರು?**

**ಉತ್ತರ : ಸವಿನಯ ಕಾನೂನುಭಂಗ ಚಳವಳಿ ಅಥವಾ ಉಪ್ಪಿನ ಸತ್ಯಾಗ್ರಹ –**

- ಗಾಂಧೀಜಿಯವರು ಮಾರ್ಚ 2, 1930ರಂದು ಹನ್ನೊಂದು ಅಂಶಗಳುಳ್ಳ ಬೇಡಿಕೆಗಳ ಪತ್ರವನ್ನು ವೈಸರಾಯ್‌ಗೆ ಬರೆದರು.
- ಒಂದು ವೇಳೆ ಸರ್ಕಾರ ಇದಕ್ಕೆ ತಪ್ಪಿದಲ್ಲಿ, ತೆರಿಗೆ ನಿರಾಕರಣೆಯ ಜತೆ ನಾಗರಿಕ ಕಾನೂನುಭಂಗ ಚಳವಳಿಯನ್ನು ಆರಂಭಿಸುವುದಾಗಿ ಘೋಷಿಸಿದರು.
- ವೈಸರಾಯ್ ಈ ಪತ್ರದ ಮನವಿಗಳನ್ನು ತಿರಸ್ಕರಿಸಿದ ಕಾರಣದಿಂದ 1930 ಮಾರ್ಚ 12 ರಂದು ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ಗುಜರಾತ್‌ನ ಕಡಲತೀರ ದಂಡಿಯವರೆಗೆ ಸುಮಾರು 375 ಕಿ.ಮೀ. ದೂರವನ್ನು ಕ್ರಮಿಸಿದರು.
- ಎಪ್ರಿಲ್ 6ರಂದು ಗಾಂಧಿ ದಂಡಿಯನ್ನು ತಲುಪಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು.
- ಚರಕ ಈ ಚಳವಳಿಯಲ್ಲಿ ಬಹಳ ಪ್ರಸಿದ್ಧವಾಯಿತು.
- ಸಾವಿರಾರು ಜನರು ಗಾಂಧೀಜಿಯವರ ಕರೆಗೆ ಸ್ಪಂದಿಸಿ ಚಳವಳಿಯಲ್ಲಿ ಭಾಗವಹಿಸಿದರು.
- ಕಾನೂನುಭಂಗ ಚಳವಳಿಯಲ್ಲಿ ಗಾಂಧೀಜಿಯವರೊಂದಿಗೆ ಭಾಗವಹಿಸಿದ ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರು, ವಲ್ಲಭಭಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರಪ್ರಸಾದ್ ಮೊದಲುಗೊಂಡು ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು.

**21. ಎರಡನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದ ಫಲಿತಾಂಶವೇನು?**

**ಉತ್ತರ :**

- ಗಾಂಧಿ ಮತ್ತು ಇರ್ವಿನ್ ನಡುವೆ ಆದ ಒಪ್ಪಂದದಂತೆ ಕಾಂಗ್ರೆಸ್ ಪಕ್ಷವು ಸವಿನಯ ಕಾನೂನುಭಂಗ ಚಳವಳಿಯನ್ನು ನಿಲ್ಲಿಸಿ ಎರಡನೆಯ ದುಂಡುಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸಲು ನಿರ್ಧರಿಸಿತು.
- ಈ ಸಮಾವೇಶದಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮುಂದಿಟ್ಟರು.
- ಈ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಲಿಲ್ಲ.
- ಇದರಿಂದ ಗಾಂಧೀಜಿ ಮತ್ತು ಅಂಬೇಡ್ಕರ್‌ರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು.
- ಹೀಗಾಗಿ ಎರಡನೆಯ ದುಂಡುಮೇಜಿನ ಪರಿಷತ್ತು ಸಮಾವೇಶ ಕೂಡ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯವಾಯಿತು.
- ಬ್ರಿಟಿಷ್ ಸರ್ಕಾರವು ಅಸ್ಪೃಶ್ಯರನ್ನು ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿತು.
- ಇದರಿಂದಾಗಿ ಆ ವರ್ಗಕ್ಕೆ ನೀಡುವ ಪ್ರತ್ಯೇಕ ಮತಕ್ಷೇತ್ರಕ್ಕೆ ಸಂಬಂಧಿಸಿದ 'ಮತೀಯ ಮಸೂದೆ'ಗೆ 1932ರಲ್ಲಿ ಚಾಲ್ತಿ ನೀಡಿದರು.

**22. ಕ್ವಿಟ್ ಇಂಡಿಯಾ ಚಳವಳಿಯು ನಡೆದ ರೀತಿಯನ್ನು ವಿವರಿಸಿ. ಅಥವಾ ಸ್ವಾತಂತ್ರ್ಯ ಹೋರಾಟದಲ್ಲಿ ಕ್ವಿಟ್ ಇಂಡಿಯಾ ಚಳವಳಿಯೇ ಪ್ರಮುಖವಾದುದು ಎಂದು ಹೇಗೆ ಹೇಳುವಿರಿ.**

**ಉತ್ತರ : ಕ್ವಿಟ್ ಇಂಡಿಯಾ ಚಳವಳಿ –**

- ಸ್ಟ್ರಾಫರ್ಡ್ ಕ್ರಿಪ್ಸ್ ಆಯೋಗದ ಸಲಹೆಯನ್ನು ಕಾಂಗ್ರೆಸ್ ಒಪ್ಪದೆ 1942ರಲ್ಲಿ ಕ್ವಿಟ್ ಇಂಡಿಯಾ ಚಳವಳಿಗೆ ಕರೆ ನೀಡಿತು.
- 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವುದು ಕ್ವಿಟ್ ಇಂಡಿಯಾ ಚಳವಳಿಯ ಆಶಯವಾಗಿತ್ತು.
- ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೆ ಮಡಿ' ಎನ್ನುವ ಕರೆ ನೀಡಿದರು.
- ಈ ಕರೆ ನೀಡಿದ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ಗಾಂಧೀಜಿ, ರಾಜೇಂದ್ರಪ್ರಸಾದ್, ಅಬುಲ್ ಕಲಾಂ ಅಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಆಚಾರ್ಯ ಕೃಪಲಾನಿ, ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬಂಧಿಸಿ ಜೈಲಿನಲ್ಲಿಟ್ಟಿತು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.
- ಈ ಸಂದರ್ಭದಲ್ಲಿ ಚಳವಳಿಯ ನೇತೃತ್ವವನ್ನು ಜಯಪ್ರಕಾಶ ನಾರಾಯಣರವರು ವಹಿಸಿಕೊಂಡರು.
- ಇವರು ತಮ್ಮ ಬೆಂಬಲಿಗರೊಡನೆ ದೇಶದ ವಿವಿಧೆಡೆಯಲ್ಲಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಿದರು.
- ಸಮಾಜವಾದಿಗಳು 'ದಿ ಫ್ರೀಡಂ ಸ್ಟ್ರಗಲ್ ಫ್ರಾಂಟ್' ಎಂಬ ದಾಖಲೆ ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತಂದರು.
- ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆಯನ್ನಿತ್ತರು.
- ಈ ಮೂಲಕವಾಗಿ ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟವರು ಇವರೇ.
- ಈ ತೀವ್ರಸ್ವರೂಪದ ಹೋರಾಟದಿಂದ ಬ್ರಿಟಿಷ್ ಸರ್ಕಾರ ನಡುಗಿತು.

**23. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರ ಪ್ರತಿಭಟನೆಗಳು ಪ್ರಮುಖ ಪಾತ್ರವಹಿಸಿವೆ ಎಂದು ಹೇಗೆ ಹೇಳುವಿರಿ.**

**ಉತ್ತರ : ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರು ನಡೆಸಿದ ಪ್ರತಿಭಟನೆಗಳು ಪ್ರಮುಖವಾಗಿವೆ. ಹೇಗೆಂದರೆ–**

- ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ರೈತರು ಹಲವಾರು ಕಡೆ ದಂಗೆ ನಡೆಸಿದರು.
- ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು.
- ಭೂಕಂದಾಯಗಳ ವಿರುದ್ಧ ಹರತಾಳ ನಡೆಸಿದರು.
- ರಾಷ್ಟ್ರೀಯ ಹೋರಾಟದ ಭಾಗವಾಗಿ ರೈತರನ್ನು ಸಂಘಟಿಸುವ ಪ್ರಯತ್ನವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಾಡಿತು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಭಾವದಿಂದ ತೇಭಾಗ, ಮಲಬಾರ್ ಮೊದಲಾದೆಡೆ ಶೋಷಣೆಗೊಳಗಾಗಿದ್ದ ರೈತರು ತೀವ್ರವಾಗಿ ಜಮೀನ್ದಾರರು ಹಾಗೂ ಬ್ರಿಟಿಷರ ವಿರುದ್ಧ ಬಂಡೆದ್ದರು.
- ಅಸಹಕಾರ ಅಂದೋಲನ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು.
- ತೆಲಂಗಾಣದ ರೈತ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧ ಪ್ರತಿಭಟಿಸಿತು.
- ಬಂಗಾಳದ ರೈರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು.
- ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳವಳಿ ನಡೆಸಿದರು.

**24. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರ ಹೋರಾಟವನ್ನು ವಿವರಿಸಿ.**

**ಉತ್ತರ : ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರ ಹೋರಾಟ –**

- ಕಾರ್ಮಿಕರ ಹೋರಾಟವು 1827ರಲ್ಲಿ ಕಲ್ಕತ್ತದಲ್ಲಿ ಆರಂಭವಾಯಿತು.
- ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು.

➢ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

➢ಕಲ್ಕತ್ತದಲ್ಲಿ ಪ್ರಿಂಟರ್ಸ್ ಯುನಿಯನ್‌ನವರು ಮತ್ತು ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಉಂಟು ಮಾಡಿದರು.

➢ಮದ್ರಾಸ್‌ನಲ್ಲಿ ಲೇಬರ್ ಯುನಿಯನ್ ಸ್ಥಾಪನೆಯಾಯಿತು.

➢ಕಾಂಗ್ರೆಸ್ ಪಕ್ಷವು ಕಾರ್ಮಿಕ ಸಂಘಟನೆಗಳ ಇಂತಹ ಚಳವಳಿಗೆ ಬೆಂಬಲ ನೀಡಿತು.

➢ಸ್ವಾತಂತ್ರ್ಯ ಚಳವಳಿಯಲ್ಲಿ ಕಾರ್ಮಿಕರ ಪಾತ್ರವು ಅನನ್ಯವಾದದ್ದು.

**25. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟುವರ್ಗ ಗಳ ಬಂಡಾಯವನ್ನು ವಿವರಿಸಿ.**

**ಉತ್ತರ : ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯ**

➢ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ನೇರವಾಗಿ ಪ್ರೇರಣೆಯಾದವು.

➢ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ, ಕೋಲರ ದಂಗೆ ಮತ್ತು ಮುಂಡ ಚಳುವಳಿ ಪ್ರಮುಖವಾಗಿವೆ.

➢ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಪ್ರಮುಖವಾದುದು.

➢ಬ್ರಿಟಿಷರು ಜಾರಿಗೆ ತಂದ ಖಾಯಂ ಜಮಿನ್ದಾರಿ ಪದ್ಧತಿಯಿಂದ ಸಂತಾಲ ಬುಡಕಟ್ಟು ಜನರು ನಿರ್ಗತಿಕರಾದರು.

➢ಬುಡಕಟ್ಟು ಜನರ ಜಮೀನು ಜಮಿನ್ದಾರರ ಕೈ ಸೇರಿತು.

➢ಇದರಿಂದ ಅಸಮಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರನ್ನು & ಮಹಾಜನರನ್ನು ಲೂಟಿ ಮಾಡಲು ನಿರ್ಧರಿಸಿದರು.

➢ಜಮೀನ್ದಾರರು, ಲೇವಾದೇವಿಗಾರರು ಪಲಾಯನ ಮಾಡಿದರು.

➢ಸಂತಾಲರ ದಂಗೆಯನ್ನು ಬ್ರಿಟಿಷರು ಸೈನ್ಯವನ್ನು ಬಳಸಿ ಹತ್ತಿಕ್ಕಿದರು.

➢ಸಂತಾಲರ ರೀತಿಯಲ್ಲಿಯೇ ಕೋಲರು ಮತ್ತು ಮುಂಡರು ಬ್ರಿಟಿಷರ ಮತ್ತು ಜಮೀನ್ದಾರರ ವಿರುದ್ಧ ಹೋರಾಟಗಳನ್ನು ಮಾಡಿದರು.

**26. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ್‌ಚಂದ್ರ ಬೋಸ್‌ರ ಸಾಧನೆಗಳನ್ನು ವಿವರಿಸಿ. ಅಥವಾ**
**ಸ್ವಾತಂತ್ರ್ಯ ಚಳುವಳಿಯಲ್ಲಿ ಐ ಎನ್ ಎ ಪಾತ್ರವನ್ನು ವಿವರಿಸಿ.**

**ಉತ್ತರ : ಸ್ವಾತಂತ್ರ್ಯ ಚಳುವಳಿಯಲ್ಲಿ ಸುಭಾಸ್ ಚಂದ್ರ ಬೋಸ್‌ರ ಪಾತ್ರ – ಅಥವಾ**
**ಸ್ವಾತಂತ್ರ್ಯ ಚಳುವಳಿಯಲ್ಲಿ ಐ ಎನ್ ಎ ಪಾತ್ರ –**

➢ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವು ಒಂದು ದಿಟ್ಟ ಮೈಲಿಗಲ್ಲು.

➢ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ನಾಲ್ಕನೇ ರ್‍ಯಾಂಕ್ ಗಳಿಸಿದರೂ, ದೇಶಾಭಿಮಾನದಿಂದಾಗಿ ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು.

➢ಸುಭಾಸ್ ಚಂದ್ರ ಬೋಸ್‌ರು ಗಾಂಧೀಜಿಯವ ರೊಂದಿಗಿನ ಭಿನ್ನಾಭಿಪ್ರಾಯದಿಂದ ಕಾಂಗ್ರೇಸ್‌ನಿಂದ ಹೊರಬಂದು ಫಾರ್ವರ್ಡ್ ಬ್ಲಾಕ್ ಎಂಬ ಹೊಸ ಪಕ್ಷ ಕಟ್ಟಿ ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸಿದರು.

➢ಬ್ರಿಟಿಷರ ಯುದ್ಧ ತಯಾರಿಯನ್ನು ಹಾಗೂ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ಸುಭಾಷರು ವಿರೋಧಿಸಿದರು.

➢ಪರಿಣಾಮವಾಗಿ ಬ್ರಿಟಿಷ ಸರಕಾರ ಸುಭಾಷರನ್ನು ಗೃಹ ಬಂಧನದಲ್ಲಿಟ್ಟಿತು. ಅವರು ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ಹೋದರು.

➢ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಇವರಿಗೆ ಎಲ್ಲಾ ಸಹಾಯವನ್ನು ನೀಡುವ ಭರವಸೆಯನ್ನು ವ್ಯಕ್ತಪಡಿಸಿದನು.

➢'ಅಜಾದ್ ಹಿಂದ್ ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು.

➢ರಾಸ್ ಬಿಹಾರಿ ಬೋಸರವರು ಜಪಾನಿನ ಟೋಕಿಯೋದಲ್ಲಿ ಸ್ಥಾಪಿಸಿದ 'ಇಂಡಿಯನ್ ಇಚಿಡಿಪೆಂಡೆನ್ಸ್ ಲೀಗ್'ನ ಸೇನಾವಿಭಾಗವನ್ನು 'ಭಾರತೀಯ ರಾಷ್ಟ್ರೀಯ ಸೇನೆ' (INA)ಎಂದು ಕರೆದು ಅದರ ಮುಖಂಡತ್ವವನ್ನು ವಹಿಸಿದರು.

➢'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು.

➢ಸುಭಾಷರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದ್ದರು.

➢ಸುಭಾಷರ ಆದೇಶದಂತೆ ಸಶಸ್ತ್ರ ಹೋರಾಟವನ್ನು ಬರ್ಮಾದ ಗಡಿಯಲ್ಲಿ ಆರಂಭಿಸಿದರು.

➢ಬ್ರಿಟಿಷರು ಮತ್ತು ಐ ಎನ್ ಎ ನಡುವೆ ತೀವ್ರವಾದಂತಹ ಯುದ್ಧ ನಡೆಯಿತು.

➢ಈ ಸಂದರ್ಭದಲ್ಲಿ ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು.

**27. ಸಾಮಾಜಿಕ ಸಮಾನತೆ ತರುವಲ್ಲಿ ಬಿ.ಆರ್. ಅಂಬೇಡ್ಕರರು ವಹಿಸಿದ ಪಾತ್ರ ಗಮನಾರ್ಹವಾದುದು. ಈ ಹೇಳಿಕೆಯನ್ನು ಸಮರ್ಥಿಸಿ.**

**ಉತ್ತರ : ಸಾಮಾಜಿಕ ಸಮಾನತೆ ತರುವಲ್ಲಿ ಬಿ.ಆರ್. ಅಂಬೇಡ್ಕರರು ವಹಿಸಿದ ಪಾತ್ರ.**

➢ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರರು ಬಲವಾಗಿ ನಂಬಿದ್ದರು.

➢ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು.

➢ಅಸ್ಪೃಶ್ಯರು ಕನಿಷ್ಟ ಮಟ್ಟದ ಅವಕಾಶಗಳಿಂದ ವಂಚಿತವಾಗಿರುವದನ್ನು ನಿರೂಪಿಸಲು 'ಮಹದ್' ಮತ್ತು 'ಕಾಲಾರಾಂ' ದೇವಾಲಯ ಚಳುವಳಿಗಳನ್ನು ರೂಪಿಸಿದರು.

➢ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ & ಅಂಬೇಡ್ಕರರ ನಡುವೆ ಭಿನ್ನಾಭಿಪ್ರಾಯಕ್ಕೂ ಕಾರಣವಾಯಿತು.

➢ಗಾಂಧೀಜಿಯವರೊಂದಿಗೆ ಪೂನಾ ಒಪ್ಪಂದವನ್ನು ಮಾಡಿಕೊಂಡು ಚುನಾವಣಾ ಕ್ಷೇತ್ರಗಳಲ್ಲಿ ಅಸ್ಪೃಶ್ಯರಿಗೆ ಮೀಸಲಾತಿಯನ್ನು ಪಡೆದರು.

➢ಡಾ. ಬಿ.ಆರ್. ಅಂಬೇಡ್ಕರ್‌ರವರು 'ಬಹಿಷ್ಕೃತ ಭಾರತ' ಎಂಬ ಸಂಘಟನೆ ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ'ದ ಮೂಲಕ ಶೋಷಿತರು ಮತ್ತು ಕೃಷಿ ಕಾರ್ಮಿಕರನ್ನು ಸಂಘಟಿಸಿದರು.

➢ಇವರು ಪ್ರಭುದ್ಧ ಭಾರತ, ಜನತಾ, ಮೂಕನಾಯಕ & ಬಹಿಷ್ಕೃತ ಭಾರತ ಪತ್ರಿಕೆಗಳನ್ನು ಹೊರಡಿಸುವುದ ಮೂಲಕ ತಮ್ಮ ವಿಚಾರಧಾರೆಗಳನ್ನು ಜನರಿಗೆ ತಲುಪಿಸಿದರು.

➢ಭಾರತದ ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆಯನ್ನು ಒದಗಿಸಿದರು.

➢ಜಾತಿ ವ್ಯವಸ್ಥೆಯಿಂದ ಬೇಸತ್ತ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಬೌದ್ಧ ಧರ್ಮವನ್ನು ಸ್ವೀಕರಿಸಿದರು.

➢ಇವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**28. ಸ್ವಾತಂತ್ರ್ಯ ಹೋರಾಟದಲ್ಲಿ ನೆಹರುರವರ ಸಾಧನೆಯನ್ನು ವಿವರಿಸಿ.**

**ಉತ್ತರ : ಸ್ವಾತಂತ್ರ್ಯ ಹೋರಾಟದಲ್ಲಿ ಜವಾಹರಲಾಲ್ ನೆಹರುರವರ ಸಾಧನೆ –**

➢ಪಂಡಿತ ಜವಾಹರಲಾಲ್ ನೆಹರುರವರು ಹೋಂರೂಲ್ ಚಳವಳಿಯೊಂದಿಗೆ ಸ್ವಾತಂತ್ರ್ಯ ಹೋರಾಟವನ್ನು ಪ್ರವೇಶಿಸಿದರು.

➢1920ರಲ್ಲಿ ನಡೆದ ಅಸಹಕಾರ ಚಳವಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು.

➢1929ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಲಾಹೋರ್ ಅಧಿವೇಶನದ ಅಧ್ಯಕ್ಷರಾಗಿದ್ದರು. ಈ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯದ ಗುರಿಯನ್ನು ಘೋಷಿಸಲಾಯಿತು.

➢ನೆಹರುರವರ ಚಿಂತನೆಗಳು ರಾಜಕೀಯ ಚಟುವಟಿಕೆಗಳಿಗೆ ಹೊಸ ತಿರುವನ್ನು ನೀಡಿದವು.

➢ಕಮ್ಯುನಿಷ್ಟರ ಸಿದ್ಧಾಂತಗಳಿಂದ ಪ್ರಭಾವಿತರಾದ ನೆಹರು ಮತ್ತು ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು 1934ರಲ್ಲಿ ಸ್ಥಾಪಿಸಿದರು.

➢ನೆಹರು ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 49ನೆಯ ಅಧಿವೇಶನದ ಅಧ್ಯಕ್ಷರಾಗಿದ್ದರು.

➢'ಚರಕ' ಮತ್ತು 'ಹರಿಜನ' ಚಳವಳಿಗಳು ಅಷ್ಟೇನೂ ಪರಿಣಾಮಕಾರಿಯಲ್ಲವೆಂದು ಇವರು ವಾದಿಸಿದರು.

➢ಕಾಂಗ್ರೆಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಎಂದು ಹೇಳಿದರು.

➢ಕಾಂಗ್ರೆಸ್ ಪಕ್ಷದ ತೀವ್ರತರನಾದ ಹೋರಟದೊಂದಿಗೆ ಭಾರತವು ಅಗಷ್ಟ 15, 1947ರಂದು ಸ್ವಾತಂತ್ರ್ಯ ಪಡೆಯಿತು.

➢ಜವಾಹರಲಾಲ್ ನೆಹರುರವರು ಭಾರತದ ಮೊಟ್ಟ ಮೊದಲ ಪ್ರಧಾನಮಂತ್ರಿಯಾದರು.

**29. ಜವಾಹರಲಾಲ್ ನೆಹರುರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.**

**ಉತ್ತರ : ಜವಾಹರಲಾಲ ನೆಹರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳು –**

- ಗೃಹ ಮಂತ್ರಿ ಸರ್ಧಾರ ವಲ್ಲಭಭಾಯಿ ಪಟೇಲ್ ನೇತೃತ್ವದಲ್ಲಿ ದೇಶಿ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಕಾರಣರಾದರು.
- ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ತಳಹದಿಯನ್ನು ಹಾಕಿದರು.
- ಬಂಡವಾಳ & ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರುರವರ ಆಧುನಿಕ ಭಾರತದ ಅಭಿವೃದ್ಧಿಯ ಮೈಲಿಗಲ್ಲಾಯಿತು.
- ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ಅವರು ಬಲವಾಗಿ ನಂಬಿದ್ದರು.
- ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸನ್ನು ಕಂಡರು.
- ಭಾರತವು ಅಣುಶಕ್ತಿಯನ್ನು ಹೊಂದಬೇಕೆನ್ನುವ ಆಶಯದಿಂದ ಎಚ್ ಜಿ ಬಾಬಾ ಅವರ ನೇತೃತ್ವದಲ್ಲಿ ಭದ್ರ ತಳಹದಿಯನ್ನು ರೂಪಿಸಿದರು.
- ಭಾರತವು ಬಣಗಳ ಧ್ರುವೀಕೃತ ವ್ಯವಸ್ಥೆಯಿಂದ ಹೊರಗಿದ್ದುಕೊಂಡು ತನ್ನದೇ ಆದ ಅಲಿಪ್ತ ನೀತಿಯನ್ನು ಪ್ರತಿಪಾದಿಸಿತು.
- ಪಂಚಶೀಲತತ್ವಗಳನ್ನು ಅಳವಡಿಸಿಕೊಂಡು ವಿಶ್ವದಲ್ಲಿ ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು.
- ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡುವುದರ ಮೂಲಕ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿದರು.

**30. ಭಾರತದ ವಿಭಜನೆಯು ಬ್ರಿಟಿಷರಿಗೆ ಅನಿವಾರ್ಯವಾಗಿತ್ತು ಈ ಹೇಳಿಕೆಯನ್ನು ವಿಶ್ಲೇಷಿಸಿ.**

**ಉತ್ತರ : ಭಾರತದ ವಿಭಜನೆಯು ಬ್ರಿಟಿಷರಿಗೆ ಅನಿವಾರ್ಯವಾಗಿತ್ತು ಏಕೆಂದರೆ –**

- ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಮಹಮ್ಮದ್ ಅಲಿ ಜಿನ್ನಾ ಅವರು ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮುಂಡಿಸುತ್ತಲೇ ಇದ್ದರು.
- 1940ರಲ್ಲಿ ನಡೆದ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಜಿನ್ನಾರವರು ಹಿಂದೂ ಮತ್ತು ಮುಸ್ಲಿಂರು ಒಂದು ದೇಶವಾಗಲು ಸಾಧ್ಯವೇ ಇಲ್ಲ ಎಂದು ಘೋಷಿಸಿದರು.
- ಎರಡನೇ ಮಹಾಯುದ್ದದ ನಂತರ ಬ್ರಿಟನ್ ನಿಯೋಗವು ಸಂವಿಧಾನ ರಚನಾ ಸಭೆ ಕರೆಯುವುದಾಗಿ ಮತ್ತು ಮಧ್ಯಂತರ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು.
- ಆದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವ ವಿಚಾರದಲ್ಲಿ ಭಿನ್ನತೆ ಉಂಟಾಯಿತು.
- ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಅಗಸ್ಟ್ 16ರಂದು ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿತು.
- ಇದರಿಂದಾಗಿ ದೇಶಾದ್ಯಂತ ಕೋಮುಗಲಭೆಗಳು ನಡೆದವು.
- ಹಿಂದು ಮತ್ತು ಮುಸ್ಲಿಂ ವಿಭಜನೆಯನ್ನು ಸೃಷ್ಟಿಸುವ ಆಸಕ್ತಿಯನ್ನು ಬ್ರಿಟಿಷರು ಹೊಂದಿದ್ದರು.
- ಭಾರತಕ್ಕೆ ವೈಸರಾಯ್ ಆಗಿ ಬಂದ ಲಾರ್ಡ ಮೌಂಟ್ ಬ್ಯಾಟನ್‌ರವರು ಗಾಂಧೀಜಿ, ಜಿನ್ನಾ ಮತ್ತಿತರ ನಾಯಕರೊಂದಿಗೆ ಮಾತುಕತೆ ನಡೆಸಿ ಬಾರತವನ್ನು ವಿಭಜಿಸುವ ಯೋಜನೆಯನ್ನು ರೂಪಿಸಿದರು.
- 1947ರ ಜುಲೈನಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯು ಕಾಯ್ದೆಯ ರೂಪವನ್ನು ಪಡೆಯಿತು.
- ಕಾಯ್ದೆಯನ್ವಯ 1947ರ ಅಗಸ್ಟ್ 15ರಂದು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ರಾಷ್ಟ್ರಗಳು ಉದಯಿಸಿದವು.
- ರ್‍ಯಾಡ್‌ಕ್ಲಿಪ್ ಆಯೋಗವು ಈ ಎರಡು ದೇಶಗಳ ಗಡಿಗಳನ್ನು ಗುರುತಿಸಿತು.

**31. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರವೇನು? ವಿವರಿಸಿ.**

**ಉತ್ತರ : ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರ**

- ಭಾರತೀಯ ರಾಷ್ಟ್ರೀಯ ಹೋರಾಟದಲ್ಲಿ ಮಹಾತ್ಮ ಗಾಂಧಿ ಬಹುಮುಖ್ಯ ಪಾತ್ರವನ್ನು ವಹಿಸಿದ್ದಾರೆ.
- 1920 ರಿಂದ 1947ರ ಅವಧಿಯಲ್ಲಿ ಗಾಂಧಿಯ ವಿಚಾರಗಳು ಅವರ ಹೋರಾಟದ ಮಾದರಿ ಭಾರತದ ರಾಷ್ಟ್ರೀಯ ಹೋರಾಟದ ದಿಕ್ಕನ್ನು ಗಣನೀಯವಾಗಿ ರೂಪಿಸಿದ್ದರಿಂದ ಈ ಅವಧಿಯನ್ನು ಗಾಂಧೀಯುಗವೆಂದೂ ಕರೆಯುತ್ತೇವೆ.
- ಗಾಂಧೀಜಿಯವರು ಅಸಹಕಾರ & ಅಹಿಂಸಾತ್ಮಕವಾದ ಸತ್ಯಾಗ್ರಹ ಮಾರ್ಗದಲ್ಲಿ ನಂಬಿಕೆಯನ್ನಿಟ್ಟಿದ್ದರು.
- ಖಿಲಾಫತ್ ಚಳುವಳಿ & ಅಸಹಕಾರ ಚಳುವಳಿ ಗಳನ್ನು ನಡೆಸಿ ಹಿಂದೂ – ಮುಸಲ್ಮಾನರ ಏಕತೆಗೆ ಶ್ರಮಿಸಿದರು.
- ಗಾಂಧೀಜಿಯವರು ಕಾನೂನು ಭಂಗ ಚಳುವಳಿಯನ್ನು ಉಪ್ಪಿನ ಸತ್ಯಾಗ್ರಹದೊಂದಿಗೆ ಆರಂಭಿಸಿದರು.
- ದಂಡಿಯಲ್ಲಿ ಗಾಂಧೀಜಿಯವರು ಹಿಡಿ ಉಪ್ಪನ್ನು ತಯಾರಿಸಿ ಬ್ರಿಟಿಷ್ ಕಾನೂನನ್ನು ಮುರಿದು ಬಂಧನಕ್ಕೊಳಗಾದರು. ಇದನ್ನು ದಂಡಿ ಸತ್ಯಾಗ್ರಹ ಎಂದು ಕರೆಯುತ್ತಾರೆ.
- ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಜನರಿಗೆ "ಮಾಡು ಇಲ್ಲವೇ ಮಡಿ" ಎಂಬ ಕರೆ ನೀಡಿದರು.
- ಇವರ ಹೋರಾಟದ ಫಲವಾಗಿ ಭಾರತವು 1947 ಅಗಷ್ಟ 15 ರಂದು ಸ್ವಾತಂತ್ರ್ಯವನ್ನು ಪಡೆಯಿತು.
- 1948 ಜನವರಿ 30ರಂದು ಪ್ರಾರ್ಥನಾ ಸಭೆಗೆ ನಡೆದು ಹೋಗುತ್ತಿದ್ದ ಹಿಂದೂ ಮುಸ್ಲಿಂ ಭಾವೈಕ್ಯತೆಯ ಹರಿಕಾರ ಗಾಂಧೀಜಿಯವರನ್ನು ನಾಥೋರಾಮ್ ಗೂಡ್ಸೆ ಎಂಬುವವನು ಹತ್ಯೆ ಮಾಡಿದನು.

## ಅಧ್ಯಾಯ – 9 ಸ್ವಾತಂತ್ರ್ಯೋತ್ತರ ಭಾರತ

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. ________ ತಳಹದಿಯಲ್ಲಿ ದೇಶ ಬೆಳೆಯಬೇಕು. ಮತ್ತು ಮುನ್ನಡೆಯಬೇಕು ಎನ್ನವುದೇ ಭಾರತ ಸಂವಿಧಾನದ ಆಶಯ. – **ಧರ್ಮ ನಿರಪೇಕ್ಷತೆ.**
2. ಸ್ವಾತಂತ್ರ್ಯಾನಂತರ ಭಾರತಕ್ಕೆ ಬಂದ ನಿರಾಶ್ರಿತರ ಸಂಖ್ಯೆ – **6 ಲಕ್ಷ ಮಿಲಿಯನ್.**
3. ಭಾರತವು ಬೆಂಬಲಿಸದ _____ ವಿಮೋಚನಾ ಯುದ್ಧದ ಪರಿಣಾಮವಾಗಿ ಸುಮಾರು 10 ಲಕ್ಷ ನಿರಾಶ್ರಿತರು ಭಾರತಕ್ಕೆ ಬಂದರು. – **ಬಾಂಗ್ಲಾ ವಿಮೋಚನೆ.**
4. ಒಂದು ಅಂದಾಜಿನ ಪ್ರಕಾರ ಸುಮಾರು ________ ಟಿಬೇಟಿಯನ್ ನಿರಾಶ್ರಿತರು ಭಾರತದಲ್ಲಿದ್ದಾರೆ. – **ಒಂದು ಲಕ್ಷ ಇಪ್ಪತ್ತು ಸಾವಿರ.**
5. ಮೈಸೂರು ಸರ್ಕಾರ ______ ಎಂಬಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ ಸುಮಾರು 3000 ಎಕರೆಗಳ ಜಮೀನು ಮಂಜೂರು ಮಾಡಿತು. – **ಮೈಸೂರು ಜಿಲ್ಲೆಯ ಬೈಲುಗುಪ್ಪೆ.**
6. ಭಾರತದ ಕೊನೆಯ ಬ್ರಿಟಿಷ್ ಗವರ್ನರ್ ಜನರಲ್ – **ಲಾರ್ಡ ಮೌಂಟ್ ಬ್ಯಾಟನ್.**
7. ಭಾರತದ ಸಂವಿಧಾನ ಜಾರಿಗೆ ಬಂದದ್ದು – **1950 ಜನವರಿ 26.**
8. ಸಂವಿಧಾನ ಜಾರಿಯಾದ ನಂತರ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು – **ಡಾ. ಬಾಬು ರಾಜೇಂದ್ರಪ್ರಸಾದ.**
9. ಸಂವಿಧಾನಕ್ಕೆ ________ ನೇ ತಿದ್ದುಪಡಿ ತಂದು 'ಜ್ಯಾತ್ಯಾತೀತ' ಮತ್ತು 'ಸಮಾಜವಾದಿ' ಎಂಬ ಎರಡು ಅಂಶಗಳನ್ನು 1976ರಲ್ಲಿ ಸೇರಿಸಲಾಯಿತು. – **42ನೇ ತಿದ್ದುಪಡಿ.**
10. ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ ________ ಸಂಸ್ಥಾನಗಳಿದ್ದವು. – **562 ಸಂಸ್ಥಾನಗಳು.**
11. ಭಾರತ ಸರ್ಕಾರ ________ ರಲ್ಲಿ ದೇಶಿಯ ಸಂಸ್ಥಾನಗಳ ಅರಸರಿಗೆ ನೀಡಿದ ರಾಜಧನ ಮತ್ತು ಇತರ ಸ್ಥಾನಮಾನಗಳನ್ನು ರದ್ದುಗೊಳಿಸಿತು. – **1971.**
12. ಹೈದರಾಬಾದ ಸಂಸ್ಥಾನವು ________ ರಲ್ಲಿ ಭಾರತದೊಂದಿಗೆ ವಿಲೀನವಾಯಿತು. – **1948.**
13. ಜುನಾಘಡ್‌ವು ________ ರಲ್ಲಿ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಯಿತು. – **1949.**
14. ಜಮ್ಮು–ಕಾಶ್ಮೀರದ ರಾಜ – **ಹರಿಸಿಂಗ್.**
15. ರಾಜ ಹರಿಸಿಂಗನು ________ ರಲ್ಲಿ ಭಾರತದಲ್ಲಿ ಕಾಶ್ಮೀರವನ್ನು ವಿಲೀನಗೊಳಿಸಲು ಸಹಿಯನ್ನು ಹಾಕಿದನು. – **ಅಕ್ಟೋಬರ್ 1947.**
16. ವಿಶ್ವಸಂಸ್ಥೆಯು ಕಾಶ್ಮೀರದಲ್ಲಿ ಕದನ ವಿರಾಮದ ಆದೇಶವನ್ನು ________ ರಂದು ನೀಡಿತು. **ಜನವರಿ 1, 1949.**
17. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ________ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಕರೆಯಲಾಗುತ್ತದೆ. – **ವಾಯುವ್ಯ ಭಾಗ**
18. ಫ್ರೆಂಚರ ಹಿಡಿದಲ್ಲಿದ್ದ ಪ್ರದೇಶಗಳು ______ ರಲ್ಲಿ ಭಾರತಕ್ಕೆ ಸೇರ್ಪಡೆಗೊಂಡವು – **1954.**

19. ________ ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು. **– 1963**

20. ______ ರಲ್ಲಿ ಗೋವಾ ಭಾರತದ ಸೈನ್ಯದ ಮಧ್ಯಪ್ರವೇಶದಿಂದ ಪೋರ್ಚಗೀಸರಿಂದ ಮುಕ್ತಿಹೊಂದಿತು. **– 1961.**

21. ಗೋವಾ ______ ರಲ್ಲಿ ರಾಜ್ಯವಾಯಿತು. **– 1987.**

22. _________ ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡನಾ ಆಯೋಗವನ್ನು ರಚಿಸಿತು. **– 1953.**

23. ರಾಜ್ಯ ಪುನರ್‌ವಿಂಗಡನಾ ಆಯೋಗದ ಅಧ್ಯಕ್ಷರು **– ಫಜಲ್ ಅಲಿ.**

24. ರಾಜ್ಯ ಪುನರ್‌ವಿಂಗಡನಾ ಆಯೋಗದ ಸದಸ್ಯರು – **ಕೆ.ಎಂ.ಪಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು.**

25. __________ ರಲ್ಲಿ ರಾಜ್ಯ ಪುನರ್‌ವಿಂಗಡನಾ ಕಾನೂನು ಜಾರಿಗೆ ಬಂದಿತು. **– 1956**

26. ರಾಜ್ಯ ಪುನರ್‌ವಿಂಗಡನಾ ಕಾನೂನಿನ ಪ್ರಕಾರ ದೇಶದಲ್ಲಿ _____ ರಾಜ್ಯಗಳು ಮತ್ತು _____ ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು. – **14 ರಾಜ್ಯಗಳು & 6 ಕೇಂದ್ರಾಡಳಿತ ಪ್ರದೇಶಗಳು**

27. ಮೈಸೂರು ರಾಜ್ಯ ರಚನೆಯಾದದ್ದು _______ ರಲ್ಲಿ – **ಅಕ್ಟೋಬರ್ 24, 1947.**

28. ಕನ್ನಡ ಭಾಷಾ ಪ್ರದೇಶಗಳನ್ನು ಒಟ್ಟುಗೂಡಿಸುವ ಬೇಡಿಕೆಯಿಟ್ಟು ________ ಪರಿಷತ್ತು ನೇತೃತ್ವದಲ್ಲಿ ಚಳವಳಿ ನಡೆಯಿತು. – **ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು.**

29. ______ ರಂದು ವಿಶಾಲ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿತು. – **1956 ನವಂಬರ್ 1.**

30. ವಿಶಾಲ ಮೈಸೂರು ರಾಜ್ಯಕ್ಕೆ ______ ರಲ್ಲಿ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಯಿತು. **– ನವಂಬರ್ 1, 1973.**

31. ಇಂದು ಭಾರತದಲ್ಲಿ ಒಟ್ಟು _____ ರಾಜ್ಯಗಳು ಮತ್ತು ದೆಹಲಿಯು ಸೇರಿದಂತೆ _____ ಕೇಂದ್ರಾಡಳಿತ ಪ್ರದೇಶಗಳು ಇವೆ. – **29 ರಾಜ್ಯಗಳು & 07 ಕೇಂದ್ರಾಡಳಿತ ಪ್ರದೇಶಗಳು.**

32. ವಿಶಾಲಾಂಧ್ರ ರಚನೆಗಾಗಿ 58 ದಿನ ಉಪವಾಸ ಸತ್ಯಾಗ್ರಹ ಕೈಗೊಂಡು ಅಸುನೀಗಿದವರು – **ಪೊಟ್ಟಿ ಶ್ರೀರಾಮಲು.**

33. 1953ರಲ್ಲಿ ಭಾಷಾವಾರು ಆಧಾರದಲ್ಲಿ ಮೊದಲು ರಚನೆಯಾದ ರಾಜ್ಯ – **ಆಂಧ್ರಪ್ರದೇಶ.**

34. ಬಾಂಗ್ಲಾ ವಿಮೋಚನೆಯಾದದ್ದು ________ ರಲ್ಲಿ **– 1971.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಭಾರತವು ಸ್ವಾತಂತ್ರ್ಯ ಆಚರಣೆಯ ಸಂಭ್ರಮದಲ್ಲಿರುವಾಗ ಗಾಂಧೀಜಿಯವರು ಏನು ಮಾಡುತ್ತಿದ್ದರು?**

ಉತ್ತರ : ಭಾರತವು ತಾನು ಪಡೆದ ಸ್ವಾತಂತ್ರ್ಯವನ್ನು 15/08/1947ರಂದು ದೆಹಲಿಯಲ್ಲಿ ಆಚರಿಸಿ ಸಂಭ್ರಮಿಸುತ್ತಿದ್ದ ಸಂದರ್ಭದಲ್ಲಿ ಗಾಂಧೀಜಿಯವರು ನೌಕಾಲಿ ಮುಂತಾದ ಸ್ಥಳಗಳಲ್ಲಿ ಗಲಭೆಗೊಳಗಾದ ಸಂತ್ರಸ್ತರನ್ನು ಬೇಟಿಯಾಗಿ ಸಾಂತ್ವನ ಹೇಳುವುದಲ್ಲಿ ಮಗ್ನರಾಗಿದ್ದರು.

**2. ಬ್ರಿಟಿಷರು ದೇಶಕ್ಕೆ ಸ್ವಾತಂತ್ರ್ಯ ಕೊಡುವ ಸಂದರ್ಭದಲ್ಲಿ ಸಂಸ್ಥಾನಗಳ ಮುಂದೆ ಇಟ್ಟ ಅವಕಾಶಗಳೇನು?**

ಉತ್ತರ : ಬ್ರಿಟಿಷರು ದೇಶ ವಿಭಜನೆಯನ್ನು ಮಾಡಿದ್ದರ ಜೊತೆಗೆ ದೇಶಿಯ ಸಂಸ್ಥಾನಗಳ ಮುಂದೆ ಮೂರು ಅವಕಾಶಗಳನ್ನು ತೆರೆದಿಟ್ಟರು. ಒಂದು, ಭಾರತ ಒಕ್ಕೂಟಕ್ಕೆ ಸೇರಬಹುದು, ಎರಡನೆಯದು ಪಾಕಿಸ್ತಾನಕ್ಕೆ ಸೇರಬಹುದು, ಮೂರನೆಯದು ಯಾವುದೇ ದೇಶಕ್ಕೂ ಸೇರ್ಪಡೆಯಾಗದೆ ಸ್ವತಂತ್ರವಾಗಿರಬಹುದು.

**3. ಸಂಸ್ಥಾನಗಳ ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ತೀವ್ರ ಪ್ರತಿರೋಧವನ್ನು ತೋರಿದ ಸಂಸ್ಥಾನಗಳು ಯಾವುವು?**

ಉತ್ತರ : ಸಂಸ್ಥಾನಗಳ ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ಜುನಾಗಡ್, ಹೈದರಾಬಾದ್, ಮತ್ತು ಜಮ್ಮು ಕಾಶ್ಮೀರ ಸಂಸ್ಥಾನಗಳು ತೀವ್ರ ಪ್ರತಿರೋಧವನ್ನು ತೋರಿದವು.

**4. ಆಂಧ್ರಪ್ರದೇಶ ರಾಜ್ಯ ರಚನೆಗೆ ನಡೆದ ಹೋರಾಟವನ್ನು ತಿಳಿಸಿ.**

ಉತ್ತರ : ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು ಆಂಧ್ರಮಹಾಸಭಾದ ನೇತೃತ್ವದಲ್ಲಿ 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದ ನಂತರ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು. ಇದರ ಪರಿಣಾಮವಾಗಿ ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು.

**5. ಸ್ವಾತಂತ್ರ್ಯಾನಂತರ ಫ್ರೆಂಚರ ವಸಾಹತುಗಳಾಗಿ ಅವರ ವಶದಲ್ಲಿದ್ದ ಪ್ರದೇಶಗಳಾವುವು?**

ಉತ್ತರ : ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳು ಸ್ವಾತಂತ್ರ್ಯಾನಂತರ ಫ್ರೆಂಚರ ವಸಾಹತುಗಳಾಗಿ ಅವರ ವಶದಲ್ಲಿದ್ದ ಪ್ರದೇಶಗಳಾಗಿವೆ.

**6. ಭಾರತದ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಿಕೊಳ್ಳಲ್ಪಟ್ಟ ದೇಶೀಯ ಸಂಸ್ಥಾನಗಳನ್ನು ಹೆಸರಿಸಿ.**

**ಉತ್ತರ : ಜುನಾಘಡ್, ಹೈದರಾಬಾದ್ ಮತ್ತು ಜಮ್ಮು – ಕಾಶ್ಮೀರಗಳು ಭಾರತದ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಿಕೊಳ್ಳಲ್ಪಟ್ಟ ದೇಶೀಯ ಸಂಸ್ಥಾನಗಳಾಗಿವೆ.**

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?**

ಉತ್ತರ : 1947 ಅಗಸ್ಟ್ 15 ರಂದು ಭಾರತವು ದೇಶ ವಿಭಜನೆಯೊಂದಿಗೆ ಸ್ವಾತಂತ್ರ್ಯ ಪಡೆಯಿತು. ದೇಶ ವಿಭಜನೆಯು ಹೊಸ ಸವಾಲು ಮತ್ತು ಸಮಸ್ಯೆಗಳನ್ನು ಸೃಷ್ಟಿಸಿತು. ಅವುಗಳೆಂದರೆ –

- ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗೆ ಪುನರ್ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
- ದೇಶಿ ಸಂಸ್ಥಾನಗಳ ವಿಲೀನಿಕರಣ ಮಾಡುವುದು.
- ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ವಲಯಗಳನ್ನು ಪುನರ್ ಸ್ಥಾಪಿಸಿ ಅವುಗಳಿಗೆ ಸ್ಥಿರತೆಯನ್ನು ತಂದುಕೊಡುವುದು.
- ಭಾರತವು ತನ್ನ ಸಂವಿಧಾನವನ್ನು ಹೊಸದಾಗಿ ರೂಪಿಸಿಕೊಳ್ಳುವದು.
- ನೆರೆಯ ಶತ್ರುಗಳಿಂದ ಕಾಪಾಡಿಕೊಳ್ಳಲು ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಿಕೊಳ್ಳುವುದು.
- ಸಮಾಜದಲ್ಲಿ ಸಮಾನತೆಯ ಅಡಿಯಲ್ಲಿ ಸಬಲೀಕರಣ ಸಾಧಿಸುವುದು.

**2. ಭಾರತದಲ್ಲಿ ಮತೀಯವಾದವು ಹೆಚ್ಚಲು ಕಾರಣವಾದ ಅಂಶಗಳು ಯಾವುವು?**

**ಉತ್ತರ : ಭಾರತದಲ್ಲಿ ಮತೀಯವಾದವು ಹೆಚ್ಚಲು ಕಾರಣವಾದ ಅಂಶಗಳು**

- ಬ್ರಿಟಿಷರ ಆಡಳಿತದ ಕಾಲಘಟ್ಟದಲ್ಲಿ ಅವರು ಅನುಸರಿಸಿದ 'ಒಡೆದು ಆಳುವ ನೀತಿ'ಯಿಂದಾಗಿ ಮತೀಯವಾದಕ್ಕೆ ಪುಷ್ಟಿ ದೊರೆಯಿತು.
- ಮತೀಯ ಸಂಘರ್ಷದ ಬೀಜಗಳು ಕೊನೆಗೆ ಮತೀಯವಾದವನ್ನು ಸೃಷ್ಟಿಸಿದವು.
- ಹೀಗೆ ಸೃಷ್ಟಿಯಾದ ಸಂಘರ್ಷಗಳಲ್ಲಿ ಹಿಂದೂಗಳು ಮತ್ತು ಮುಸ್ಲಿಂರ ನಡುವಿನ ಸಂಘರ್ಷಗಳು ಅನೇಕ ದುರಂತಗಳನ್ನು ಸೃಷ್ಟಿಸಿದವು.
- ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ 'ಹಿಂದೂ' ಮತ್ತು 'ಮುಸ್ಲಿಂ' ಎಂಬ ಪ್ರತ್ಯೇಕ ಅಸ್ಮಿತೆಗಳು ಹುಟ್ಟಿಕೊಂಡು ಬೆಳೆಯತೊಡಗಿದವು.

**2. ಸ್ವಾತಂತ್ರ್ಯಾನಂತರ ಮತೀಯ ಗಲಭೆಗಳಿಂದಾದ ದುಷ್ಪರಿಣಾಮಗಳೇನು?**

**ಉತ್ತರ : ಸ್ವಾತಂತ್ರ್ಯಾನಂತರ ಮತೀಯ ಗಲಭೆಗಳಿಂದಾದ ದುಷ್ಪರಿಣಾಮಗಳು –**

- 1947ರಲ್ಲಿ ಭಾರತ ಸ್ವಾತಂತ್ರ್ಯ ಪಡೆದಾಗ ವಿಶೇಷವಾಗಿ ಉತ್ತರ ಭಾರತವು ಹಿಂದೆಂದೂ ಕಾಣದ ಮತೀಯ ಗಲಭೆಗಳಿಗೆ ಸಾಕ್ಷಿಯಾಯಿತು.
- ಲಕ್ಷಾಂತರ ಜನ ಹಿಂದುಗಳು ಮತ್ತು ಮುಸ್ಲಿಮರು ಈ ಕೋಮುದಳ್ಳುರಿಯಲ್ಲಿ ಸುಟ್ಟು ಕರಕಲಾಗಿ ಹೋದರು.
- ಕಲವೇ ತಿಂಗಳಗಳಲ್ಲಿ ಐದು ಲಕ್ಷ ಜನರು ಹತ್ಯೆಗೀಡಾದರು.
- ಸಾವಿರಾರು ಕೋಟಿಗಳು, ಆಸ್ತಿಪಾಸ್ತಿಗಳು ನಷ್ಟಕ್ಕೆ ಈಡಾದವು.

**3. ಸ್ವಾತಂತ್ರ್ಯಾನಂತರ ಪ್ರಧಾನಿ ನೆಹರೂರವರು ಕೋಮುಗಲಬೆಯನ್ನು ನಿಯಂತಿಸಲು ಕೈಗೊಂಡ ಕ್ರಮಗಳೇನು?**

**ಉತ್ತರ : ಸ್ವಾತಂತ್ರ್ಯಾನಂತರ ಪ್ರಧಾನಿ ನೆಹರೂರವರು ಕೋಮುಗಲಬೆಯನ್ನು ನಿಯಂತಿಸಲು ಕೈಗೊಂಡ ಕ್ರಮಗಳು –**

- ಸ್ವಾತಂತ್ರ್ಯಾನಂತರ ಭಾರತದ ಮೊದಲ ಪ್ರಧಾನಿಯವರಾದ ಜವಾಹರಲಾಲ್ ನೆಹರು ಅವರಿಗೆ ಮತೀಯಗಲಭೆ ಅತ್ಯಂತ ದೊಡ್ಡ ಸವಾಲಾಗಿತ್ತು.
- ನೆಹರೂ ಅವರು ಆದ್ಯತೆ ಮೇರೆಗೆ ಕೆಲವೇ ತಿಂಗಳುಗಳಲ್ಲಿ ಕೋಮುಗಳಭೆಗಳನ್ನು ನಿಯಂತ್ರಣಕ್ಕೆ ತಂದರು.
- ಕೋಮುದಳ್ಳುರಿಯ ಭಯಾನಕ ದೃಶ್ಯಗಳು ನೆಹರು ಅವರನ್ನು ಜಾತ್ಯಾತೀತ ರಾಜ್ಯದ ನಿರ್ಮಾಣಕ್ಕೆ ಪ್ರೇರೇಪಿಸಿದವು.
- ಭಾರತವು ಜಾತ್ಯಾತೀತ ರಾಷ್ಟ್ರವಾಗಿ ತನ್ನ ಸಂವಿಧಾನಾತ್ಮಕ ಆಶಯಗಳನ್ನು ಅಳವಡಿಸಿಕೊಳ್ಳಲು ಕಾರಣವಾಯಿತು.
- ಧರ್ಮ ನಿರಪೇಕ್ಷತೆಯ ತಳಹದಿಯಲ್ಲಿ ದೇಶ ಬೆಳೆಯಬೇಕು ಮತ್ತು ಮುನ್ನೆಡೆಯಬೇಕು ಎನ್ನವುದೇ ಭಾರತ ಸಂವಿಧಾನದ ಆಶಯ.

**4. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**

**ಉತ್ತರ :**

- ನಿರಾಶ್ರಿತರ ಸಮಸ್ಯೆಯೆ ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆಯಲ್ಲಿ ಗಂಭೀರ ಸಮಸ್ಯೆಯಾಗಿ ಬೆಳೆಯುತ್ತಾ ಹೋಯಿತು.
- ಬಾರತಕ್ಕೆ ಬಂದ ನೀರಾಶ್ರಿತರ ಸಂಖ್ಯೆ 6 ಲಕ್ಷ ಮಿಲಿಯನ್.
- ಪಶ್ಚಿಮ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಸಮಸ್ಯೆಗಳನ್ನು ಬಹುತೇಕ ಉತ್ತರ ರಾಜ್ಯಗಳಲ್ಲಿ ಆಶ್ರಯ ಕಲ್ಪಿಸುವ ಮೂಲಕ 1951ರ ವೇಳೆಗೆ ಪರಿಹರಿಸಲಾಯಿತು.
- ಪೂರ್ವ ಪಾಕಿಸ್ತಾನದಿಂದ ಬರಲಾರಂಭಿಸಿದ ನಿರಾಶ್ರಿತರಿಗೆ ಭಾರತ ಸರ್ಕಾರವು ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ಮತ್ತು ತ್ರಿಪುರ ರಾಜ್ಯಗಳಲ್ಲಿ ಪುನರ್‌ವಸತಿ ಕಲ್ಪಿಸಲಾಯಿತು.
- ನೆಹರು ಅವರ ಕಾಲದಲ್ಲಿ ಟಿಬೆಟ್‌ನಿಂದ ಬಂದ ನಿರಾಶ್ರಿತರಿಗೆ ಭಾರತದ ವಿವಿಧ ರಾಜ್ಯಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ.

**5. ಸರ್ದಾರ ವಲ್ಲಭಭಾಯಿ ಪಟೇಲರು ಸಂಸ್ಥಾನಗಳ ವಿಲೀನಿಕರಣವನ್ನು ಹೇಗೆ ಯಶಸ್ವಿಯಾಗಿ ನಿಭಾಯಿಸಿದರು?**

**ಉತ್ತರ :**

- 1947ರ ವಿಲೀನ ಕಾಯ್ದೆಯ ಪ್ರಕಾರ ಭಾರತ ಸರ್ಕಾರ ಇಲ್ಲಾ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳಲು ಆಹ್ವಾನ ನೀಡಿತು.
- ಈ ರೀತಿ ವಿಲೀನಗೊಂಡವರಿಗೆ ಪ್ರತಿಯಾಗಿ ರಾಜ್ಯಾದಾಯವನ್ನು ಆಧರಿಸಿ ರಾಜಧನವನ್ನು ನಿಗದಿಪಡಿಸಿತು.
- ಜೊತೆಗೆ ಕೆಲವೊಂದು ಸವಲತ್ತು ಮತ್ತು ಸ್ಥಾನಮಾನಗಳನ್ನು ಸಹ ಇವರಿಗೆ ನೀಡಲಾಯಿತು.
- ಸಂಸ್ಥಾನಗಳ ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ಜುನಾಗಡ್, ಹೈದರಾಬಾದ್, ಮತ್ತು ಜಮ್ಮು ಕಾಶ್ಮೀರ ಸಂಸ್ಥಾನಗಳು ತೀವ್ರ ಪ್ರತಿರೋಧವನ್ನು ತೋರಿದವು.
- 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಪ್ರಥಮ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು.

**6. ಸರ್ಧಾರ ಪಟೇಲರು ಹೈದರಾಬಾದಿನ ಮೇಲೆ ಪೋಲಿಸ್ ಕಾರ್ಯಾಚರಣೆ ಕೈಗೊಳ್ಳಲು ಕಾರಣವೇನು? ಅಥವಾ**

**ಹೈದ್ರಾಬಾದ್ ಭಾರತದ ಒಕ್ಕೂಟದಲ್ಲಿ ವಿಲೀನವಾದ ಬಗೆ ಹೇಗೆ?**

**ಉತ್ತರ :**

- ಹೈದರಾಬಾದ್ ಸಂಸ್ಥಾನವು ನಿಜಾಮನ ಅದೀನದಲ್ಲಿದ್ದು, ಅವನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು.
- ಇದೇ ಸಂದರ್ಭದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ನಡೆಯುತ್ತಿತ್ತು.
- ನಿಜಾಮನ ಕ್ರೂರ ಪಡೆಯಾದ ರಜಾಕರ ಬಗೆಗೆ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು.
- ಆಗ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಲಾಯಿತು.

**7. ಜುನಾಗಡ್ ಭಾರತದ ಒಕ್ಕೂಟದಲ್ಲಿ ಹೇಗೆ ವಿಲೀನಗೊಂಡಿತು?**

**ಉತ್ತರ :**

- ಜುನಾಗಡದ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿ ವಿಲೀನಿಕರಣ ಕಾನೂನಿಗೆ ಸಹಿ ಹಾಕಿದನು.
- ಇದನ್ನು ವಿರೋಧಿಸಿ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು.
- ಇದನ್ನು ಎದುರಿಸಲಾರದೇ ನವಾಬನು ರಾಜ್ಯ ಬಿಟ್ಟು ಪಾಕಿಸ್ತಾನಕ್ಕೆ ಪಲಾಯನ ಮಾಡಿದನು.
- ಅಲ್ಲಿನ ದಿವಾನ ಭಾರತ ಸರ್ಕಾರಕ್ಕೆ ಮಾಡಿದ ಮನವಿಯನ್ನು ಆಧರಿಸಿ ಸೈನ್ಯವನ್ನು ಕಳುಹಿಸಿ ಶಾಂತಿ ಸ್ಥಾಪನೆ ಮಾಡಲಾಯಿತು.
- 1949ರಲ್ಲಿ ಜುನಾಘಡ್ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

**8. ಜಮ್ಮು & ಕಾಶ್ಮೀರದ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಜಮ್ಮು – ಕಾಶ್ಮೀರವು ಭಾರತ ಒಕ್ಕೂಟವನ್ನು ಸೇರಿದ್ದು ಹೇಗೆ ವಿವರಿಸಿ ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ ಹೇಗೆ?**

**ಉತ್ತರ :**

- ಜಮ್ಮು-ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗುಳಿಯಲು ನಿರ್ಧರಿಸಿದನು.
- ಜಮ್ಮು-ಕಾಶ್ಮೀರವು ಭಾರತಕ್ಕೆ ಸೇರಿ ಬಿಡಬಹುದೆಂಬ ಆತಂಕದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.
- ಪಾಕಿಸ್ತಾನ ಸೇನೆಯ ಬೆಂಬಲಿತ ಪಠಾಣ ಬುಡಕಟ್ಟು ಜನಾಂಗವು ಭಾರತದ ಪ್ರದೇಶಕ್ಕೆ ನುಗ್ಗಲು ಪ್ರಯತ್ನಿಸಿ ಸಾಕಷ್ಟು ಪ್ರದೇಶವನ್ನು ಆಕ್ರಮಿಸಿತು.
- ರಾಜ ಹರಿಸಿಂಗ್‌ನು ಅಕ್ಟೋಬರ್ 1947ರಲ್ಲಿ ಭಾರತದಲ್ಲಿ ಕಾಶ್ಮೀರವನ್ನು ವಿಲೀನಗೊಳಿಸಲು ಸಹಿಯನ್ನು ಹಾಕಿದನು.
- ನಂತರ ಭಾರತ ಸೇನೆಯು ಪಾಕಿಸ್ತಾನ ಬೆಂಬಲಿತ ಪಡೆಯನ್ನು ಹಿಮ್ಮೆಟ್ಟಿಸಿತು.
- ಈ ವಿಷಯನ್ನು ವಿಶ್ವಸಂಸ್ಥೆಗೆ ಕೊಂಡೊಯ್ಯಲಾಯಿತು. ಆದರೆ ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು.
- ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು.
- ವಿಶ್ವಸಂಸ್ಥೆ ಕದನ ವಿರಾಮದ ಆದೇಶವನ್ನು ಜನವರಿ 1, 1949ರಂದು ನೀಡಿತು.
- ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದೂ ಈಗಲೂ ಕರೆಯಲಾಗುತ್ತದೆ.

**9. ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಿಗೊಳಿಸಿದ ರೀತಿಯನ್ನು ವಿವರಿಸಿ.**

**ಉತ್ತರ :**

- ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚ್ ವಸಾಹತುಶಾಹಿಗಳು ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು.
- ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954 ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು.
- 1963ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು.

**10. ಗೋವಾವನ್ನು ಪೋರ್ಚಗೀಸರಿಂದ ಹೇಗೆ ಮುಕ್ತಿಗೊಳಿಸಲಾಯಿತು?**

**ಉತ್ತರ :**

- ಪೋರ್ಚಗೀಸರ ವಸಾಹತುವಾಗಿ ಮುಂದುವರೆದ ಗೋವಾವನ್ನು ಭಾರತಕ್ಕೆ ಸೇರಬೇಕೆಂದು ನಿರಂತರವಾಗಿ ಚಳುವಳಿ ನಡೆಯಿತು.
- ಗೋವಾವನ್ನು ತೆರವುಗೊಳಿಸಬೇಕೆಂಬ ಆದೇಶ ನೀಡಿದರೂ ಬಗ್ಗದ ಪೋರ್ಚಗೀಸರು ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡು ಚಳವಳಿಯನ್ನು ದಮನ ಮಾಡಿದರು.
- 1955ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದು ಗೋವಾ ವಿಮೋಚನಾ ಹೋರಾಟವನ್ನು ಆರಂಭಿಸಿತು.
- 1961ರಲ್ಲಿ ಭಾರತದ ಸೈನ್ಯ ಮಧ್ಯೆ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.

11. **ಭಾಷವಾರು ಪ್ರಾಂತ್ಯಗಳ ವಿಂಗಡನೆಗೆ ಸರ್ಕಾರ ಕೈಗೊಂಡ ಕ್ರಮವನ್ನು ಕುರಿತು ಬರೆಯಿರಿ.**

**ಉತ್ತರ : ಭಾಷಾವಾರು ಪ್ರಾಂತ್ಯಗಳ ವಿಂಗಡನೆಗೆ ಸರ್ಕಾರ ಕೈಗೊಂಡ ಕ್ರಮಗಳು**

- ಭಾರತ ಸ್ವತಂತ್ರಾನಂತರ ದೇಶದಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಯಿತು.
- ವಿಶಾಲಾಂಧ್ರ ರಚಿಸಬೇಕೆಂದು 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಕಾಲ ಉಪವಾಸ ಮಾಡಿ ಅಸುನೀಗಿದ ನಂತರ ಈ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು.
- ಹೋರಾಟದ ಸ್ವರೂಪವನ್ನು ಅರಿತ ಕೇಂದ್ರ ಸರಕಾರ 1953ರಲ್ಲಿ ರಾಜ್ಯಗಳ ಪುನರ್ ವಿಂಗಡನಾ ಆಯೋಗವನ್ನು ರಚಿಸಿತು.
- ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ ಕೆ.ಎಂ.ಪಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಈ ಆಯೋಗದ ಸದಸ್ಯರಾಗಿದ್ದರು.
- ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡನಾ ಕಾನೂನು ಜಾರಿಗೆ ಬಂದಿತು.
- ಈ ಕಾನೂನಿನ ಪ್ರಕಾರ ದೇಶದಲ್ಲಿ 14 ರಾಜ್ಯಗಳು & 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

## ಅಧ್ಯಾಯ – 10 20ನೆಯ ಶತಮಾನದ ರಾಜಕೀಯ ಆಯಾಮಗಳು

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. ________ ಮತ್ತು ________ ಗಳು ಯುರೋಪಿನ ದೇಶಗಳಲ್ಲಿ ತೀವ್ರವಾದ ಪೈಪೋಟಿಯನ್ನು ಸೃಷ್ಟಿಸಿದವು. – **ಕೈಗಾರಿಕಾ ಕ್ರಾಂತಿ ಮತ್ತು ನೂತನ ಆವಿಷ್ಕಾರಗಳು.**
2. ಮೊದಲ ಮಹಾಯುದ್ಧ ____ ರಿಂದ ____ ವರೆಗೆ ನಡೆಯಿತು. – **1914ರಿಂದ 1918ರವರೆಗೆ.**
3. ವಿಸ್ತೀರ್ಣದಲ್ಲಿ ಜಗತ್ತಿನಲ್ಲಿ ಅತ್ಯಂತ ದೊಡ್ಡ ರಾಷ್ಟ್ರ – **ರಷ್ಯಾ.**
4. 19ನೇ ಶತಮಾನದಲ್ಲಿ ರಷ್ಯಾವನ್ನು _____ ದೊರೆಗಳು ಆಳುತ್ತಿದ್ದರು. – **ಝಾರ್ ದೊರೆಗಳು.**
5. ರಷ್ಯಾದಲ್ಲಿ ಅಕ್ಟೋಬರ್ ಕ್ರಾಂತಿಯ ನೇತೃತ್ವವನ್ನು ವಹಿಸಿದವರು – **ಲೆನಿನ್.**
6. ಮೊದಲ ಜಾಗತಿಕ ಯುದ್ಧದ ನಂತರ ಯುದ್ಧವನ್ನು ತಡೆಗಟ್ಟಲು ಸ್ಥಾಪಿತವಾದ ಸಂಸ್ಥೆ – **ರಾಷ್ಟ್ರ ಸಂಘ (ಲೀಗ್ ಆಫ್ ನೇಷನ್ಸ್)**
7. 1905ರಲ್ಲಿ ರಷ್ಯಾವನ್ನು ಸೋಲಿಸಿದ ಪುಟ್ಟ ದೇಶ – **ಜಪಾನ್.**
8. ರಷ್ಯಾದ ಕೊನೆಯ ದೊರೆ – **ಎರಡನೇ ನಿಕೋಲಸ್.**
9. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದವರು – **ಸ್ಟಾಲಿನ್.**
10. ರಷ್ಯಾ ಕ್ರಾಂತಿ ನಡೆದ ವರ್ಷ – **1917.**
11. ಈ ದೇಶದ ಮಾದರಿಯಲ್ಲಿ ಭಾರತ ಸರ್ಕಾರ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿತು. – **ರಷ್ಯಾ.**
12. ಜಗತ್ತಿನ ಮೊದಲ ಗಗನಯಾತ್ರಿ – **ಯುರಿಗಗಾರಿನ್ (ರಷ್ಯಾ)**
13. ಲೆನಿನ್ ರಷ್ಯಾದ ಜನತೆಗೆ ನೀಡಿದ ಘೋಷಣೆ – **'ಶಾಂತಿ, ಆಹಾರ, ಭೂಮಿ'.**
14. 'ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೂ ಯಹೂದಿಗಳೇ ಕಾರಣ' ಎಂದು ಹೇಳಿದವರು – **ಹಿಟ್ಲರ್.**
15. ಜರ್ಮನಿಯ ನಾಜಿ ಪಕ್ಷದ ನಾಯಕ – **ಹಿಟ್ಲರ್.**
16. ಹಿಟ್ಲರ್‌ನಿಗಿದ್ದ ಬಿರುದು – **ಫ್ಯೂರರ್.**
17. ಹಿಟ್ಲರ್‌ನು ರಚಿಸಿದ ಕ್ರೂರ ಸೈನ್ಯ ಪಡೆ – **ಬೂದು ಅಂಗಿ ದಳ.**
18. ಹಿಟ್ಲರನು 1935ರಲ್ಲಿ ________ ಕಾನೂನುಗಳನ್ನು ಜಾರಿಗೊಳಿಸಿದನು. – **ನ್ಯೂರೆಂಬರ್ಗ ಕಾನೂನುಗಳು.**
19. ಇಟಲಿಯ ಸರ್ವಾಧಿಕಾರಿ – **ಮುಸಲೋನಿ.**
20. ಇಟಲಿಯ ಫ್ಯಾಸಿಸ್ಟ್ ಪಕ್ಷದ ನಾಯಕ – **ಮುಸಲೋನಿ.**
21. ಜಪಾನ್ ದಾಳಿಗೆ ತುತ್ತಾದ ಅಮೆರಿಕಾದ ನೌಕಾ ನೆಲೆ – **ಪರ್ಲ್‌ಹಾರ್ಬರ್.**
22. ಎರಡನೇಯ ಮಹಾಯುದ್ಧವು ________ ರಿಂದ ________ ವರೆಗೆ ನಡೆಯಿತು. – **1939 ರಿಂದ 1945ರವರೆಗೆ.**
23. 1942ರಲ್ಲಿ ________ ಯುದ್ಧದಲ್ಲಿ ಜರ್ಮನ್ ಪಡೆಗಳನ್ನು ರಷ್ಯಾ ಸೋಲಿಸಿತು. – **ಸ್ಟಾಲಿನ್‌ಗ್ರಾಡ್ ಯುದ್ಧ.**
24. ________ ರಲ್ಲಿ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡನು. – **1945.**
25. ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷವು _____ ರಲ್ಲಿ ಪ್ರಾರಂಭವಾಯಿತು. – **1925.**
26. ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲೇ ಅತ್ಯಂತ ವಿಶಿಷ್ಟವಾದ ಪ್ರಯೋಗ – **ಕಮ್ಯುನಿಸ್ಟರ ದೀರ್ಘ ಪಯಣ.**
27. ಚೀನಾದ ಕಮ್ಯುನಿಸ್ಟ್ ಪಕ್ಷದ ನಾಯಕ – **ಮಾವೋತ್ಸೆತುಂಗ್.**
28. ________ ರಲ್ಲಿ ಅಮೆರಿಕಾದ ಆರ್ಥಿಕ ಬೆಳವಣಿಗೆಯು ಕುಂಠಿತಗೊಂಡಿತು. – **1929.**
29. ಚೀನಾದ ಕ್ಯೊಮಿಂಟಾಂಗ್ ಪಕ್ಷದ ನಾಯಕ ________ – **ಸನ್-ಯಾತ್-ಸೇನ್.**
30. ಸೋವಿಯತ್ ರಷ್ಯಾದಲ್ಲಿ ಸಮಾಜವಾದ ಕುಸಿಯಲು ಕಾರಣ – **ಗೋರ್ಬಚೋವನ ಸುಧಾರಣೆಗಳು.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಕದನ ಬಾಂಧವ್ಯತ್ರಯ ಮೈತ್ರಿಕೂಟವನ್ನು ರಚಿಸಿಕೊಂಡ ರಾಷ್ಟ್ರಗಳು ಯಾವುವು?**
ಉತ್ತರ : ಬ್ರಿಟನ್, ಫ್ರಾನ್ಸ್, ರಷ್ಯಾ ದೇಶಗಳು ಕದನ ಬಾಂಧವ್ಯತ್ರಯ ಮೈತ್ರಿಕೂಟವನ್ನು ರಚಿಸಿಕೊಂಡವು.

**2. ಕದನ ಸೌಹಾರ್ದತ್ರಯ ಮೈತ್ರಿಕೂಟವನ್ನು ರಚಿಸಿಕೊಂಡ ರಾಷ್ಟ್ರಗಳು ಯಾವುವು?**
ಉತ್ತರ : ಜರ್ಮನಿ, ಆಸ್ಟ್ರೀಯಾ-ಹಂಗೇರಿ ಮತ್ತು ಇಟಲಿ ದೇಶಗಳು ಕದನ ಸೌಹಾರ್ದತ್ರಯ ಮೈತ್ರಿಕೂಟವನ್ನು ರಚಿಸಿಕೊಂಡವು.

**3. ಮೊದಲ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೇನು?**
ಉತ್ತರ : 1914 ಜುಲೈ 28ರಂದು ಆಸ್ಟ್ರೀಯಾದ ರಾಜಕುಮಾರ ಅರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯು ಮೊದಲ ಮಹಾಯುದ್ಧಕ್ಕೆ ಕಾರಣವಾಯಿತು.

**4. ರಷ್ಯಾ ದೇಶವು ಮೊದಲ ಮಹಾಯುದ್ಧದಿಂದ ಹಿಂದೆ ಸರಿಯಲು ಕಾರಣವೇನು?**
ಉತ್ತರ : 1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿ ಜರ್ಮನಿಯೊಂದಿಗೆ ಯುದ್ಧ ನಿಲುಗಡೆ ಒಪ್ಪಂದವನ್ನು ಮಾಡಿಕೊಂಡು ಯುದ್ಧದಿಂದ ಹಿಂದೆ ಸರಿಯಿತು.

**5. ಮೊದಲ ಮಹಾಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?**
ಉತ್ತರ : ಮೈತ್ರಿಕೂಟವು 1919ರಲ್ಲಿ ಜರ್ಮನಿಗೆ ಅತ್ಯಂತ ಅವಮಾನಕಾರಿಯಾದ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಮೊದಲ ಮಹಾಯುದ್ಧ ಕೊನೆಗೊಂಡಿತು.

**6. ರಷ್ಯಾದಲ್ಲಿ 1905ರಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಬಂಡಾಯ ಉಂಟಾಯಿತು. ಏಕೆ?**
ಉತ್ತರ : ರಷ್ಯಾ ದೇಶವು 1905ರಲ್ಲಿ ಜಪಾನ ವಿರುದ್ಧ ಯುದ್ಧದಲ್ಲಿ ಸೋತಿದ್ದರಿಂದ ರಷ್ಯಾದಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಬಂಡಾಯ ಉಂಟಾಯಿತು.

**7. ಸೋವಿಯತ್ ರಷ್ಯಾದ ವಿಘಟನೆಗೆ ಕಾರಣವಾದ ಎರಡು ಸುಧಾರಣೆಗಳು ಯಾವುವು?**
ಉತ್ತರ : ಸೋವಿಯತ್ ಒಕ್ಕೂಟದ ಅಧ್ಯಕ್ಷರಾದ ಗೋರ್ಬಚೇವ್ 1985ರಲ್ಲಿ ಗ್ಲಾಸ್‌ನೋಸ್ತ್(ಮುಕ್ತತೆ) ಮತ್ತು 1987ರಲ್ಲಿ ಪೆರೆಸ್ತ್ರೋಯಿಕ(ಪುನರ್‌ಸಂಘಟನೆ) ಎಂಬ ಸುಧಾರಣೆಗಳನ್ನು ಜಾರಿಮಾಡಿದ ನಂತರ ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು.

**8. ಗೋಬೆಲ್ಸ್ ಎಂದರೆ ಯಾರು?**
ಉತ್ತರ : ಹಿಟ್ಲರ್ ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು 'ಗೋಬೆಲ್ಸ್' ಎಂಬ ವಿಲೀಶವಾದ ಮಂತ್ರಿಯನ್ನು ನೇಮಕ ಮಾಡಿದ್ದನು.

**9. ಹೊಲೊಕಾಸ್ಟ್ ಎಂದರೇನು?**
ಉತ್ತರ : ಜರ್ಮನಿಯಲ್ಲಿ ಹಿಟ್ಲರನು ಜನಾಂಗೀಯ ದ್ವೇಷವನ್ನು ಬಿತ್ತುವ ಮೂಲಕ ಸುಮಾರು 6 ಮಿಲಿಯನ್ ಯೆಹೂದಿಗಳನ್ನು, ಕೋಟಿಗೂ ಹೆಚ್ಚು ಇತರೆ ಜನರನ್ನು ಕೊಲ್ಲಿಸಿದನು. ಇವನ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ ಎಂದು ಕರೆಯಲಾಗಿದೆ.

**10. ಎರಡನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?**
ಉತ್ತರ : 2ನೇ ಮಹಾಯುದ್ಧವು 1939 ಸೆಪ್ಟಂಬರ್ 1ರಂದು ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಪ್ರಾರಂಭವಾಯಿತು.

**11. ಅಣುಬಾಂಬಿಗೆ ತುತ್ತಾದ ಜಪಾನಿನ ಎರಡು ನಗರಗಳು ಯಾವುವು?**
ಉತ್ತರ : ಹಿರೋಶಿಮಾ & ನಾಗಾಸಾಕಿ ನಗರಗಳು ಅಣುಬಾಂಬಿಗೆ ತುತ್ತಾದ ಜಪಾನಿನ ಎರಡು ನಗರಗಳಾಗಿವೆ.

**9. ಶೀತಲ ಸಮರ ಎಂದರೇನು?**
ಉತ್ತರ : ಎರಡನೇ ಮಹಾಯುದ್ಧದ ನಂತರ ಜಗತ್ತಿನಲ್ಲಿ ಎರಡು ಬಣಗಳ ಅಂದರೆ ಅಮೇರಿಕಾ ಮತ್ತು ರಷ್ಯಾ ಬಣಗಳ ನಡುವೆ ಉದ್ಭವಿಸಿದ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿಯನ್ನು ಶೀತಲ ಸಮರ ಎಂದು ಕರೆಯುತ್ತಾರೆ.

**10. ಎರಡನೆಯ ಮಹಾಯುದ್ಧದ ಎರಡು ಬಣಗಳನ್ನು ತಿಳಿಸಿ.**
ಉತ್ತರ : ಎರಡನೆಯ ಮಹಾಯುದ್ಧದಲ್ಲಿ ಎರಡು ವಿರುದ್ಧವಾದ ಶತ್ರುಬಣ ಮತ್ತು ಮಿತ್ರಬಣ ರೂಪುಗೊಂಡವು. ಆಕ್ಸೀಸ್ ಬಣದಲ್ಲಿ ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು, ಆಲೀಸ್ ಬಣದಲ್ಲಿ ಬ್ರಿಟನ್, ಫ್ರಾನ್ಸ್, ರಷ್ಯಾ ಮುಂತಾದ ದೇಶಗಳು ಇದ್ದವು.

**11. 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' ಎಂದರೇನು?**
ಉತ್ತರ : ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವುದನ್ನು 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' ಎನ್ನುವರು.

**12. ಶೀತಲ ಸಮರ ಯಾವ ಎರಡು ದೇಶಗಳ ನಡುವೆ ನಡೆಯಿತು?**
ಉತ್ತರ : ಶೀತಲ ಸಮರವು ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ರಷ್ಯಾಗಳ ನಡುವೆ ನಡೆಯಿತು.

**13. ಅಮೆರಿಕಾ ದ್ವಿತೀಯ ಮಹಾಯುದ್ಧವನ್ನು ಪ್ರವೇಶಿಸಲು ಕಾರಣವೇನು?**
ಉತ್ತರ : ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜಪಾನ್ ಅಮೇರಿಕಾದ ನೌಕಾನೆಲೆ ಪರ್ಲ್‌ಹಾರ್ಬರ್ ಮೇಲೆ ದಾಳಿ ಮಾಡಿದ್ದು ಅಮೇರಿಕಾ ದ್ವಿತೀಯ ಮಹಾಯುದ್ಧವನ್ನು ಪ್ರವೇಶಿಸಲು ಕಾರಣವಾಯಿತು.

PSG

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಮೊದಲ ಮಹಾಯುದ್ಧಕ್ಕೆ ಕಾರಣಗಳಾವುವು?**

**ಉತ್ತರ : ಮೊದಲ ಮಹಾಯುದ್ಧಕ್ಕೆ ಕಾರಣಗಳು –**

- ಕೈಗಾರಿಕಾ ಕ್ರಾಂತಿ ಮತ್ತು ನೂತನ ಆವಿಷ್ಕಾರಗಳು ಯುರೋಪಿನ ದೇಶಗಳಲ್ಲಿ ತೀವ್ರವಾದ ಪೈಪೋಟಿಯನ್ನು ಸೃಷ್ಟಿಸಿದವು.
- ಇದು ಪ್ರತಿಯೊಂದು ಬಲಾಢ್ಯ ರಾಷ್ಟ್ರವೂ ಅತಿಯಾದ ಮಿಲಿಟರೀಕರಣವನ್ನು ಮಾಡಿತು.
- ಅನೇಕ ಮೈತ್ರಿಕೂಟಗಳು ಏರ್ಪಟ್ಟವು.
- ಅತಿಯಾದ ರಾಷ್ಟ್ರೀಯತೆಯು ಅಲ್ಲಲ್ಲಿ ಬೆಳೆಯಿತು.
- ಸಾಮ್ರಾಜ್ಯವಾದದ ನೀತಿಗಳು ಬಲಗೊಂಡವು.
- ಮೊದಲ ಮಹಾಯುದ್ಧ ಪ್ರಾರಂಭವಾಗುವುದಕ್ಕೆ ತಕ್ಷಣದ ಕಾರಣವೆಂದರೆ 1914 ಜುಲೈ 28ರಂದು ಆಸ್ಟ್ರೀಯಾದ ರಾಜಕುಮಾರ ಅರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾಯಿತು.
- ಈ ಘಟನೆಯು ಆಸ್ಟ್ರೀಯಾ ಮತ್ತು ಸರ್ಬಿಯಾ ದೇಶಗಳ ನಡುವೆ ಬಿಕ್ಕಟ್ಟು ಸೃಷ್ಟಿಯಾಗಿ ಮೊದಲ ಮಹಾಯುದ್ಧ ಪ್ರಾರಂಭವಾಯಿತು.

**2. ಮೊದಲ ಮಹಾಯುದ್ಧದಿಂದಾದ ಪರಿಣಾಮಗಳೇನು?**

**ಉತ್ತರ : ಮೊದಲ ಮಹಾಯುದ್ಧದಿಂದಾದ ಪರಿಣಾಮಗಳು –**

- ಮೈತ್ರಿಕೂಟವು 1919ರಲ್ಲಿ ಜರ್ಮನಿಗೆ ಅತ್ಯಂತ ಅವಮಾನಕಾರಿಯಾದ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಮೊದಲ ಮಹಾಯುದ್ಧ ಕೊನೆಗೊಂಡಿತು.
- ಆಸ್ಟ್ರೋ–ಹಂಗೇರಿ ಮತ್ತು ಅಟೋಮನ್ ಸಾಮ್ರಾಜ್ಯಗಳು ತಮ್ಮ ಅಸ್ತಿತ್ವ ಕಳೆದುಕೊಂಡವು.
- ಜರ್ಮನಿ ತನ್ನ ಹೆಚ್ಚಿನ ಪ್ರದೇಶಗಳನ್ನು ಕಳೆದುಕೊಂಡಿತು.
- ಯುರೋಪಿನ ಭೂಪಟವೇ ಬದಲಾಯಿತು.
- ಹಲವಾರು ಸಣ್ಣ ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು.
- ಮುಂದಿನ ದಿನಗಳಲ್ಲಿ ಸಂಭವನೀಯ ಯುದ್ಧಗಳನ್ನು ತಡೆಯುವ ದೃಷ್ಟಿಯಿಂದ ರಾಷ್ಟ್ರಸಂಘ (ಲೀಗ್ ಆಫ್ ನೇಷನ್ಸ್) ರಚನೆಯಾಯಿತು.

**3. ರಷ್ಯಾದಲ್ಲಿ ಝಾರ್ ಶಾಹಿಯ ಆಳ್ವಿಕೆಯನ್ನು ರಾಷ್ಟ್ರೀಯತೆಯ ಜೈಲು ಎಂದು ಏಕೆ ಕರೆಯಲಾಗುತ್ತಿತ್ತು?**

**ಉತ್ತರ :**

- 19ನೇ ಶತಮಾನದಲ್ಲಿ ರಷ್ಯಾದಲ್ಲಿ ಝಾರ್ ದೊರೆಗಳು ಆಳುತ್ತಿದ್ದರು.
- ಝಾರ್ ದೊರೆಗಳು ತಮ್ಮ ಕೆಳಗಿದ್ದ ಕುಲೀನರು, ಜಮೀನ್ದಾರರು, ರೈತರನ್ನು ಮತ್ತು ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು.
- ಸಣ್ಣದಾಗಿ ಬೆಳೆಯುತ್ತಿದ್ದ ಬಂಡವಾಳದಾರರು ಕಾರ್ಮಿಕರನ್ನು ಮತ್ತುಇತರರನ್ನು ಶೋಷಿಸುತ್ತಿದ್ದರು.
- ಝಾರ್‌ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು.
- ಆದ್ದರಿಂದ ರಷ್ಯಾದಲ್ಲಿ ಝಾರ್‌ಶಾಹಿಯನ್ನು ರಾಷ್ಟ್ರೀಯತೆಯ ಜೈಲು ಎಂದು ಕರೆಯಲಾಗುತ್ತಿತ್ತು.

**4. 1917ರಲ್ಲಿ ರಷ್ಯಾದಲ್ಲಿ ನಡೆದ 'ಫೆಬ್ರುವರಿ ಕ್ರಾಂತಿ'ಯನ್ನು ವಿವರಿಸಿ.**

**ಉತ್ತರ : 1917ರಲ್ಲಿ ರಷ್ಯಾದಲ್ಲಿ ನಡೆದ 'ಫೆಬ್ರುವರಿ ಕ್ರಾಂತಿ' –**

- ರಷ್ಯಾದಲ್ಲಿ ಝಾರ್ ದೊರೆಗಳ ದುರಾಡಳಿತದಿಂದ ಜನರು ತುಂಬಾ ಬೇಸತ್ತಿದ್ದರು.
- ಕಾರ್ಮಿಕರು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದರು.
- ಲೆನಿನ್‌ನ ಮಾರ್ಗದರ್ಶನದಿಂದ ದುಡಿಯುವ ಜನ ಹೋರಾಟದಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡರು.
- ಮುಷ್ಕರಗಳ ತೀವ್ರತೆ ಹೆಚ್ಚಾಗಿ ರಷ್ಯಾದ ಕೊನೆಯ ದೊರೆ ಎರಡನೆಯ ನಿಕೋಲಸ್‌ನು ದೇಶ ತ್ಯಜಿಸಿ ಓಡಿಹೋದನು.
- ಇದನ್ನೇ 1917ರ 'ಫೆಬ್ರುವರಿ ಕ್ರಾಂತಿ' ಎನ್ನುತ್ತಾರೆ.
- ಉದಾರವಾದಿಗಳಾದ 'ಮೆನ್ಶವಿಕ್'ರು ಪಡೆದುಕೊಂಡರು.
- ಇವರು ರಷ್ಯಾವನ್ನು ಪ್ರಜಾಪ್ರಭುತ್ವ ಗಣರಾಜ್ಯವೆಂದು ಘೋಷಿಸಿದರು.

**5. ರಷ್ಯಾ ಕ್ರಾಂತಿಯಲ್ಲಿ ಲೇನಿನ್‌ನ ಪಾತ್ರವೇನು? ಅಥವಾ ರಷ್ಯಾದ 'ಅಕ್ಟೋಬರ್ ಕ್ರಾಂತಿ' ಎಂದರೇನು?**

**ಉತ್ತರ : ರಷ್ಯಾ ಕ್ರಾಂತಿಯಲ್ಲಿ ಲೇನಿನ್‌ನ ಪಾತ್ರ –**

- ರಷ್ಯದಲ್ಲಿ ಪ್ರಜಾಪ್ರಭುತ್ವ ಗಣರಾಜ್ಯ ಸ್ಥಾಪನೆಯಾದ ನಂತರ ದೇಶಭ್ರಷ್ಟನಾದ ಲೆನಿನ್ ರಷ್ಯಾಕ್ಕೆ ಬಂದನು.
- ಲೆನಿನ್ ಜನರಿಗೆ ಸರಳವಾದ 'ಶಾಂತಿ, ಆಹಾರ, ಭೂಮಿ' ಎಂಬ ಜನಪರ ಘೋಷಣೆಗಳನ್ನು ನೀಡಿದನು.
- ಇದಕ್ಕೆ ಕಾರ್ಮಿಕರು ಮತ್ತು ಗ್ರಾಮೀಣ ಬಡವರು ವ್ಯಾಪಕವಾಗಿ ಸ್ಪಂದಿಸಿದರು.
- ದುಡಿಮೆಗಾರರ ಪಕ್ಷದವರಾದ ಬೊಲ್ಶವಿಕ್‌ರ ನೇತೃತ್ವದಲ್ಲಿ 1917ರ ಅಕ್ಟೋಬರ್‌ನಲ್ಲಿ ಕ್ರಾಂತಿ ಸಂಭವಿಸಿತು.
- ಲೆನಿನ್ ಕ್ರಾಂತಿ ಪಡೆಯನ್ನು ಸೇರಿ ಅಕ್ಟೋಬರ್ 7ರಂದು ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದರು.
- ಇದನ್ನೆ ರಷ್ಯಾದ ಅಕ್ಟೋಬರ್ ಕ್ರಾಂತಿ ಎನ್ನುತ್ತಾರೆ. ಲೆನಿನ್ ರಷ್ಯನ್ ಸರ್ಕಾರದ ಅಧ್ಯಕ್ಷರಾದರು.

**6. ರಷ್ಯಾದ ಪ್ರಗತಿಯಲ್ಲಿ ಲೆನಿನ್‌ನ ಪಾತ್ರವೇನು?**

**ಉತ್ತರ : . ರಷ್ಯಾದ ಪ್ರಗತಿಯಲ್ಲಿ ಲೆನಿನ್‌ನ ಪಾತ್ರ**

- ಲೇನಿನ್ ಅಧ್ಯಕ್ಷರಾದ ಕೂಡಲೇ ಎಲ್ಲಾ ಭೂಮಿ ರೈತರಿಗೆ ಸೇರಿದ್ದು ಎಂದು ಘೋಷಿಸಿದರು.
- ಎಲ್ಲಾ ರಷ್ಯನ್ನರಿಗೂ ಉಚಿತವಾದ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ನೀಡುವಂತಹ ಆರ್ಥಿಕ & ರಾಜಕೀಯ ನೀತಿಗಳನ್ನು ಜಾರಿ ಮಾಡಿದರು.
- ಲೆನಿನ್‌ನು ಕಾರ್ಲ್‌ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಮೊದಲ ಬಾರಿ ಜಾರಿ ಮಾಡಿದನು.
- ಇದು ಮಾನವಕುಲದ ಇತಿಹಾಸದಲ್ಲಿ ಕಂಡರಿಯದ ಸಾಮಾಜಿಕ ಪದ್ಧತಿಯಾಗಿತ್ತು.

**7. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವವು?**

**ಉತ್ತರ : ಸ್ಟಾಲಿನ್‌ನ ಸುಧಾರಣಾ ಕ್ರಮಗಳು**

- ರಷ್ಯಾದ ಅಧ್ಯಕ್ಷನಾದ ಜೋಸೆಫ್ ಸ್ಟಾಲಿನ್ ರಷ್ಯಾವನ್ನು ಅಮೆರಿಕಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದನು.
- ಸ್ಟಾಲಿನ್ ರಷ್ಯಾದಲ್ಲಿ ಜಾರಿಗೊಳಿಸಿದ ಪಂಚವಾರ್ಷಿಕ ಯೋಜನೆಗಳು ರಷ್ಯಾದ ಅಭಿವೃದ್ಧಿ ಪಥವನ್ನೇ ಬದಲಾಯಿಸಿತು.
- ರಷ್ಯಾ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವರಹಿತ ಉಪಗ್ರಹವನ್ನು ಉಡಾವಣೆ ಮಾಡಿತು.
- ಯುರಿಗಗಾರಿನ್ ಜಗತ್ತಿನ ಮೊದಲ ಗಗನಯಾತ್ರಿಯಾದ.
- ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ದೇಶಗಳ ವಿಮೋಚನಾ ಹೋರಾಟಗಳಿಗೆ ಬೆಂಬಲವನ್ನು ನೀಡಿತು.

**8. ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿಯಲು ಕಾರಣವೇನು?**

**ಉತ್ತರ : ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿಯಲು ಕಾರಣಗಳು –**

- ರಷ್ಯಾವನ್ನು ಬಲಿಷ್ಠ ದೇಶವನ್ನಾಗಿಸುವ ಪ್ರಕ್ರಿಯೆಯಲ್ಲಿ ಸ್ಟಾಲಿನ್ ಹಲವಾರು ತಪ್ಪುಗಳನ್ನು ಎಸಗಿದನು.
- ಸಮಾಜವಾದಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಕೆಲಸ ಸಮರ್ಪಕವಾಗಿ ಆಗಲಿಲ್ಲ.
- ಪರಿಣಾಮವಾಗಿ ಕ್ರಾಂತಿಗೆ ವಿರುದ್ಧವಾದ ಶಕ್ತಿಗಳು ಪ್ರಭಲವಾಗುತ್ತಾ ಬಂದವು.
- 1985ರಲ್ಲಿ ಗ್ಲಾಸ್‌ನೋಸ್ತ್ (ಮುಕ್ತತೆ) ಮತ್ತು 1987ರಲ್ಲಿ ಪೆರೆಸ್ಟ್ರೋಯಿಕ (ಪುನರ್‌ಸಂಘಟನೆ) ಎಂಬ ಹೆಸರಿನ ಸುಧಾರಣೆಗಳನ್ನು ಅಂದಿನ ಸೋವಿಯತ್ ಒಕ್ಕೂಟದ ಅಧ್ಯಕ್ಷರು ಜಾರಿಗೊಳಿಸಿದರು.
- ಇದರಿಂದಾಗಿ ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು.

**9. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆ ವಿವರಿಸಿರಿ.**

**ಉತ್ತರ : 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆಂದರೆ –**

- ಹಿಟ್ಲರನು ಜರ್ಮನಿಯಲ್ಲಿ ನಾಜಿ ಸಿದ್ಧಾಂತವನ್ನು ಹರಡಿದನು.
- ನಾಜಿವಾದದ ಸಾರಾಂಶವೆಂದರೆ – ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗವೆಂದರೆ ಆರ್ಯ ಜನಾಂಗ. ಜಗತ್ತನ್ನು ಆಳ್ವಿಕೆ ಮಾಡಲು ಜರ್ಮನ್ನರು ಮಾತ್ರ ಯೋಗ್ಯರು ಎಂಬ ಭಾವನೆ.
- ಜರ್ಮನಿಯ ಎಲ್ಲಾ ಸಮಸ್ಯೆಗಳಿಗೆ ಯೆಹೂದಿಗಳೆ ಕಾರಣ. ಇವರ ಜೊತೆಗೆ ಕಮ್ಯುನಿಸ್ಟರು, ಕ್ಯಾಥೋಲಿಕರು, ಸೋಷಿಯಲಿಸ್ಟರು ಕೂಡ ಕಾರಣ ಎಂದು ಹೇಳಿದನು.
- ಇದು ಬೇರೆ ಜನಾಂಗಗಳನ್ನು ಹೀನಾಯವಾಗಿ ಕಾಣುವಂತೆ ಮಾಡಿತು.
- ಈ ರೀತಿಯಾಗಿ ರೂಪುಗೊಂಡ ಉಗ್ರ ರಾಷ್ಟ್ರೀಯವಾದವು ಅತ್ಯಂತ ಅಮಾನುಷವಾಗಿ ಜಾರಿಗೆ ಬಂದಿತು.

- ಸುಮಾರು 6 ಮಿಲಿಯನ್ ಯಹೂದಿಗಳನ್ನು ವಿಷಾನೀಲ ಗೃಹದಲ್ಲಿ ಕೂಡಿಹಾಕಿ ಕೊಲೆ ಮಾಡಿಸಿದನು
- ಹಿಟ್ಲರನ ನಾಜಿ ಸಿದ್ಧಾಂತವೇ ಎರಡನೇ ಮಹಾಯುದ್ಧಕ್ಕೆ ಕಾರಣವಾಯಿತು.
- ಈ ಯುದ್ಧದಲ್ಲಿ ಜರ್ಮನಿ ಸೋಲುವದರ ಮೂಲಕ ಜರ್ಮನಿಯರ ಅಧೋಗತಿಗೆ ಕಾರಣವಾಯಿತು.

**10. ಹಿಟ್ಲರನ ಜನಾಂಗೀಯ ದ್ವೇಷವೇ ಅವನ ಅಂತ್ಯಕ್ಕೆ ಕಾರಣ ಈ ಹೇಳಿಕೆಯನ್ನು ಉದಾಹರಣೆಯೊಂದಿಗೆ ವಿಶ್ಲೇಷಿಸಿ.**

**ಉತ್ತರ :**
- ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗವೆಂದರೆ ಆರ್ಯ ಜನಾಂಗ. ಜಗತ್ತನ್ನು ಆಳ್ವಿಕೆ ಮಾಡಲು ಜರ್ಮನ್ನರು ಮಾತ್ರ ಯೋಗ್ಯರು ಎಂಬ ಭಾವನೆಯನ್ನು ಹಿಟ್ಲರ್ ಪ್ರಸಾರ ಮಾಡಿದನು.
- ಜರ್ಮನಿಯ ಎಲ್ಲಾ ಸಮಸ್ಯೆಗಳಿಗೆ ಯೆಹೂದಿಗಳೆ ಕಾರಣ. ಇವರ ಜೊತೆಗೆ ಕಮ್ಯುನಿಸ್ಟರು, ಕ್ಯಾಥೋಲಿಕರು, ಸೋಷಿಯಲಿಸ್ಟರು ಕೂಡ ಕಾರಣ ಎಂದು ಹೇಳಿದನು.
- ಇದು ಬೇರೆ ಜನಾಂಗಗಳನ್ನು ಹೀನಾಯವಾಗಿ ಕಾಣುವಂತೆ ಮಾಡಿತು.
- ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಗೋಬೆಲ್ಸ್ ಎಂಬ ವಿಶೇಷ ಮಂತ್ರಿಯನ್ನು ನೇಮಿಸಿದನು.
- ಊಟ ನೀರು ಯಾವುದನ್ನೂ ನೀಡದೇ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳಲಾಗುತ್ತಿತ್ತು.
- ಗಾಳಿ ಬೆಳಕಿಲ್ಲದ ಗ್ಯಾಸ್ ಛೇಂಬರ್‌ಗಳಲ್ಲಿ ಯಹೂದಿಗಳನ್ನು ನೂಕಿ ವಿಷಗಾಳಿ ಬಿಟ್ಟು ಕೊಲ್ಲುತ್ತಿದ್ದನು.
- ಮಕ್ಕಳೆನ್ನದೇ, ಮಹಿಳೆಯರೆನ್ನದೆ, ಮುದುಕರೆನ್ನದೆ ಎಲ್ಲರನ್ನೂ ಸಾಮುಹಿಕವಾಗಿ ಕೊಲ್ಲಲು ವಿಶೇಷ ಪಡೆಗಳನ್ನು ರೂಪಿಸಿದನು.
- ಇಡೀ ಜಗತ್ತನ್ನೇ ಗೆಲ್ಲಬೇಕೆಂಬ ಮತ್ತು ಜರ್ಮನ್ನರ ಆರ್ಯ ಜನಾಂಗೀಯ ಶ್ರೇಷ್ಠತೆಯನ್ನು ಜಾರಿಗೊಳಿಸಬೇಕೆಂಬ ಮಹತ್ವಾಕಾಂಕ್ಷೆಯೇ ಎರಡನೇ ಮಹಾಯುದ್ಧಕ್ಕೆ ಕಾರಣವಾಯಿತು.
- ಹಿಟ್ಲರನ ಜನಾಂಗೀಯ ದ್ವೇಷದ ಅಧ್ಯಾಯವು ಯುದ್ಧದಲ್ಲಿ ಅವನ ಸಾವಿನೊಂದಿಗೆ ಅಂತ್ಯವಾಯಿತು.

**11. ಫ್ಯಾಸಿಸ್ಟ್‌ವಾದದ ಲಕ್ಷಣಗಳಾವುವು?**

**ಉತ್ತರ : ಫ್ಯಾಸಿಸ್ಟ್‌ವಾದದ ಲಕ್ಷಣಗಳು –**
- ಉಗ್ರ ರಾಷ್ಟ್ರೀಯವಾದ.
- ಪರಕೀಯ ಶಕ್ತಿಗಳ ನಾಶ.
- ಹಿಂಸೆಯ ವೈಭವೀಕರಣ.
- ಜನಾಂಗೀಯ ಶ್ರೇಷ್ಠತೆ.
- ಸಾಮ್ರಾಜ್ಯವಾದದ ವಿಸ್ತರಣೆ.
- ನರಮೇಧಗಳಿಗೆ ಬೆಂಬಲ.

**12. ಇಟಲಿಯಲ್ಲಿ ಮುಸಲೋನಿಯ ಸರ್ವಾಧಿಕಾರಿ ದೋರಣೆಯನ್ನು ವಿವರಿಸಿ.**

**ಉತ್ತರ :**
- ಮುಸಲೋನಿಯು 1925ರಲ್ಲಿ ಇಟಲಿಯಲ್ಲಿ ಪ್ರಜಾಪ್ರಭುತ್ವವನ್ನು ವಿಸರ್ಜನೆ ಮಾಡಿ ಕಾನೂನುಬದ್ಧವಾಗಿಯೇ ಸರ್ವಾಧಿಕಾರವನ್ನು ಪಡೆದುಕೊಂಡನು.
- ತನ್ನ ಗುಪ್ತ ಪೋಲಿಸರ ಮುಖಾಂತರ ಎಲ್ಲಾ ರಾಜಕೀಯ ವಿರೋಧಿಗಳನ್ನು ನಾಶ ಮಾಡಿದನು.
- ಕಾರ್ಮಿಕರ ಮುಷ್ಕರಗಳನ್ನು ನಿಷೇಧಿಸಿದನು.
- ಏಕಪಕ್ಷದ ಸರ್ವಾಧಿಕಾರವನ್ನು ಸ್ಥಾಪಿಸಿದನು.
- ಹಿಟ್ಲರನ ಜೊತೆಗೂಡಿ ಎರಡನೇ ಯುದ್ಧದಲ್ಲಿ ಲಕ್ಷಾಂತರ ಜನರ ಸಾವಿಗೆ ಕಾರಣನಾದನು. 1945ರಲ್ಲಿ ಇವನನ್ನು ಹತ್ಯೆ ಮಾಡಲಾಯಿತು.

**13. ಎರಡನೇ ಮಹಾಯುದ್ಧಕ್ಕೆ ಕಾರಣಗಳೇನು?**

**ಉತ್ತರ : ಎರಡನೇ ಮಹಾಯುದ್ಧಕ್ಕೆ ಕಾರಣಗಳು**
- ಮೊದಲ ಮಹಾಯುದ್ಧದ ಸೋಲು, ಅವಮಾನಕರ ಒಪ್ಪಂದಗಳು, ಅಪಾರವಾದ ನಷ್ಟಗಳ ಹಿನ್ನೆಲೆಯಲ್ಲಿ ಜರ್ಮನಿ ಮತ್ತು ಯುರೋಪಿನ ಹಲವು ದೇಶಗಳಲ್ಲಿ ರಾಷ್ಟ್ರೀಯವಾದದ ಉಗ್ರತೆ ತೀವ್ರಗೊಂಡಿತು.
- ಜರ್ಮನಿ ಮತ್ತು ಯುರೋಪಿನ ಹಲವು ದೇಶಗಳಲ್ಲಿ ಬೃಹತ್ ಕೈಗಾರಿಕೋದ್ಯಮಗಳು ಉಗ್ರ ರಾಷ್ಟ್ರೀಯತೆಯನ್ನು ಬೆಳೆಸಲು ದೊಡ್ಡ ಪ್ರಮಾಣದಲ್ಲಿ ಹಣವನ್ನು ನೀಡಿದರು.
- ಇದನ್ನೇ ಬಳಸಿಕೊಂಡು ಸೇಡಿನ ಮತ್ತು ದುರಭಿಮಾನದ ಚಳವಳಿಗಳು ಬೆಳೆದವು.
- ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೋಲಿನಿಯಂತಹ ಸರ್ವಾಧಿಕಾರಿಗಳು ಬೆಳೆದರು.
- ಪೂರ್ವ ಏಷ್ಯಾದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಚೀನಾದ ಮೇಲೆ ಜಪಾನ ದಾಳಿಗಳನ್ನು ನಡೆಸುತ್ತಿತ್ತು.
- ಈ ಘಟನೆಗಳು ಎರಡನೆಯ ಜಾಗತಿಕ ಮಹಾಯುದ್ಧಕ್ಕೆ ಕಾರಣವಾದವು.

**9.ಎರಡನೆಯ ಮಹಾಯುದ್ದದಿಂದಾದ ಪರಿಣಾಮಗಳೇನು?**

**ಉತ್ತರ:ಎರಡನೆಯ ಮಹಾಯುದ್ದದಿಂದಾದ ಪರಿಣಾಮಗಳು –**
- ಸಾಮಾನ್ಯ ನಾಗರಿಕರು ಸೇರಿ ಲಕ್ಷಾಂತರ ಜನರು ಯುದ್ಧದಲ್ಲಿ ಸತ್ತರು.
- ಹೆಚ್ಚು ಜನ ಯುದ್ಧದಲ್ಲಿ ಗಾಯಗೊಂಡು ಅಂಗವಿಕಲರಾದರು.
- ನಗರಗಳು, ರಸ್ತೆ, ಸೇತುವೆಗಳು, ರೈಲುಮಾರ್ಗಗಳು ಕಾರ್ಖಾನೆಗಳು ನಾಶವಾದವು.
- ವಿಶ್ವ ಶಾಂತಿ ಸ್ಥಾಪಿಸಲೆಂದೆ ರಾಷ್ಟ್ರಸಂಘದ ಜಾಗದಲ್ಲಿ ವಿಶ್ವಸಂಸ್ಥೆ ಸ್ಥಾಪನೆಯಾಯಿತು.
- ಏಷ್ಯಾ ಮತ್ತು ಆಫ್ರಿಕಾದ ವಸಾಹತು ರಾಷ್ಟ್ರಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು.
- ಅಮೇರಿಕ ಅಣ್ವಸ್ತ್ರ ಪ್ರಯೋಗಿಸಿದ್ದರಿಂದ ಬೃಹತ್ ದೇಶಗಳ ನಡುವೆ ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು.

**10. ಚೀನಾ ಕಮ್ಯುನಿಸ್ಟರ ದೀರ್ಘ ಪಯಣವನ್ನು ವಿವರಿಸಿ.**

**ಉತ್ತರ :**
- ಷಿಯಾಂಗ್ ಕೈ ಷೇಕ್‌ನು ಚೀನಾ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಮೇಲೆ ದಾಳಿ ಸಮಾರು 70,000 ಕ್ರಾಂತಿಕಾರಿಗಳನ್ನು ಕೊಲ್ಲಿಸಿದನು.
- ಷಿಯಾಂಗ್ ಕೈ ಷೇಕ್‌ನ ದಾಳಿಯಿಂದ ಕ್ರಾಂತಿಕಾರಿಗಳನ್ನು ರಕ್ಷಿಸುವ ಸಲುವಾಗಿ ಮಾವೋತ್ಸೆ ತುಂಗನ ನೇತೃತ್ವದಲ್ಲಿ ಕಮ್ಯುನಿಸ್ಟರು ಉತ್ತರ ಚೀನಾದ ಕಡೆಗೆ ಪಯಣಿಸಿದರು. ಇದನ್ನೇ ಐತಿಹಾಸಿಕ 'ದೀರ್ಘ ಪಯಣ' ಎಂದು ಕರೆಯುತ್ತಾರೆ.

**11. ಆರ್ಥಿಕ ಮಹಾಕುಸಿತದ ಪರಿಣಾಮಗಳೇನು?**

**ಉತ್ತರ : ಆರ್ಥಿಕ ಮಹಾಕುಸಿತದ ಪರಿಣಾಮಗಳು**
- ಯುರೋಪ ಮತ್ತು ಅಮೇರಿಕಾದಲ್ಲಿ ಸಂಕಷ್ಟದ ಪರಿಸ್ಥಿತಿಗಳು ನಿರ್ಮಾಣವಾದವು.
- ಕೈಗಾರಿಕೆ & ಕೃಷಿ ಕ್ಷೇತ್ರಗಳಲ್ಲಿ ಉತ್ಪಾದನೆ ಕುಸಿಯಿತು.
- ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಿತು.
- ನಿರುದ್ಯೋಗ ವಿಪರೀತವಾಯಿತು.
- ಆರ್ಥಿಕ ಕುಸಿತ ರಾಜಕೀಯ ಬದಲಾವಣೆಗೆ ಸಾಕ್ಷಿ ಯಾಯಿತು.

**12. ಚೀನಾ ಕ್ರಾಂತಿಯ ಪರಿಣಾಮಗಳಾವವು? ಅಥವಾ ಚೀನಾ ಕಮ್ಯುನಿಸ್ಟ್ ರಾಷ್ಟ್ರವಾಗಿ ಉದಯವಾದ ನಂತರ ಜಾರಿಗೆ ತಂದ ಸುಧಾರಣೆಗಳಾವುವು?**

**ಉತ್ತರ : ಚೀನಾ ಕ್ರಾಂತಿಯ ಪರಿಣಾಮಗಳು ಅಥವಾ ಚೀನಾದಲ್ಲಿ ಜಾರಿಗೆ ತಂದ ಸುಧಾರಣೆಗಳು**
- ಚೀನಾ ಕ್ರಾಂತಿಯಿಂದಾಗಿ ದೇಶದಲ್ಲಿ ಮಾವೋತ್ಸೆತುಂಗ್ ನಾಯಕತ್ವದಲ್ಲಿ ಕಮ್ಯುನಿಸ್ಟ್ ಆಳ್ವಿಕೆ ಆರಂಭವಾಯಿತು.
- ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಲಾಯಿತು.
- ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ ಮೊದಲಾದ ಸೌಲಭ್ಯಗಳನ್ನು ನೀಡಲಾಯಿತು.
- ಕೈಗಾರಿಕಾ ಬೆಳವಣಿಗೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಲಾಯಿತು.
- ಮುನ್ನೆಡೆಯ ಮಹಾಜಿಗಿತ ಯೋಜನೆಯನ್ನು ಜಾರಿಗೆ ತಂದನು.
- ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು.

**13. ಶೀತಲ ಸಮರವು ಜಗತ್ತಿನಲ್ಲಿ ಅಗೋಚರವಾದ ಯುದ್ಧದ ವಾತಾವರಣವನ್ನು ಸೃಷ್ಟಿಸಿತು. ಈ ಹೇಳಿಕೆಯನ್ನು ವಿಶ್ಲೇಷಿಸಿ.**

**ಉತ್ತರ :**
- ಎರಡನೆಯ ಮಹಾಯುದ್ಧದ ನಂತರ ಜಾಗತಿಕವಾಗಿ ಅಮೇರಿಕ ಸಂಯುಕ್ತ ಸಂಸ್ಥಾನದ ಬಂಡವಾಳ ಶಾಹಿ ದೇಶಗಳ ಬಣ ಮತ್ತು ರಷ್ಯಾದ ಸಮಾಜವಾದಿ ದೇಶಗಳ ಬಣಗಳ ನಡುವಿನ ಅಘೋಷಿತ ಸಮರವೇ ಶೀತಲ ಸಮರ.
- ಶೀತಲ ಸಮರ ಎರಡು ಬಣಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ತೀವ್ರಗೊಂಡಿತು.

PSG

- ➢ಹೆಚ್ಚೆಚ್ಚು ರಾಷ್ಟ್ರಗಳನ್ನು ತಮ್ಮ ವ್ಯಾಪ್ತಿಯಲ್ಲಿಟ್ಟುಕೊಳ್ಳಲು ಮಿಲಿಟರಿ ಮೈತ್ರಿಕೂಟಗಳ ರಚನೆಯಾಯಿತು.
- ➢ಅಮೇರಿಕ ನೇತೃತ್ವದಲ್ಲಿ ನ್ಯಾಟೋ, ಸಿಯಾಟೋ ಮತ್ತು ಸೆಂಟೋ ಕೂಟಗಳು ರಚನೆಯಾದರೆ, ರಷ್ಯಾ ನೇತೃತ್ವದಲ್ಲಿ ವಾರ್ಸಾಕೂಟ ರಚನೆಯಾಯಿತು.
- ➢ಅಮೇರಿಕಾದ ಪ್ರತಿಯೊಂದು ರಾಜ್ಯದಲ್ಲೂ ಬೃಹತ್ ಯುದ್ಧಾಸ್ತ್ರಗಳ ಕೈಗಾರಿಕೆಗಳು ಬೆಳೆದವು.
- ➢ಅಣ್ವಸ್ತ್ರ ಪೈಪೋಟಿ ಹೆಚ್ಚಿತು.
- ➢ಇದರ ಜೊತೆಗೆ ವಿವಿಧ ದೇಶಗಳಲ್ಲಿ ಸೈನಿಕ ನೆಲೆಗಳ ಸ್ಥಾಪನೆ, ಗೂಢಚರ್ಯೆ ಮತ್ತು ಪ್ರಚಾರ, ವ್ಯೋಮ ಸಮರದಂತಹ ವಿಜ್ಞಾನ-ತಂತ್ರಜ್ಞಾನ ಪೈಪೋಟಿ ಇವೆಲ್ಲವೂ ಬೆಳೆದವು.
- ➢ಇಡಿ ಜಗತ್ತೇ ವಿವಿಧ ರೂಪಗಳಲ್ಲಿ ಅಗೋಚರ ಯುದ್ಧದ ಆತಂಕಕ್ಕೆ ಒಳಗಾಯಿತು.

**14. ಶಸ್ತ್ರಾಸ್ತ್ರ ಸಂಗ್ರಹ ಪೈಪೋಟಿಯಲ್ಲಿ ಅಮೇರಿಕವು ಹೇಗೆ ಮೇಲುಗೈ ಸಾಧಿಸಿತು?**
**ಉತ್ತರ :**

- ➢ಶೀತಲ ಸಮರದಿಂದಾಗಿ ಜಗತ್ತಿನ ಎರಡು ಬಣಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ತೀವ್ರಗೊಂಡವು.
- ➢ಅಮೇರಿಕ ಜಗತ್ತಿನ ತುಂಬೆಲ್ಲಾ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ವ್ಯಾಪಾಕವಾದ ಒಪ್ಪಂದಗಳಿಗೆ ಮುಂದಾಯಿತು.
- ➢ಅಮೇರಿಕಾ ಪ್ರತಿ ರಾಜ್ಯದಲ್ಲೂ ಬೃಹತ್ ಯುದ್ಧಾಸ್ತ್ರಗಳ ಕೈಗಾರಿಕೆಗಳು ಬೆಳೆದವು.
- ➢ಅಣ್ವಸ್ತ್ರ ಪೈಪೋಟಿ ಹೆಚ್ಚಿತು.
- ➢ಇದರ ಜೊತೆಗೆ ವಿವಿಧ ದೇಶಗಳಲ್ಲಿ ಸೈನಿಕ ನೆಲೆಗಳ ಸ್ಥಾಪನೆಯನ್ನು ಮಾಡಲಾಯಿತು.

## ರಾಜ್ಯಶಾಸ್ತ್ರ

## ಅಧ್ಯಾಯ 1. ಭಾರತದ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. 2011ರ ಜನಗಣತಿಯ ಪ್ರಕಾರ ಬಡತನದ ದರ ಶೇ. ____ – **ಶೇ. 21.9%.**
2. 21ನೇ ಶತಮಾನದಲ್ಲಿ ______ ತಂತ್ರಗಾರಿಕೆ ಭಾರತೀಯ ನಾಗರಿಕ ಸಮಾಜಕ್ಕೆ ಒಂದು ಸವಾಲಾಗಿದೆ. – **ಕಾರ್ಪೋರೇಟ್ ತಂತ್ರಗಾರಿಕೆ.**
3. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು ______ ಎನ್ನುತ್ತೇವೆ. – **ಪ್ರಾದೇಶಿಕವಾದ.**
4. ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ವಿಭಜನೆಯು ___ ಇಸವಿಯಲ್ಲಿ ಆಯಿತು. – **1956.**
5. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು ____ ಕೋಟಿ ದಾಟಿದೆ. – **121 ಕೋಟಿ.**
6. ಕರ್ನಾಟಕ ಸರ್ಕಾರ 'ಸ್ತ್ರೀ ಶಕ್ತಿ' ಕಾರ್ಯಕ್ರಮ ರೂಪಿಸದ ಉದ್ದೇಶ – **ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ.**
7. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕರ್ನಾಟಕ ಸರಕಾರ ______ ರಲ್ಲಿ _______ ರ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಿತು. – **2001ರಲ್ಲಿ, ಡಿ.ಎಂ.ನಂಜುಂಡಪ್ಪ ಸಮಿತಿ.**
8. ಕರ್ನಾಟಕದಲ್ಲಿ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ ನೀಡಿದ ಸಂವಿಧಾನದ ವಿಧಿ. – **ಸಂವಿಧಾನದ 371 (ಜೆ) ವಿಧಿ.**
9. ಸಮಾಜದ ಐಕ್ಯತೆಯ ಶತ್ರು ______ – **ಕೋಮುವಾದ.**
10. ದೇಶದ ಐಕ್ಯತೆಯ ಶತ್ರು _______ – **ಪ್ರಾದೇಶಿಕವಾದ.**
11. ಭಯೋತ್ಪಾದಕ ಸಂಘಟನೆಯು ______ ರಲ್ಲಿ ಅಮೆರಿಕಾದ ವಿಶ್ವ ವ್ಯಾಪಾರ ಕೇಂದ್ರವನ್ನು ಧ್ವಂಸಗೊಳಿಸಿತು. – **2001ರಲ್ಲಿ.**
12. ಭಯೋತ್ಪಾದಕರು ಮುಂಬೈನ ತಾಜ್ ಹೋಟೆಲ್ ಮೇಲೆ ದಾಳಿಮಾಡಿದ್ದು – **2007 ನವಂಬರ್ 26ರಂದು.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ನಿರುದ್ಯೋಗ ಎಂದರೇನು?**
ಉತ್ತರ : ನಿರುದ್ಯೋಗ ಎಂದರೆ ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗದ ಲಭ್ಯತೆ ಇಲ್ಲದಿರುವ ಪರಿಸ್ಥಿತಿಯಾಗಿದೆ.

**2. ಭ್ರಷ್ಟಾಚಾರ ಎಂದರೇನು?**
ಉತ್ತರ : ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವುದು ಎಂದರ್ಥ.

**3. ಲಿಂಗ ತಾರತಮ್ಯ ಎಂದರೇನು?**
ಉತ್ತರ : ಭಾರತೀಯ ಸಂಪ್ರದಾಯಿಕ ಸಮಾಜ ಲಿಂಗ ಅಸಮಾನತೆಯಿಂದ ಕೂಡಿದ ಪುರುಷ ಪ್ರಧಾನ ಸಮಾಜ ರಚನೆಯನ್ನು ಹೊಂದಿದ್ದು, ಪುರುಷ ಮತ್ತು ಮಹಿಳೆಯರ ನಡುವೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯದಲ್ಲಿ ಮಹಿಳೆಯರಿಗೆ ಅವಕಾಶಗಳನ್ನು ನಿರಾಕರಿಸಿ ಶೋಷಿಸುವುದನ್ನು ಲಿಂಗ ತಾರತಮ್ಯ ಎನ್ನುವರು.

**4. ಕೋಮುವಾದ ಎಂದರೇನು?**
ಉತ್ತರ : ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎಂದು ಕರೆಯುತ್ತೇವೆ.

**8. ಭಯೋತ್ಪಾದಕತೆ ಎಂದರೇನು?**
ಉತ್ತರ : ಉಗ್ರಗಾಮಿ ಸಂಘಟನೆಗಳ ಉದ್ದೇಶ ಪೂರೈಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆಯನ್ನು ಭಯೋತ್ಪಾದಕತೆ ಎನ್ನುತ್ತಾರೆ.

**9. ಭಯೋತ್ಪಾದನೆಯು ಯಾವ ಯಾವ ವಿಚಾರಧಾರೆಗಳಿಂದ ಪ್ರೇರಿತವಾಗಿದೆ? ಅಥವಾ ಉಗ್ರಗಾಮಿತ್ವವನ್ನು ಪ್ರೇರೇಪಿಸುವ ಅಂಶಗಳಾವುವು?**
ಉತ್ತರ : ಭಯೋತ್ಪಾದನೆಯು ಧಾರ್ಮಿಕ ಮೂಲಭೂತ ಚಿಂತನೆಗಳಿಂದ, ಪ್ರತ್ಯೇಕವಾದದಿಂದ, ತೀವ್ರ ಎಡಪಂಥೀಯ ವಿಚಾರದಿಂದ, ನಾಡ ಬಿಡುಗಡೆಯ ಛಲದಿಂದ, ವರ್ಣದ್ವೇಷ ನೀತಿ ಮುಂತಾದ ವಿಚಾರಧಾರೆಗಳಿಂದ ಪ್ರೇರಿತವಾಗಿರುತ್ತದೆ.

**10. ಭಾರತದ ಯಾವ ನೆರೆಯ ರಾಷ್ಟ್ರಗಳು ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತವೆ ಎಂಬ ಟೀಕೆಗೆ ಒಳಗಾಗಿವೆ?**
ಉತ್ತರ : ನಮ್ಮ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೀನಾ ನಮ್ಮಲ್ಲಿನ ಇಂತಹ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ಬಗ್ಗೆ ಟೀಕಿಸಲ್ಪಡುತ್ತವೆ.

**11. ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು?**
ಉತ್ತರ : ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎಂದು ಕರೆಯಲಾಗುತ್ತದೆ.

**12. ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವ ಅಂಶಗಳಾವುವು?**
ಉತ್ತರ : ಮಾನವ ಸಹಜ ಸ್ವಾರ್ಥ, ಆಪತ್ತುಗಳ ನಿವಾರಣೆಯ ಲೆಕ್ಕಾಚಾರ, ವೈಯಕ್ತಿಕ ಲಾಭ ಇವೆಲ್ಲಾ ಭ್ರಷ್ಟಾಚಾರಕ್ಕೆ ಮುಂದಾಗಲು ಪ್ರೇರೇಪಿಸುತ್ತವೆ. ಮತ್ತು ಕಟ್ಟುನಿಟ್ಟಾದ ಮೇಲ್ವಿಚಾರಣೆ ಇಲ್ಲದಿರುವುದು. ಹಾಗೂ ದುರ್ಬಲ ಕಾನೂನು ವ್ಯವಸ್ಥೆ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುತ್ತದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಸ್ವತಂತ್ರ್ಯಾನಂತರ ಭಾರತ ದೇಶ ಎದುರಿಸುತ್ತಿರುವ ಸಮಸ್ಯೆಗಳಾವುವು?**
**ಉತ್ತರ :** ಸ್ವಾತಂತ್ರ್ಯಾನಂತರ ಭಾರತ ದೇಶ ಎದುರಿಸುತ್ತಿರುವ ಸಮಸ್ಯೆಗಳು – ನಿರುದ್ಯೋಗ, ಬ್ರಷ್ಟಾಚಾರ, ಜಾತಿ, ಲಿಂಗ, ಪ್ರಾದೇಶಿಕ ಅಸಮಾನತೆ, ಕೋಮುವಾದ, ಮಹಿಳಾ ಅಸಮಾನತೆ, ಭಯೋತ್ಪಾದಕತೆ, ಕಾರ್ಪೋರೇಟ್ ತಂತ್ರಗಾರಿಕೆ ಮುಂತಾದವು.

**2. ಭಾರತ ಎದುರಿಸುತ್ತಿರುವ ಸಮಸ್ಯೆಗಳನ್ನು ಯಾವ ರೀತಿ ನಿಗ್ರಹಿಸುವ ಪ್ರಯತ್ನ ಮಾಡಬೇಕಿದೆ?**
ಉತ್ತರ : ಭಾರತವು ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಎನಿಸುವ ಮಾನವೀಯ ಪರಿಹಾರಗಳನ್ನು ಕಂಡುಕೊಳ್ಳಬೇಕು. ಉತ್ತಮ ಶಾಸನಾತ್ಮಕ, ಸಾಮಾಜಿಕ ಸುಧಾರಣೆಗಳು, ದಕ್ಷ ಆಡಳಿತ, ತ್ವರಿತ ಹಾಗೂ ಪಕ್ಷಪಾತರಹಿತ ನ್ಯಾಯಾಂಗ ವ್ಯವಸ್ಥೆ ಹಾಗೂ ಜನತೆಯ ಸಹಕಾರಗಳಿಂದ ಸಮಸ್ಯೆಗಳನ್ನು ನಿಗ್ರಹಿಸುವ ಪ್ರಯತ್ನ ನಡೆಸಬೇಕು.

**3. ನಿರುದ್ಯೋಗ ಸಮಸ್ಯೆಗೆ ಕಾರಣಗಳಾವುವು?**
**ಉತ್ತರ : ನಿರುದ್ಯೋಗ ಸಮಸ್ಯೆಗೆ ಕಾರಣಗಳು –**

- ➢ಮಿತಿಮೀರಿದ ಜನಸಂಖ್ಯೆ,
- ➢ಹೆಚ್ಚಾದ ತಂತ್ರಜ್ಞಾನದ ಬಳಕೆ,
- ➢ನೈಸರ್ಗಿಕ ಸಂಪನ್ಮೂಲಗಳ ಬಳಕೆ,
- ➢ಕೃಷಿಯ ಮೇಲಿನ ಅಧಿಕ ಅವಲಂಬನೆ,
- ➢ಗೃಹ ಕೈಗಾರಿಕೆಗಳ ನಾಶ,
- ➢ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ

**4. ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳಾವುವು?**

**ಉತ್ತರ : ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳು,**

- ಭಾರತ ಸರ್ಕಾರ ಮತ್ತು ರಾಷ್ಟ್ರದಲ್ಲಿನ ಎಲ್ಲಾ ರಾಜ್ಯ ಸರ್ಕಾರಗಳು ಹಲವಾರು ರೀತಿಯ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಿವೆ.
- ಜನತೆಗೆ ಉದ್ಯೋಗ ಮಾಡಲು ಅಗತ್ಯವಿರುವ ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡುವುದು.
- ಸ್ವಯಂ ಉದ್ಯೋಗ ಕೈಗೊಳ್ಳಲು ಅಗತ್ಯವಿರುವ ಮೂಲ ಬಂಡವಾಳವನ್ನು ಸಾಲದ ರೂಪದಲ್ಲಿ ನೀಡುವುದು.
- ಸಾಧ್ಯವಾದಷ್ಟು ಸಹಾಯಧನ ನೀಡುವ ಮೂಲಕ ಸ್ವಯಂ ಉದ್ಯೋಗಗಳನ್ನು ಪ್ರೋತ್ಸಾಹಿಸುವುದು.
- ಆಧುನಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸಿ ಉದ್ಯೋಗ ಪಡೆಯುವಂತಹ ಸಾಮರ್ಥ್ಯವನ್ನು ವೃದ್ಧಿಸುವ ಪೂರಕವಾದ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುವುದು.
- ಜನರು ಸ್ವಯಂ ಉದ್ಯೋಗಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಿ ವೃತ್ತಿ ಶಿಕ್ಷಣವನ್ನು ನೀಡುವುದು.

**5. ಭ್ರಷ್ಟಾಚಾರವು ಒಂದು ಸಾಮಾಜಿಕ ಪಿಡುಗುಗಾಗಿದೆ ಎಂದು ಹೇಗೆ ಹೇಳುವಿರಿ.**

**ಉತ್ತರ : ಭ್ರಷ್ಟಾಚಾರವು ಒಂದು ಸಾಮಾಜಿಕ ಪಿಡುಗಾಗಿದೆ ಹೇಗೆಂದರೆ –**

- ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವುದು ಎಂದರ್ಥ.
- ಭ್ರಷ್ಟಾಚಾರವು ಸರಿಯಾದ ಮತ್ತು ನ್ಯಾಯಬದ್ಧವಾದ ಕಾರ್ಯಾಚಾರಣೆಯಿಂದ ಸ್ಪಷ್ಟವಾಗಿ ದೂರ ಸರಿಯುವಿಕೆಯನ್ನು ಸೂಚಿಸುತ್ತದೆ.
- ಸಾರ್ವಜನಿಕ ಜೀವನದ ಅಧಿಕಾರ ಮತ್ತು ವರ್ಚಸ್ಸನ್ನು ಸ್ವಾರ್ಥ ಮತ್ತು ತಪ್ಪು ವಿಧಾನದ ದುರ್ಬಳಕೆಯಿಂದ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಮಾಡುತ್ತದೆ.
- ಸಾಂಕ್ರಾಮಿಕ ರೋಗದಂತೆ ಸಾರ್ವಜನಿಕ ಜೀವನವನ್ನು ಹಾಳುಮಾಡುತ್ತದೆ. ಈ ಕಾರಣಗಳಿಂದ ಇದು ಒಂದು ಸಾಮಾಜಿಕ ಪಿಡುಗಾಗಿದೆ.

**6. ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೆ ಹೇಗೆ ಎಡೆಮಾಡಿಕೊಡುತ್ತದೆ?**

ಉತ್ತರ : ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೂ ಎಡೆಮಾಡಿಕೊಡುತ್ತದೆ. ಹೇಗೆಂದರೆ – ಅದು ಸಾರ್ವಜನಿಕ ಸೇವೆಯ ಕ್ಷೇತ್ರಗಳಲ್ಲಿ ಅಧಿಕಾರಶಾಹಿಯಲ್ಲಿ ಒದಗುವ ಲೋಪದೋಷಗಳಿಗೂ, ವಂಚನೆಗಳಿಗೂ ಅನುವು ಮಾಡಿಕೊಡುತ್ತದೆ. ತರಿಗೆಕಳ್ಳತನ, ಅಕ್ರಮ ದಾಸ್ತಾನು, ಕಳ್ಳಸಾಗಾಣಿಕೆ, ಆರ್ಥಿಕ ವಂಚನೆ, ಮೋಸಗಾರಿಕೆ, ವಿದೇಶಿ ವಿನಿಮಯದ ಕಾನೂನು ಉಲ್ಲಂಘನೆ, ಔದ್ಯೋಗಿಕ ವಂಚನೆ ಈ ಎಲ್ಲವೂ ಭ್ರಷ್ಟಾಚಾರದ ಜಾಲದಲ್ಲಿ ಸೇರಿಕೊಂಡಿದೆ.

**7. ಭ್ರಷ್ಟಾಚಾರವನ್ನು ಹೇಗೆ ತಡೆಗಟ್ಟಬಹುದು?**

**ಉತ್ತರ : ಭ್ರಷ್ಟಾಚಾರವನ್ನು ಈ ಕೆಳಗಿನ ಅಂಶಗಳ ಮೂಲಕ ತಡೆಗಟ್ಟಬಹುದು.**

- ಭ್ರಷ್ಟಾಚಾರ ನಿಗ್ರಹಕ್ಕೆ ಪ್ರಭಲ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾರ್ವಜನಿಕ ಸಹಕಾರ ತೀರಾ ಅತ್ಯಗತ್ಯ.
- ಒಳ್ಳೆಯ ರಾಜಕೀಯ ನಾಯಕತ್ವ, ಉತ್ತಮ ಅಧಿಕಾರಿ ವರ್ಗ ಹಾಗೂ ರಾಜಕೀಯ ಪರಿಜ್ಞಾನ ಹಾಗೂ ಪೌರತ್ವದ ಅರಿವು ಹೊಂದಿದ ಜನತೆ ಜಂಟಿಯಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಬೇಕು.
- ಲೋಕಪಾಲ, ಲೋಕಾಯುಕ್ತರಂತಹ ಸಂಸ್ಥೆಗಳು ಭ್ರಷ್ಟಾಚಾರ ನಿಯಂತ್ರಣದಲ್ಲಿ ಪೂರಕ ಶಕ್ತಿ ಒದಗಿಸಬಲ್ಲವು.
- ಶಿಕ್ಷಣ ಸಂಸ್ಥೆಗಳು ಹಾಗೂ ಸಾಮಾಜಿಕ ನಾಯಕರುಗಳು ಕೂಡ ಈ ದಿಸೆಯಲ್ಲಿ ಕಾರ್ಯನಿರ್ವಹಿಸಬಹುದು.
- ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವುದು.
- ಕಛೇರಿಯ ಕಾರ್ಯನಿರ್ವಹಣೆಯ ವೇಗವನ್ನು ಹೆಚ್ಚಿಸುವುದು.
- ಭಷ್ಟಚಾರದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸುವುದು.
- ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಸಾಧ್ಯವಾದಷ್ಟು ಬೇಗನೆ ನ್ಯಾಯ ನಿರ್ಣಯ ನೀಡುವುದು.

**8. ಲಿಂಗ ತಾರತಮ್ಯ ಹೋಗಲಾಡಿಸಲು ಸರ್ಕಾರಗಳು ಕೈಗೊಂಡ ಕ್ರಮಗಳಾವುವು?**

**ಉತ್ತರ : ಲಿಂಗ ತಾರತಮ್ಯ ಹೋಗಲಾಡಿಸಲು ಸರ್ಕಾರಗಳು ಕೈಗೊಂಡ ಕ್ರಮಗಳು**

- ಭಾರತ ಸರ್ಕಾರ ಲಿಂಗ ತಾರತಮ್ಯ ಹೋಗಲಾಡಿಸುವ ಉದ್ದೇಶದಿಂದ ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ನೀಡಿದೆ.
- ರಾಜಕೀಯವಾಗಿಯೂ ಕೂಡ ಸ್ಥಳೀಯ ಸಂಸ್ಥೆಗಳ ಪ್ರಾತಿನಿಧಿತ್ವದಲ್ಲಿ 1/3 ಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳ ಮೀಸಲಾತಿಯನ್ನು ನೀಡಲಾಗಿದೆ.
- ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಲ್ಲಿ ಮೀಸಲಿಟ್ಟಿರುವ ಮತ್ತು ಮೀಸಲಿರದ ಒಟ್ಟು ಸ್ಥಾನಗಳಲ್ಲಿ ಪ್ರತಿಶತ 50ಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಇಡಲಾಗಿದೆ.
- ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನತೆಯ ಅಂತರವನ್ನು ಕಡಿಮೆಗೊಳಿಸುವ ಪ್ರಯತ್ನ ಕೈಗೊಳ್ಳಲಾಗಿದೆ.

**9. ಜಾತಿ ತಾರತಮ್ಯವನ್ನು ಹೇಗೆ ಹೋಗಲಾಡಿಸಬಹುದು?**

ಉತ್ತರ : ಭಾರತದ ಸಂವಿಧಾನದ ಮೂರನೇ ಭಾಗದಲ್ಲಿ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕುಗಳನ್ನು ನೀಡುವ ಮೂಲಕ ಜಾತಿ ಆಧಾರಿತ ತಾರತಮ್ಯವನ್ನು ಗಣನೀಯ ವಾಗಿ ತಗ್ಗಿಸಲು ಪೂರಕವಾದ ಕ್ರಮಗಳನ್ನು ಅಳವಡಿಸಲಾಗಿದೆ. ಆದರೆ ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿ ಜಾತಿ ತಾರತಮ್ಯವನ್ನು ಕೇವಲ ಕಾನೂನಿನಿಂದ ಮಾತ್ರ ಹೋಗಲಾಡಿಸಲು ಸಾಧ್ಯವಿಲ್ಲ. ಇದಕ್ಕೆ ಪೂರಕವಾಗಿ ಸಮಾಜದಲ್ಲಿ ಮುಕ್ತ ಮನಸ್ಸಿನಿಂದ ಕೂಡಿದ ಸಮಾಜ ನಿರ್ಮಾಣ ಮಾಡುವ ಇಚ್ಛೆಯನ್ನು ನಾಗರಿಕ ಸಮಾಜ ಅಳವಡಿಸಿಕೊಂಡಾಗ ಮಾತ್ರ ಜಾತಿ ವ್ಯವಸ್ಥೆ ನಿರ್ಮೂಲನೆ ಸಾಧ್ಯ.

**10. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಂಡ ಕ್ರಮಗಳಾವುವು?**

**ಉತ್ತರ : ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಂಡ ಕ್ರಮಗಳು**

- ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಭಾರತ ಸಂವಿಧಾನದ 371 ನೇ ವಿಧಿಗೆ A ಯಿಂದ J ವರೆಗೆ ತಿದ್ದುಪಡಿಗಳ ಮೂಲಕ ಸೇರ್ಪಡೆ ಮಾಡಿ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನಗಳನ್ನು ನೀಡಲಾಗಿದೆ.
- ಕರ್ನಾಟಕದಲ್ಲಿ 2001ರಲ್ಲಿ ಡಿ. ಎಂ. ನಂಜುಂಡಪ್ಪ ಸಮಿತಿಯು ಪ್ರಾದೇಶಿಕ ಅಸಮತೋಲನವನ್ನು ಕುರಿತು ವರದಿ ನೀಡಿದೆ.
- ಸಂವಿಧಾನಕ್ಕೆ ವಿಧಿ 371 (ಜೆ) ಸೇರ್ಪಡೆ ಮಾಡುವುದರ ಮೂಲಕ ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ.

**11. ಕೋಮುವಾದ ಸಮಾಜದ ಐಕ್ಯತೆಗೆ ಮಾರಕ. ಹೇಗೆ? ಅಥವಾ ಕೋಮುವಾದದಿಂದಾಗುವ ದುಷ್ಪರಿಣಾಮಗಳೇನು?**

**ಉತ್ತರ : ಕೋಮುವಾದದಿಂದಾಗುವ ದುಷ್ಪರಿಣಾಮಗಳು –**

**ಕೋಮುವಾದ ಸಮಾಜದ ಐಕ್ಯತೆಗೆ ಮಾರಕ ಹೇಗೆಂದರೆ –**

- ಕೋಮುವಾದವು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ.
- ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯನ್ನು ಉಂಟುಮಾಡುತ್ತದೆ.
- ಭಾರತ ಮಟ್ಟಿಗೆ ಈ ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ ಅಪಾಯ ತಂದೊಡ್ಡುವ ಶಕ್ತಿಯಾಗಿದೆ.
- ಕೋಮುವಾದವು ಸಮಾಜದ ನೆಮ್ಮದಿಯನ್ನು ಕೆಡಿಸುವುದಲ್ಲದೆ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ.
- ಈ ಮತೀಯವಾದ ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ ಮುಂತಾದ ಅನಗತ್ಯ ತೊಂದರೆಗಳಿಗೂ ಕಾರಣವಾಗುತ್ತದೆ.

**12. ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳಾವುವು?**

**ಉತ್ತರ : ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳು**

- ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಬೇಕು.
- ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣಬೇಕು.
- ಜಾತ್ಯಾತೀತ ಮನೋಭಾವಕ್ಕೆ ಸಾಮಾಜಿಕ ಜೀವನದ ಎಲ್ಲಾ ರಂಗಗಳಲ್ಲೂ ಪ್ರಾಶಸ್ತ್ಯ ನೀಡಬೇಕು.
- ಸಂಕುಚಿತ ವಿಭಾಗೀಯ ಚಿಂತನೆಗಳಿಂದ ಮೇಲುಸ್ತರದ ರಾಷ್ಟ್ರೀಯ ಚಿಂತನೆಗೆ ಹೆಚ್ಚು ಒತ್ತು ಕೊಡಬೇಕು.
- ನಮ್ಮ ಭಾರತದ ಎಲ್ಲಾ ಮತ ಸಂಪ್ರದಾಯಗಳು ಜನರಲ್ಲಿ ಸಾಮಾನ್ಯ ಹಾಗೂ ಆರೋಗ್ಯಕರ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಯತ್ನಿಸಬೇಕು.
- ಮತೀಯ ಮೂಲಭೂತವಾದ ಬಹುತ್ವದ ಸಮಗ್ರತೆ, ಸೋದರತೆ ಮತ್ತು ಸಾಂಸ್ಕೃತಿಕ ಬಹುರೂಪತೆಗೆ ಧಕ್ಕೆಯಾಗದಂತೆ ತಡೆಗಟ್ಟಬೇಕು.
- ಜಾತ್ಯಾತೀತ ತತ್ವಕ್ಕೆ ಬದ್ಧರಾಗುವ ಮನೋಧರ್ಮ ಬೇಕು.

**13. ಮಹಿಳೆಯ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?**

**ಉತ್ತರ : ಮಹಿಳೆಯ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು**

- ಮಹಿಳೆಯರ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಉತ್ತಮಪಡಿಸಲು ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ.
- ಮಹಿಳಾ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ, ಬಾಲ್ಯ ವಿವಾಹ ನಿಷೇದ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿದೆ.
- ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿ, ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ.
- ಮಹಿಳೆಯರ ಸ್ವ–ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.
- ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಿದ್ದು, ಮಹಿಳೆಯರ ದೂರು–ದುಮ್ಮಾನಗಳನ್ನು ಇದು ಪರಿಶೀಲಿಸಿ ನ್ಯಾಯ ಒದಗಿಸಿಕೊಡುತ್ತಿದೆ.
- ಶಾಸಕಾಂಗ ಮತ್ತು ಸಂಸತ್ತಿನಲ್ಲಿ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ನೀಡುವಂತಹ ಪ್ರಯತ್ನ ನಡೆಯುತ್ತಿದೆ.
- ಈಗಾಗಲೇ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ.
- ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತದೆ.

**7. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳಾವವು?**

**ಉತ್ತರ : ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳು.**

- ಭಯೋತ್ಪಾದನೆಯು ಜನಸಾಮಾನ್ಯರಿಗೆ & ಆಸ್ತಿ–ಪಾಸ್ತಿಗಳಿಗೆ ಹಾನಿ ಉಂಟುಮಾಡುತ್ತದೆ.
- ಉಗ್ರಮಾಮಿತ್ವ ಮಾನಸಿಕ ವೇದನೆಯನ್ನು ಉಂಟುಮಾಡುತ್ತದೆ.
- ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.
- ಭಯೋತ್ಪಾದನೆಯಿಂದ ನಿರ್ದಿಷ್ಟ ಭಾಷವಾರು, ಧಾರ್ಮಿಕ, ಜನಾಂಗೀಯ ಅಥವಾ ವರ್ಣದವರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಾರೆ.
- ಭಯೋತ್ಪಾದಕರ ಆತ್ಮಾಹುತಿ ದಾಳಿಯಿಂದಾಗಿ ರಸ್ತೆ ಸಾರಿಗೆ, ರೈಲ್ವೆ, ವಿಮಾನ, ಪ್ರಮುಖ ಸರ್ಕಾರಿ ಕಛೇರಿಗಳು, ಕಿಕ್ಕಿರಿದ ಜನಜಂಗುಳಿ ಪ್ರದೇಶ & ಮಾರುಕಟ್ಟೆ ಪ್ರದೇಶಗಳು ನಾಶವಾಗುತ್ತವೆ.

**8. ಭಯೋತ್ಪಾದಕರ ಕಾರ್ಯಚಟುವಟಿಕೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ಭಯೋತ್ಪಾದಕರ ಕಾರ್ಯಚಟುವಟಿಕೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.**

- ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ ಹಾಗೂ ಪ್ರಚಾರವನ್ನು ಪಡೆಯುವ ಉದ್ದೇಶದಿಂದ ನಡೆಯುತ್ತದೆ.
- ಭಯೋತ್ಪಾದಕರು ನಡೆಸುವ ವಿನಾಶಕಾರಿ ಕೃತ್ಯಗಳು ಸಾಕಷ್ಟು ಪೂರ್ವಯೋಜಿತವಾಗಿಯೇ ರೂಪುಗೊಳ್ಳುತ್ತವೆ.
- ಉಗ್ರಗಾಮಿಗಳು ತಮ್ಮದೇ ಆದ ಗುಪ್ತಚರರನ್ನು ಹಾಗೂ ತರಬೇತಿ ಹೊಂದಿದವರ ಜಾಲವನ್ನು ಹೊಂದಿರುತ್ತಾರೆ.
- ಅತ್ಯಾಧುನಿಕ ಸಾರಿಗೆ, ಸಂಪರ್ಕ ಸಾಧನಗಳನ್ನೂ ಇವರು ಬಳಸುತ್ತಾರೆ.
- ರಸ್ತೆಸಾರಿಗೆ, ರೈಲ್ವೆ, ವಿಮಾನ, ಪ್ರಮುಖ ಸರ್ಕಾರಿ ಕಚೇರಿಗಳು, ಕಿಕ್ಕಿರಿದ ಜನ ಜಂಗುಳಿ, ಮಾರುಕಟ್ಟೆ ಪ್ರದೇಶ ಮುಂತಾದವುಗಳು ಈ ಭಯೋತ್ಪಾದಕರ ಹೊಡೆತಕ್ಕೆ ಸಿಗುವ ಸಾಮನ್ಯ ತಾಣಗಳಾಗಿವೆ.
- ಅತ್ಮಾಹುತಿ ದಾಳಿ, ವಿಮಾನಗಳ್ಳತನ, ಗುಂಡಿನಕಾಳಗ, ಬಾಂಬುದಾಳಿ, ನಿರ್ದಿಷ್ಟ ಅಥವಾ ಮುಗ್ಧ ಜನರನ್ನು ಒತ್ತೆ ಇರಿಸುವಿಕೆ ಇವೆಲ್ಲಾ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳಾಗಿವೆ.

**9. ಭಾರತದಲ್ಲಿ ಹೆಚ್ಚಾಗಿ ಯಾವ ಯಾವ ಪ್ರದೇಶಗಳು ಉಗ್ರಗಾಮಿಗಳ ದಾಳಿಗೆ ತುತ್ತಾಗಿವೆ?**

ಉತ್ತರ : ಭಾರತ ಉಗ್ರಗಾಮಿತ್ವಕ್ಕೆ ಸಾಕಷ್ಟು ತುತ್ತಾದ ರಾಷ್ಟ್ರವಾಗಿದೆ. ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಂ, ಅಸ್ಸಾಂ ಇಂತಹ ಹಲವಾರು ರಾಜ್ಯಗಳಲ್ಲಿ ಭಯೋತ್ಪಾದಕತೆ ತಲೆ ಎತ್ತಿ ಹಿಂಸಾಕೃತ್ಯಗಳು ನಡೆಯುತ್ತಲೇ ಇವೆ. 2007 ನವಂಬರ್ 26 ಮುಂಬೈ ತಾಜ್ ಹೋಟೆಲ್ ಮತ್ತು ರೈಲು ನಿಲ್ದಾಣಗಳಲ್ಲಿ ದಾಳಿ, ನವದೆಹಲಿಯ ಸಂಸತ್ತಿನ ಮೇಲೆ ಅಂತೆಯೇ ಹೈದರಾಬಾದ್, ಚನ್ನೈ, ಬೆಂಗಳೂರು, ಬುದ್ಧಗಯಾ ಮುಂತಾದ ಕಡೆಗಳಲ್ಲಿ ಇಂತಹ ಸಾಕಷ್ಟು ವಿದ್ವಂಸಕ ಕೃತ್ಯಗಳು ನಡೆದಿವೆ.

**10. ಭಯೋತ್ಪಾದನೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವವು?**

ಉತ್ತರ : **ಭಯೋತ್ಪಾದನೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳು**

- ಭಾರತ ತನ್ನಲ್ಲಿ, ಅದೇ ರೀತಿ ಅನ್ಯರ ನೆಲದಲ್ಲಿ ಭಯೋತ್ಪಾದನೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ.
- ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಯೋತ್ಪಾದಕತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ.
- ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿವೆ.
- ಭೀತಿವಾದವನ್ನು ನಿಗ್ರಹಿಸಲು ವಿಶೇಷ ಪರಿಣಿತಿ ಪಡೆದ ಪಡೆಗಳನ್ನು ರಚಿಸಲಾಗುತ್ತಿದೆ.
- ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಗೆ ಬಳಸಲಾಗುತ್ತದೆ.

**11. ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕ ವಾಗುತ್ತದೆ. ಚರ್ಚಿಸಿ.**

**ಉತ್ತರ : ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕ ವಾಗುತ್ತದೆ. ಹೇಗೆಂದರೆ –**

- ಪ್ರಾದೇಶಿಕ ಮನೋಭಾವ ತೀರಾ ಹೆಚ್ಚು ಎನಿಸಿದರೆ ಅದು ರಾಷ್ಟ್ರದ ಏಕತೆ ಹಾಗೂ ಹಿತಾಸಕ್ತಿಗೆ ಧಕ್ಕೆ ಒದಗಿಸುತ್ತದೆ.
- ಪ್ರಾದೇಶಿಕ ಅಸಮತೋಲನ ಇಂದು ದೊಡ್ಡ ಸವಾಲಾಗಿ ಬೆಳೆದಿದ್ದು ಕೆಲವು ರಾಜ್ಯಗಳಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಹುಟ್ಟುಹಾಕುವ ಮಟ್ಟಕ್ಕೆ ಬೆಳೆದಿದೆ. ಉದಾ : ತೆಲಂಗಾಣ ವಿವಾದ.
- ಇದು ದೇಶದ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ.
- ಪ್ರಾದೇಶಿಕವಾದಕ್ಕೆ ಪುಷ್ಟಿ ದೊರೆತರೆ ಆಗ ಅಂತರಾಜ್ಯ ಗಡಿ ಸಮಸ್ಯೆ, ಅಂತರರಾಜ್ಯ ನದಿ ನೀರಿನ ಸಮಸ್ಯೆ ಮುಂತಾದವುಗಳು ತಲೆದೋರಬಹುದು.

**12. ಕಾರ್ಪೋರೇಟ್ ತಂತ್ರಗಾರಿಕೆಯು ಭಾರತೀಯ ನಾಗರಿಕ ಸಮಾಜಕ್ಕೆ ಒಂದು ಸವಾಲಾಗಿದೆ ಎಂದು ಹೇಗೆ ಹೇಳುವಿರಿ.**

ಉತ್ತರ : 21ನೇ ಶತಮಾನದಲ್ಲಿ ಕಾರ್ಪೋರೇಟ್ ತಂತ್ರಗಾರಿಕೆಯು ಭಾರತೀಯ ನಾಗರಿಕ ಸಮಾಜಕ್ಕೆ ಒಂದು ಸವಾಲಾಗಿದೆ. ಹೇಗೆಂದರೆ ಇಂದಿನ ಕಾರ್ಪೋರೇಟ್ ತಂತ್ರಗಾರಿಕೆ ಜಾಗತಿಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತದೆ. ತಂತ್ರಗಾರಿಕೆಯ ಪ್ರಮುಖ ಉದ್ದೇಶ ಲಾಭವನ್ನು ಪಡೆಯುವುದಾಗಿರುತ್ತದೆ. ಇದರಿಂದ ನಕಾರಾತ್ಮಕವಾದ ಬೆಳವಣಿಗೆಗಳು ವ್ಯಕ್ತಿಯ ಜೀವನ ಸಮಾಜ ಮತ್ತು ರಾಷ್ಟ್ರಗಳ ಮೇಲುಂಟಾಗುತ್ತದೆ.

**13. ಕಾರ್ಪೋರೇಟ್ ತಂತ್ರಗಾರಿಕೆಯಿಂದಾಗುವ ಪರಿಣಾಮಗಳೇನು? ಅಥವಾ ಕಾರ್ಪೋರೇಟ್ ತಂತ್ರಗಾರಿಕೆಯ ಪ್ರಸ್ತುತ ಬೆಳವಣಿಗೆಯನ್ನು ಕುರಿತು ವಿವರಿಸಿ.**

**ಉತ್ತರ : ಕಾರ್ಪೋರೇಟ್ ತಂತ್ರಗಾರಿಕೆಯಿಂದಾಗುವ ಪರಿಣಾಮಗಳು ಅಥವಾ ಕಾರ್ಪೋರೇಟ್ ತಂತ್ರಗಾರಿಕೆಯ ಪ್ರಸ್ತುತ ಬೆಳವಣಿಗೆ**

- ಇಂದಿನ ಕಾರ್ಪೋರೇಟ್ ತಂತ್ರಗಾರಿಕೆ ಜಾಗತೀಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತಿದೆ.
- ಪ್ರಭುತ್ವ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೇಲು ಕಾರ್ಪೋರೇಟ್ ತಂತ್ರಗಾರಿಕೆ ತನ್ನ ಪ್ರಭಾವಗಳನ್ನು ನಾಗರಿಕ ಸಮಾಜವನ್ನು ಅಭಿವೃದ್ಧಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
- ಕಾರ್ಪೋರೇಟ್ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಬಡತನ ನಿರ್ಮೂಲನೆ, ಉತ್ತಮ ಆರೋಗ್ಯ, ಶಿಕ್ಷಣ, ವಸತಿ, ಆಹಾರ ಇತ್ಯಾದಿ ಮೂಲ ಸೇವೆಗಳನ್ನು ಬದಲಿಸಲು ಪೂರಕವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅವಕಾಶ ಕಲ್ಪಿಸುತ್ತದೆ.
- ಕಾರ್ಪೋರೇಟ್ ಸಮಾಜಿಕ ಭದ್ರತಾ ಯೋಜನೆಯ ಲಾಭವನ್ನು ಪಡೆಯಲು ಭಾರತೀಯ ಸಮಾಜದಲ್ಲಿ ಸುಸ್ಥಿರ ಜಾಗೃತಿಯನ್ನು ಮೂಡಿಸಿದಾಗ ಮಾತ್ರ ಕಾರ್ಪೋರೇಟ್ ತಂತ್ರಗಾರಿಕೆ ಹೆಚ್ಚು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

## ಅಧ್ಯಾಯ 2. ಭಾರತದ ವಿದೇಶಾಂಗ ನೀತಿ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ___________ ರಂದು ಜವಾಹರಲಾಲ ನೆಹರು ಅವರು ನೀಡಿದ ರೇಡಿಯೋ ಭಾಷಣದಲ್ಲಿ ವಿದೇಶಾಂಗ ನೀತಿಯ ರೂಪುರೇಷೆಗಳ ಬಗ್ಗೆ ಅರಿವು ಮೂಡಿಸಿದರು.– **1946 ಸೆಪ್ಟೆಂಬರ್ 7ರಂದು.**
2. ಭಾರತದ ಪ್ರಥಮ ವಿದೇಶಾಂಗ ಮಂತ್ರಿ – **ಪ್ರಧಾನಿ ಜವಾಹರಲಾಲ ನೆಹರು.**
3. ಭಾರತದ ವಿದೇಶಾಂಗ ನೀತಿಯನ್ನು ________ ರವರ ವಿದೇಶಾಂಗ ನೀತಿಯೆಂದು ವರ್ಣಿಸಲಾಗಿದೆ. – **ಜವಾಹರಲಾಲ ನೆಹರು.**

4. ಭಾರತದ ವಿದೇಶಾಂಗ ನೀತಿಯ ಶಿಲ್ಪಿ – **ಜವಾಹರಲಾಲ ನೆಹರು.**

5. 1954ರ ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿದವರು – **ಭಾರತದ ಪ್ರಧಾನಿ ಜವಾಹರಲಾಲ ನೆಹರು ಮತ್ತು ಚೀನಾದ ಅಧ್ಯಕ್ಷ ಚೌ ಎನ್ ಲಾಯ್.**

6. ಭಾರತವು ಅಲಿಪ್ತ ನೀತಿಯನ್ನು ಅನುಸರಿಸಿದ್ದು ________ ಸಂದರ್ಭದಲ್ಲಿ – **ಜಗತ್ತು ಎರಡು ಬಣಗಳಾಗಿ ವಿಭಜನೆಯಾದಾಗ.**

7. ಪ್ರಪಂಚದಲ್ಲಿ ಶೀತಲ ಸಮರ ನಡೆದದ್ದು ಈ ಎರಡು ರಾಷ್ಟ್ರಗಳ ಬಣಗಳ ನಡುವೆ – **ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ರಷ್ಯಾ**

8. ಆಫ್ರಿಕಾದ ಗಾಂಧಿ ಎಂದು ಪ್ರಖ್ಯಾತಿ ಹೊಂದಿದವರು – **ನೆಲ್ಸನ್ ಮಂಡೇಲಾ.**

9. ದಕ್ಷಿಣಾ ಆಫ್ರಿಕಾದಲ್ಲಿ ವರ್ಣಭೇದ ನೀತಿಯನ್ನು ವಿರೋಧಿ ಚಳುವಳಿಯನ್ನು ಆರಂಭಿಸಿದವರು – **ನೆಲ್ಸನ್ ಮಂಡೇಲಾ.**

10. ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು ___ ಎನ್ನಬಹುದು – **ಅಲಿಪ್ತನೀತಿ.**

11. ಭಾರತವು ಸ್ವಾತಂತ್ರ್ಯ ಪೂರ್ವದಲ್ಲಿ ________ ರ ವಸಾಹತು ಶಾಹಿಗೆ ಒಳಗಾಗಿತ್ತು. – **ಬ್ರಿಟಿಷರ.**

12. ಭಾರತದ ವಿದೇಶಾಂಗ ನೀತಿ ವಸಾಯತುಶಾಹಿತ್ವವನ್ನು ವಿರೋಧಿಸುತ್ತದೆ ಏಕೆಂದರೆ ಭಾರತವು–

**ಆಂಗ್ಲರ ಆಡಳಿತದಿಂದ ವಸಾಹತು ನೀತಿಯನ್ನು ಸ್ವತಃ ಅನುಭವಿಸಿದ್ದರಿಂದ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ವಿದೇಶಾಂಗ ನೀತಿ ಎಂದರೇನು?**

ಉತ್ತರ : ಒಂದು ರಾಷ್ಟ್ರವು ಅನ್ಯರಾಷ್ಟ್ರದೊಂದಿಗೆ ವ್ಯವಹರಿಸುವಾಗ ಅನುಸರಿಸುವ ನೀತಿಯನ್ನು ವಿದೇಶಾಂಗ ನೀತಿ ಎಂದು ಕರೆಯುವರು.

**2. ಸಾರ್ವಭೌಮ ರಾಷ್ಟ್ರ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎಂದರೇನು?**

ಉತ್ತರ : ಒಂದು ರಾಷ್ಟ್ರ ಯಾವುದೇ ಬಗೆಯಲ್ಲಿ ಆಂತರಿಕವಾಗಿರಲಿ, ಬಾಹ್ಯವಾಗಿಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎಂದು ಕರೆಯುತ್ತಾರೆ.

**3. ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು ಅನುಸರಿಸಿದ ಭಾರತದ ಪ್ರಧಾನಮಂತ್ರಿಗಳು ಯಾರು?**

ಉತ್ತರ : ಲಾಲಬಹದ್ದೂರ ಶಾಸ್ತ್ರಿ ಮತ್ತು ಇಂದಿರಾಗಾಂಧಿಯವರು ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು ಅನುಸರಿಸಿದರು.

**4. ಭಾರತದ ವಿದೇಶಾಂಗ ನೀತಿಯನ್ನು ನೆಹರು ವಿದೇಶಾಂಗ ನೀತಿ ಎಂದು ಕರೆಯುತ್ತಾರೆ. ಏಕೆ?**

ಉತ್ತರ : ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾದ ಜವಾಹರಲಾಲ್ ನೆಹರು ಪ್ರಧಾನ ಮಂತ್ರಿ ಹುದ್ದೆಯ ಜೊತೆಗೆ ವಿದೇಶಾಂಗ ನೀತಿಯನ್ನು ಹೊಂದಿ ಸಮರ್ಥವಾಗಿ ನಿಭಾಯಿಸಿದರು. ಈ ಕಾರಣಗಳಿಂದಾಗಿ ಭಾರತದ ವಿದೇಶಾಂಗ ನೀತಿಯನ್ನು ನೆಹರು ವಿದೇಶಾಂಗ ನೀತಿ ಎಂದು ವರ್ಣಿಸಲಾಗಿದೆ.

**5. ಅಲಿಪ್ತ ನೀತಿ ಎಂದರೇನು?**

ಉತ್ತರ : ದ್ವಿತೀಯ ಮಹಾಯುದ್ದದ ನಂತರ ಜಗತ್ತು ಅಮೆರಿಕಾ ಮತ್ತು ರಷ್ಯಾ ನೇತೃತ್ವದಲ್ಲಿ ಎರಡು ಶಕ್ತಿ ಬಣಗಳಾಗಿ ವಿಭಾಗವಾಯಿತು. ಆದರೆ ಭಾರತವು ಈ ಎರಡು ಬಣಗಳಲ್ಲಿ ಯಾವ ಬಣವನ್ನು ಸೇರದೆ ತಟಸ್ಥವಾಯಿತು. ಇದನ್ನೇ ಅಲಿಪ್ತ ನೀತಿ ಎನ್ನುತ್ತಾರೆ.

**6. ವಸಾಹತು ಶಾಹಿತ್ವ ಎಂದರೇನು?**

ಉತ್ತರ : ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತುಶಾಹಿತ್ವ ಎಂದು ಕರೆಯುತ್ತಾರೆ.

**7. ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು ಎಂದು ಭಾರತ ಯಾವ ಸಮ್ಮೇಳನದಲ್ಲಿ ತನ್ನ ನಿಲುವನ್ನು ಪ್ರತಿಪಾದಿಸಿತು?**

ಉತ್ತರ : ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು ಎಂದು ದೆಹಲಿ ಮತ್ತು ಬಾಡೂಂಗ್‌ನಲ್ಲಿ ಜರುಗಿದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ (1949 ಮತ್ತು 1955) ಭಾರತ ತನ್ನ ನಿಲುವನ್ನು ಪ್ರತಿಪಾದಿಸಿತು.

**8. ವರ್ಣಭೇದ ನೀತಿ ಎಂದರೇನು?**

ಉತ್ತರ : ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗ ಅಥವಾ ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎಂದು ಕರೆಯಲಾಗುವುದು.

**9. ವರ್ಣಬೇದ ನೀತಿಯು ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಹೇಗೆ ಮಾರಕವಾಗಿದೆ?**

ಉತ್ತರ: ವರ್ಣಬೇದ ನೀತಿಯು ಅಮಾನವೀಯವಾಗಿದ್ದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಆದ್ದರಿಂದ ಇದು ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ.

**10. ನಿಶ್ಯಸ್ತ್ರೀಕರಣ ಎಂದರೇನು?**

ಉತ್ತರ : ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣವಾಗಿದೆ.

**11. ಭಾರತ ಸಂವಿಧಾನದ 51ನೇ ವಿಧಿಯು ಎಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ?**

ಉತ್ತರ : ಭಾರತ ಸಂವಿಧಾನದ 51ನೇ ವಿಧಿಯು ಅಂತರರಾಷ್ಟ್ರೀಯ ಸಹಬಾಳ್ವೆ ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಗೌರವ ಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳೇನು? ಅಥವಾ ಭಾರತದ ವಿದೇಶಾಂಗ ನೀತಿಯ ಗುರಿಗಳಾವುವು?**

**ಉತ್ತರ : ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳು ಅಥವಾ ಭಾರತದ ವಿದೇಶಾಂಗ ನೀತಿಯ ಗುರಿಗಳು**

- ➢ರಾಷ್ಟ್ರದ ಭದ್ರತೆ.
- ➢ರಾಷ್ಟ್ರದ ಆರ್ಥಿಕ ಸಂವರ್ಧನೆ.
- ➢ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
- ➢ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು. ಅಥವಾ ಹತ್ತಿಕ್ಕುವುದು.
- ➢ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

**2. ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಅಂಶಗಳಾವುವು?**

ಉತ್ತರ : ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಅಂಶಗಳೆಂದರೆ – ರಾಷ್ಟ್ರೀಯ ಹಿತಾಸಕ್ತಿಗಳು, ಭೌಗೋಳಿಕ ಅಂಶಗಳು, ರಾಜಕೀಯ ಪರಿಸ್ಥಿತಿ, ಆರ್ಥಿಕ ವ್ಯವಸ್ಥೆ, ರಕ್ಷಣಾ ಸಾಮರ್ಥ್ಯ, ಜನಾಭಿಪ್ರಾಯ, ಅಂತರಾಷ್ಟ್ರೀಯ ಪರಿಸರ ಮುಂತಾದ ಹಲವಾರು ಅಂಶಗಳು ನಮ್ಮ ರಾಷ್ಟ್ರದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಸಂಗತಿಗಳಾಗಿವೆ.

**3. ಅಂತರಾಷ್ಟ್ರೀಯ ಸಂಬಂಧ ವೃದ್ಧಿಯಾಗಿ ಭಾರತ ಅಳವಡಿಸಿಕೊಂಡ ಪಂಚಶೀಲ ತತ್ವಗಳಾವುವು?**

**ಉತ್ತರ :** ಕ್ರಿ ಶ 1954 ಜೂನ್ ತಿಂಗಳಲ್ಲಿ ವಿಶ್ವಶಾಂತಿಯ ದೃಷ್ಟಿಯಿಂದ ಚೀನಾದ ಪ್ರದಾನಿ ಚೌ ಎನ್ ಲಾಯ್ ಮತು ಪಂಡಿತ ನೆಹರುರವರು ಪರಸ್ಪರ ಅಂತರಾಷ್ಟ್ರೀಯ ಸಂಭಂದ ವೃದ್ಧಿಗಾಗಿ ಮಾಡಿಕೊಂಡ ಒಪ್ಪಂದವು ಪಂಚಶೀಲ ತತ್ವಗಳನ್ನು ಒಳಗೊಂಡಿದೆ. ಅವುಗಳೆಂದರೆ –

- ➢ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ.
- ➢ಪರಸ್ಪರರ ಮೇಲೆ ಆಕ್ರಮಣ ಮಾಡದೇ ಇರುವದು.
- ➢ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು.
- ➢ಪರಸ್ಪರ ಸಹಕಾರ ಮತ್ತು ಸಮಾನತೆ.
- ➢ಶಾಂತಿಯುತ ಸಹಬಾಳ್ವೆ.

**4. ಭಾರತವು ಅಲಿಪ್ತನೀತಿಯನ್ನು ಏಕೆ ಪ್ರತಿಪಾಧಿಸುತ್ತಿದೆ. ಚರ್ಚಿಸಿ. ಅಥವಾ**

**ಭಾರತವು ವಿಶ್ವದ ಯಾವುದೇ ಶಕ್ತಿಶಾಲಿ ಬಣಗಳಿಗೆ ಸೇರದೇ ತಟಸ್ಥವಾಗಿರಲು ಬಯಸುತ್ತದೆ' ಈ ಹೇಳಿಕೆಯನ್ನು ಸಮರ್ಥಿಸಿ**

**ಉತ್ತರ : ಭಾರತವು ಅಲಿಪ್ತನೀತಿಯನ್ನು ಪ್ರತಿಪಾಧಿಸುತ್ತಿದೆ ಯಾಕೆಂದರೆ –**

- ➢ದ್ವಿತೀಯ ಜಾಗತಿಕ ಮಹಾಯುದ್ಧದ ನಂತರ ಜಗತ್ತು ಅಮೇರಿಕ & ರಷ್ಯಾ ಒಕ್ಕೂಟದ ನೇತೃತ್ವದಲ್ಲಿ ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು.
- ➢ಭಾರತವು ಯಾವ ಬಣಕ್ಕೆ ಸೇರದೇ ತಾಟಸ್ಥ್ಯ ನೀತಿಯನ್ನು ಅನುಸರಿಸಿತು ಇದೇ ಅಲಿಪ್ತ ನೀತಿ.
- ➢ಅಲಿಪ್ತ ನೀತಿ ಎಂದರೆ ಎರಡು ಶಕ್ತಿಶಾಲಿ ಬಣಗಳ ಆಚೆ ನಿಂತು ಸ್ವತಂತ್ರವಾಗಿ ಅಭಿಪ್ರಾಯ ವ್ಯಕ್ತಪಡಿಸುವದಾಗಿದೆ.
- ➢ಈ ಎರಡು ಬಣಗಳ ವಿಶ್ವಾಸಗಳಿಸಿಕೊಳ್ಳುವುದರ ಮೂಲಕ ಅಮೆರಿಕಾದಿಂದ ಆರ್ಥಿಕ ನೆರವನ್ನು ಮತ್ತು ಸೋವಿಯತ್ ರಷ್ಯಾದಿಂದ ಭದ್ರತಾ ನೆರವನ್ನು ಪಡೆಯುವಲ್ಲಿ ಯಶಸ್ವಿಯಾಯಿತು.
- ➢ವಿಶ್ವದ ಪ್ರತಿಯೊಂದು ವಿದ್ಯಮಾನವನ್ನು ಅದರ ಗುಣ ದೋಷಗಳ ಆಧಾರದ ಮೇಲೆ ಸ್ವಾಗತಿಸುವ ಅಥವಾ ವಿರೋಧಿಸುವ ಸ್ವತಂತ್ರ ಕಾರ್ಯಶೈಲಿಯನ್ನು ಭಾರತ ರೂಪಿಸಿತು.

**5. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?**

ಉತ್ತರ : ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ

ದುರುಪಯೋಗಪಡಿಸಿಕೊಳ್ಳುವದಕ್ಕೆ ವಸಾಹತುಶಾಹಿತ್ವ ಎಂದು ಕರೆಯುತ್ತಾರೆ. ವಸಾಹತುಶಾಹಿತ್ವವನ್ನು ವಿರೋಧಿಸಿ ಸ್ವಾತಂತ್ರ್ಯ ಗಳಿಸಿಕೊಂಡ ಭಾರತವು ಸ್ವಾಭಾವಿಕವಾಗಿಯೇ ಪ್ರಪಂಚದ ಯಾವುದೇ ಮೂಲೆಯಲ್ಲಿ ಇರಕೂಡದು ಎಂಬ ತನ್ನ ನಿಲುವನ್ನು ಪ್ರತಿಪಾದಿಸಿದೆ.

**6. ದಕ್ಷಿಣ ಆಫ್ರಿಕದಲ್ಲಿ ಅನುಸರಿಸಿದ ವರ್ಣಭೇದ ನೀತಿಯ ಬಗ್ಗೆ ಬರೆಯಿರಿ.**

**ಉತ್ತರ : ದಕ್ಷಿಣ ಆಫ್ರಿಕಾದಲ್ಲಿ ಅನುಸರಿಸಿದ ವರ್ಣಬೇಧ ನೀತಿ**

- ಬಿಳಿಯರು ಕರಿಯರನ್ನು ಅತ್ಯಂತ ಕ್ರೂರ ಮತು ದೌರ್ಜನ್ಯದಿಂದ ನಡೆಸಿಕೊಳ್ಳತ್ತಿದ್ದನ್ನು ವರ್ಣಭೇದನೀತಿ ಎನ್ನುವರು.
- ದಕ್ಷಿಣ ಆಫ್ರಿಕಾದಲ್ಲಿ ಅತ್ಯಂತ ಕ್ರೂರ ಹಾಗೂ ದಮನಕಾರಿ ವರ್ಣಭೇದ ನೀತಿಯನ್ನು ಅನುಸರಿಸಲಾಗುತ್ತಿತ್ತು.
- ಈ ವರ್ಣಭೇದ ನೀತಿಯು ಅಮಾನವೀಯ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸಿ ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ.
- ವರ್ಣಭೇದ ನೀತಿಯನ್ನು ಆಫ್ರಿಕಾ ಗಾಂಧಿ ಎಂದೇ ಪ್ರಸಿದ್ಧರಾದ ನೆಲ್ಸನ್ ಮಂಡೇಲ ಅವರ ನೇತೃತ್ವದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಬಲವಾಗಿ ಖಂಡಿಸಿತು. ಮತ್ತು ಗುರಿಸಾಧಿಸಿತು.

**7. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ.**

**ಉತ್ತರ : ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ – ಭಾರತದ ಪ್ರತಿಪಾದನೆ.**

- ನಿಶ್ಯಸ್ತ್ರೀಕರಣವೆಂದರೆ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ಆಗಿದೆ.
- ಜಗತ್ತಿನಲ್ಲಿ ಶಸ್ತ್ರಾಸ್ತಗಳ ಉತ್ಪಾದನೆ, ಮಾರಾಟ, ಸಂಗ್ರಹಣೆಯಲ್ಲಿ ಬಾರಿ ಪೈಪೋಟಿ ನಡೆದಿದೆ.
- ಶಸ್ತ್ರಾಸ್ತ್ರಗಳ ಪೈಪೋಟಿಯಿಂದ ಮೂರನೇ ಮಹಾಯುದ್ಧ ನಡೆಯಬಹುದೆಂಬ ಆತಂಕ ಹಲವು ರಾಷ್ಟ್ರಗಳಲ್ಲಿ ಉಂಟಾಗಿದೆ.
- ಶಸ್ತ್ರಾಸ್ತ್ರ ಪೈಪೋಟಿಗೆ ಒಳಗಾದ ರಾಷ್ಟ್ರಗಳು ಅಚಾತುರ್ಯದಿಂದಲೋ, ತಪ್ಪು ಗ್ರಹಿಕೆಯಿಂದಲೋ ಬೇಕಂತಲೇ ಒಂದರ ಮೇಲೊಂದು ಯುದ್ಧ ಶಸ್ತ್ರಾಸ್ತ್ರಗಳನ್ನು ಅದರಲ್ಲೂ ಅಣ್ವಸ್ತ್ರಗಳನ್ನು ತಯಾರಿಸಿ ಉಪಯೋಗಿಸುವ ಸಂಭವವಿರುತ್ತದೆ.
- ಭಾರತ ಶಾಂತಿಪ್ರೀಯ ರಾಷ್ಟ್ರವಾಗಿದ್ದು, ಶಾಂತಿ ಸೌಹಾರ್ದತೆಗೆ ಒತ್ತು ನೀಡಿ ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತಿ ಅಗತ್ಯ ಎಂದು ಪ್ರತಿಪಾದಿಸುತ್ತಿದೆ.
- ಭಾರತ ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾದ ಒತ್ತು ನೀಡಿದೆ.

**8. ಭಾರತದ ವಿದೇಶಾಂಗ ನೀತಿಯನ್ನು ವಿವರಿಸಿ. ಅಥವಾ ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ? ಅಥವಾ ಭಾರತದ ವಿದೇಶಾಂಗ ನೀತಿಯು ಒಳಗೊಂಡಿರುವ ಪ್ರಮುಖ ಅಂಶಗಳು ಯಾವುವು?**

**ಉತ್ತರ : ಭಾರತದ ವಿದೇಶಾಂಗ ನೀತಿಯು ಒಳಗೊಂಡಿರುವ ಪ್ರಮುಖ ಅಂಶಗಳು.**

- ದಿವಂಗತ ಜವಾಹರಲಾಲ ನೆಹರುವರು ಭಾರತದ ವಿದೇಶಾಂಗ ನೀತಿಯ ಶಿಲ್ಪಿಯಾಗಿದ್ದಾರೆ.
- ಭಾರತದ ವಿದೇಶಾಂಗ ನೀತಿಯಲ್ಲಿ ಅಹಿಂಸಾತತ್ವ, ಆದರ್ಶವಾದ, ಮಾನವೀಯಅನುಕಂಪ, ವ್ಯಾವಹಾರಿಕ ಕಾಠಿಣತೆಯನ್ನು ಕಾಣಬಹುದು.
- ಭಾರತದ ವಿದೇಶಾಂಗ ನೀತಿಯು ಶಾಂತಿ ಹಾಗೂ ಸಹಬಾಳ್ವೆ ತತ್ವದ ಮೇಲೆ ಆಧಾರಿತವಾಗಿದೆ.
- ವಿಶ್ವಶಾಂತಿ ಕಾಪಾಡಲೆಂದೇ ಎಲ್ಲಾ ರಾಷ್ಟ್ರಗಳೊಂದಿಗೆ ಸ್ನೇಹ ಹಾಗೂ ಸಹಬಾಳ್ವೆಯೊಂದಿಗೆ ಸಂಬಂಧಗಳನ್ನು ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿತು.
- ಅಲಿಪ್ತನೀತಿ & ಪಂಚಶೀಲತತ್ವಗಳನ್ನು ಒಳಗೊಂಡಿದೆ.
- ಇದು ಒಟ್ಟಾರೆಯಾಗಿ ದೇಶದ ಅಭಿವೃದ್ಧಿಗೆ ಸಹಕಾರಿ ಯಾಗಿದೆ ಎಂದು ಹೇಳಬಹುದು.

**9. ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ವಿದೇಶಾಂಗ ನೀತಿ ಅತ್ಯಗತ್ಯ ಏಕೆ? ವಿವರಿಸಿ.**

**ಉತ್ತರ : ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ವಿದೇಶಾಂಗ ನೀತಿ ಅತ್ಯಗತ್ಯ ಏಕೆಂದರೆ –**

- ಆಧುನಿಕ ಜಗತ್ತಿನಲ್ಲಿ ಮಾನವನಂತೆ ರಾಷ್ಟ್ರಗಳೂ ಸಹ ಏಕಾಂಗಿಯಾಗಿರಲು ಸಾಧ್ಯವಿಲ್ಲ.
- ರಾಷ್ಟ್ರವು ದುರ್ಬಲವಾಗಿರಲಿ ಅಥವಾ ಪ್ರಭಲ ವಾಗಿರಲಿ ತನ್ನದೇ ವಿದೇಶಾಂಗನೀತಿಯನ್ನು ಹೊಂದಿರಲೇಬೇಕು.
- ಪ್ರತಿಯೊಂದು ರಾಷ್ಟ್ರಕ್ಕೂ ತನ್ನ ರಾಷ್ಟ್ರದ ಅಭಿವೃದ್ಧಿಗೆ ಮತ್ತೊಂದು ರಾಷ್ಟ್ರದ ಸಹಾಯ ಪಡೆಯುವುದು ಅನಿವಾರ್ಯವಾಗಿದೆ.
- ಅಲ್ಲದೆ ಪ್ರತಿಯೊಂದು ರಾಷ್ಟ್ರವೂ ತನ್ನ ದೇಶದ ರಕ್ಷಣೆಗಾಗಿ ಮತ್ತೊಂದು ರಾಷ್ಟ್ರದೊಂದಿಗೆ ಸಂಬಂಧ ವಿರಿಸಿಕೊಳ್ಳಬೇಕಾಗಿದೆ.
- ಆಧುನಿಕ ಜಗತ್ತು 'ವಸುದೈವ ಕುಟುಂಬ' ಎಂಬಂತಾಗಿದ್ದು ಪ್ರತಿಯೊಂದು ರಾಷ್ಟ್ರಗಳ ಸಹಾಯ ಮತ್ತು ಸಹಕಾರ ಅತ್ಯಗತ್ಯವಾಗಿದೆ. ಈ ಎಲ್ಲಾ ಅಂಶಗಳಿಂದಾಗಿ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ವಿದೇಶಾಂಗ ನೀತಿ ಅತ್ಯಗತ್ಯ ವಾಗಿದೆ.

**10. ಭಾರತವು ಒಂದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ ಏಕೆ? ವಿವರಿಸಿ.**

**ಉತ್ತರ : ಭಾರತವು ಒಂದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ ಏಕೆಂದರೆ –**

- ಭಾರತವು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿದೆ.
- ಭಾರತವು ವಿಪುಲವಾದ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲವನ್ನು ಹೊಂದಿದೆ.
- ಭಾರತವು ಪರಿಣಿತ ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯವನ್ನು ಹೊಂದಿದೆ.
- ಭಾರತವು ಬಲಾಢ್ಯ ಮಿಲಿಟರಿ ಪಡೆಯನ್ನು ಹೊಂದಿದೆ.
- ಜಗತ್ತಿನ ಕೆಲವೇ ಕೆಲವು ರಾಷ್ಟ್ರಗಳು ತಮ್ಮದೇ ಆದ ಉತ್ತಮ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದ್ದು ಅವುಗಳಲ್ಲಿ ಭಾರತವು ಒಂದಾಗಿದೆ.

## ಅಧ್ಯಾಯ 3. ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಪಂಚಶೀಲ ತತ್ವಗಳ ಮೂಲಕ _____ ರಾಷ್ಟ್ರದೊಂದಿಗೆ ಸಂಬಂಧ ವೃದ್ಧಿಸಲಾಯಿತು. – **ಚೀನಾ.**
2. ಅಂತಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯ ಕುರಿತು ನಮ್ಮ ಸಂವಿಧಾನದ _____ ವಿಧಿಯಲ್ಲಿ ತಿಳಿಸಲಾಗಿದೆ. – **51ನೇ ವಿಧಿ.**
3. 1962ರಲ್ಲಿ ____ ದೇಶವು ಭಾರತದ ಮೇಲೆ ಆಕ್ರಮಣ ಮಾಡಿತು. – **ಚೀನಾ.**
4. ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು – **ಭಾರತ ಮತ್ತು ಪಾಕಿಸ್ತಾನ. (1966ರಲ್ಲಿ)**
5. ಭಾರತದ ಭಿಲೈ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ – **ರಷ್ಯಾ.**
6. ಭಾರತ ಮತ್ತು ಪಾಕಿಸ್ತಾನದ ಸಂಬಂಧ ಸುಧಾರಣೆಗೆ ಅಡ್ಡಿಯಾಗಿರುವ ಅತ್ಯಂತ ಪ್ರಮುಖ ಅಂಶಗಳು – **ಜಮ್ಮು-ಕಾಶ್ಮೀರ ಸಮಸ್ಯೆ & ಭಯೋತ್ಪಾದನೆ.**
7. ಭಾರತ ಮತ್ತು ಚೀನಾ ದೇಶಗಳೆರಡು ಅರುಣಾಚಲ ಪ್ರದೇಶ ತಮ್ಮದೆಂದು ಪ್ರತಿಪಾದಿಸಲು ಕಾರಣ – **ಭಾರತ ಮತ್ತು ಚೀನಾ ದೇಶಗಳ ಮಧ್ಯೆ ನಿಖರ ಗಡಿರೇಖೆ ಇಲ್ಲದಿರುವುದರಿಂದ.**
8. ಭಾರತ ಮತ್ತು ಚೀನಾ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ. – **ಪಂಚಶೀಲ ತತ್ವ ಮತ್ತು ಭಾರತ – ಚೀನಿ ಭಾಯಿಭಾಯಿ.**
9. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು – **ಜಮ್ಮು-ಕಾಶ್ಮೀರ, ಭಯೋತ್ಪಾದನೆ ಮತ್ತು ನೀರಿನ ಹಂಚಿಕೆಯ ಸಮಸ್ಯೆಗಳು**

**ಪ್ರಶ್ನೆ 2] ದೀರ್ಘ ಉತ್ತರದ ಪ್ರಶ್ನೆಗಳು**

**1. ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ ಏಕೆ?**

**ಉತ್ತರ : ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಅನಿವಾರ್ಯವಾಗಿದೆ ಯಾಕೆಂದರೆ –**

- ನಾವೊಂದು ಸ್ವತಂತ್ರ ರಾಷ್ಟ್ರವಾಗಿ ಎಲ್ಲಾ ವಿದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದ ಬೇಕಾಗಿದೆ.
- ಅದರಲ್ಲಿಯೂ ಮುಖ್ಯವಾಗಿ ಏಷ್ಯಾ ಖಂಡದ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಒಳ್ಳೆಯ ಬಾಂಧವ್ಯ ಇರಿಸಿಕೊಳ್ಳಬೇಕಾಗಿದೆ.
- ಇದರೊಂದಿಗೆ ರಾಷ್ಟ್ರೀಯ ಹಿತಾಶಕ್ತಿಗಳಾದ ಗಡಿ ಭದ್ರತೆ, ವಿದೇಶ ವ್ಯಾಪಾರ, ಆರ್ಥಿಕ ಲಾಭ, ರಾಷ್ಟ್ರದ ಗೌರವ ಮುಂತಾದವುಗಳನ್ನು ಜೋಪಾನವಾಗಿ ಕಾಯ್ದುಕೊಳ್ಳಬೇಕಾಗಿದೆ.
- ಈ ಎಲ್ಲಾ ಕಾರಣಗಳಿಗಾಗಿ ನಾವು ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು ಅವಶ್ಯಕ.

**2. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವವು?**

**ಉತ್ತರ : ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳು.**

- ಭಾರತದ ಧೋರಣೆಗೆ ವಿರುದ್ಧವಾಗಿ ಚೀನಾ ಟಿಬೇಟನ್ನು ವಶಪಡಿಸಿಕೊಂಡಿತು.
- 1962ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು ಮತ್ತು ಭಾರತ ಯುದ್ಧದಲ್ಲಿ ಸೋತಿತು.
- ನಮ್ಮ ರಾಜ್ಯಗಳಲ್ಲಿ ಒಂದಾದ ಅರುಣಾಚಲ ಪ್ರದೇಶವನ್ನು ಚೀನಾ ತನ್ನದೆಂದು ಪ್ರತಿಪಾದಿಸುತ್ತಿದ್ದು ಈ ವಿಷಯ ಎರಡು ರಾಷ್ಟ್ರಗಳ ಸಂಬಂಧದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ.
- ಭಾರತ ಮತ್ತು ಚೀನಾ ದೇಶಗಳ ಮಧ್ಯೆ ನಿಖರವಾದ ಗಡಿ ರೇಖೆಯಿರದೇ ಕೇವಲ ವಾಸ್ತವಿಕ ನಿಯಂತ್ರಣ ರೇಖೆ ಮಾತ್ರ ಇದೆ.
- ಅಣ್ವಸ್ತ್ರ ತಯಾರಿ, ವಿದೇಶಿ ವ್ಯಾಪಾರದ ಸವಾಲುಗಳು, ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ ಇವೆಲ್ಲಾ ಚೀನಾದ ಬಗೆಗೆ ಭಾರತದ ನೀತಿಯ ಮೇಲೆ ಪರಿಣಾಮ ಬೀರುತ್ತವೆ.

**3. ವಿವಾದದ ಹೊರತಾಗಿಯೂ ಭಾರತವು ಚೀನಾದೊಂದಿಗೆ ಹೇಗೆ ಉತ್ತಮ ಸಂಬಂಧವನ್ನು ಹೊಂದಿದೆ?**

**ಉತ್ತರ : ಭಾರತ ಮತ್ತು ಚೀನಾದ ಉತ್ತಮ ಸಂಬಂಧ –**

- ಭಾರತ ಮತ್ತು ಚೀನಾಗಳ ಸಂಬಂಧವನ್ನು ಸಿಂಧೂ ನದಿ ಬಯಲಿನ ನಾಗರಿಕತೆ ಮತ್ತು ಮೆಸಪಟೋಮಿಯ ನಾಗರಿಕತೆಯೊಂದಿಗೆ ಗುರುತಿಸಲಾಗಿದೆ.
- ಭಾರತದಲ್ಲಿನ ರಾಜರುಗಳು ಚೀನಾದ ಹಲವು ರಾಜ ವಂಶಗಳೊಂದಿಗೆ ಉತ್ತಮ ವ್ಯಾಪಾರ ಸಂಬಂಧವನ್ನು ಹೊಂದಿರುವ ಉಲ್ಲೇಖಗಳು ದೊರೆತಿವೆ.
- ಭಾರತ ಮತ್ತು ಚೀನಾ ಸಾರ್ವಭೌಮ ರಾಷ್ಟ್ರಗಳಾಗಿ ಉದಯಿಸಿದ ನಂತರದಲ್ಲಿ ಪಂಚಶೀಲ ತತ್ವಗಳ ಮೂಲಕ ಎರಡು ರಾಷ್ಟ್ರಗಳ ಸಂಬಂಧಗಳನ್ನು ವೃದ್ಧಿಸುವ ಪ್ರಯತ್ನ ಮಾಡಲಾಯಿತು.
- ಭಾರತ ಮತ್ತು ಚೀನಾ ನಡುವೆ ಗಡಿವಿವಾದವಿದ್ದರೂ ಕೂಡ ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷಿಯ ರಾಯಭಾರ ಸಂಬಂಧಗಳು ನಿರಂತರವಾಗಿ ಮುಂದುವರೆದಿದೆ.
- 1980ರ ದಶಕದ ನಂತರದಲ್ಲಿ ಚೀನಾ ಭಾರತದೊಂದಿಗೆ ದೊಡ್ಡ ಮಟ್ಟದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕವನ್ನು ಹೊಂದಿರುವುದು ಎರಡು ರಾಷ್ಟ್ರಗಳ ಸಂಬಂಧಗಳನ್ನು ಗಟ್ಟಿಗೊಳಿಸಿದೆ.
- 2015ರ ನಂತರದಲ್ಲಿ ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿರುವುದು ಈ ಎರಡು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಮತ್ತಷ್ಟು ಉತ್ತಮಗೊಳಿಸಿದೆ.

**4. ಭಾರತ ಮತ್ತು ಪಾಕಿಸ್ತಾನ ಸಂಬಂಧವನ್ನು ಕುರಿತು ವಿವರಿಸಿ.**

**ಉತ್ತರ : ಭಾರತ ಮತ್ತು ಪಾಕಿಸ್ತಾನ ಸಂಬಂಧ –**

- ಸ್ವಾತಂತ್ರ್ಯಗೊಂಡ ನಂತರದಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ವಿದೇಶಾಂಗ ವ್ಯವಹಾರಗಳು ಪ್ರಾರಂಭಗೊಂಡವು.
- ಎರಡು ರಾಷ್ಟ್ರಗಳ ನಡುವೆ ಜಮ್ಮು–ಕಾಶ್ಮೀರ, ಭಯೋತ್ಪಾದನೆ, ನೀರಿನ ಹಂಚಿಕೆ ಮುಂತಾದ ಸಮಸ್ಯೆಗಳಿವೆ.
- ಇಲ್ಲಿಯವರೆಗೂ ಎರಡು ರಾಷ್ಟ್ರಗಳ ನಡುವೆ ಮೂರು ಭಾರಿ ಯುದ್ಧಗಳು ನಡೆದಿವೆ.
- ಎರಡು ರಾಷ್ಟ್ರಗಳ ನಡುವೆ ಉತ್ತಮ ಭಾಂದವ್ಯ ಹೊಂದಲು ತಾಷ್ಕೆಂಟ್ ಒಪ್ಪಂದ, ಸಿಮ್ಲಾ ಒಪ್ಪಂದ, ಲಾಹೋರ ಬಸ್ ಯಾತ್ರೆ, ಆಗ್ರಾ ಶೃಂಗಸಭೆಯಂತಹ ದ್ವಿಪಕ್ಷಿಯ ಮಾತುಕತೆಗಳನ್ನು ನಡೆಸಲಾಗಿದೆ. ಆದರೆ ಈ ರೀತಿಯ ಒಪ್ಪಂದಗಳು ನಿರೀಕ್ಷಿತ ಯಶಸ್ಸನ್ನು ಸಾಧಿಸಲು ವಿಫಲವಾಗಿದೆ.
- ಎರಡು ರಾಷ್ಟ್ರಗಳು ನಿರಂತರವಾಗಿ ದ್ವಿಪಕ್ಷಿಯ ಮಾತುಕತೆಗಳಲ್ಲಿ ನಿರತವಾಗಿದ್ದರೂ ಕೂಡ 2001ರಲ್ಲಿ ಭಾರತ ಸಂಸತ್ತಿನ ಮೇಲಿನ ದಾಳಿ, 2008ರ ಮುಂಬೈ ಮೇಲಿನ ದಾಳಿ, 2016ರ ಪಠಾಣ್ ಕೋಟ್ ದಾಳಿಗಳು ಪರಸ್ಪರ ಸಂಬಂಧಗಳ ವೃದ್ಧಿಗೆ ಹಿನ್ನಡೆಯನ್ನು ಉಂಟುಮಾಡಿವೆ.
- ಈ ಸಮಸ್ಯೆಗಳ ನಡುವೆಯು ಎರಡು ರಾಷ್ಟ್ರಗಳ ಸ್ವಾತಂತ್ರಗೊಂಡ ದಿನದಿಂದ ಪ್ರಸ್ತುತದವರೆಗೆ ವ್ಯಾಪಾರ, ವಾಣಿಜ್ಯ ಸಂಬಂಧಗಳು ನಿರಂತರವಾಗಿ ಮುಂದುವರೆದಿವೆ.
- ಕ್ರೀಡೆ, ಸಾಂಸ್ಕೃತಿಕ, ವ್ಯವಹಾರಗಳಲ್ಲಿ, ನೈಸರ್ಗಿಕ ವಿಕೋಪಗಳು ಸಂಭವಿಸಿದ ಸಂದರ್ಭಗಳಲ್ಲಿ ಎರಡು ರಾಷ್ಟ್ರಗಳು ಸೌಹಾರ್ದಯುತವಾದ ಮತ್ತು ಪರಸ್ಪರ ಸಹಕಾರ ಹೊಂದಿವೆ.

**5. ಭಾರತ ಮತ್ತು ರಷ್ಯಾಗಳ ನಡುವಿನ ಸಂಬಂಧವನ್ನು ವಿವರಿಸಿ.**

**ಉತ್ತರ : ಭಾರತ ಮತ್ತು ರಷ್ಯಾ ಸಂಬಂಧ**

- ಭಾರತ ಮತ್ತು ರಷ್ಯಾ ದೇಶಗಳ ನಡುವಿನ ಸಂಬಂಧವು ಅತ್ಯಂತ ಸುಮಧುರವಾಗಿದ್ದು, ರಷ್ಯಾ ನಮ್ಮ ದೇಶದ ಶಾಶ್ವತ ಮಿತ್ರ ಎಂದೇ ಕರೆಯಬಹುದು.
- ಭಾರತ ಅಲಿಪ್ತ ನೀತಿ ಹೊಂದಿದ್ದರೂ ಭಾರತ–ಸೋವಿಯತ್ ರಷ್ಯಾ ಒಪ್ಪಂದವು ರಾಜಕೀಯ, ಆರ್ಥಿಕ ಹಾಗೂ ಇತರೆ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿಯನ್ನು ಕಂಡಿತು.
- 1966ರ ತಾಷ್ಕೆಂಟ್‌ನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.
- 1971ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದವು.
- ಭಾರತದ ಮೇಲೆ ಚೀನಾ ಆಕ್ರಮಣವನ್ನು ಖಂಡಿಸಿತು.
- ಗೋವಾ ವಿಮೋಚನೆಯ ವೇಳೆ ಭಾರತವನ್ನು ರಷ್ಯಾ ಬೆಂಬಲಿಸಿತು.
- ಭಾರತದಲ್ಲಿ ಭಿಲಾಯ್ ಮತ್ತು ಭೋಕಾರೋ ಕಬ್ಬಿಣ & ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ರಷ್ಯಾ ನೆರವು ನೀಡಿತು.
- ನಮ್ಮ ದೇಶದ ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಗೆ ರಷ್ಯಾ ಸಾಕಷ್ಟು ನೆರವು ನೀಡಿದೆ.
- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

**6. ಭಾರತ ಮತ್ತು ಅಮೇರಿಕದ ನಡುವಿನ ಸಂಬಂಧವನ್ನು ವಿವರಿಸಿ.**

ಉತ್ತರ : ಭಾರತ & ಅಮೇರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು, ಪ್ರಚಲಿತ ಜಾಗತಿಕ ವಿದ್ಯಮಾನದಲ್ಲಿ ಈ ಎರಡು ರಾಷ್ಟ್ರಗಳ ಪರಸ್ಪರ ಮೈತ್ರಿ ತುಂಬಾ ಪ್ರಾಮುಖ್ಯವಾದುದು. ಏಕೆಂದರೆ –

- ಭಾರತದ ಪಂಚವಾರ್ಷಿಕ ಯೋಜನೆಗೆ ಅಮೇರಿಕಾ ತುಂಬಾ ಸಹಾಯ ನೀಡಿತು.
- 1962ರ ಚೀನಾ ಆಕ್ರಮಣ ಸಂದರ್ಭದಲ್ಲೂ ಅಮೇರಿಕಾದ ಸಹಾಯ ನಮಗೆ ತುಂಬಾ ಶಕ್ತಿ ನೀಡಿತು.
- ಭಯೋತ್ಪಾದನೆ ಹತ್ತಿಕ್ಕುವಲ್ಲಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ.
- ಭಾರತವು ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅಮೇರಿಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ.
- ವಿಶ್ವಸಂಸ್ಥೆಯನ್ನು ಬಲಪಡಿಸುವ ಹಾಗೂ ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡು ರಾಷ್ಟ್ರಗಳು ಸಮಾನ ದೋರಣೆ ಹೊಂದಿವೆ.

## <u>ಅಧ್ಯಾಯ 4. ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ</u>

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. 1945ರಲ್ಲಿ ________ ಸಂಘದ ಉದಯದೊಂದಿಗೆ ಹೊಸ ಶಕೆ ಆರಂಭವಾಯಿತು. – **ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರ ಸಂಘ.**
2. ಭಾರತ ಸಂವಿಧಾನದಲ್ಲಿ ಮೂರನೆಯ ಭಾಗದಲ್ಲಿ ________ ವಿಧಿಗಳ ಅಡಿಯಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ. – **12 ರಿಂದ 35ರವರೆಗಿನ ವಿಧಿಗಳು.**
3. ಮಾನವ ಹಕ್ಕುಗಳ ದಿನವನ್ನು ________ ರಂದು ಆಚರಿಸುತ್ತೇವೆ. – **ಡಿಸೆಂಬರ್ 10.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಜಾಗತಿಕ ಸಮಸ್ಯೆಗಳನ್ನು ಪಟ್ಟಿ ಮಾಡಿ.**

ಉತ್ತರ : ಜಾಗತಿಕವಾಗಿ ಮಾನವ ಹಕ್ಕುಗಳು, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇದ ನೀತಿ ಹಾಗೂ ಭಯೋತ್ಪಾದಕತೆಯಂತಹ ಹಲವಾರು ಸಮಸ್ಯೆಗಳು ಇನ್ನೂ ಹಾಗೆಯೇ ಉಳಿದುಕೊಂಡಿವೆ.

**2. ಪ್ರಪಂಚದ ಯಾವ ಘಟನೆಗಳು ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಠಿ ನೀಡಿದವು?**

ಉತ್ತರ : 1776ರ ಅಮೇರಿಕಾದ ಸ್ವಾತಂತ್ರ್ಯ ಯುದ್ಧ, 1789ರ ಫ್ರಾನ್ಸಿನ ಮಹಾಕ್ರಾಂತಿ, 1917ರ ರಷ್ಯಾಕ್ರಾಂತಿ. 20ನೆ ಶತಮಾನದ ಪ್ರಥಮಾರ್ಧದ ಭಾರತ

ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ ಇವೆಲ್ಲಾ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟ ಘಟನೆಗಳಾಗಿವೆ.

**3. ಮಾನವ ಹಕ್ಕುಗಳ ನಿರಾಕರಣೆಗೆ ಕಾರಣವಾದ ಅಂಶಗಳಾವುವು?**

ಉತ್ತರ : ಧರ್ಮ, ಜನಾಂಗ, ಲಿಂಗ, ಜಾತಿ, ವರ್ಣ ಹಾಗೂ ರಾಷ್ಟ್ರೀಯತೆ ಮೊದಲಾದವು ಮಾನವ ಹಕ್ಕುಗಳ ನಿರಾಕರಣೆಗೆ ಕಾರಣವಾದ ಅಂಶಗಳಾಗಿವೆ.

**4. ಶಸ್ತ್ರಾಸ್ತ್ರಗಳ ಪೈಪೋಟಿಯ ಬಗ್ಗೆ ಅಮೇರಿಕಾದ ಅಧ್ಯಕ್ಷ ಐಸಾನ್ ಹೋವರ್‌ನ ಉದ್ಗಾರವೇನು?**

ಉತ್ತರ : ಅಮೇರಿಕದ ಅಧ್ಯಕ್ಷ ಐಸನ್ ಹೋವರ್ ಶಸ್ತ್ರಾಸ್ತ್ರಗಳ ಪೈಪೋಟಿ ಕುರಿತು 'ಒಮ್ಮೆ ಶಸ್ತ್ರಾಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ. ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ' ಎಂದು ಉದ್ಗರಿಸಿದರು.

**5. ನಿಶ್ಯಸ್ತ್ರೀಕರಣ ಎಂದರೇನು?**

ಉತ್ತರ : ನಿಶ್ಯಸ್ತ್ರೀಕರಣ ಎಂದರೆ ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣವಾಗಿ ಇಲ್ಲವಾಗಿಸುವ ನೇರ ಪ್ರಕ್ರಿಯೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟಗಳನ್ನು ವಿವರಿಸಿ.**

**ಉತ್ತರ : ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟ –**

- ➢ ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರ ವಾಗಿ ಪ್ರತಿಪಾದಿಸುತ್ತಾ ಬಂದಿದೆ.
- ➢ ಭಾರತ ತನ್ನ ಸಂವಿಧಾನದಲ್ಲೂ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ.
- ➢ ವಿಶ್ವಸಂಸ್ಥೆ ಹಾಗೂ ಜಾಗತಿಕ ವೇದಿಕೆಗಳ ಮೂಲಕ ಭಾರತ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸುತ್ತಿದೆ..
- ➢ ಗುಲಾಮಗಿರಿ ಪದ್ಧತಿ, ಮಾನವರ ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಇತ್ಯಾದಿಗಳನ್ನು ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ನಿಷೇಧಿಸಿದೆ.
- ➢ ಜನಾಂಗ ಹತ್ಯೆ, ಎಲ್ಲಾ ವಿಧದ ಶೋಷಣೆ ಹಾಗೂ ದಬ್ಬಾಳಿಕೆಗೆ ಭಾರತ ವಿರೋಧ ವ್ಯಕ್ತಪಡಿಸುತ್ತದೆ.
- ➢ ಭಾರತದಲ್ಲಿ ಮಾನವ ಹಕ್ಕುಗಳ ರಾಷ್ಟ್ರೀಯ ಮತ್ತು ರಾಜ್ಯ ಆಯೋಗಗಳನ್ನು ರಚಿಸಲಾಗಿದೆ.

**2. ಮಾನವ ಹಕ್ಕುಗಳ ಪ್ರತಿಪಾದನೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಪಾತ್ರವನ್ನು ತಿಳಿಸಿ.**

**ಉತ್ತರ : ಮಾನವ ಹಕ್ಕುಗಳ ಪ್ರತಿಪಾದನೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಪಾತ್ರ –**

- ➢ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಾನವ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಪ್ರತಿಯೊಂದು ಸದಸ್ಯ ರಾಷ್ಟ್ರಗಳು ಕಡ್ಡಾಯವಾಗಿ ಪಾಲಿಸುವಂತೆ ನಿರ್ದೇಶಿಸಿದೆ.
- ➢ ಸದಸ್ಯ ರಾಷ್ಟ್ರಗಳು ಮಾನವ ಹಕ್ಕುಗಳ ಸಂರಕ್ಷಣೆಯನ್ನು ಮಾಡುವುದಕ್ಕೆ ಪೂರಕವಾದ ಮಾರ್ಗಸೂಚಿಗಳನ್ನು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯಲ್ಲಿ ನೀಡಲಾಗಿದೆ.
- ➢ ಮಾನವ ಹಕ್ಕುಗಳ ಶೋಷಣೆಗೆ ಸಂಬಂಧಿಸಿದಂತೆ 1966ರಲ್ಲಿ ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳೊಂದಿಗೆ ಸಭೆಯೊಂದನ್ನು ನಡೆಸಿ ಪ್ರತಿಯೊಂದು ರಾಷ್ಟ್ರಗಳು ಮಾನವ ಹಕ್ಕುಗಳ ರಕ್ಷಣೆಗೆ ಬದ್ಧರಾಗಿರಬೇಕೆಂದು ಸೂಚಿಸಿತು.
- ➢ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ.

**3. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯ ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿ.**

ಉತ್ತರ : ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯ ಮಾರ್ಗಸೂಚಿಗಳನ್ನು ಮುಖ್ಯವಾಗಿ 30 ಕಲುಮುಗಳಲ್ಲಿ ಸೂಚಿಸಲಾಗಿದೆ. ಪ್ರಮುಖವಾದವುಗಳೆಂದರೆ –

- ➢ ಪ್ರತಿಯೊಬ್ಬ ವ್ಯಕ್ತಿ ಹುಟ್ಟಿನಿಂದಲೇ ಸ್ವಾತಂತ್ರ್ಯ, ಸಮಾನತೆ ಹಾಗೂ ಘನತೆಯನ್ನು ಹೊಂದಿರುವುದು.
- ➢ ಜೀವಿಸುವ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಭದ್ರತೆ ಹೊಂದಿರುವುದು.
- ➢ ಗುಲಾಮಗಿರಿ ಪದ್ಧತಿ ನಿಷೇದ.
- ➢ ಮಹಿಳಾ ಶೋಷಣೆ ಮುಕ್ತಗೊಳಿಸುವುದು ಮುಂತಾದವು.

**4. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವವು? ಅಥವಾ ಭಾರತವೂ ಸೇರಿದಂತೆ ಎಲ್ಲಾ ರಾಷ್ಟ್ರಗಳು ಪರಸ್ಪರ ನಿಶ್ಚಿತ ನಾಶದ ವಿರುದ್ಧ ಹೋರಾಡಬೇಕು. ಏಕೆ?**

**ಉತ್ತರ : ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳು**

- ➢ ಶಸ್ತ್ರಾಸ್ತ್ರ ಪೈಪೋಟಿಯ ಬಗ್ಗೆ ಹೇಳುವದಾದರೆ ಒಂದು ಮಾತಿದೆ. – 'ಅಣ್ವಸ್ತ್ರ ಯುಗದಲ್ಲಿ ನಾವು ಯುದ್ಧವನ್ನು ಕೊನೆಗಾಣಿಸಬೇಕು, ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ.'
- ➢ ಪ್ರಚಲಿತ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿಧ್ಯಮಾನ ಎಂಬುದಾಗಿ ಕಾಣಿಸುತ್ತಿದೆ.
- ➢ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗಿ ಜಗತ್ತಿನಲ್ಲಿ ಯಾವ ಸಮಯದಲ್ಲಿಯಾಗಲೀ ಯುದ್ಧ ಆರಂಭವಾಗಿ ಮನುಕುಲ ನಾಶವಾಗುವ ಭೀತಿ ಇದೆ.
- ➢ ಶಸ್ತ್ರಾಸ್ತ್ರ ಜಮಾವಣೆ ತಪ್ಪಿಸುವದು ಅವಶ್ಯವಾಗಿದೆ.
- ➢ ಪರಸ್ಪರ 'ನಿಶ್ಚಿತ ನಾಶ'ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳು ಪ್ರಯತ್ನಿಸುವ ಅವಶ್ಯಕತೆಯಿದೆ.

**5. ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ತಗ್ಗಿಸುವ ಸಲುವಾಗಿ ಪ್ರಪಂಚದಲ್ಲಿ ಆದ ಪ್ರಮುಖ ಒಪ್ಪಂದಗಳು ಯಾವುವು?**

**ಉತ್ತರ : ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ತಗ್ಗಿಸುವ ಸಲುವಾಗಿ ಪ್ರಪಂಚದಲ್ಲಿ ಆದ ಪ್ರಮುಖ ಒಪ್ಪಂದಗಳು**

- ➢ ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್).
- ➢ ಪಾಕ್ಷಿಕ ಪ್ರಯೋಗ ನಿಷೇದ ಒಪ್ಪಂದ.
- ➢ ಅಣ್ವಸ್ತ್ರಗಳ ಸಂಖ್ಯೆಯನ್ನು ಕುಗ್ಗಿಸುವ ಒಪ್ಪಂದ
- ➢ ಫಲಿಕೆ ನಿಷೇದ ಒಪ್ಪಂದ
- ➢ ಸಮಗ್ರ ಪರೀಕ್ಷಣ ನಿಷೇಧ ಒಪ್ಪಂದ (ಸಿಟಿಬಿಟಿ)

**6. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವವು?**

**ಉತ್ತರ : ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳು.**

- ➢ ಯಾವುದೇ ಷರತ್ತುಗಳಿಲ್ಲದೆ ಮುಂದುವರೆದ ರಾಷ್ಟ್ರಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು.
- ➢ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು.
- ➢ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡ ರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು.
- ➢ ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

**7. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವವು? ಅಥವಾ** ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಕುಂದುಕೊರತೆಗಳೇನು? **ಈ ರೀತಿ ಹಿಂದುಳಿಯುವಿಕೆಯ ಕಾರಣಗಳಾವವು?**

**ಉತ್ತರ : ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳು ಅಥವಾ** ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಕುಂದುಕೊರತೆಗಳು

- ➢ ಹಿಂದುಳಿದ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಪಡೆದರೂ ಸಹ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದೆ ಉಳಿದಿದ್ದವು.
- ➢ ಔದ್ಯೋಗಿಕ, ತಂತ್ರಜ್ಞಾನ ಮತ್ತು ವಿಜ್ಞಾನ ರಂಗಗಳಲ್ಲಿಯೂ ಈ ಪ್ರದೇಶಗಳು ಹಿಂದೆ ಇದ್ದುದರಿಂದ ಈ ದೇಶಗಳಲ್ಲಿನ ಜೀವನಮಟ್ಟ ಕೆಳಮಟ್ಟದಲ್ಲಿತ್ತು.
- ➢ ಶಿಕ್ಷಣ, ಆರೋಗ್ಯ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಹೇಳಿಕೊಳ್ಳುವಂತಹ ಸಾಧನೆಗಳಿರಲಿಲ್ಲ.

8. ತೃತೀಯ ಜಗತ್ತಿನ ರಾಷ್ಟ್ರಗಳು ಹಿಂದುಳಿಯಲು ಕಾರಣಗಳೇನು?

ಉತ್ತರ : ತೃತೀಯ ಜಗತ್ತಿನ ರಾಷ್ಟ್ರಗಳು ಹಿಂದುಳಿಯಲು ಕಾರಣಗಳು –

- ➢ ತೃತೀಯ ಜಗತ್ತಿನ ರಾಷ್ಟ್ರಗಳು ವಸಾಹತುಶಾಹಿ ನೀತಿಯಿಂದ ಶೋಷಣೆಗೆ ಒಳಪಟ್ಟದ್ದರಿಂದ ಹಿಂದುಳಿದಿವೆ.
- ➢ ಈ ದೇಶಗಳು ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗದಲ್ಲಿ ಕೊರತೆಯನ್ನು ಎದುರಿಸುತ್ತಿವೆ.
- ➢ ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣ ಮುಂತಾದ ವಿದ್ಯಮಾನಗಳು ಬಡರಾಷ್ಟ್ರಗಳ ಮೇಲೆ ದುಷ್ಪರಿಣಾಮ ಬೀರುತ್ತವೆ.

# ಅಧ್ಯಾಯ 5 ಜಾಗತಿಕ ಸಂಸ್ಥೆಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ವಿಶ್ವಸಂಸ್ಥೆ ಎಂಬ ಶಬ್ದವನ್ನು ಚಾಲ್ತಿಗೆ ತಂದವರು ಅಮೇರಿಕದ ಅಧ್ಯಕ್ಷ – **ಎಫ್.ಡಿ.ರೂಸ್‌ವೆಲ್ಟ್**
2. ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ – **ಅಕ್ಟೋಬರ್ 24, 1945**
3. ವಿಶ್ವಸಂಸ್ಥೆಯ ಸದಸ್ಯತ್ವವನ್ನು ಹೊಂದಿದ ರಾಷ್ಟ್ರಗಳ ಸಂಖ್ಯೆ –**193 ರಾಷ್ಟ್ರಗಳು**
4. ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ವಿಶ್ವಸಂಸ್ಥೆಯ ಅಂಗಸಂಸ್ಥೆ – **ಸಾಮಾನ್ಯ ಸಭೆ,**
5. ವಿಶ್ವಸಂಸ್ಥೆಯ ಸಾಮಾಜಿಕ & ಆರ್ಥಿಕ ಸಮಿತಿಯ ಸದಸ್ಯರ ಸಂಖ್ಯೆ – **54 ಸದಸ್ಯರು**
6. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಅಧಿಕಾರವಧಿ ______ ವರ್ಷ. – **5 ವರ್ಷ**
7. ವಿಶ್ವಸಂಸ್ಥೆಯ ಮುಖ್ಯ ಕಚೇರಿ – **ನ್ಯೂಯಾರ್ಕ**
8. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು – **ಅಂಟಾನಿಯೋ ಗುಟೆರಸ್.**
9. ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾದೀಶರ ಅವಧಿ – **9 ವರ್ಷ**
10. ಅಂತರಾಷ್ಟ್ರೀಯ ನ್ಯಾಯಾಲಯ ಕೇಂದ್ರ ಕಛೇರಿ – **ನೆದರಲ್ಯಾಂಡಿನ ಹೇಗ್,**
11. ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾದೀಶರ ಸಂಖ್ಯೆ – **15.**
12. ಆಹಾರ & ಕೃಷಿ ಸಂಸ್ಥೆ ಸ್ಥಾಪನೆಯಾದ ವರ್ಷ – **ಕ್ರಿಶ 1945**
13. ಆಹಾರ & ಕೃಷಿ ಸಂಸ್ಥೆಯ ಪ್ರಧಾನ ಕಛೇರಿ – **ರೋಮ್**
14. ವಿಶ್ವ ಆರೋಗ್ಯ ಸಂಸ್ಥೆಯು ಸ್ಥಾಪನೆಯಾದ ವರ್ಷ – **ಕ್ರಿಶ 1948**
15. ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ಕಛೇರಿ – **ಸ್ವಿಟ್ಜರ್‌ಲೆಂಡಿನ ಜಿನೇವಾ**
16. ಯುನೆಸ್ಕೋ ಸ್ಥಾಪನೆಯಾದ ವರ್ಷ – **ಕ್ರಿಶ 1946**
17. ಯುನೆಸ್ಕೋದ ಕೇಂದ್ರ ಕಚೇರಿ – **ಪ್ಯಾರಿಸ್**
18. ನೋಬೆಲ್ ಬಹುಮಾನ ಪಡೆದ ವಿಶ್ವಸಂಸ್ಥೆ ಸೇವಾಸಂಸ್ಥೆ – **ಯುನಿಸೆಫ್,**
19. ಯುನಿಸೆಫ್‌ಗೆ ನೋಬೆಲ್ ಬಹುಮಾನ ದೊರೆತದ್ದು – **ಕ್ರಿಶ 1965ರಲ್ಲಿ**
20. ಐ ಎಮ್ ಎಫ್‌ನ ಕೇಂದ್ರ ಕಚೇರಿ – **ಅಮೇರಿಕಾದ ವಾಷಿಂಗಟನ್**
21. ವಿಶ್ವ ಬ್ಯಾಂಕ್‌ನ ಸ್ಥಾಪನೆಯಾದ ವರ್ಷ – **ಕ್ರಿಶ 1947**
22. ವಿಶ್ವಬ್ಯಾಂಕ್ ಕೇಂದ್ರ ಕಚೇರಿ – **ಅಮೇರಿಕಾದ ವಾಷಿಂಗಟನ್**
23. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಪ್ರಧಾನ ಕಛೇರಿ – **ಸ್ವಿಟ್ಜರ್‌ಲೆಂಡಿನ ಜಿನೇವಾ**
24. ವಿಶ್ವ ವ್ಯಾಪಾರ ಸಂಘದ ಸ್ಥಾಪನೆಯಾದದ್ದು – **1995 ಜನವರಿ 1**
25. ಕಾಮನ್‌ವೆಲ್ತ್ ಒಕ್ಕೂಟದ ಕೇಂದ್ರ ಕಚೇರಿ – **ಲಂಡನ್**
26. ಸಾರ್ಕ ಸ್ಥಾಪನೆಯಾದ ವರ್ಷ – **ಕ್ರಿಶ 1985**
27. ಸಾರ್ಕನ ಕೇಂದ್ರ ಕಚೇರಿ – **ನೇಪಾಳದ ಕಾತ್ಮಂಡು**
28. ಯುರೋಪಿಯನ್ ಯುನಿಯನ್‌ನ ಉದಯ – **ಕ್ರಿಶ 1992**
29. ಆಸಿಯಾನ್ ಸ್ಥಾಪನೆಯಾದ ವರ್ಷ – **1967**
30. ಆಫ್ರಿಕನ್ ಒಕ್ಕೂಟ ಸಂಸ್ಥೆ ಸ್ಥಾಪನೆಯಾದ ವರ್ಷ – **ಕ್ರಿಶ 1963**
31. ಮೊದಲನೇ ಜಾಗತಿಕ ಯುದ್ಧದ ತರುವಾಯ ಜಾಗತಿಕ ಶಾಂತಿಗೆಂದು ಸ್ಥಾಪಿತವಾದ ಸಂಸ್ಥೆ – **ಲೀಗ್ ಆಫ್ ನೇಷನ್ಸ್ ( ರಾಷ್ಟ್ರ ಸಂಘ ).**
32. ವಿಶ್ವಸಂಸ್ಥೆಯ ಪ್ರಸ್ತಾವನೆಯು ಈ ವಾಕ್ಯದೊಂದಿಗೆ ಪ್ರಾರಂಭವಾಗುತ್ತದೆ. – **'ವಿಶ್ವದ ಜನಸಮುದಾಯವೆನಿಸಿದ ನಾವು.......'**
33. ವಿಶ್ವಸಂಸ್ಥೆಯ ಸ್ಥಾಪನೆಯ ಉದ್ದೇಶ – **ವಿಶ್ವಶಾಂತಿ ಕಾಪಾಡುವುದು**
35. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ – **ಭದ್ರತಾ ಸಮಿತಿ**
36. ವಿಶ್ವಸಂಸ್ಥೆಯ ಯಾವ ಅಂಗಸಂಸ್ಥೆ ಪ್ರಸ್ತುತ ಅಸ್ತಿತ್ವದಲ್ಲಿ ಇಲ್ಲ – **ದತ್ತಿ ಸಮಿತಿ**
37. ಅಂತರಾಷ್ಟ್ರೀಯ ನ್ಯಾಯಾಲಯದ ನಿರ್ಣಯಗಳು ಈ ನೆಲೆಗಟ್ಟಿನ ಮೇಲೆ ಮಹತ್ವ ಪಡೆದಿವೆ. – **ನೈತಿಕ & ವೈಚಾರಿಕ ನೆಲೆಗಟ್ಟು.**
38. ವಿಶ್ವಸಂಸ್ಥೆಯ ದೈನಂದಿನ ಆಡಳಿತ ಯೋಜನೆ ಮತ್ತು ಸಂಯೋಜನೆ ಕಾರ್ಯಗಳು ಇವರ ವ್ಯಾಪ್ತಿಗೆ ಬರುತ್ತದೆ. – **ಸಚಿವಾಲಯ**
39. ವಿಶ್ವ ಆರೋಗ್ಯ ಸಂಸ್ಥೆಯ ಮಹಾನ್ ಸಾಧನೆ – **ಸಿಡುಬು ರೋಗದ ನಿರ್ಮೂಲನೆ**
40. ಯುನಿಸೆಫ್ ಸಂಸ್ಥೆಯು ಶುಭಾಶಯ ಪತ್ರಗಳ ಮಾರಾಟದಿಂದ ಬಂದ ಹಣವನ್ನು ಈ ಉದ್ದೇಶಕ್ಕಾಗಿ ವಿನಿಯೋಗಿಸುತ್ತದೆ. – **ಮಕ್ಕಳ ಯೋಗಕ್ಷೇಮ**
41. ವಿಶ್ವಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ – **ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ.**
42. ಯುರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುತ್ತದೆ. ಏಕೆಂದರೆ ಸದಸ್ಯ ರಾಷ್ಟ್ರಗಳು – **ತಮ್ಮ ಸಾರ್ವಭೌಮದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿವೆ**
43. ಈ ಕೆಳಗಿನ ಯಾವ ಸಂಸ್ಥೆಯು ಯುರೋಪಿಯನ್ ಎಕನಾಮಿಕ್ ಕಮ್ಯುನಿಟಿಯ ವಾರಸುದಾರ ಸಂಸ್ಥೆಯಂತಿದೆ. – **ಯುರೋಪಿಯನ್ ಯೂನಿಯನ್**
44. ಭದ್ರತಾ ಸಮಿತಿಯು ವಿಶ್ವಸಂಸ್ಥೆಯ ಕ್ಯಾಬಿನೆಟ್ (ಸಚಿವ ಸಂಪುಟ)ನಂತೆ ಕಾರಣ – **ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತದೆ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಯಾವ ಸಮ್ಮೇಳನದಲ್ಲಿ ವಿಶ್ವಸಂಸ್ಥೆಯ ಸನ್ನದಿಗೆ ಸಹಿ ಹಾಕಲಾಯಿತು?**
ಉತ್ತರ : 1945 ಜೂನ್ 26ರಂದು ಸ್ಯಾನ್ ಪ್ರಾನ್ಸಿಸ್ಕೋ ಸಮ್ಮೇಳನದಲ್ಲಿ ವಿಶ್ವಸಂಸ್ಥೆಯ ಸನ್ನದಿಗೆ ಸಹಿ ಹಾಕಲಾಯಿತು.

**2. ವಿಶ್ವಸಂಸ್ಥೆಯ ಸ್ಥಾಪನೆಯ ರೂವಾರಿಗಳನ್ನು ಹೆಸರಿಸಿ**
ಉತ್ತರ : ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೇರಿಕಾದ ಪ್ರಾಂಕ್ಲಿನ್ ಡಿ ರೂಸವೆಲ್ಟ್ ವಿಶ್ವಸಂಸ್ಥೆಯ ಸ್ಥಾಪನೆಯ ರೂವಾರಿಗಳಾಗಿದ್ದಾರೆ.

**3. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು ಯಾವವು?**
ಉತ್ತರ : ಇಂಗ್ಲೆಂಡ, ಅಮೆರಿಕಾ, ರಷ್ಯಾ, ಪ್ರಾನ್ಸ್, ಚೀನಾ ವಿಶ್ವಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರಗಳು

**4. ವಿಶ್ವಸಂಸ್ಥೆಯ ಭದ್ರತಾ ಸಮಿತಿಯನ್ನು ಸಚಿವ ಸಂಪುಟ ಎಂದು ಕರೆಯಲು ಕಾರಣವೇನು?**
ಉತ್ತರ : ವಿಶ್ವಸಂಸ್ಥೆಗೆ ಸಂಬಂಧಿಸಿದ ಪ್ರತಿಯೊಂದು ವಿಷಯವು ಕಾರ್ಯರೂಪಕ್ಕೆ ಬರಬೇಕಾದರೆ ಅದಕ್ಕೆ ಭದ್ರತಾ ಸಮಿತಿಯ ಒಪ್ಪಿಗೆ ಬೇಕೆ ಬೇಕು. ಇದರಿಂದಾಗಿ ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಸಚಿವ ಸಂಪುಟ ಎಂದು ಕರೆಯಲಾಗುತ್ತದೆ.

**5. 'ಇಂದು ವಿಶ್ವಸಂಸ್ಥೆಯ ದತ್ತಿ ಸಮಿತಿಯು ಅಸ್ಥಿತ್ವದಲ್ಲಿ ಇಲ್ಲ' ಏಕೆ? ವಿಶ್ಲೇಷಿಸಿ.**
ಉತ್ತರ : ವಿಶ್ವಸಂಸ್ಥೆಯ ದತ್ತಿ ಸಮಿತಿಯು ಸ್ವತಂತ್ರ ರಾಷ್ಟ್ರದ ಮಟ್ಟಕ್ಕೆ ಏರದ ಪ್ರದೇಶಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿತ್ತು. ಆದರೆ ಇಂದು ಎಲ್ಲಾ ರಾಷ್ಟ್ರಗಳು ಸ್ವತಂತ್ರಗೊಂಡಿರುವುದರಿಂದಾಗಿ ಯಾವುದೇ ದತ್ತಿಗಳು ಉಳಿದಿಲ್ಲ. ಆದ್ದರಿಂದ ಈಗ ದತ್ತಿ ಸಮಿತಿಯು ಅಸ್ಥಿತ್ವದಲ್ಲಿ ಇಲ್ಲ.

**6. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯು ಅಂತರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಏಕೆ?**
ಉತ್ತರ : ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯು ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿರುವುದರಿಂದ ಇದು ಪ್ರಮುಖ ಪಾತ್ರ ವಹಿಸುತ್ತದೆ.

**7. ಆಹಾರ ಮತ್ತು ಕೃಷಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಏಕೆ?**
ಉತ್ತರ : ಜಗತ್ತಿನಾದ್ಯಂತ ಬಡತನ, ಹಸಿವು ಮತ್ತು ಅಪೌಷ್ಠಿಕಕತೆಯ ವಿರುದ್ಧ ಹೋರಾಡಲು ಆಹಾರ ಮತ್ತು ಕೃಷಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

**8. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲಿರುವ ವಿಷಯಗಳಾವವು?**
ಉತ್ತರ : ಜನಸಂಖ್ಯಾ ಸ್ಪೋಟ ತಡೆಗಟ್ಟುವದು, ಪರಿಸರ ಸಂರಕ್ಷಣೆ, ಹಸಿವು, ಪೌಷ್ಠಿಕಾಂಶದ ಕೊರತೆ ಮುಂತಾದ ವಿಷಯಗಳು ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಸೂಚಿಯಲ್ಲಿರುವ ವಿಷಯಗಳಾಗಿವೆ.

**9. ಯುನಿಸೆಫ್ ಸಂಸ್ಥೆ ಸ್ಥಾಪನೆಯ ಮೂಲ ಉದ್ದೇಶ ವೇನು?**
ಉತ್ತರ : ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದೇ ಈ ಸಂಸ್ಥೆಯ ಮೂಲ ಉದ್ದೇಶವಾಗಿದೆ.

**10. ನಾವು ಯುನಿಸೆಫ್ ಶುಭಾಶಯ ಪತ್ರಗಳನ್ನು ಏಕೆ ಕೊಳ್ಳಬೇಕು?**
ಉತ್ತರ : ಯುನಿಸೆಫ್ ಸಂಸ್ಥೆಯು ಶುಭಾಶಯ ಪತ್ರಗಳ ಮಾರಾಟದ ಮೂಲಕ ಬಂದ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತ್ತದೆ. ಆದ್ದರಿಂದ ನಾವು ಯುನಿಸೆಫ್ ಶುಭಾಶಯ ಪತ್ರಗಳನ್ನು ಕೊಳ್ಳಬೇಕು.

**11. ವಿಶ್ವಬ್ಯಾಂಕ್ ಯಾವ ಉದ್ದೇಶಗಳಿಗಾಗಿ ಸದಸ್ಯ ರಾಷ್ಟ್ರಗಳಿಗೆ ಸಾಲ ಸೌಲಭ್ಯ ನೀಡುತ್ತದೆ?**
ಉತ್ತರ : ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ ಅಭಿವೃದ್ಧಿಗಾಗಿ ಅವಶ್ಯಕವಿರುವ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ವಿಶ್ವಬ್ಯಾಂಕ್ ಅಗಾಧ ಮೊತ್ತದ ಸಾಲ ನೀಡುತ್ತದೆ.

**12. SAARC ನ್ನು ವಿಸ್ತರಿಸಿ.**

ಉತ್ತರ : SAARC – South Asian Association of Regional co-operation (ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ) ಎಂದರ್ಥ.

**13. ಸಾರ್ಕ ಸಂಸ್ಥೆಯಲ್ಲಿ ಇರುವ ಸದಸ್ಯ ರಾಷ್ಟ್ರಗಳು ಯಾವುವು?**

ಉತ್ತರ : ಸಾರ್ಕ ಸಂಸ್ಥೆಯು 1985ರಲ್ಲಿ ಸ್ಥಾಪನೆಯಾಗಿದ್ದು, ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್ಡೀವ್ಸ್, ಭೂತಾನ್ & ಅಫಘಾನಿಸ್ತಾನ ಪ್ರಮುಖ ಸದಸ್ಯ ರಾಷ್ಟ್ರಗಳಾಗಿವೆ.

**14. ಸಾರ್ಕ ಸಂಸ್ಥೆ ಸ್ಥಾಪನೆಯ ಮೂಲ ಉದ್ದೇಶವೇನು?**

ಉತ್ತರ : ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾಧಿಸುವಿಕೆ ಸಾರ್ಕ ಸಂಸ್ಥೆಯ ಮೂಲ ಉದ್ದೇಶವಾಗಿದೆ.

**15. ಸಾರ್ಕ ಸಂಸ್ಥೆಯ ಪ್ರಗತಿಗೆ ತೊಡಕಾಗಿರುವ ಅದರ ಸೂತ್ರವೇನು?**

ಉತ್ತರ : 'ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು' ಎಂಬ ಸಾರ್ಕನ ಸೂತ್ರವು ಅದರ ಪ್ರಗತಿಗೆ ಒಂದು ತೊಡಕಾಗಿ ಪರಿಣಮಿಸಿದೆ.

**16. ಆಸಿಯಾನ್ ಸ್ಥಾಪಕ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.**

ಉತ್ತರ : ಆಸಿಯಾನ್ ಸ್ಥಾಪಕ ಸದಸ್ಯ ರಾಷ್ಟ್ರಗಳೆಂದರೆ – ಸಿಂಗಾಪುರ, ಮಲೇಷ್ಯಾ, ಇಂಡೋನೇಷ್ಯಾ, ಫಿಲಿಫೈನ್ಸ್ ಹಾಗೂ ಥೈಲ್ಯಾಂಡ್. ಇದೀಗ ಇದರಲ್ಲಿ 10 ರಾಷ್ಟ್ರಗಳು ಸದಸ್ಯತ್ವ ಹೊಂದಿವೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ವಿಶ್ವಸಂಸ್ಥೆಯ ಅಂಗಸಂಸ್ಥೆಗಳಾವುವು?**

**ಉತ್ತರ : ವಿಶ್ವಸಂಸ್ಥೆಯ ಪ್ರಮುಖ ಅಂಗ ಸಂಸ್ಥೆಗಳು**

1. ಸಾಮಾನ್ಯ ಸಭೆ 2. ಭದ್ರತಾ ಸಮಿತಿ 3. ಸಾಮಾಜಿಕ ಹಾಗೂ ಆರ್ಥಿಕ ಸಮಿತಿ 4. ಧರ್ಮದರ್ಶಿ ಸಮಿತಿ 5. ಸಚಿವಾಲಯ 6. ಅಂತರಾಷ್ಟ್ರೀಯ ನ್ಯಾಯಾಲಯ

**2. ಸಾಮಾನ್ಯ ಸಭೆಯ ರಚನೆಯನ್ನು ವಿವರಿಸಿ.**

**ಉತ್ತರ : ಸಾಮಾನ್ಯ ಸಭೆಯ ರಚನೆ**

- ಸಾಮಾನ್ಯ ಸಭೆಯು ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗಸಂಸ್ಥೆಯಾಗಿದೆ.
- ಪ್ರತಿಯೊಂದು ಸದಸ್ಯ ರಾಷ್ಟ್ರವು 5 ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ. ಆದರೆ ಪ್ರತಿ ದೇಶಕ್ಕೆ ಒಂದೇ ಮತದ ಹಕ್ಕು ಮಾತ್ರ ಇರುತ್ತದೆ.
- ಸಾಮಾನ್ಯ ಸಭೆಯು ತನ್ನ ಪ್ರಥಮ ಅಧಿವೇಶನ ದಲ್ಲಿಯೇ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ.
- ಅದೇ ರೀತಿ 17 ಉಪಾಧ್ಯಕ್ಷರನ್ನು ಹಾಗೂ 7 ಸ್ಥಾಯಿ ಸಮಿತಿಗಳಿಗೆ ಏಳು ಮಂದಿ ಅಧ್ಯಕ್ಷರನ್ನೂ ಇಲ್ಲಿ ಆರಿಸಲಾಗುತ್ತದೆ.

**3. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಕಾರ್ಯಗಳು ಯಾವುವು?**

**ಉತ್ತರ : ಸಾಮಾನ್ಯ ಸಭೆಯ ಕಾರ್ಯಗಳು**

- ಸಾಮಾನ್ಯ ಸಭೆಯ ಅಧಿವೇಶನ ಸಾಮಾನ್ಯವಾಗಿ ಸೆಪ್ಟಂಬರ್ ತಿಂಗಳಲ್ಲಿ ಆರಂಭಗೊಂಡು ಡಿಸೆಂಬರ್ ಮಧ್ಯಭಾಗದವರೆಗೆ ಜರಗುತ್ತದೆ.
- ಪ್ರಮುಖ ವಿಷಯಗಳನ್ನು ಬಹುಮತದ ಸಿದ್ದಾಂತ ದಂತೆ ಅಥವಾ 2/3 ಮತಗಳ ಬೆಂಬಲದಿಂದ ನಿರ್ಧರಿಸುವದು.
- ವಿಶ್ವಸಂಸ್ಥೆಯ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತದೆ.
- ಯಾವುದಾದರೂ ತುರ್ತು ವಿಷಯಗಳು ಚರ್ಚೆ ನಡೆಯಬೇಕಿದ್ದರೆ ವಿಶೇಷ ಅಧಿವೇಶನ ಕರೆಯಬಹುದಾಗಿದೆ.
- ಜಾಗತಿಕ ಸಂಸತ್ತಿನ ರೀತಿಯಲ್ಲಿ ವಿಶ್ವದ ಎಲ್ಲಾ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಇದು ಪ್ರಧಾನ ಪಾತ್ರ ವಹಿಸುತ್ತದೆ.

**4. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ರಚನೆಯನ್ನು ವಿವರಿಸಿ.**

**ಉತ್ತರ : ಭದ್ರತಾ ಸಮಿತಿಯ ರಚನೆ**

- ಈ ಸಮಿತಿಯು 15 ಪ್ರತಿನಿಧಿಗಳಿಂದ ಕೂಡಿದ್ದು, ಅದರಲ್ಲಿ 5 ಖಾಯಂ ಸದಸ್ಯರು ಹಾಗೂ 10 ಹಂಗಾಮಿ ಸದಸ್ಯರನ್ನು ಹೊಂದಿದೆ.
- ಇಂಗ್ಲಂಡ, ಅಮೇರಿಕಾ, ರಷ್ಯಾ, ಫ್ರಾನ್ಸ್, ಚೀನಾ ಖಾಯಂ ಸದಸ್ಯ ರಾಷ್ಟ್ರಗಳಾಗಿವೆ.
- ಖಾಯಂಸದಸ್ಯರಿಗೆ 'ವಿಟೋ' ಅಂದರೆ ನಿಷೇದಾತ್ಮಕ ಮತ ಚಲಾಯಿಸುವ ವಿಶೇಷ ಅಧಿಕಾರ ಇದೆ.
- 10 ಮಂದಿ ಹಂಗಾಮಿ ಸದಸ್ಯರನ್ನು 2 ವರ್ಷಗಳ ಅವಧಿಗೆ ಸಾಮಾನ್ಯ ಸಭೆ ಆರಿಸುತ್ತದೆ.

**5.ಆಹಾರ & ಕೃಷಿ ಸಂಸ್ಥೆ ಸ್ಥಾಪನೆಯ ಉದ್ದೇಶಗಳಾವುವು?**

**ಉತ್ತರ: ಆಹಾರ & ಕೃಷಿ ಸಂಸ್ಥೆ ಸ್ಥಾಪನೆಯ ಉದ್ದೇಶಗಳು**

- ಪೌಷ್ಟಿಕ ಆಹಾರ ಒದಗಿಸುವದು.
- ಹಸಿವೆಯಿಂದ ಜಾಗತಿಕ ಜನಸಮುದಾಯವನ್ನು ವಿಮುಕ್ತಿಗೊಳಿಸುವುದು.
- ಕೃಷಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು.
- ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟವನ್ನು ಸುಧಾರಿಸುವುದು.

**6. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಗಳಾವುವು?**

**ಉತ್ತರ : ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಗಳು**

- ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು ಯತ್ನಿಸುತ್ತದೆ.
- ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚವನ್ನು ಮುಕ್ತಿಗೊಳಿಸಲು ಪ್ರಯತ್ನಿಸುತ್ತದೆ.
- ಸಿಡುಬು ರೋಗವನ್ನು ಸಂಪೂರ್ಣವಾಗಿ ನಿವಾರಿಸುವಲ್ಲಿ ಈ ಸಂಸ್ಥೆ ಯಶಸ್ಸು ಕಂಡಿದೆ.
- ಜನಸಂಖ್ಯಾ ಸ್ಪೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ ಮುಂತಾದ ವಿಷಯಗಳು ಈ ಸಂಸ್ಥೆಯ ಕಾರ್ಯ ಸೂಚಿಯಲ್ಲಿವೆ.

**7. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಂ.ಎಫ್‌ನ ಪಾತ್ರವನ್ನು ವಿಶ್ಲೇಷಿಸಿ. ಅಥವಾ**

**ಅಂತರಾಷ್ಟ್ರೀಯ ಹಣಕಾಸಿನ ನಿಧಿಯ ಕಾರ್ಯವನ್ನು ತಿಳಿಸಿ.**

ಉತ್ತರ : **ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಂ.ಎಫ್‌ನ ಪಾತ್ರ –**

- ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯು ಅಂತರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ.
- ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ, ಆರ್ಥಿಕ ಸ್ಥಿರತೆ ಹಾಗೂ ಉತ್ತಮ ವಿದೇಶಿ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಸಹಕರಿಸುತ್ತದೆ.
- ಆರ್ಥಿಕವಾಗಿ ಮುಂದುವರೆದ ಹಾಗೂ ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧವನ್ನು ಬೆಸೆಯುವಲ್ಲಿ ಇದು ಪೂರಕ ಪಾತ್ರವಹಿಸುತ್ತದೆ.

**8. ವಿಶ್ವಬ್ಯಾಂಕ್ ಅಂತರಾಷ್ಟ್ರೀಯ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ?**

**ಉತ್ತರ : ವಿಶ್ವಬ್ಯಾಂಕ್ ಅಂತರಾಷ್ಟ್ರೀಯ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ತನ್ನದೇ ಆದ ಕೊಡುಗೆ ನೀಡಿದೆ. ಹೇಗೆಂದರೆ –**

- ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ ಅಭಿವೃದ್ಧಿ ಗಾಗಿ ಅವಶ್ಯಕವಿರುವ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ವಿಶ್ವಬ್ಯಾಂಕ್ ಅಗಾಧ ಮೊತ್ತದ ಸಾಲ ನೀಡುತ್ತದೆ.
- ವಿಶ್ವ ವ್ಯಾಪಾರ ಹಾಗೂ ವಿದೇಶಿವಿನಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ.
- ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಸಹಾಯ ನೀಡುತ್ತಿದೆ.

**9. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ.**

**ಉತ್ತರ : ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳು**

- ಎಲ್ಲಾ ಉದ್ಯೋಗಗಳಲ್ಲಿಯೂ ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮಗೊಳಿಸುವದು.
- ಬಾಲ ಕಾರ್ಮಿಕರ ನೇಮಕ ತಡೆಯುವದು.
- ಸ್ತ್ರೀ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ, ಪೌಷ್ಟಿಕ ಆಹಾರ, ವಸತಿ, ಮನರಂಜನೆ ಮುಂತಾದ ಸೌಲಭ್ಯಗಳನ್ನು ಒದಗಿಸುವದು.
- ಉದ್ದಿಮೆಗಳ ಆಡಳಿತದಲ್ಲಿ ಕಾರ್ಮಿಕರಿಗೂ ಪಾಲುಗೊಳ್ಳುವ ಅವಕಾಶಗಳನ್ನು ಕಲ್ಪಿಸುವದು.

**10. ವಿಶ್ವ ವ್ಯಾಪಾರ ಸಂಘದ ಕಾರ್ಯಗಳನ್ನು ತಿಳಿಸಿ.**

**ಉತ್ತರ : ವಿಶ್ವ ವ್ಯಾಪಾರ ಸಂಘದ ಕಾರ್ಯಗಳು**

- ಅಂತರಾಷ್ಟ್ರೀಯ ಮಟ್ಟದ ವಾಣಿಜ್ಯ ಹಾಗೂ ವ್ಯಾಪಾರದ ತೊಡಕುಗಳ ನಿವಾರಣೆಗೆ ಯತ್ನಿಸುತ್ತದೆ.
- ವಿಶ್ವ ಬ್ಯಾಂಕಿನೊಂದಿಗೆ ಅಂತರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳ ದೋರಣೆಗಳನ್ನು ರೂಪಿಸುವಲ್ಲಿ ಸಹಕರಿಸುತ್ತದೆ.

**11. ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ.**

**ಉತ್ತರ : ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳು**

- ಪ್ರಜಾತಂತ್ರವನ್ನು ಎತ್ತಿಹಿಡಿಯುವದು.
- ಸ್ವಾತಂತ್ರ್ಯದ ಸಂರಕ್ಷಣೆ & ಬಡತನ ನಿರ್ಮೂಲನೆಗೆ ಕ್ರಮ ಕೈಗೊಳ್ಳುವದು.
- ವಿಶ್ವಶಾಂತಿಯನ್ನು ನೆಲೆಗೊಳಿಸುವದು.

➢ಕ್ರೀಡೆ, ವಿಜ್ಞಾನ ಹಾಗೂ ಕಲೆಯ ಬೆಳವಣಿಗೆಗೆ ಪ್ರೋತ್ಸಾಹಿಸುವದು.

**12. ಯುರೋಪಿಯನ್ ಯುನಿಯನ್ ಸಂಸ್ಥೆಯ ಕಾರ್ಯವನ್ನು ವಿವರಿಸಿ. ಅಥವಾ**

**ಯುರೋಪಿಯನ್ ಯೂನಿಯನ್‌ನ ಮುಖ್ಯ ಸಾಧನೆ ಏನು?**

ಉತ್ತರ : ಯುರೋಪಿಯನ್ ಯುನಿಯನ್ ಸಂಸ್ಥೆಯು 27 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಸಂಸ್ಥೆಯಾಗಿದೆ. ಇದು ಸದಸ್ಯ ರಾಷ್ಟ್ರಗಳ ಮಧ್ಯೆ ಸಮಾನ ಏಕ ಮಾರುಕಟ್ಟೆ, ಒಂದೇ ಚಲಾವಣೆಯ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತದೆ.

**13. ಆಫ್ರಿಕನ್ ಒಕ್ಕೂಟ ಸಂಸ್ಥೆಯ ಉದ್ದೇಶಗಳೇನು?**

**ಉತ್ತರ : ಆಫ್ರಿಕನ್ ಒಕ್ಕೂಟ ಸಂಸ್ಥೆಯ ಉದ್ದೇಶಗಳು**

➢ಆಫ್ರಿಕನ್ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಒಗ್ಗಟ್ಟನ್ನು ತರುವುದು.

➢ನೂತನ ವಸಾಹತುಶಾಹಿ ನೀತಿಯ ವಿರುದ್ಧ ಧ್ವನಿ ಎತ್ತುವುದು.

**14. ಯುನೆಸ್ಕೋದ ಕಾರ್ಯಗಳಾವುವು?**

**ಉತ್ತರ : ಯುನೆಸ್ಕೋದ ಕಾರ್ಯಗಳು**

➢ಯುನೆಸ್ಕೋ ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿ ಮುಂತಾದವುಗಳನ್ನು ಪ್ರೋತ್ಸಾಹಿಸಲು ಉದ್ದೇಶಿಸಿರುವ ಪ್ರಾವೀಣ್ಯತೆಯ ಸಂಸ್ಥೆಯಾಗಿದೆ.

➢ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು ಹಾಗೂ ಪರಿಸರ ವಿಜ್ಞಾನದ ಬಗೆಗೆ ಇದು ಕಾರ್ಯೋನ್ಮುಖವಾಗುತ್ತದೆ.

➢ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಇದು ಸರ್ಕಾರ ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ನೀಡುತ್ತದೆ.

**15. ವಿಶ್ವಸಂಸ್ಥೆಯ ಉದ್ದೇಶ ಅಥವಾ ಗುರಿಗಳನ್ನು ಪಟ್ಟಿ ಮಾಡಿರಿ.**

**ಉತ್ತರ : ವಿಶ್ವಸಂಸ್ಥೆಯ ಉದ್ದೇಶಗಳು** ಅಥವಾ ಗುರಿಗಳು

➢ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವದು.

➢ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.

➢ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವದು.

➢ಅಂತರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಕೊಳ್ಳುವುದು.

➢ಅಂತರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವದು.

➢ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವದು.

**16. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಗಳು ಯಾವುವು?**

**ಉತ್ತರ : ಭದ್ರತಾ ಸಮಿತಿಯ ಕಾರ್ಯಗಳು**

➢ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಭದ್ರತಾ ಸಮಿತಿ ಯತ್ನಿಸುತ್ತದೆ.

➢ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯನ್ನು ಅಂತರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ನಿಯೋಜಿಸುತ್ತದೆ.

➢ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಇದು ನೇಮಕ ಮಾಡುತ್ತದೆ.

➢ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

**17. ವಿಶ್ವಸಂಸ್ಥೆಯ ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳನ್ನು ತಿಳಿಸಿ.**

**ಉತ್ತರ : ವಿಶ್ವಸಂಸ್ಥೆಯ ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳು**

➢ಅಂತಾಷ್ಟ್ರೀಯ ವಲಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಹಾಗೂ ಇನ್ನಿತರ ಸಂಬಂಧಿತ ವಿಷಯಗಳ ಅಧ್ಯಯನ ಹಾಗೂ ವರದಿ ಮಾಡುವಿಕೆ.

➢ನಿರಾಶ್ರಿತರ ಬಗ್ಗೆ ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ಮುಂತಾದ ಹಲವಾರು ವಿಚಾರಗಳು ಈ ಸಮಿತಿಯ ಕಾರ್ಯವ್ಯಾಪ್ತಿಯೊಳಗೆ ಬರುತ್ತವೆ.

➢ಮಾನವ ಹಕ್ಕುಗಳ ಬಗ್ಗೆ ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಬಗೆಗೂ ಈ ಸಮಿತಿಯು ಶಿಫಾರಸ್ಸು ಮಾಡುತ್ತದೆ.

➢ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು.

➢ವಿಶೇಷ ಪ್ರಾವೀಣ್ಯತೆಯ ಅಂಗ ಸಂಸ್ಥೆಗಳಾದ ಅಂತರಾಷ್ಟ್ರೀಯ ಕಾರ್ಮಿಕ ಸಂಘ, ಆಹಾರ ಮತ್ತು ಕೃಷಿ ಸಂಸ್ಥೆ, ಜಾಗತಿಕ ಆರೋಗ್ಯ ಸಂಸ್ಥೆ ಮುಂತಾದವುಗಳ ಕಾರ್ಯಗಳನ್ನು ಸಮನ್ವಯ ಮಾಡುವುದು.

**18. ವಿಶ್ವಸಂಸ್ಥೆಯ ಸಾಧನೆಗಳಾವುವು? ಅಥವಾ**

**'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.**

**ಉತ್ತರ : ವಿಶ್ವಸಂಸ್ಥೆಯ ಸಾಧನೆಗಳು**

➢ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ.

➢ವಿಶ್ವದ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ. ಉದಾ : ಸೂಯೇಜ್ ಕಾಲುವೆ ಬಿಕ್ಕಟ್ಟು ನಿವಾರಣೆ, ಇರಾನ್ ಸಂಘರ್ಷ, ಇಂಡೋನೇಷ್ಯಾ ಸ್ವಾತಂತ್ರ್ಯ ಘೋಷಣೆ.

➢ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಯಸ್ತ್ರೀಕರಣ ನಿಟ್ಟಿನಲ್ಲಿಯೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ.

➢ವಿಶ್ವದ ಸಾಮಾಜಿಕ & ಆರ್ಥಿಕ ಪ್ರಗತಿಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಮಾಡುತ್ತದೆ.

➢1948ರ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ಕೂಡಾ ಒಂದು ಉತ್ತಮ ಸಾಧನೆ ಎನಿಸಿದೆ.

➢ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ, ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವ ಇತ್ಯಾದಿಗಳನ್ನು ಇಲ್ಲವಾಗಿಸುವಲ್ಲಿಯೂ ವಿಶ್ವಸಂಸ್ಥೆಯ ಪಾತ್ರ ಗಮನಾರ್ಹವಾದದು.

## ಸಮಾಜಶಾಸ್ತ್ರ

## ಅಧ್ಯಾಯ 1 ಸಮಾಜಿಕ ಸ್ತರವಿನ್ಯಾಸ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಶಿಕ್ಷಣಕ್ಕಿರುವ ಸಾಮಾಜಿಕ ನ್ಯಾಯದ ಉದ್ದೇಶಗಳನ್ನು ನಮ್ಮ ಸಂವಿಧಾನದ ________ ಹಾಗೂ ________ ತತ್ವಗಳಲ್ಲಿ ಕಾರಣಬಹುದು. – **ಪ್ರಸ್ತಾವನೆ ಹಾಗೂ ರಾಜ್ಯ ನಿರ್ದೇಶಕ ತತ್ವಗಳು.**

2. ಸಂವಿಧಾನದ ವಿಧಿ ________ ರಲ್ಲಿ ಸರ್ಕಾರಗಳು ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿ ಅವಕಾಶಗಳನ್ನು ಕುರಿತು ತಿಳಿಸುತ್ತವೆ. – **39ನೇ ವಿಧಿ.**

3. ________ ವಿಧಿ ನಿರ್ದಿಷ್ಟವಾಗಿ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳುತ್ತದೆ. – **45ನೇ ವಿಧಿ**

4. ಸಂವಿಧಾನದ ______ ನೇ ತಿದ್ದುಪಡಿಯು 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರಕಬೇಕೆಂದು ಹೇಳಿದೆ. – **86ನೇ ತಿದ್ದುಪಡಿ.**

5. ಶಿಕ್ಷಣ ಹಕ್ಕು ಮಕ್ಕಳ ಮೂಲಭೂತ ಹಕ್ಕು ಎಂದು ಸಂವಿಧಾನದ ವಿಧಿ ________ ನಲ್ಲಿ ತಿಳಿಸಲಾಗಿದೆ. – **21ಎ ನೇ ವಿಧಿ.**

6. 6 ವರ್ಷದ ಒಳಗಿನ ಎಲ್ಲಾ ಮಕ್ಕಳ ಶೈಶಾವಸ್ಥೆಯ ರಕ್ಷಣೆ, ಶೈಕ್ಷಣಿಕ ಅವಕಾಶಗಳನ್ನು ತಿಳಿಸಿಕೊಡುವ ಸಂವಿಧಾನದ ವಿಧಿ – **45ನೇ ವಿಧಿ.**

7. ಸಂವಿಧಾನದ ಪರಿಚ್ಛೇದ ______ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ ಎಂದು ಸಾರುತ್ತದೆ. – **19ನೇ ಪರಿಚ್ಛೇದ.**

8. ______ ನೇ ವಿಧಿ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡಿದೆ. – **29ನೇ ವಿಧಿ.**

9. _____ ನೇ ವಿಧಿ ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ವಿಶೇಷ ಅವಕಾಶಗಳನ್ನು ನೀಡಿದೆ. – **30ನೇ ವಿಧಿ.**

10.ಸಂವಿಧಾನದ ______ ನೇ ವಿಧಿ ಸರ್ಕಾರಗಳು ಹಿಂದುಳಿದ ಜನರ ಅದರಲ್ಲಿಯೂ ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡಿ ಅಭಿವೃದ್ಧಿಪಡಿಸುವುದು ಸರ್ಕಾರಗಳ ಜವಾಬ್ದಾರಿಯೆಂದು ಹೇಳುತ್ತದೆ. – **46ನೇ ವಿಧಿ.**

11. ಸರ್ವೋಚ್ಛ ನ್ಯಾಯಾಲಯವು ಸಂವಿಧಾನದ ವಿಧಿ ______ ರ ಜೀವಿಸುವ ಹಕ್ಕನ್ನು ಶಿಕ್ಷಣದ ನೆಲೆಯಲ್ಲಿ ಅರ್ಥೈಸಿದ್ದು ಅತ್ಯಂತ ಮಹತ್ವದ್ದಾಗಿದೆ. – **21ನೇ ವಿಧಿ.**

12. ಅಸ್ಪೃಶ್ಯತೆಯ ಆಚಾರಣೆಯು ______ ಯ ಹುಟ್ಟಿನೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡಿದೆ. – **ವರ್ಣವ್ಯವಸ್ಥೆ.**

13. ಬ್ರಿಟಿಷ್ ಸರ್ಕಾರವು ______ ರಲ್ಲಿ ಕೇಂದ್ರ ಕಾಯಿದೆ ಮೂಲಕ ಭಾರತದ ಅಸ್ಪೃಶ್ಯ ವರ್ಗ ಹಾಗೂ ಗುಡ್ಡಗಾಡು ವರ್ಗದ ಜನರನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಎಂಬುದಾಗಿ ಹೆಸರಿಸಿತು. – **1935ರಲ್ಲಿ.**
14. ಅಸ್ಪೃಶ್ಯತಾ ಆಚರಣೆಯನ್ನು ಸಂವಿಧಾನದ ______ ವಿಧಿಯು ನಿಷೇಧಿಸಿದೆ. – **17ನೇ ವಿಧಿ.**
15. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯು ______ ರಲ್ಲಿ ಜಾರಿಗೆ ಬಂದಿತು. – **1955ರಲ್ಲಿ.**
16. ಅಸ್ಪೃಶ್ಯತೆ ಹಿಂದು ಸಮಾಜಕ್ಕೆ ಹತ್ತಿದ ಕಳಂಕ ಎಂದವರು – **ಮಹಾತ್ಮ ಗಾಂಧೀಜಿ.**
17. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಕ್ರಿಶ ______ ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು ಮಾರ್ಪಾಡುಗೊಳಿಸಲಾಯಿತು. – **ಕ್ರಿಶ 1976**
18. 1976ರಲ್ಲಿ ಅಸ್ಪೃಶ್ಯತಾ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ.– **ನಾಗರೀಕ ಹಕ್ಕು ಸಂರಕ್ಷಣಾ ಕಾಯ್ದೆ**

## ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಯಾವ ಮೊಕದ್ದೊಮೆಯ ಆಧಾರದ ಮೇಲೆ ಸುಪ್ರಿಂ ಕೋರ್ಟ 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ?**
ಉತ್ತರ : 1993ರಲ್ಲಿ ಉನ್ನಿಕೃಷ್ಣನ್ v/s ಆಂಧ್ರಪ್ರದೇಶ ಸರ್ಕಾರದ ಮೊಕದ್ದಮೆಗೆ ಸಂಬಂಧಿಸಿದ ಸುಪ್ರಿಂ ಕೋರ್ಟಿನ ತೀರ್ಪು 21ಎ ವಿಧಿಯಲ್ಲಿ 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ.

**2. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?**
ಉತ್ತರ : ಸಮಾಜದಲ್ಲಿ ಇರುವ ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಅಥವಾ ಅವರನ್ನು ಏಣಿ ಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವೇ "ಸಾಮಾಜಿಕ ಸ್ತರವಿನ್ಯಾಸ ಎಂದು ಹೇಳಬಹುದು.

**3. ಅಸ್ಪೃಶ್ಯತೆಯ ಉಗಮದ ಬಗ್ಗೆ ಡಾ : ಬಿ ಆರ್ ಅಂಬೇಡ್ಕರ್‌ರವರ ಅಭಿಪ್ರಾಯವೇನು?**
ಉತ್ತರ : ಭಾರತರತ್ನ ಡಾ : ಬಿ ಆರ್ ಅಂಬೇಡ್ಕರ್‌ರವರು ಹೇಳುವಂತೆ **"ಹೊರಗಿನಿಂದ** ಬಂದವರು, ಊರಿನಿಂದ ಹೊರಗಡೆ ನೆಲಸಿದರೋ ಅಥವಾ ಊರೊಳಗಡೆ ಇದ್ದವರನ್ನು ಕಾರಣಾಂತರಗಳಿಂದ ಊರ ಹೊರಕ್ಕೆ ತಳ್ಳಲಾಯಿತೊ ಎಂಬುದನ್ನು ವಿಶ್ಲೇಷಣೆ ಮಾಡಿದರೆ ಅಸ್ಪೃಶ್ಯತೆಯ ಉಗಮ ಮತ್ತು ಅಸ್ಪೃಶ್ಯರು ಯಾರೆಂಬುದು ಅರ್ಥವಾಗುತ್ತದೆ" ಎಂದಿದ್ದಾರೆ.

**4. ಅಸ್ಪೃಶ್ಯತೆಯನ್ನು ಕುರಿತಂತೆ ಮಹಾತ್ಮ ಗಾಂಧಿಜಿಯವರ ಅಭಿಪ್ರಾಯವೇನು?**
ಉತ್ತರ : ಮಹಾತ್ಮ ಗಾಂಧಿಜಿಯವರ ಪ್ರಕಾರ "ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದು ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ" ಎಂದಿದ್ದಾರೆ.

**5. ಅಸ್ಪೃಶ್ಯತೆ ಎಂದರೇನು?**
ಉತ್ತರ : ಸಮಾಜದಲ್ಲಿ ಕೆಲವು ಜಾತಿಗಳನ್ನು ಅನೇಕ ಬಗೆಯ ಅನರ್ಹತೆಗಳಿಗೆ ಒಳಪಡಿಸುವುದನ್ನೇ ಅಸ್ಪೃಶ್ಯತೆ ಎನ್ನುತ್ತಾರೆ.

**6. ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸಿದ ಮಹಾನ್ ವ್ಯಕ್ತಿಗಳು ಯಾರು?**
ಉತ್ತರ : ಮಹಾತ್ಮ ಗಾಂಧೀಜಿ, ಜ್ಯೋತಿಭಾ ಫುಲೆ, ಸ್ವಾಮಿ ವಿವೇಕಾನಂದ & ಡಾ. ಬಿ.ಆರ್. ಅಂಬೇಡ್ಕರ್‌ರವರು ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸಿದವರಾಗಿದ್ದಾರೆ.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?**
**ಉತ್ತರ : ಸಾಮಾಜಿಕ ಅಸಮಾನತೆ ಕಾರಣಗಳು.**

- ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ ಅಂದರೆ ಲಿಂಗ, ಜಾತಿ, ವೃತ್ತಿ, ವರ್ಗ ಮತ್ತು ಜನಾಂಗಗಳಿಂದ ಶ್ರೇಣೀಕರಣಗೊಂಡಿರುತ್ತಾರೆ ಎನ್ನುವುದನ್ನು ಸಾಮಾಜಿಕ ಅಸಮಾನತೆ ಸೂಚಿಸುತ್ತದೆ.
- ಆದಾಯದ ಮೂಲಗಳು, ಶಿಕ್ಷಣ ಮತ್ತು ವೃತ್ತಿ ಅವಕಾಶಗಳು, ಆರೋಗ್ಯ ಸೌಲಭ್ಯಗಳು ಮತ್ತು ರಾಜಕೀಯ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ ಅಂದರೆ ಸಾಮಾಜಿಕ ಅಸಮಾನತೆ ಎನ್ನುವುದು ಈಗಾಗಲೇ ಇರುವ ಅಸಮಾನ ಸಾಮಾಜಿಕ ಅವಕಾಶಗಳ ಪ್ರತಿಫಲವಾಗಿದೆ.
- ಸಾಮಾಜಿಕ ಸೇವಾ ಕ್ಷೇತ್ರಗಳಾದ ಸಾರ್ವಜನಿಕ ಆರೋಗ್ಯ, ಶಿಕ್ಷಣ, ಸಾಮಾಜಿಕ ರಕ್ಷಣೆ ಮತ್ತು ಸಾಮಾಜಿಕ ನ್ಯಾಯಗಳನ್ನು ಕಡೆಗಣನೆ ಮಾಡುವ ಮೂಲಕ ಬಡವರಿಗೆ ಬದುಕುವ ಅವಕಾಶವೇ ಇಲ್ಲದಂತೆ ಮಾಡಲಾಗುತ್ತದೆ.
- ಈ ಮೂಲಕ ರಾಷ್ಟ್ರದ ಅಥವಾ ಜಗತ್ತಿನ ಕೆಲವೇ ಶ್ರೀಮಂತರ ಬಳಿ ಸಂಪತ್ತು ಕ್ರೋಢೀಕರಣವಾಗುವಂತೆ ನೋಡಿಕೊಳ್ಳಲಾಗುತ್ತಿದೆ.
- ಸಾಮಾಜಿಕ ಭದ್ರತೆಗಳಾದ ಆಹಾರ ಮತ್ತು ಆರೋಗ್ಯದ ಅವಕಾಶಗಳು, ಜಾತಿಮೂಲಗಳು, ವರ್ಗಮೂಲ ಮತ್ತು ಲಂಗತ್ವಮೂಲ ನಿರ್ಲಕ್ಷ್ಯಗಳನ್ನು ಗಮನಿಸಿದರೆ ಸಾಮಾಜಿಕ ಅಸಮಾನತೆಯ ಸ್ವರೂಪ ತಿಳಿಯುತ್ತದೆ.

**2. ಶಿಕ್ಷಣವು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತದೆ?**
ಉತ್ತರ : ಶಿಕ್ಷಣವು ಸಮಾನತೆ, ಸಮಾನ ಭಾಗವಹಿಸುವಿಕೆ, ಸಮಾನ ಅವಕಾಶ ಮತ್ತು ಸಾಮಾಜಿಕ ನ್ಯಾಯದಲ್ಲಿ ಮಹತ್ವದ ಬದಲಾವಣೆ ತರುವಲ್ಲಿ ಆಸರೆಯಾಗುವ ಶಕ್ತಿಯನ್ನು ಹೊಂದಿರುತ್ತದೆ. ಈ ಅರ್ಥದಲ್ಲಿ ಶಿಕ್ಷಣವನ್ನು ಸಾರ್ವಜನಿಕ ಒಳಿತಿಗಾಗಿ ಸರ್ಕಾರಗಳು ಎಲ್ಲಾ ಮಕ್ಕಳಿಗೂ ಸಮಾನವಾಗಿ ನೀಡಬೇಕಾಗಿರುತ್ತದೆ. ಶಿಕ್ಷಣಕ್ಕಿರುವ ಸಾಮಾಜಿಕ ನ್ಯಾಯದ ಉದ್ದೇಶಗಳನ್ನು ನಮ್ಮ ಸಂವಿಧಾನದ ಪ್ರಸ್ತಾವನೆ ಹಾಗೂ ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಕಾಣಬಹುದು.

**3. ಸಮಾಜದ ಎಲ್ಲಾ ವರ್ಗಗಳಿಗೂ ಶೈಕ್ಷಣಿಕ ಮತ್ತು ಸಾಮಾಜಿಕ ಸಮಾನತೆ ಒದಗಿಸುವಲ್ಲಿ ನಮ್ಮ ಸಂವಿಧಾನವು ಅಳವಡಿಸಿಕೊಂಡಿರುವ ವಿಧಿಗಳನ್ನಯ ಅರ್ಥೈಸಿ.**
**ಉತ್ತರ : ಸಮಾಜದ ಎಲ್ಲಾ ವರ್ಗಗಳಿಗೂ ಶೈಕ್ಷಣಿಕ ಮತ್ತು ಸಾಮಾಜಿಕ ಸಮಾನತೆ ಒದಗಿಸುವಲ್ಲಿ ನಮ್ಮ ಸಂವಿಧಾನವು ಅಳವಡಿಸಿಕೊಂಡಿರುವ ವಿಧಿಗಳು.**

- ಶಿಕ್ಷಣಕ್ಕಿರುವ ಸಾಮಾಜಿಕ ನ್ಯಾಯದ ಉದ್ದೇಶಗಳನ್ನು ನಮ್ಮ ಸಂವಿಧಾನದ ಪ್ರಸ್ತಾವನೆ ಹಾಗೂ ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಕಾಣಬಹುದು.
- ಸಂವಿಧಾನದ 45ನೇ ವಿಧಿ ನಿರ್ದಿಷ್ಟವಾಗಿ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಡಬೇಕೆಂದು ಹೇಳುತ್ತದೆ.
- ಸಂವಿಧಾನದ ಪರಿಚ್ಛೇದ 19 ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ ಎಂದು ಸಾರುತ್ತದೆ.
- ಸಂವಿಧಾನದ 29ನೇ ವಿಧಿ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡುತ್ತದೆ.
- ಸಂವಿಧಾನದ 30ನೇ ವಿಧಿ ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ವಿಶೇಷ ಅವಕಾಶಗಳನ್ನು ನೀಡಿದೆ.
- 1993ರಲ್ಲಿ ಉನ್ನಿಕೃಷ್ಣನ್ v/s ಆಂಧ್ರಪ್ರದೇಶ ಸರ್ಕಾರದ ಮೊಕದ್ದಮೆಗೆ ಸಂಬಂಧಿಸಿದ ಸುಪ್ರಿಂ ಕೋರ್ಟಿನ ತೀರ್ಪು 21ಎ ವಿಧಿಯಲ್ಲಿ 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ.

**4 ಲಿಂಗ ಅಸಮಾನತೆ ಹೇಗೆ ಉಂಟಾಗಿದೆ?**
**ಉತ್ತರ : ಲಿಂಗತ್ವ ಅಸಮಾನತೆ ಈ ಕೆಳಗಿನ ಅಂಶಗಳಿಂದ ಉಂಟಾಗಿದೆ.**

- ವಾಸ್ತವದಲ್ಲಿ ನಮ್ಮ ಜನರ ಮನೋಭಾವನೆಗಳು ಲಿಂಗತ್ವ ಅಸಮಾನತೆಯನ್ನು ಉಂಟುಮಾಡಿವೆ.
- ಶಿಕ್ಷಣದ ಮೌಲ್ಯ ಕುರಿತು ಒಬ್ಬ ವ್ಯಕ್ತಿಗೆ ಇರುವ ಚಿಂತನೆ ಅಥವಾ ಮನೋಭಾವನೆಯು ಮತ್ತೊಬ್ಬರಿಂದ ಪ್ರಭಾವಿತವಾಗಿರಬಹುದು.
- ಒಂದೇ ಕುಟುಂಬದಲ್ಲಿ ಸ್ತ್ರೀ–ಪುರುಷರ ಮೇಲೆ ಬೀರಬಹುದಾದ ಪ್ರಭಾವಗಳು ಸಮುದಾಯದಿಂದಲೇ ಉಂಟಾಗಿರಬಹುದು. ಅಥಬಾ ನೆರೆಹೊರೆಯವರ ಪ್ರಭಾವಕ್ಕೆ ಒಳಗಾಗಿರಬಹದು.
- ಹೆಣ್ಣು ಮತ್ತು ಗಂಡು ಮಕ್ಕಳಿಗೆ ನೀಡುವ ಶಿಕ್ಷಣದ ತಾರತಮ್ಯ ಲಿಂಗತ್ವ ಅಸಮನತೆಗೆ ಕಾರಣವಾಗಿದೆ.
- ಶಾಲಾ ಭಾಗವಹಿಸುವಿಕೆಯಲ್ಲಿ, ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವಲ್ಲಿ ಲಿಂಗ ಅಸಮಾನತೆಯನ್ನು ನಳವು ಕಾಣಬಹದು.

**5. 2015–16ರ ರಾಷ್ಟ್ರೀಯ ಆರೋಗ್ಯ ಸಮೀಕ್ಷೆ–4 ವರದಿಯನ್ನು ವಿಶ್ಲೇಷಿಸಿ.**
ಉತ್ತರ : 2015–16ರ ರಾಷ್ಟ್ರೀಯ ಆರೋಗ್ಯ ಸಮೀಕ್ಷೆ–4ರ ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿರುವ ಶೇ. 24.3ರಷ್ಟು ಮಹಿಳೆಯರು ಮತ್ತು ನಗರ ಪ್ರದೇಶದ ಶೇ. 16.2 ಮಹಿಳೆಯರ ಬಾಡಿ ಮಾಸ್ ಸೂಚಿ ಕನಿಷ್ಠ ಮಟ್ಟಕ್ಕಿಂತಲೂ ಕಡಿಮೆ ತೂಕ ಹೊಂದಿದ್ದರೆ, 06 ರಿಂದ 56 ತಿಂಗಳುಗಳ ಮಕ್ಕಳಲ್ಲಿ 60.9ರಷ್ಟು ಮಕ್ಕಳು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಗರ್ಭಿಣಿಯರಲ್ಲಿ ಶೇ. 45.2 ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಇಂತಹ ಪರಿಸ್ಥಿಯಲ್ಲಿ ಮಕ್ಕಳು ಮತ್ತು ಮಹಿಳೆಯರು ಬದುಕುತ್ತಿರುವಾಗ, ಇವರಿಗೆ ಆಹಾರ, ಆರೋಗ್ಯ ಮತ್ತು ಪೌಷ್ಟಿಕತೆಯಲ್ಲಿ ಭದ್ರತೆಯನ್ನು, ಕಲಿಕೆಗೆ ಶೈಕ್ಷಣಿಕ ಬೆಂಬಲವನ್ನು ನೀಡುವ ಮೂಲಕ 'ಅಭಿವೃದ್ಧಿ ಮಹಿಳೆಯರನ್ನು ಒಳಗೊಳ್ಳಬೇಕು. ಈ ಮೂಲಕ ಲಿಂಗ ಅಸಮಾನತೆಯನ್ನು ಸರಿ ಪಡಿಸಲು ನಾವು ಪ್ರಯತ್ನ ಮಾಡಬೇಕಾಗಿದೆ.

**6. ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳನ್ನು ತಿಳಿಸಿ.**

**ಉತ್ತರ : ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳು**

- ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿವಾದದ್ದು.
- ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದದ್ದು.
- ಸ್ತರವ್ಯವಸ್ಥೆ ಪುರಾತನವಾದದ್ದು.
- ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ.

**7. ಸಾಮಾಜಿಕ ಸ್ತರವಿನ್ಯಾಸದ ಪ್ರಮುಖ ರೂಪಗಳನ್ನು ತಿಳಿಸಿ.**

ಉತ್ತರ : ಪ್ರಾಚೀನ ಸಮಾಜದಿಂದ ಡಿಜಿಟಲ್ ಸಮಾಜದವರೆಗಿನ ಸಾಮಾಜಿಕ ಸ್ತರವಿನ್ಯಾಸ ವ್ಯವಸ್ಥೆಯಲ್ಲಿ ಇರುವ ಪ್ರಮುಖ ರೂಪಗಳೆಂದರೆ –

1. ಆದಿವಾಸಿ ಸಮಾಜ, 2. ಗುಲಾಮಗಿರಿ, 3. ಎಸ್ಟೇಟ್ಸ್ ಪದ್ಧತಿ,
4. ವರ್ಣವ್ಯವಸ್ಥೆ, 5. ಜಾತಿ ವ್ಯವಸ್ಥೆ.

**8. 'ಚಾತುವರ್ಣ ಎಂಬುದು ಕರ್ಮ ಸಿದ್ಧಾಂತದ ತತ್ವದಡಿಯಲ್ಲಿ ರೂಪಿತವಾಗಿದೆ' ಈ ಹೇಳಿಕೆಯನ್ನು ವಿಶ್ಲೇಷಿಸಿ.**

ಉತ್ತರ : ಚಾತುವರ್ಣ ಎಂಬುದು ಕರ್ಮ ಸಿದ್ಧಾಂತದ ತತ್ವದಡಿಯಲ್ಲಿ ರೂಪಿತವಾಗಿದೆಯೆಂದು ಹೇಳಲಾಗುತ್ತಿದೆ. ಬ್ರಾಹ್ಮಣ–ಅಧ್ಯಯನ, ಅಧ್ಯಾಪನ, ಯಜ್ಞಯಾಗಾದಿಗಳಲ್ಲಿಯೂ, ಕ್ಷತ್ರಿಯನು – ರಾಜ್ಯ ಆಢಳಿತದಲ್ಲಿಯೂ, ವೈಶ್ಯ–ವ್ಯಾಪಾರ, ವ್ಯವಹಾರದಲ್ಲಿಯೂ ಮತ್ತು ಶೂದ್ರ – ಕೃಷಿ–ಕೂಲಿಕಾರನಾಗಿಯೂ ಕಾರ್ಯ ನಿರ್ವಹಿಸಬೇಕು ಎನ್ನವುದು ಈ ಸಿದ್ಧಾಂತದ ಆಶಯವಾಗಿದೆ.

**9. ಅಸ್ಪೃಶ್ಯತೆಯ ಸಮಸ್ಯೆಗಳನ್ನು ಪಟ್ಟಿಮಾಡಿ.**

**ಉತ್ತರ : ಅಸ್ಪೃಶ್ಯತೆಯ ಸಮಸ್ಯೆಗಳು.**

- ಅಸ್ಪೃಶ್ಯರಿಗೆ ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ ನೀಡಲಾಗಿದೆ.
- ಅಸ್ಪೃಶ್ಯರನ್ನು ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು.
- ಅಸ್ಪೃಶ್ಯರಿಗೆ ಆಸ್ತಿಯ ಹಕ್ಕಿನ ಒಡೆತನವನ್ನು ನಿರಾಕರಿಸಲಾಗಿತ್ತು.
- ಅಸ್ಪೃಶ್ಯರಿಗೆ ರಾಜಕೀಯ ಭಾಗವಹಿಸುವಿಕೆ ನಿರಾಕರಿಸಲಾಗಿತ್ತು.

**10. ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡ ಕಾನೂನು ಕ್ರಮಗಳನ್ನು ತಿಳಿಸಿ.**

**ಉತ್ತರ : ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡ ಕಾನೂನು ಕ್ರಮಗಳು**

- ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.
- ಭಾರತ ಸರಕಾರ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955ರಲ್ಲಿ ಜಾರಿಗೊಳಿಸಿದೆ.
- ಈ ಕಾಯ್ದೆಯಲ್ಲಿ ಕಂಡು ಬಂದ ಲೋಪದೋಷಗಳನ್ನು ತಿದ್ದುಪಡಿಮಾಡಿ 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಎಂದು 1976ರಲ್ಲಿ ಮಾರ್ಪಡಿಸಲಾಯಿತು.
- ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ.
- ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.
- 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ಜವಾಬ್ದಾರಿಯನ್ನು ರಾಜ್ಯ ಸರಕಾರಗಳಿಗೆ ವಹಿಸಿದೆ.

**5. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಹೇಗೆ? ವಿಶ್ಲೇಷಿಸಿ.**

**ಉತ್ತರ : ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಹೇಗೆಂದರೆ –**

- ಜಾತಿ ಪದ್ಧತಿಯಲ್ಲಿ ಮೇಲು ಕೀಳು ಎಂಬ ಮನೋಬಾವನೆಯು ಅಸ್ಪೃಶ್ಯತೆಗೆ ಕಾರಣವಾಗಿದೆ.
- ಅಸ್ಪೃಶ್ಯತೆಯು ನಮ್ಮ ಸಮಾಜದ ಅಮಾನುಷ ಆಚರಣೆಯಾಗಿದೆ.
- ಇದಕ್ಕೆ ಒಳಗಾದ ಕೆಳಜಾತಿಗಳು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ರಾಜಕೀಯ ಅನುಕೂಲ ಮತ್ತು ಅವಕಾಶಗಳನ್ನು ಪಡೆಯುವುದರಿಂದ ವಂಚಿತವಾದವು.
- ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಹಿಂದೂಸಮಾಜಕ್ಕೆ ಹತ್ತಿದ ಕಳಂಕ ಎಂದು ಹೇಳಿದ್ದಾರೆ.

**6. ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?**

ಉತ್ತರ : **ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ಸಲಹೆಗಳು**

- ಅಸ್ಪೃಶ್ಯರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟು ಸಮಾಜದ ಮುಖ್ಯವಾಹಿನಿಗೆ ತರುವುದು.
- ಸಾಕ್ಷರತೆಯಿಂದ ಸಾಮಾಜಿಕ ಜಾಗೃತಿ ಮೂಡಿಸ ಬೇಕು.
- ಎಲ್ಲಾ ನಾಗರಿಕರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಬೇಕು.
- ಶಿಕ್ಷಣದ ಮೂಲಕ ಮಕ್ಕಳಲ್ಲಿ, ಯುವಜನರಲ್ಲಿ ಅರಿವು ಮೂಡಿಸುವುದು.
- ಸಮೂಹ ಮಾಧ್ಯಮಗಳ ಜೊತೆಗೆ ಬೀದಿ ನಾಟಕ ಮೊದಲಾದ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.
- ಈಗಿರುವ ಕಾನೂನುಗಳನ್ನು ಮತ್ತಷ್ಟು ಕಠಿಣ ಗೊಳಿಸುವುದು.

## ಅಧ್ಯಾಯ 2 ದುಡಿಮೆ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಶ್ರಮ ವಿಭಜನೆಯ ಕುರಿತು ಪ್ಲೇಟೋ ಅವರು ತಮ್ಮ ________ ಕೃತಿಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. – **'ದಿ ರಿಪಬ್ಲಿಕ್'**
2. ಶ್ರಮ ವಿಭಜನೆಯು ______ ಗೆ ಕಾರಣವಾಗುವುದು. – **ವಿಶೇಷ ಪರಿಣಿತಿ.**
3. ಭೂ ರಹಿತ ಕೃಷಿ ಕಾರ್ಮಿಕರನ್ನು ________ ಕೆಲಸಗಾರರು ಎಂದು ಕರೆಯುತ್ತಾರೆ. – **ಅಸಂಘಟಿತ ಕೆಲಸಗಾರರು.**
4. ವೈದ್ಯಕೀಯ ಸಂಸ್ಥೆಗಳ ಕಾರ್ಮಿಕರನ್ನು __________ ಕೆಲಸಗಾರರು ಎಂದು ಕರೆಯುತ್ತಾರೆ. – **ಸಂಘಟಿತ ಕೆಲಸಗಾರರು.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಶ್ರಮ ವಿಭಜನೆ ಕುರಿತು ಪ್ಲೇಟೋನ ಅಭಿಪ್ರಾಯವೇನು?**

ಉತ್ತರ : ಶ್ರಮ ವಿಭಜನೆ ಕುರಿತು ಪ್ಲೋಟೋ ಅವರು ತಮ್ಮ 'ದಿ ರಿಪಬ್ಲಿಕ್' ಎನ್ನುವ ಪುಸ್ತಕದಲ್ಲಿ "ಮಾನವ ಸಮಾಜವು ಸ್ವಾಭಾವಿಕ ಅಸಮಾನತೆಗಳಿಂದ ರೂಪಗೊಳ್ಳುತ್ತದೆ. ಈ ಸ್ವಾಭಾವಿಕ ಅಸಮಾನತೆಯು ಶ್ರಮ ವಿಭಜನೆಯಿಂದ ಕೂಡಿರುತ್ತದೆ" ಎಂದು ಹೇಳುತ್ತಾರೆ.

**2. ಶ್ರಮ ವಿಭಜನೆಯ ಬಗ್ಗೆ ಕಾರ್ಲ್‌ಮಾರ್ಕ್ಸನ ಅಭಿಪ್ರಾಯವೇನು?**

ಉತ್ತರ : ಕಾರ್ಲ್‌ಮಾರ್ಕ್ಸ್ ಅವರು ಶ್ರಮ ವಿಭಜನೆ ಬಗ್ಗೆ ಚರ್ಚಿಸುತ್ತಾ 'ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ' ಎಂದು ಹೇಳುತ್ತಾರೆ.

**3. ಕಾರ್ಲ್‌ಮಾರ್ಕ್ಸರವರು ಶ್ರಮವಿಭಜನೆಯನ್ನು ಯಾವ ರೀತಿ ವಿಭಜಿಸಿದ್ದಾರೆ?**

ಉತ್ತರ : ಕಾರ್ಲ್‌ಮಾರ್ಕ್ಸ್‌ರವರು ಶ್ರಮವಿಭಜನೆಯನ್ನು ಆರ್ಥಿಕ ಶ್ರಮವಿಭಜನೆ ಮತ್ತು ಸಾಮಾಜಿಕ ಶ್ರಮ ವಿಭಜನೆ ಎಂದು ಪ್ರತ್ಯೇಕಿಸುತ್ತಾರೆ.

**4. ವಿಶೇಷ ಪರಿಣಿತಿ ಎಂದರೇನು?**

ಉತ್ತರ : ವಿಶೇಷ ಪರಿಣಿತಿ ಎಂದರೆ ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದು ಎಂದರ್ಥ.

**5. ದುಡಿಮೆ ಎಂದರೇನು?**

ಉತ್ತರ : ದುಡಿಮೆ ಎಂದರೆ ಒಬ್ಬ ವ್ಯಕ್ತಿ ದೈಹಿಕ ಪರಿಶ್ರಮದಿಂದ ಅಥವಾ ಬೌದ್ಧಿಕ ಪರಿಶ್ರಮದಿಂದ ಆದಾಯ ಅಥವಾ ವಸ್ತುರೂಪದ ಪ್ರತಿಫಲವನ್ನು ಪಡೆಯುವುದು ಎಂದರ್ಥ.

**6. ದುಡಿಮೆಯಲ್ಲಿ ಅಸಮಾನತೆ ಎಂದರೇನು?**

ಉತ್ತರ : ಇಬ್ಬರು ವ್ಯಕ್ತಿಗಳು ಒಂದೇ ಕೆಲಸವನ್ನು ಒಂದೇ ಸಮಯದಲ್ಲಿ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನವನ್ನು ಮತ್ತೊಬ್ಬರಿಗೆ ಕಡಿಮೆ ವೇತನವನ್ನು ನೀಡುವುದನ್ನು ದುಡಿಮೆಯಲ್ಲಿನ ಭೇದಭಾವ/ಅಸಮಾನತೆ ದುಡಿಮೆಯಲ್ಲಿನ ಅಸಮಾನತೆ ಎನ್ನಬಹುದು.

**7. ಸಂಭಾವನೆ ರಹಿತ ದುಡಿಮೆ ಎಂದರೇನು?**

ಉತ್ತರ : ಒಬ್ಬರ ದುಡಿಮೆಗೆ ಪ್ರತಿಯಾಗಿ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದಲ್ಲಿ, ಯಾವುದೇ ಪ್ರತಿಫಲ ಇಲ್ಲದೇ ದುಡಿಮೆಯ ಚಟುವಟಿಕೆಗೆ ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.

**8. ಸಂಭಾವನೆ ಸಹಿತ ದುಡಿಮೆ ಎಂದರೇನು?**

ಉತ್ತರ : ನಿಗದಿತ ವೇತನವನ್ನು ಘಂಟೆಗಳ ಆಧಾರದಲ್ಲಿ, ದಿನಗೂಲಿಯ ಆಧಾರದಲ್ಲಿ, ವಾರದ ಆಧಾರದಲ್ಲಿ ಅಥವಾ ತಿಂಗಳ ಆಧಾರದಲ್ಲಿ ದೈಹಿಕ ಮತ್ತು ಬೌದ್ಧಿಕ ಶ್ರಮಕ್ಕೆ ನೀಡುವ ವೇತನವನ್ನು ಸಂಭಾವನೆ ಸಹಿತ ದುಡಿಮೆ ಎನ್ನುವರು.

**9. ಸಾಟಿ ವಿನಿಮಯ ಪದ್ಧತಿ ಎಂದರೇನು?**

ಉತ್ತರ : ಹಿಂದಿನ ಕಾಲದಲ್ಲಿ ಬಹುತೇಕ ಸಮಯದಲ್ಲಿ ದೈಹಿಕ ಶ್ರಮ ಆಧಾರಿತ ದುಡಿಮೆಗೆ ಹಣದ ಬದಲಾಗಿ ವಸ್ತುಗಳನ್ನು ಮತ್ತು ಆಹಾರ ಪದಾರ್ಥಗಳನ್ನು ದುಡಿಮೆಗಾರರಿಗೆ ಸಂಭಾವನೆಯ ರೂಪದಲ್ಲಿ ನೀಡಲಾಗುತ್ತಿತ್ತು. ಈ ಪದ್ಧತಿಯನ್ನು 'ಸಾಟಿ ವಿನಿಮಯ ಪದ್ಧತಿ' ಎಂದು ಕರೆಯುತ್ತಾರೆ.

**10. ಸಂಘಟಿತ ದುಡಿಮೆಯ ವಲಯ ಎಂದರೇನು?**

ಯಾವ ವಲಯವು ಸರ್ಕಾರದಲ್ಲಿ ನೋಂದಣಿಯಾಗಿ ಕಾನೂನಿನ ಚೌಕಟ್ಟಿನೊಳಗೆ, ದುಡಿಯುವ ಕಾರ್ಮಿಕರಿಗೆ ನಿಗದಿತ ಕೆಲಸ, ಉದ್ಯೋಗ ಭರವಸೆ, ನಿಗದಿತ ವೇತನವನ್ನು ಕಾನೂನಿನ ಚೌಕಟ್ಟಿನಲ್ಲಿಯೇ

ನಿಗದಿಯಾಗಿರುತ್ತದೆಯೋ ಅದನ್ನು ಸಂಘಟಿತ ದುಡಿಮೆಯ ವಲಯವೆಂದು ಕರೆಯಲಾಗುತ್ತದೆ.

**11. ಸಂಘಟಿತ ವಲಯದ ಪ್ರಕಾರಗಳಾವುವು? ತಿಳಿಸಿ.**

ಉತ್ತರ : ಸಂಘಟಿತ ವಲಯದಲ್ಲಿ ಪ್ರಮುಖವಾಗಿ ಶಾಲೆಗಳು, ಆಸ್ಪತ್ರೆಗಳು, ಕೈಗಾರಿಕೆಗಳು, ಸರ್ಕಾರಗಳ ಆಡಳಿತ ಸೇವೆಗಳು, ವಾಣಿಜ್ಯ ಬ್ಯಾಂಕುಗಳು, ಜೀವ ವಿಮಾ ಕಂಪನಿಗಳು, ಸೈನ್ಯ ಇತ್ಯಾದಿ ಬರುತ್ತವೆ.

12. **ಅಸಂಘಟಿತ ದುಡಿಮೆಯ ವಲಯ ಎಂದರೇನು?**

ಉತ್ತರ : ಯಾವುದೇ ನಿರ್ಧಿಷ್ಟ ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ತಮ್ಮಪಾಡಿಗೆ ವಿವಿಧ ಕಸುಬುಗಳಲ್ಲಿ ತೊಡಗಿಕೊಂಡು ದಿನಗೂಲಿ ಅಥವಾ ಇನ್ನಿತರ ರೂಪದ ಆರ್ಥಿಕ ಪ್ರತಿಫಲ ಪಡೆಯವ ಶ್ರಮಿಕರನ್ನೊಳಗೊಂಡ ವಲಯವನ್ನು ಅಸಂಘಟಿತ ದುಡಿಮೆಯ ವಲಯ ಎಂದು ಕರೆಯಲಾಗುತ್ತದೆ.

**13. ಸಾಮಾಜಿಕ ಭದ್ರತೆ ಎಂದರೇನು?**

ಉತ್ತರ : ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ಮೂಲ ಸೌಲಭ್ಯಗಳನ್ನು ಸಾರ್ವಜನಿಕವಾಗಿ ಅಥವಾ ಸಾಮುದಾಯಿಕವಾಗಿ ಒದಗಿಸಿಕೊಡುವುದು ಸಾಮಾಜಿಕ ಭದ್ರತೆ ಎನ್ನಿಸಿಕೊಳ್ಳುತ್ತದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಶ್ರಮ ವಿಭಜನೆಯನ್ನು ಬಗ್ಗೆ ಕಾರ್ಲ್‌ಮಾರ್ಕ್ಸ್‌ರ ವಿಚಾರಧಾರೆಗಳನ್ನು ವಿವರಿಸಿ.**

**ಉತ್ತರ : ಶ್ರಮ ವಿಭಜನೆಯ ಬಗ್ಗೆ ಕಾರ್ಲ್‌ಮಾರ್ಕ್ಸ್ ವಿಚಾರಧಾರೆಗಳು.**

- ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ ಎಂದು ಹೇಳಿದ್ದಾರೆ.
- ಅವರು ಕಾರ್ಲ್‌ಮಾರ್ಕ್ಸ್‌ರವರು ಶ್ರಮವಿಭಜನೆಯನ್ನು ಆರ್ಥಿಕ ಶ್ರಮವಿಭಜನೆ ಮತ್ತು ಸಾಮಾಜಿಕ ಶ್ರಮ ವಿಭಜನೆ ಎಂದು ಪ್ರತ್ಯೇಕಿಸುತ್ತಾರೆ.
- ಆರ್ಥಿಕ ಶ್ರಮವಿಭಜನೆಯು ತಾಂತ್ರಿಕ ಅಂಶಗಳ ಜೊತೆಗೆ, ಕಾರ್ಮಿಕರ ಸಹಕಾರದಿಂದ ಹೆಚ್ಚಾಗಿ ನಡೆಯುತ್ತದೆ ಎಂದು ಹೇಳುತ್ತಾರೆ.
- ಸಾಮಾಜಿಕ ಶ್ರಮ ವಿಭಜನೆಯು ವರ್ಗ, ಸ್ಥಾನ ಮತ್ತು ಏಣಿ-ಶ್ರೇಣಿ ಮೂಲಕ ಸಾಮಾಜಿಕ ನಿಯಂತ್ರಣವನ್ನು ಸಾಧಿಸುತ್ತದೆ ಎಂದು ಕಾರ್ಲ್‌ಮಾರ್ಕ್ಸ್ ಹೇಳುತ್ತಾರೆ.

**2. ದುಡಿಮೆಯಲ್ಲಿನ ಅಸಮಾನತೆಯ ಸ್ವರೂಪಗಳನ್ನು ತಿಳಿಸಿ. ಅಥವಾ ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.**

**ಉತ್ತರ : ದುಡಿಮೆಯಲ್ಲಿನ ಅಸಮಾನತೆಯ ಸ್ವರೂಪ. ಅಥವಾ ದುಡಿಮೆಯ ತಾರತಮ್ಯತೆ.**

- ಇಬ್ಬರು ವ್ಯಕ್ತಿಗಳು ಒಂದೇ ಕೆಲಸವನ್ನು ಒಂದೇ ಸಮಯದಲ್ಲಿ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನವನ್ನು ಮತ್ತೊಬ್ಬರಿಗೆ ಕಡಿಮೆ ವೇತನವನ್ನು ನೀಡುವುದನ್ನು ದುಡಿಮೆಯಲ್ಲಿನ ಭೇದಭಾವ/ಅಸಮಾನತೆ ದುಡಿಮೆಯಲ್ಲಿನ ಅಸಮಾನತೆ ಎನ್ನಬಹುದು.
- ಮಹಿಳೆ ಮತ್ತು ಪರುಷರಿಬ್ಬರೂ ಒಂದು ದುಡಿಮೆಯಲ್ಲಿ ತೊಡಗಿದರೂ ಅವರಿಗೆ ದೊರಕುವ ಸಂಭಾವನೆ ಸಮಾನವಾಗಿರುವುದಿಲ್ಲ.
- ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗ ಮತ್ತು ಹೆಚ್ಚಿನ ವೇತನವನ್ನು ನೀಡಲಾಗುತ್ತದೆ. ಆದರೆ ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತದೆ.
- ಕೃಷಿ ವಲಯದ ದುಡಿಮೆಯು ಲಿಂಗ, ವಯಸ್ಸು, ಸಾಮರ್ಥಗಳ ಆಧಾರದ ಮೇಲೆ ಕೆಲಸ ಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ. ಇಲ್ಲಿ ಮಹಿಳೆಯರಿಗೆ ದೊರಕಬೇಕಾದ ಸಮಾನ ಸಂಭಾವನೆಯ ಪ್ರಶ್ನೆಗಳು ಗೌಣವಾಗಿರುತ್ತವೆ.
- ನಮ್ಮ ಬೀದಿಗಳ ಕಸಗುಡಿಸುವವರ, ಚರಂಡಿ ಬಳಿಯುವ ಸಫಾಯಿ ಕರ್ಮಚಾರಿಗಳಿಗೆ ಕನಿಷ್ಠ ವೇತನಕ್ಕಿಂತಲೂ ಕಡಿಮೆ ಸಂಭಾವನೆ ನೀಡಲಾಗುತ್ತದೆ.

**3. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳಾವವು? ಅಥವಾ**

**ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ಲಕ್ಷಣಗಳು ಯಾವುವು?**

**ಉತ್ತರ : ಸಂಘಟಿತ ಕೆಲಸಗಾರರು**

- ಕಾನೂನು, ಕಾಯ್ದೆಗಳಿಗೆ ಬದ್ಧವಾದಂತಹ ನಿಗದಿತ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು **ಸಂಘಟಿತ ಕೆಲಸಗಾರರು** ಎಂದು ಕರೆಯುತ್ತಾರೆ.
- ಸಂಘಟಿತ ವಲಯದಲ್ಲಿ ಪ್ರತಿಯೊಬ್ಬ ಕೆಲಸಗಾರನ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುತ್ತವೆ.
- ಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣತಿ, ತರಬೇತಿ, ಅನುಭವ & ಶೈಕ್ಷಣಿಕ ಅರ್ಹತೆಗಳಿಗೆ ಅವಕಾಶಗಳಿರುತ್ತವೆ.
- ಇವರಿಗೆ ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯಗಳನ್ನು ನೀಡಲಾಗುತ್ತದೆ.
- ಇವರಿಗೆ ಕೆಲಸದ ಖಾತರಿ ಇರುತ್ತದೆ.
- ಇವರು ದಿನವೊಂದರಲ್ಲಿ ನಿಗದಿತ ಸಮಯದಲ್ಲಿ ಮಾತ್ರ ಕಾರ್ಯ ನಿರ್ವಹಿಸುವವರಾಗಿತ್ತಾರೆ.

**ಅಸಂಘಟಿತ ಕೆಲಸಗಾರರು**

- ಯಾವುದೇ ನಿರ್ದಿಷ್ಟ ಕಾಯ್ದೆ ಕಾನೂನು ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ಕೆಲಸ ಮಾಡುವ ದಿನಗೂಲಿ ಕೆಲಸಗಾರರನ್ನು **ಅಸಂಘಟಿತ ಕೆಲಸಗಾರರು** ಎಂದು ಕರೆಯಲಾಗುತ್ತದೆ.
- ಅಸಂಘಟಿತ ವಲಯದಲ್ಲಿ ಕೆಲಸಗಾರರ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುವದಿಲ್ಲ.
- ಅಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣತಿ, ತರಬೇತಿ, ಅನುಭವ ಇರುವುದಿಲ್ಲ.
- ಇವರ ಕೆಲಸಕ್ಕೆ ಭದ್ರತೆ & ನಿಗದಿತ ವೇತನ, ನಿವೃತ್ತಿ ವೇತನ ಹಾಗೂ ವೈದ್ಯಕೀಯ ಸೌಲಭ್ಯ, ವಿಶೇಷ ಭತ್ಯೆಗಳ ಸೌಲಭ್ಯವಿರುವದಿಲ್ಲ.
- ಕೆಲಸದ ಖಾತರಿಯೂ ಸಹ ಇರುವದಿಲ್ಲ.
- ಇವರಿಗೆ ಯಾವುದೇ ರೀತಿಯ ಸಮಯ ನಿಗದಿ ಯಾಗಿರುವದಿಲ್ಲ.
- ಈ ವಲಯದಲ್ಲಿ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ಕಾಯಿದೆಗಿಂತಲೂ ಕಡಿಮೆ ವೇತನ ಇರುತ್ತದೆ.

**4. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು ಯಾವುವು?**

**ಉತ್ತರ : ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು**

- ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರಿಗೆ ನಿಗದಿತ ಕೆಲಸವಾಗಲಿ, ನಿಗದಿತ ವೇತನವಾಗಲಿ ಇರುವುದಿಲ್ಲ.
- ದುಡಿಮೆಯನ್ನು ಹರಸಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವ ಜನರಿಗೆ ಸಾಮಾಜಿಕ ಭದ್ರತೆಗಳೇ ಇರುವುದಿಲ್ಲ.
- ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರಿಗೆ ಅನೇಕ ಕಾನೂನಾತ್ಮಕ ಚೌಕಟ್ಟುಗಳು ಅನ್ವಯಿಸುವುದೇ ಇಲ್ಲ.
- ಅಸಂಘಟಿತ ವಲಯದಲ್ಲಿ ಅರೆಕುಶಲ ದೈಹಿಕ ಶ್ರಮ ಆಧಾರಿತ ಕೆಲಸವನ್ನು ಮಕ್ಕಳು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಮಾಡುತ್ತಿರುತ್ತಾರೆ.
- ಜೀವನೋಪಾಯಕ್ಕೆ ದುಡಿಯಲೇಬೇಕಾದ ಅಸಹಾಯಕ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ಲೈಂಗಿಕ ಕಿರುಕುಳದ ದೌರ್ಜನ್ಯಗಳು ನಡೆಯುತ್ತವೆ.

5. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ.

ಉತ್ತರ : ಅಸಂಘಟಿತ ವಲಯದ ದುಡಿಮೆಗಾರರು ಸಾಮಾಜಿಕ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಸಾಮಾಜಿಕ ಭದ್ರತೆ ಎಂದರೆ ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ಮೂಳ ಸೌಲಭ್ಯಗಳನ್ನು ಸಾರ್ವಜನಿಕವಾಗಿ ಅಥವಾ ಸಾರ್ವಜನಿಕವಾಗಿ ಅಥವಾ ಸಾಮುದಾಯಿಕವಾಗಿ ಒದಗಿಸಿಕೊಡುವುದು ಸಾಮಾಜಿಕ ಭದ್ರತೆ ಎನ್ನಿಸಿಕೊಳ್ಳುತ್ತದೆ. ಆದರೆ ಅಸಂಘಟಿತ ವಲಯದ ದುಡಿಮೆಗಾರರಿಗೆ ಇಷ್ಟು ಕೂಡ ದೊರಕುತ್ತಿಲ್ಲ.

## ಅಧ್ಯಾಯ –03 ಸಾಮಾಜಿಕ ಚಳುವಳಿಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು.**

1. ಶೈಕ್ಷಣಿಕ ವಲಯದಲ್ಲಿ ಇಂಗ್ಲೀಷ್‌ನ ______ ಎಂಬ ಶಬ್ದಕ್ಕೆ ಸಮಾನಾಂತರವಾಗಿ ಚಳುವಳಿ ಎಂಬ ಪದವನ್ನು ಬಳಸಲಾಗುತ್ತದೆ. – **ಮೂವ್‌ಮೆಂಟ್.**
2. ಜಾರ್ಖಂಡ್ ಮುಕ್ತಿ ಮೋರ್ಚಾ ಚಳುವಳಿಯು ______ ರಲ್ಲಿ ಆರಂಭವಾಯಿತು. – **1973ರಲ್ಲಿ.**
3. ಚಿಪ್ಕೋ ಚಳುವಳಿ ಆರಂಭವಾದದ್ದು ______ ಗ್ರಾಮದಲ್ಲಿ – **ಉತ್ತರ ಪ್ರದೇಶದ ತೆಹ್ರಿ-ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ.**
4. ಚಿಪ್ಕೋ ಚಳುವಳಿ ಆರಂಭವಾದದ್ದು ______ ರಲ್ಲಿ – **1974ರಲ್ಲಿ.**
5. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ______ ಗ್ರಾಮದ ರೈತರು ______ರಲ್ಲಿ ಅಪ್ಪಿಕೋ ಚಳುವಳಿಯನ್ನು ನಡೆಸಿದರು. – **ಸಲ್ಯಾನಿ ಗ್ರಾಮ, 1983ರಲ್ಲಿ.**
6. ನರ್ಮದಾ ಅಂದೋಲನದ ನೇತೃತ್ವ ವಹಿಸದವರು – **ಮೇಧಾ ಪಾಟ್ಕರ್.**
7. ಸರ್ದಾರ್ ಸರೋವರ ಯೋಜನೆ ಇರುವುದು ______ ರಾಜ್ಯದಲ್ಲಿ – **ಗುಜರಾತ್.**

8. ಮೌನ ಕಣಿವೆ ಆಂದೋಲನ ನಡೆದದ್ದು –
**ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆ ಪ್ರದೇಶದಲ್ಲಿ.**

9. ಪರಿಸರ ಚಳುವಳಿಯಲ್ಲಿ ದೀರ್ಘ ಕಾಲ ಉಪವಾಸ ಸತ್ಯಾಗ್ರಹ ನಡೆಸಿದವರು – **ಮೇಧಾ ಪಾಟ್ಕರ್ ಮತ್ತು ಸುಂದರಲಾಲ ಬಹುಗುಣ.**

10. ಪ್ರಪಂಚದಲ್ಲಿ ಮೊದಲು ಪ್ರಾರಂಭಗೊಂಡ ಕಾರ್ಮಿಕ ಸಂಘಟನೆ – **The International Working men's Association. (1864 - ಲಂಡನ್ ನಗರ)**

11. 1923ರಲ್ಲಿ ಭಾರತೀಯ ಕಾರ್ಮಿಕ ಕಾಯಿದೆ ಜಾರಿಗೆ ತಂದ ಉದ್ದೇಶ – **ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದು.**

12. ಮಹಾರಾಷ್ಟ್ರದಲ್ಲಿ ________ ರು ಅಸ್ಪೃಶ್ಯರು ಮತ್ತು ಹಿಂದುಳಿದವರನ್ನು ಒಳಗೊಂಡ ಚಳವಳಿಯನ್ನು ಆರಂಭಿಸಿದರು. – **ಜ್ಯೋತಿರಾವ್ ಫುಲೆಯವರು.**

13. ಜ್ಯೋತಿರಾವ್ ಫುಲೆಯವರ ಅಸ್ಪೃಶ್ಯತಾ ಆಚರಣೆ ವಿರೋಧಿ ಚಳುವಳಿಯ ಉದ್ದೇಶ – **ಚಾತುರ್ವರ್ಣ ಆಧಾರಿತ ಮಾನವ ವಿರೋಧಿ ಆಚರಣೆಗಳನ್ನು ಮತ್ತು ಅವುಗಳ ಪ್ರಾಬಲ್ಯವನ್ನು ತಡೆಯುವುದು.**

14. 1925ರಲ್ಲಿ ಆತ್ಮಗೌರವ ಚಳವಳಿಯನ್ನು ಪ್ರಾರಂಭಿಸಿದವರು – **ಪೆರಿಯಾರ್ ರಾಮಸ್ವಾಮಿಯವರು.**

15. ಡಾ. ಶಿವರಾಮ ಕಾರಂತರು ______ದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವುದನ್ನು ವಿರೋಧಿಸಿದರು. – **ಕೈಗಾ.**

16. ಕರ್ನಾಟಕದಲ್ಲಿ ರೈತ ಸಂಘವನ್ನು ಸ್ಥಾಪನೆ ಮಾಡಿದವರು – **ಪ್ರೊ. ಎಂ.ಡಿ. ನಂಜುಂಡಸ್ವಾಮಿ.**

17. ಶಿವರಾಮ ಕಾರಂತರ ನೇತೃತ್ವದಲ್ಲಿ ಕರ್ನಾಟಕ ಕರಾವಳಿ ಜನ ಹೋರಾಟ ನಡೆಸಿದರು, ಅವರಿಗೆ ________ – **ಅಣುಸ್ಥಾವರ ದಟ್ಟ ಅರಣ್ಯವನ್ನು ನಾಶಪಡಿಸಬಹುದಾದ ಬೀತಿಯಿತ್ತು.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಸಾಮಾಜಿಕ ಚಳುವಳಿ ಎಂದರೇನು?**
ಉತ್ತರ : ಸಾಮಾಜಿಕ ಚಳುವಳಿ ಎಂದರೆ ಮಾನವ ಸಮಾಜದ ಚಲನೆ, ಬದಲಾವಣೆ ಮತ್ತು ರೂಪಾಂತರಗಳಿಗೆ ಸಂಬಂಧಿಸಿ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರತಿಕ್ರಿಯೆಯಾಗಿದೆ.

**2. ಸಮೂಹ ವರ್ತನೆ ಎಂದರೇನು?**
ಉತ್ತರ : ಜನರು ಆಕಸ್ಮಿಕವಾದ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕವಾಗಿ ನಡೆಯುವ ಆಲೋಚನೆ, ಭಾವನೆ ಹಾಗೂ ವರ್ತನೆಗಳನ್ನು ಸಮೂಹ ವರ್ತನೆ ಎನ್ನಬಹುದು.

**3. ಜನಮಂದೆ ಎಂದರೇನು?**
ಉತ್ತರ : ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆಯಾಗಿದೆ. ಉದಾ : ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನರ ಗುಂಪು.

**4. ದೊಂಬಿ ಅಥವಾ ಗಲಭೆ ಎಂದರೇನು?**
ಉತ್ತರ : ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ ಅಥವಾ ಗಲಭೆ ಎಂದು ಕರೆಯಬಹುದು.

**5. ದೊಂಬಿಯನ್ನು ಹೇಗೆ ನಿಯಂತ್ರಿಸಬಹುದು?**
ಉತ್ತರ : ಅಧಿಕಾರಿಗಳ ಸಮಯ ಪ್ರಜ್ಞೆ, ಪೋಲೀಸ್, ರಕ್ಷಣಾ ಪಡೆ ಮತ್ತು ಕಾನೂನು ಮುಂತಾದ ಸಾಧನಗಳ ಮೂಲಕ ದೊಂಬಿಗಳನ್ನು ನಿಯಂತ್ರಿಸಬಹುದು.

**6. ಪರಿಸರ ಚಳುವಳಿ ಎಂದರೇನು?**
ಉತ್ತರ : ನಮ್ಮ ಸುತ್ತಮುತ್ತಲಿನ ಭೂಮಿ, ಗಾಳಿ, ನೀರು ಸೇರಿದಂತೆ ಇಡೀ ಜೀವಮಂಡಲವನ್ನು ನಾಶ ಮಾಡುತ್ತಿರುವುದು ಮತ್ತು ಕಲುಷಿತ ಮಾಡುತ್ತಿರುವುದನ್ನು ವೈಜ್ಞಾನಿಕವಾಗಿ ಪ್ರತಿಭಟಿಸುವ ಚಳುವಳಿಯೇ ಪರಿಸರ ಚಳುವಳಿಯಾಗಿದೆ.

**7. ಕಾರ್ಮಿಕ ಚಳುವಳಿ ಎಂದರೇನು?**
ಉತ್ತರ : ಉತ್ತಮ ದುಡಿಯುವ ವಾತಾವರಣ, ಗೌರವಯುತ ನಡವಳಿಕೆ, ಕಾರ್ಮಿಕ ಮತ್ತು ಉದ್ಯೋಗ ಕಾನೂನುಗಳ ಅನಷ್ಠಾನಕ್ಕೆ ಸರ್ಕಾರಗಳನ್ನು ಒತ್ತಾಯಿಸಿ ಕಾರ್ಮಿಕ ಸಂಘಟನೆಗಳ ಮೂಲಕ ನಡೆಯುವ ಚಳುವಳಿಯನ್ನು ಕಾರ್ಮಿಕ ಚಳುವಳಿ ಎಂದು ಕರೆಯಲಾಗುತ್ತದೆ.

**8. The International Working men's Association ಕಾರ್ಮಿಕ ಸಂಘಟನೆಯ ಸ್ಥಾಪನೆಯ ಉದ್ದೇಶವೇನು?**
ಉತ್ತರ : The International Working men's Association ಎನ್ನುವುದು ಲಂಡನ್‌ನಲ್ಲಿ ಪ್ರಾರಂಭವಾದ ಮೊದಲ ಕಾರ್ಮಿಕರ ಸಂಘಟನೆಯಾಗಿದೆ. ಈ ಸಂಘಟನೆಯ ಪ್ರಮುಖ ಉದ್ದೇಶ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವುದು. ದುಡಿಮೆಯನ್ನು ದಿನಕ್ಕೆ ಗರಿಷ್ಠ 8 ಗಂಟೆಗಳು ಮಾತ್ರ ಮಾಡಬೇಕು ಎನ್ನುವ ಕಾನೂನು ಜಾರಿಗೆ ತರುವುದು.

**9. ಮಹಿಳಾ ಚಳುವಳಿ ಎಂದರೇನು?**
ಉತ್ತರ : ಮಹಿಳೆಯರ ಮೇಲಿನ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆಯೇ ಮಹಿಳಾ ಚಳುವಳಿಯಾಗಿದೆ.

**10. ಸಮೂಹ ವರ್ತನೆಯ ಮಾದರಿಗಳಾವವು?**
ಉತ್ತರ : ಸಮೂಹ ವರ್ತನೆಯಲ್ಲಿ ಜನಮಂದೆ, ದೊಂಬಿ, ಪೊಳ್ಳುಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ ಹಾಗೂ ಸಾಮಾಜಿಕ ಅಂದೋಲಗಳನ್ನು ಗುರುತಿಸಬಹುದಾಗಿದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ದೊಂಬಿ / ಗಲಭೆಗಳು ಕಾನೂನು ಮತ್ತು ಸುವ್ಯವಸ್ಥೆಗೆ ಹೇಗೆ ಗಂಭೀರ ಸವಾಲುಗಳಾಗಿವೆ? ಅಥವಾ ದೊಂಬಿಯ ಸ್ವರೂಪವನ್ನು ತಿಳಿಸಿ.**
ಉತ್ತರ :
- ದೊಂಬಿ / ಗಲಭೆಗಳು ಕಾನೂನು ಮತ್ತು ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿವೆ ಇದಕ್ಕೆ ಉದಾಹರಣೆ ಎಂದರೆ – ಕೋಮುಗಲಭೆ, ಜಾತಿಗಲಭೆ, ಜನಾಂಗೀಯ ಕಲಹ, ರಾಜಕೀಯ ಗುಂಪುಗಳ ನಡುವಿನ ಘರ್ಷಣೆ ಇತ್ಯಾದಿ.
- ದೊಂಬಿ ಅಥವಾ ಗಲಭೆಗಳಲ್ಲಿ ವಿವಿಧ ಸಾಮಾಜಘಾತಕ ಗುಂಪುಗಳು ತಮ್ಮ ಹಿತಾಸಕ್ತಿಗಳನ್ನು ಬಳಸಿಕೊಳ್ಳುವ ಉದ್ದೇಶದಿಂದಲೇ ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ಹಾಳು ಮಾಡುತ್ತಾ ಮುಂದೆ ಹೋಗುತ್ತವೆ.
- ಅಪಪ್ರಚಾರ ಮಾಡಿ ಗಲಭೆಗಳನ್ನು ಸೃಷ್ಟಿಸುತ್ತವೆ. ಕೆಲವೊಮ್ಮೆ ಅಪಾರವಾದ ಜೀವಹಾನಿಯನ್ನುಂಟು ಮಾಡುತ್ತವೆ.
- ಇಂತಹ ಅನಿಯಂತ್ರಿತ ವರ್ತನೆಯಿಂದ ಸಮಾಜಘಾತಕ ಚಟುವಟಿಕೆಗಳು ಹೆಚ್ಚುತ್ತವೆ.
- ಆದ್ದರಿಂದ ದೊಂಬಿ ಅಥವಾ ಗಲಭೆಗಳು ಕಾನೂನು ಮತ್ತು ಸುವ್ಯವಸ್ಥೆಗೆ ಗಂಭೀರ ಸವಾಲಾಗಿ ಪರಿಣಮಿಸಿವೆ.

**2. ಚಿಪ್ಕೋ ಚಳುವಳಿಯ ಉದ್ದೇಶವೇನು? ಅಥವಾ ಚಿಪ್ಕೋ ಚಳುವಳಿಯು ಪರಿಸರ ಜಾಗೃತಿ ಮೂಡಿಸುವಲ್ಲಿ ಹೇಗೆ ಯಶಸ್ವಿಯಾಯಿತು?**
**ಉತ್ತರ : ಚಿಪ್ಕೋ ಚಳುವಳಿ –**
- ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ 2500 ಮರಗಳನ್ನು ಸರ್ಕಾರವು ಕಡಿಯಲು ಅನುಮತಿ ನೀಡಿತ್ತು.
- ಇದರಿಂದ ಅರಣ್ಯ ನಾಶವಾಗುತ್ತದೆ. ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಅಲ್ಲಿನ ಮಹಿಳೆಯರೇ ಮುಂದಾಗಿ ಯಾವ ಆಮಿಷ–ಬೆದರಿಕೆಗಳಿಗೆ ಮಣಿಯದೆ ಮರಗಳನ್ನು ತಬ್ಬಿಕೊಂಡು 'ಅಪ್ಪಿಕೋ' (ಚಿಪ್ಕೋ) ಚಳುವಳಿ ಪ್ರಾರಂಭಿಸಿದರು.
- 1974 ರಲ್ಲಿ ನಡೆದ ಈ ಚಳುವಳಿಯು ಒಬ್ಬ ಮಹಿಳೆಯ ಸಮಯಸ್ಪೂರ್ತಿಯಾದರೂ ಅದರ ಪರಿಣಾಮ ದೂರಗಾಮಿಯಾದದ್ದು.
- ಈ ಚಳುವಳಿಯ ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.

**3. ಕರ್ನಾಟದಲ್ಲಿ ನಡೆದ ಅಪ್ಪಿಕೋ ಚಳುವಳಿಯನ್ನು ವಿವರಿಸಿ. ಅಥವಾ ಅಪ್ಪಿಕೋ ಚಳುವಳಿಯ ಉದ್ದೇಶ ಏನಾಗಿತ್ತು?**
**ಉತ್ತರ : ಕರ್ನಾಟದಲ್ಲಿ ನಡೆದ ಅಪ್ಪಿಕೋ ಚಳುವಳಿ**
- ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಕಾನಿ ಗ್ರಾಮದ ರೈತರು 1983ರಲ್ಲಿ ಅಪ್ಪಿಕೋ ಚಳುವಳಿಯನ್ನು ನಡೆಸಿದರು.
- ಕಲಸೆ ಎಂದು ಕರೆಯುವ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ಅದನ್ನು ತಡೆಯಲು ಸ್ಥಳೀಯ ಜನರು ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಪ್ರತಿಭಟಿಸಿದರು.
- ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸುವುದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ಅಲ್ಲಿನ ಸ್ಥಳೀಯ ರೈತರ ಉದ್ದೇಶವಾಗಿತ್ತು.

**4. ನರ್ಮದಾ ಬಚಾವೋ ಅಂದೋಲನದಲ್ಲಿ ಪರಿಸರ ಪ್ರೇಮಿ ಮೇಧಾ ಪಾಟ್ಕರ್‌ರವರ ಪಾತ್ರವನ್ನು ತಿಳಿಸಿ. ಅಥವಾ ನರ್ಮದಾ ಆಂದೋಲನಕ್ಕೆ ಕಾರಣಗಳೇನು?**
ಉತ್ತರ : ನರ್ಮದಾ ಬಚಾವೋ ಅಂದೋಲನದಲ್ಲಿ ಪರಿಸರ ಪ್ರೇಮಿ ಮೇಧಾ ಪಾಟ್ಕರ್‌ರವರ ಪಾತ್ರ – ಅಥವಾ ನರ್ಮದಾ ಆಂದೋಲನಕ್ಕೆ ಕಾರಣಗಳು. –

- ಗುಜರಾತ್ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಅಣೆಕಟ್ಟು ನಿರ್ಮಾಣ ಅಲ್ಲಿನ ಸ್ಥಳೀಯ ಜನರನ್ನು ಮತ್ತು ಬುಡಕಟ್ಟು ಜನರನ್ನು ನಿರ್ಗತೀಕರಣಕ್ಕೆ ಒಳಪಡಿಸಿತ್ತು.
- ಈ ಯೋಜನೆಯಿಂದ ಅರಣ್ಯನಾಶ, ಪರಿಸರ ನಾಶ, ಜೀವಸಂಕುಲಗಳಿಗೆ ತೊಂದರೆಯಾಗುತ್ತದೆ.
- ಇದನ್ನು ಅರಿತ ಪರಿಸರ ಪ್ರೇಮಿ ಮೇಧಾ ಪಾಟ್ಕರ್‌ರವರು ಪರಿಸರವನ್ನು ಸಂರಕ್ಷಣೆ ಮಾಡುಬೇಕು ಎನ್ನುವ ಆಶಯದಿಂದ ಅಣೆಕಟ್ಟು ನಿರ್ಮಾಣದ ವಿರುದ್ಧ ಬಹು ದೀರ್ಘಕಾಲ ಬಹುದೊಡ್ಡ ಚಳುವಳಿಯನ್ನು ನರ್ಮದಾ ನದಿಯ ಸುತ್ತಮುತ್ತ ನಡೆಸಿದರು. ಇದೇ ನರ್ಮದಾ ಬಚಾವೋ ಆಂದೋಲನ.

**5. ಮೌನ ಕಣಿವೆ ಆಂದೋಲನವನ್ನು ವಿವರಿಸಿ.**

**ಉತ್ತರ : ಮೌನ ಕಣಿವೆ ಆಂದೋಲನ –**

- ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಅಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶದ ಜೊತೆಗೆ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ.
- ಇದನ್ನು ತಪ್ಪಿಸಲು ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ವನ್ಯಮೃಗ ಆಸಕ್ತರು ಆಣೆಕಟ್ಟಿನ ನಿರ್ಮಾಣದ ವಿರುದ್ಧ ಚಳುವಳಿಯನ್ನು ನಡೆಸಿದರು.
- ಈ ಚಳುವಳಿಯ ಅನೇಕ ಜೀವಸಂಕುಲಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

**6. ಪರಿಸರವಾದಿಗಳು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ನಡೆದ ಪರಿಸರ ಉಳಿಸಿ ಚಳುವಳಿಗಳನ್ನು ತಿಳಿಸಿ.**

ಉತ್ತರ : ಕರ್ನಾಟಕದ ಕರಾವಳಿಯ ಮಂಗಳೂರಿನಲ್ಲಿ ಸ್ಥಾಪಿಸಲಾಗುತ್ತಿದ್ದ ತೈಲ ಕಾರ್ಯಾಗಾರದಿಂದ ಹೊರಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶವಾಗುತ್ತದೆ ಎಂದು ತಿಳಿದ ಪರಿಸರವಾದಿಗಳು "ಮಂಗಳೂರು ರಿಫೈನ್‌ರೀಸ್ ಮತ್ತು ಪಟ್ರೋಕೆಮಿಕಲ್ಸ್ ಲಿಮಿಟೆಡ್" ವಿರುದ್ಧ ಚಳವಳಿಯನ್ನು ನಡೆಸಿದರು.

ಉಡುಪಿ ಹತ್ತಿರದ ನಂದಿಕೂರು ಉಷ್ಣ ಸ್ಥಾವರ ಸ್ಥಾಪನೆಯ ವಿರುದ್ಧ ಹಾಗೂ ಮಂಗಳೂರು ವಿಶೇಷ ಆರ್ಥಿಕ ವಲಯ ಉದ್ದೇಶಕ್ಕೆ ಕೃಷಿ ಭೂಮಿ ಪಡೆಯುವ ವಿರುದ್ಧ ನಡೆಸಿದ ಹೋರಾಟಗಳು ಪ್ರಮುಖವಾಗಿವೆ.

**7. ಕೈಗಾ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಗಲು ಕಾರಣಗಳೇನು?**

**ಉತ್ತರ : ಕೈಗಾ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಗಲು ಕಾರಣಗಳು –**

- ಕರ್ನಾಟಕದ ಕಾರವಾರ ಜಿಲ್ಲೆಯ ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವುದರ ವಿರುದ್ಧ ಚಳುವಳಿಯನ್ನು ಶಿವರಾಮ ಕಾರಂತರ ನಾಯಕತ್ವದಲ್ಲಿ ಪ್ರಾರಂಭವಾಯಿತು.
- ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಯಾಗುತ್ತದೆ. ಆದ್ದರಿಂದ ಇದನ್ನು ಸ್ಥಾಪನೆ ಮಾಡಬಾರದು ಎಂದು ಕೈಗಾ ವಿರೋಧಿ ಚಳುವಳಿಯನ್ನು ನಡೆಸಲಾಯಿತು.

**8. ಮಹಿಳಾ ವಿಮೋಚನಾ ಚಳುವಳಿಗೆ ಕಾರಣಗಳೇನು?**

**ಉತ್ತರ : ಮಹಿಳಾ ವಿಮೋಚನಾ ಚಳುವಳಿಗೆ ಕಾರಣಗಳು –**

- ಮಹಿಳೆಯ ಮೇಲೆ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯಗಳ ವಿರುದ್ಧ ನಡೆಸಿದ ಪ್ರತಿಭಟನೆಯೇ ಮಹಿಳಾ ಚಳುವಳಿಯಾಗಿದೆ.
- ಸ್ವತಂತ್ರ ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅಸಮಾನತೆ ಆಧಾರಿತ ದೌರ್ಜನ್ಯಗಳು ರೂಪಾಂತರಗೊಳ್ಳುತ್ತಿವೆ.
- ಮಹಿಳೆಯರನ್ನು ಸೇವಕರು ಎಂದು ನೋಡುವ ಪುರುಷ ಪ್ರಧಾನ ಸಮಾಜ 'ಸಿದ್ಧಾಂತವು' ಹೆಣ್ಣು ಮಕ್ಕಳು ಮತ್ತು ಮಹಿಳೆಯರನ್ನು ಅಸಮಾನತೆಯ ದೃಷ್ಟಿಕೋನದಿಂದಲೇ ನೋಡುತ್ತಿದೆ.
- ಹೆಣ್ಣಿನ ಮೇಲೆ ದೈಹಿಕ ಮತ್ತು ಮಾನಸಿಕ ಕಿರುಕುಳ, ವರದಕ್ಷಿಣೆ ಕಿರುಕುಳ, ಅತ್ಯಾಚಾರ, ದೌರ್ಜನ್ಯ ಇತ್ಯಾದಿಗಳು ನಡೆಯುತ್ತಿವೆ.
- ಅವಾಚ್ಯ ಪದಗಳ ಬಳಕೆ ವಿವಿಧ ರೂಪದ ಹಿಂಸಾಚಾರಗಳು ಕುಟುಂಬದ ಒಳಗೂ ಮತ್ತು ಹೊರಗೂ ಹೆಣ್ಣಿನ ಸ್ವಾತಂತ್ರ್ಯ ಮತ್ತು ಗೌರವಕ್ಕೆ ಅಡ್ಡಿಯನ್ನುಂಟು ಮಾಡಿವೆ.
- ಇವುಗಳ ಜೊತೆಗೆ ಹೆಣ್ಣಿನ ಮೇಲಿನ ಆ್ಯಸಿಡ್ ದಾಳಿ, ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಕಳ್ಳಸಾಗಾಣಿಕೆ ಮತ್ತು ಮಾರಾಟವು ದಿನದಿನಕ್ಕೆ ವಿಚಿತ್ರ ಸ್ವರೂಪ ಪಡೆದುಕೊಳ್ಳುತ್ತಿವೆ. ಈ ಕಾರಣದಿಂದ ಮಹಿಳಾ ಚಳುವಳಿಗಳು ನಡೆದವು.

**9. ಮಹಿಳೆಯರು ಮದ್ಯಪಾನ ನಿಷೇಧ ಚಳವಳಿಯನ್ನು ಸಂಘಟಿಸಲು ಕಾರಣಗಳೇನು?**

**ಉತ್ತರ : ಮಹಿಳೆಯರು ಮದ್ಯಪಾನ ನಿಷೇಧ ಚಳವಳಿಯನ್ನು ಸಂಘಟಿಸಲು ಕಾರಣಗಳು –**

- ಮದ್ಯಪಾನವು ಸಾಮಾಜಿಕ ಸಂಸ್ಥೆಗಳಲ್ಲಿ ಮತ್ತು ವೈಯಕ್ತಿಕ ನೆಲೆಯಲ್ಲಿ ಹಲವು ಸಮಸ್ಯೆಗಳನ್ನು ಹುಟ್ಟುಹಾಕಿದೆ.
- ಮಹಿಳೆಯರು ಅದರಲ್ಲೂ ಗ್ರಾಮೀಣ ಬಡ ಮಹಿಳೆಯರ ಬದುಕಿನಲ್ಲಿ ಅನೇಕ ಗಂಡಾಂತರಗಳನ್ನು ಸೃಷ್ಟಿಸಿದೆ.
- ಕೂಲಿಕಾರರು ತಮ್ಮ ಅತ್ಯಲ್ಪ ದುಡಿಮೆಯನ್ನು ಕುಡಿತಕ್ಕೆ ಹಾಕುವ ಮೂಲಕ ತಮ್ಮ ಚಟಕ್ಕಾಗಿ ಚಿಕ್ಕ ಮಕ್ಕಳನ್ನು ದುಡಿಮೆಗೆ ಕಳುಹಿಸುವುದರ ಜೊತೆಗೆ, ಹೆಂಡತಿಯ ದುಡಿಮೆಯಿಂದ ಬರುವ ಹಣವನ್ನು ಕಸಿದು ಮದ್ಯಪಾನದ ದಾಸರಾಗಿದ್ದಾರೆ.
- ಹೀಗೆ ಮದ್ಯಪಾನವು ಉಂಟುಮಾಡಿದ ಪರಿಣಾಮಗಳನ್ನು ಸಹಿಸಲಾಗದೆ ಮದ್ಯಪಾನ ನಿಷೇಧ ಚಳುವಳಿಗಳನ್ನು ಮಹಿಳೆಯರೇ ಸಂಘಟಿಸಿದ್ದಾರೆ.

**10. ಎಪ್ಪತ್ತರ ದಶಕದಲ್ಲಿ ಮುಖ್ಯಮಂತ್ರಿ ಡಿ. ದೇವರಾಜು ಅರಸುರವರು ಸಾಮಾಜಿಕ ಪರಿವರ್ತನೆಯನ್ನು ಹೇಗೆ ಸಾಧಿಸಿದರು?**

ಉತ್ತರ : ಮುಖ್ಯಮಂತ್ರಿ ಡಿ. ದೇವರಾಜು ಅರಸರು ಸಾಮಾಜಿಕ ಪರಿವರ್ತನೆಯನ್ನು ಈ ಕೆಳಗಿನ ಅಂಶಗಳ ಮೂಲಕ ಸಾಧಿಸಿದರು.

- ಜಾತಿ ವ್ಯವಸ್ಥೆಯ ಬಂಧಿಗಳಾದ ಸಾಮಾಜಿಕ ದುರ್ಬಲರ ವಿಮೋಚನೆಗೆ ಪೂರಕವಾದ ಶಾಸನಗಳನ್ನು ಜಾರಿಗೆ ತರುವ ಪ್ರಯತ್ನ ನಡೆಸಿದರು.
- ಗೇಣಿದಾರರನ್ನು ಭೂಮಾಲೀಕರ ಹಿಡಿತದಿಂದ ಬಿಡುಗಡೆ ಮಾಡಿದರು.
- ಜೀತಪದ್ಧತಿ, ಬಡವರ ಋಣಪರಿಹಾರ, ತಲೆಯ ಮೇಲೆ ಮಲ ಹೊರುವ ಅಮಾನವೀಯ ರೂಢಿಯ ನಿರ್ಮೂಲನೆ ಸೇರಿದಂತೆ ಅನೇಕ ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು.

**11. ಕರ್ನಾಟಕದಲ್ಲಿ ರೈತ ಹೋರಾಟವು ಯಾರ ನೇತೃತ್ವದಲ್ಲಿ ಹೇಗೆ ನಡೆಯಿತು?**

**ಉತ್ತರ : ಕರ್ನಾಟಕದಲ್ಲಿ ರೈತ ಚಳುವಳಿ –**

- ಕರ್ನಾಟಕದ ರೈತ ಚಳುವಳಿಯ ನೇತೃತ್ವವನ್ನು ಪ್ರೊ. ನಂಜುಂಡಸ್ವಾಮಿಯವರು ಕರ್ನಾಟಕ ರಾಜ್ಯ ರೈತ ಸಂಘವನ್ನು ಸ್ಥಾಪಿಸುವ ಮೂಲಕ ಆರಂಭಿಸಿದರು.
- ವೈಜ್ಞಾನಿಕ ಬೆಲೆ ನಿಗದಿಯಾಗದ ಕಾರಣ ರೈತರು ಸಾಲದ ಸುಳಿಯಲ್ಲಿ ಸಿಕ್ಕಿದ್ದಾರೆ. ಅವರಿಗೆ ವೈಜ್ಞಾನಿಕ ಬೆಲೆ ಸಿಗಬೇಕು.
- ಗ್ರಾಮಗಳ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಯಾಗಿಲ್ಲ. ಅವುಗಳನ್ನು ಅಭಿವೃದ್ಧಿಪಡಿಸಬೇಕು.
- ರೈತರ ಸ್ವಾಭಿಮಾನಕ್ಕೆ, ಸ್ವಾತಂತ್ರ್ಯಕ್ಕೆ ಧಕ್ಕೆತರುವ ಜಪ್ತಿ ಕಾರ್ಯಕ್ರಮಗಳು ನಿಲ್ಲಬೇಕು.
- ಸ್ಥಳೀಯ ನೈಸರ್ಗಿಕ ಸಂಪತ್ತಿನಲ್ಲಿ ಸ್ಥಳೀಯ ಗ್ರಾಮಗಳಿಗೆ ಪಾಲು ದೊರೆಯಬೇಕು.
- ಲೇವಿ ಪದ್ಧತಿ ನಿಲ್ಲಬೇಕು. – ಇತ್ಯಾದಿ ಗ್ರಾಮೀಣ ಜನರ ಪರವಾದ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಮಂಡಿಸುತ್ತಲೇ ಕರ್ನಾಟಕದ ರೈತ ಚಳುವಳಿ ನಡೆಯುತ್ತವೆ.

**12. ಅಸ್ಪೃಶ್ಯತಾ ಆಚರಣೆ ವಿರೋಧಿ ಚಳುವಳಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಪಾತ್ರವೇನು?**

**ಉತ್ತರ : ಅಸ್ಪೃಶ್ಯತಾ ಆಚರಣೆ ವಿರೋಧಿ ಚಳುವಳಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಪಾತ್ರ –**

- ಡಾ. ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ ಮತ್ತು ಹೋರಾಟದೊಂದಿಗೆ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳುವಳಿಯು ತೀವ್ರ ಸ್ವರೂಪ ಪಡೆಯುತ್ತದೆ.
- 1930ರ ದುಂಡುಮೇಜಿನ ಪರಿಷತ್‌ನಲ್ಲಿ ಅಂಬೇಡ್ಕರ್ ಅವರು ನಾವು ಆಳುವ ವರ್ಗವಾಗಬೇಕೆಂದು ಅಸ್ಪೃಶ್ಯರಿಗೆ ಕರೆಕೊಟ್ಟರು.
- ಅಂಬೇಡ್ಕರ್ ಅವರು ನಿರಂತರವಾಗಿ ದಲಿತರ ಎಲ್ಲಾ ರೀತಿಯ ಹಕ್ಕುಗಳಿಗಾಗಿ ಹೋರಾಡುತ್ತಲೇ ಬಂದರು.
- ಅಸ್ಪೃಶ್ಯ ದಲಿತರ ಹಿತಾಸಕ್ತಿಗಳ ಪರವಾಗಿ 'ಮೂಕನಾಯಕ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಬಹುದೊಡ್ಡ ಚಳುವಳಿಯನ್ನು ರೂಪಿಸಲು ಕಾರಣೀಭೂತರಾದರು.

**13. ಭಾರತದಲ್ಲಿ ನಡೆದ ಪ್ರಮುಖ ಪರಿಸರ ಚಳವಳಿಗಳನ್ನು ಪಟ್ಟಿ ಮಾಡಿ.**

ಉತ್ತರ : ಭಾರತದ ಪ್ರಮುಖ ಪರಿಸರ ಚಳುವಳಿಗಳು – 1. ಚಿಪ್ಕೋ ಚಳುವಳಿ, 2. ಕರ್ನಾಟಕದ ಅಪ್ಪಿಕೋ ಚಳುವಳಿ, 3. ನರ್ಮದಾ ಬಚಾವೋ ಆಂದೋಲನ, 4. ಮೌನ ಕಣಿವೆ ಆಂದೋಲನ, 5. ಕರ್ನಾಟಕ ಕರಾವಳಿ ತೀರದ ಪರಿಸರ ಚಳುವಳಿ, 6. ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿ.

**14. ಜನಮಂದೆಯ ಸ್ವರೂಪವನ್ನು ತಿಳಿಸಿ.**

ಉತ್ತರ : ಜನಮಂದೆಯು ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆ. ಇದರಲ್ಲಿ ಜನರು ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಭೌತಿಕವಾಗಿ ಒಟ್ಟಾಗಿ ಸೇರಿರುತ್ತಾರೆ. ಜನಮಂದೆಯ ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆಗಳು ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ. ಜನಮಂದೆಯಲ್ಲಿರುವ ಜನರು ಅನಿಯಂತ್ರಿತ ನಡವಳಿಕೆಯು ಎಷ್ಟೋ ಬಾರಿ ಸಮಾಜದ ಲೋಪದೋಷಗಳನ್ನು ಸೂಚಿಸುವುದುಂಟು. ಇದು ಕೆಲವೊಮ್ಮೆ ಸಾಮಾಜಿಕ ಸಂಸ್ಥೆಗಳ ಕಾರ್ಯವಿಧಾನದ ಬಗೆಗಿರುವ ಜನರ ಅಸಂತೃಪ್ತಿಯನ್ನು ಪ್ರಕಟಿಸುತ್ತದೆ. ಸರ್ಕಾರದ ಯೋಜನೆಗಳು, ಧೋರಣೆಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮಗಳ ಬಗೆಗಿನ ಜನರ ಅಸಮಾಧಾನವನ್ನು ಹೊರಹಾಕುತ್ತದೆ.

**15. ಪರಿಸರ ಚಳುವಳಿಯ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ.**

**ಉತ್ತರ : ಪರಿಸರ ಚಳುವಳಿಯ ಅರ್ಥ ಮತ್ತು ಸ್ವರೂಪ –**

- ಪರಿಸರ ಚಳುವಳಿ ಎಂದರೆ ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ.
- ನಮ್ಮ ಸುತ್ತಮುತ್ತಲಿನ ಭೂಮಿ, ಗಾಳಿ, ನೀರು ಸೇರಿದಂತೆ ಇಡೀ ಜೀವಮಂಡಲವನ್ನು ನಾಶ ಮಾಡುತ್ತಿರುವುದು ಮತ್ತು ಕಲುಷಿತ ಮಾಡುತ್ತಿರುವುದನ್ನು ವೈಜ್ಞಾನಿಕವಾಗಿ ಪ್ರತಿಭಟಿಸುವ ಚಳವಳಿಯೇ ಪರಿಸರ ಚಳವಳಿ.
- ಪರಿಸರ ಚಳವಳಿ ದಿಢೀರನೇ ಕಾಣಿಸಿಕೊಂಡ ಚಳವಳಿಯಲ್ಲ.
- ಹಲವಾರು ವರ್ಷಗಳು ಪರಿಸರ ಮತ್ತು ಪರಿಸರವಾಸಿಗಳ ಮೇಲೆ ನಡೆಸಿದ ದೌರ್ಜನ್ಯಗಳಿಗೆ ಹುಟ್ಟಿಕೊಂಡ ಪ್ರತಿರೋಧಗಳು ಈ ಚಳುವಳಿಯಲ್ಲಿವೆ. ಉದಾ : ಜಾರ್ಖಂಡ್ ಮುಕ್ತಿ ಮೋರ್ಚಾ.

**16. ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯನ್ನು ವಿವರಿಸಿ.**

**ಉತ್ತರ : ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿ –**

- ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯ ಚರಿತ್ರೆಯನ್ನು 19ನೇ ಶತಮಾನದಿಂದ ಗುರುತಿಸಬಹುದು.
- ಮಹಾರಾಷ್ಟ್ರದ ಜ್ಯೋತಿರಾವ್ ಫುಲೆಯವರು ಅಸ್ಪೃಶ್ಯರು ಮತ್ತು ಹಿಂದುಳಿದ ವರ್ಗದವರನ್ನು ಒಳಗೊಂಡ ಚಳವಳಿಯನ್ನು ಆರಂಭಿಸಿದರು.
- ಚಾತುರ್ವರ್ಣ ಆಧಾರಿತ ಮಾನವ ವಿರೋಧಿ ಆಚರಣೆಗಳನ್ನು ಮತ್ತು ಅವುಗಳ ಪ್ರಾಬಲ್ಯವನ್ನು ತಡೆಯುವುದು ಈ ಚಳುವಳಿಯ ಉದ್ದೇಶ.
- ಈ ಆಶಯದಲ್ಲಿಯೇ ತಮಿಳುನಾಡು, ಕರ್ನಾಟಕ, ಆಂದ್ರಪ್ರದೇಶ ಮತ್ತಿತರ ಭಾಗಗಳಲ್ಲಿ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಗಳು ಹುಟ್ಟಿಕೊಂಡವು.
- ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆ ಮತ್ತು ಹೋರಾಟದೊಂದಿಗೆ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯು ತೀವ್ರ ಸ್ವರೂಪ ಪಡೆಯುತ್ತದೆ.
- 

## ಅಧ್ಯಾಯ – 04 ಸಾಮಾಜಿಕ ಸಮಸ್ಯೆಗಳು

ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. 2011ರ ಜನಗಣತಿಯಂತೆ ಭಾರತದಲ್ಲಿ ಇಂದಿಗೂ ______ ಮಕ್ಕಳು ಬಾಲ ಕಾರ್ಮಿಕತನದ ಬಲವಂತದ ದುಡಿಮೆಗೆ ಗುರಿಯಾಗಿದ್ದಾರೆ. – **12.6 ದಶಲಕ್ಷ ಮಕ್ಕಳು.**
2. ಪ್ರಪಂಚದಲ್ಲಿ ______ ಮಕ್ಕಳು ಬಾಲ ಕಾರ್ಮಿಕರಾಗಿ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. – **215 ದಶಲಕ್ಷ ಮಕ್ಕಳು.**
3. ಬಾಲ ಕಾರ್ಮಿಕ ಪದ್ಧತಿ ನಿಷೇದ ಮತ್ತು ನಿಯಂತ್ರಣ ಕಾಯ್ದೆ ಜಾರಿಗೆ ಬಂದದ್ದು ______ರಲ್ಲಿ. – **1986.**
4. ಬಾಲ ಕಾರ್ಮಿಕ ಪದ್ಧತಿ ನಿಷೇದ ಮತ್ತು ನಿಯಂತ್ರಣ ಕಾಯ್ದೆಗೆ ______ರಲ್ಲಿ ತಿದ್ದುಪಡಿ ತಂದು "ಹದಿಹರೆಯದವರ ದುಡಿಮೆ ನಿಷೇಧ"ವನ್ನು ಜಾರಿಗೆ ತಂದಿದೆ. – **2016.**
5. ಭಾರತ ಸರ್ಕಾರವು 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ' ಜಾರಿಗೆ ತಂದ ವರ್ಷ – **ಜೂನ್ 19. 2012.**
6. 2001ರ ಜನಗಣತಿಯ ಪ್ರಕಾರ ಪ್ರತಿ 1000 ಪುರುಷರಿಗೆ ಇರುವ ಹೆಣ್ಣು ಮಕ್ಕಳ ಪ್ರಮಾಣ – **933 ಹೆಣ್ಣು ಮಕ್ಕಳು**
7. 2011ರ ಜನಗಣತಿಯ ಪ್ರಕಾರ ಪ್ರತಿ 1000 ಪುರುಷರಿಗೆ ಇರುವ ಹೆಣ್ಣು ಮಕ್ಕಳ ಪ್ರಮಾಣ – **940 ಹೆಣ್ಣು ಮಕ್ಕಳು**
8. 2011ರ ಜನಗಣತಿಯ ಪ್ರಕಾರ 0–06 ವಯೋಮಾನದ ಮಕ್ಕಳಲ್ಲಿ ಲಿಂಗ ಅನುಪಾತವು ಪ್ರತಿ 1000 ಗಂಡು ಮಕ್ಕಳಿಗೆ ______ ಹೆಣ್ಣು ಮಕ್ಕಳ ಪ್ರಮಾಣವಿದೆ. – **914 ಹೆಣ್ಣು ಮಕ್ಕಳು**
9. ಭಾರತದಲ್ಲಿ ಪ್ರತಿ ವರ್ಷ ______ ಹೆಣ್ಣು ಮಕ್ಕಳು ಕಾಣೆಯಾಗುತ್ತಿದ್ದಾರೆ ಎಂದು ಯು.ಎನ್.ನ ಜನಗಣತಿ ತಿಳಿಸಿದೆ. – **ಆರು ಲಕ್ಷ ಹೆಣ್ಣು ಮಕ್ಕಳು.**
10. ಕರ್ನಾಟಕದಲ್ಲಿ 1991ರ ಜನಗಣತಿ ಪ್ರಕಾರ ಒಂದು ಸಾವಿರ ಪುರುಷರಿಗೆ ______ ಜನ ಮಹಿಳೆಯರು ಇದ್ದಾರೆ. – **960.**
11. ಕರ್ನಾಟಕದಲ್ಲಿ 2001ರ ಜನಗಣತಿ ಪ್ರಕಾರ ಒಂದು ಸಾವಿರ ಪುರುಷರಿಗೆ ______ ಜನ ಮಹಿಳೆಯರು ಇದ್ದಾರೆ. – **965.**
12. ಕರ್ನಾಟಕದಲ್ಲಿ 1991ರ ಜನಗಣತಿ ಪ್ರಕಾರ 0–06 ವಯೋಗುಂಪಿನಲ್ಲಿ ಒಂದು ಸಾವಿರ ಗಂಡು ಮಕ್ಕಳಿಗೆ 960 ಜನ ಹೆಣ್ಣು ಮಕ್ಕಳಿದ್ದರೆ, ಇದು 2001ರಲ್ಲಿ ____ ಕ್ಕೆ ಇಳಿದಿದೆ. – **949.**
13. ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವದನ್ನು ನಿಯಂತ್ರಿಸಲು **1994** ರಲ್ಲಿ ____ ಕಾಯ್ದೆಯನ್ನು ಜಾರಿಗೆ ತರಲಾಯಿತು. – **Per-Conception and Pre-Natal Diagnostic Techniques Act (PCPNDT – 1994) 'ಪ್ರಸವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ,**
14. 2015ರಲ್ಲಿ ಪ್ರಕಟವಾಗಿರುವ ಜಾಗತಿಕ ಹಸಿವಿನ ಸೂಚ್ಯಂಕದ ಪ್ರಕಾರ ಭಾರತವು ______ ನೇ ರ್‍ಯಾಂಕನಲ್ಲಿದೆ. – **20ನೇ ರ್‍ಯಾಂಕ್.**
15. ______ ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯಿದೆ ಜಾರಿಗೆ ಬಂದಿದೆ. – **2006ರಲ್ಲಿ.**
16. ಬಾಲ್ಯವಿವಾಹದ ವಿರುದ್ಧವಾಗಿ ಮಕ್ಕಳ ಸಹಾಯವಾಣಿ _ ಗೆ ದೂಡು ನೀಡಬಹುದು. – **1098.**
17. ಪ್ರತಿ ವರ್ಷ ರೂ. ______ಗಳಷ್ಟು ಮಾನವ ಕಳ್ಳ ಸಾಗಾಣಿಕೆಯಲ್ಲಿ ವ್ಯವಹಾರ ನಡೆಯುತ್ತದೆ ಎಂದು 2012–13ರಲ್ಲಿ ವಿಶ್ವಸಂಸ್ಥೆ ಅಂದಾಜು ಮಾಡಿದೆ. – **ರೂ. 32 ಬಿಲಿಯನ್.**
18. ಅನೈತಿಕ ಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ ಜಾರಿಗೆ ಬಂದದ್ದು ____ರಲ್ಲಿ – **1956.**
19. ಸಂವಿಧಾನದ ____ ನೇ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನುಬಾಹಿರ ಎಂದು ಘೋಷಿಸಿದೆ. – **24ನೇ ವಿಧಿ**
20. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ____ ರಲ್ಲಿ 'ರಾಷ್ಟ್ರೀಯ ನೀತಿ' ಜಾರಿಗೊಂಡಿತು. – **1987.**
21. ಹೆಣ್ಣು ಭ್ರೂಣ ಹತ್ಯೆಯನ್ನು ನಿಷೇಧಿಸುವ ಕಾಯಿದೆ ____ ರಲ್ಲಿ ಜಾರಿಗೆ ಬಂದಿತು. – **1994.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಬಾಲ ಕಾರ್ಮಿಕರು ಎಂದರೆ ಯಾರು?**

ಉತ್ತರ : ಭಾರತದ ಸಂವಿಧಾನದ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅಂತಹವರನ್ನು ಬಾಲ ಕಾರ್ಮಿಕರು ಎಂದು ಕರೆಯುತ್ತೇವೆ.

**2. 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ'ಯು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ಹೇಗೆ ವಿವರಿಸುತ್ತದೆ?**

ಉತ್ತರ : 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ' ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ಹೀಗೆ ವಿವರಿಸುತ್ತದೆ. – 18 ವರ್ಷದೊಳಗಿನ ಯಾವುದೇ ಮಕ್ಕಳ ಮೇಲೆ (ಗಂಡು & ಹೆಣ್ಣು) ಯಾವುದೇ ರೀತಿಯಲ್ಲಿ ಲೈಂಗಿಕ ಉದ್ದೇಶದಿಂದ ಶೋಷಣೆ, ಹಿಂಸೆ, ದೌರ್ಜನ್ಯ, ಕಿರುಕುಳ, ಹಲ್ಲೆ ನಡೆಸಿದರೆ ಅಥವಾ ಅಸುರಕ್ಷಿತ ಸ್ಪರ್ಶ ಮಾಡಿದರೂ ಅದನ್ನು ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಿ ಅಂತವಹರಿಗೆ ಶಿಕ್ಷೆ ನೀಡುವ ಅವಕಾಶವನ್ನು ಕಲ್ಪಿಸಿದೆ.

**3. ಹೆಣ್ಣು ಭ್ರೂಣ ಹತ್ಯೆ ಎಂದರೇನು?**

ಉತ್ತರ : ತಾಯಿಯ ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು, ಅದು ತಂದೆ–ತಾಯಿಯರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದನ್ನೇ ಹೆಣ್ಣು ಭ್ರೂಣ ಹತ್ಯೆ ಎಂದು ಕರೆಯುತ್ತಾರೆ.

**4. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–3ರ ಪ್ರಕಾರ ಹಿಂದಿನ ಹತ್ತು ವರ್ಷಗಳಲ್ಲಿ ಉಂಟಾದ ಗಂಡು & ಹೆಣ್ಣು ಶಿಶುಗಳ ಮರಣ ಪ್ರಮಾಣ ಎಷ್ಟು?**

ಉತ್ತರ : ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–3ರ ಪ್ರಕಾರ ಹಿಂದಿನ ಹತ್ತು ವರ್ಷಗಳಲ್ಲಿ ನವಜಾತ ಶಿಶುವಿನ ಮರಣದಲ್ಲಿ ಗಂಡು ಶಿಶುವಿನ ಮರಣ ಪ್ರಮಾಣ ಶೇ. 53.6 ಇದ್ದರೆ, ಹೆಣ್ಣು ಶಿಶುವಿನ ಮರಣ ಪ್ರಮಾಣವು ಶೇ. 34.6ರಷ್ಟು ಇದೆ.

**5. ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರ ಏಕೆ?**

ಉತ್ತರ : ತಾಯಿಯ ಗರ್ಭದಲ್ಲಿರುವ ಮಗುವಿನ ಲಿಂಗವನ್ನು ಪತ್ತೆ ಹಚ್ಚಿ ಅದು ಹೆಣ್ಣು ಶಿಶುವಾಗಿದ್ದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದರ ಮೂಲಕ

ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿವೆ. ಆದ್ದರಿಂದ ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರವಾಗಿದೆ.

**6. ಹೆಣ್ಣು ಭ್ರೂಣ ಹತ್ಯೆಯಂತಹ ಪ್ರಕರಣಗಳಿಂದ ಆಗುವ ದುಷ್ಪರಿಣಾಮಗಳಾವುವು?**

ಉತ್ತರ : ಹೆಣ್ಣು ಭ್ರೂಣ ಹತ್ಯೆಗಳಂತಹ ಪ್ರಕರಣಗಳಿಂದ ಸ್ತ್ರೀಪುರುಷರ ಲಿಂಗಾನುಪಾತದಲ್ಲಿ ಏರುಪೇರು, ಲಿಂಗ ತಾರತಮ್ಯತೆ, ಹೆಣ್ಣಿನ ಅಪಮೌಲ್ಯೀಕರಣ ಮುಂತಾದ ದುಷ್ಪರಿಣಾಮಗಳು ಉಂಟಾಗುತ್ತಿವೆ.

**7. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ ಪ್ರತಿಯೊಬ್ಬ ಮನುಷ್ಯನು ಆರೋಗ್ಯವಾಗಿರಬೇಕಾದರೆ ದಿನಕ್ಕೆ ಎಷ್ಟು ಪ್ರಮಾಣದ ಕ್ಯಾಲೋರಿ ಇರುವ ಆಹಾರ ಬೇಕು?**

ಉತ್ತರ : ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ ಭಾರತದಲ್ಲಿ ಸರಾಸರಿ ದಿನಕ್ಕೆ ಕನಿಷ್ಠ 1820 ಕ್ಯಾಲೋರಿ ಇರುವ ಆಹಾರ ಅಗತ್ಯವಾಗಿ ಬೇಕು.

**8. ಜನರು ಹಸಿವು ಮತ್ತು ಪೋಷಕಾಂಶಗಳಿಂದ ಬಳಲುವವರು ಎಂದು ಹೇಗೆ ನಿರ್ಧರಿಸಲಾಗುತ್ತದೆ?**

ಉತ್ತರ : ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ ಭಾರತದಲ್ಲಿ ದಿನಕ್ಕೆ ಕನಿಷ್ಠ ಅಗತ್ಯಕ್ಕಿಂತ ಅಂದರೆ 1632ಕ್ಕಿಂತ ಕಡಿಮೆ ಕ್ಯಾಲೋರಿ ಇರುವ ಆಹಾರ ಪಡೆಯುವವರು ಹಸಿವು ಮತ್ತು ಪೋಷಕಾಂಶಗಳಿಂದ ಬಳಲುವವರು ಎಂದು ನಿರ್ಧರಿಸಲಾಗುತ್ತದೆ.

**10. ಬಾಲ್ಯ ವಿವಾಹ ಎಂದರೇನು?**

ಉತ್ತರ : ಕಾನೂನಿನ ಪ್ರಕಾರ ಬಾಲ್ಯವಿವಾಹ ಎಂದರೆ 18 ವರ್ಷದೊಳಗಿನ ಹುಡುಗಿಗೆ ಅಥವಾ 21 ವರ್ಷದೊಳಗಿನ ಹುಡುಗನಿಗೆ ಮದುವೆ ಮಾಡಿದರೆ ಅದನ್ನು ಬಾಲ್ಯವಿವಾಹ ಎಂದು ಕರೆಯಲಾಗುತ್ತದೆ.

**11. ಹೆಣ್ಣು ಮಕ್ಕಳಿಗೆ ಮದುವೆಯಾಗಲು 18 ವರ್ಷವನ್ನು ಯಾಕೆ ನಿಗದಿಪಡಿಸಲಾಗಿದೆ?**

ಉತ್ತರ : ಯಾವುದೇ ಹೆಣ್ಣಿಗೆ 'ಮದುವೆ' ಎಂಬ ಪದ್ಧತಿಗೆ ಒಳಗಾಗಬೇಕಾದರೆ ಅವಳ ದೇಹ, ಮನಸ್ಸು, ಗರ್ಭಕೋಶ, ಮಾನಸಿಕ, ಬೌದ್ಧಿಕ, ಒಟ್ಟಾರೆ ಶಾರೀರಿಕ ಸಾಮರ್ಥ್ಯ ಬೆಳೆಯಲು 18 ವರ್ಷ ಬೇಕು. ಆದ್ದರಿಂದ ಹೆಣ್ಣು ಮಕ್ಕಳಿಗೆ ಮದುವೆಯಾಗಲು 18 ವರ್ಷ ನಿಗದಿಪಡಿಸಲಾಗಿದೆ.

**12. ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸಹಿ ಹಾಕಿದ್ದು ಯಾವಾಗ?**

ಉತ್ತರ : ಭಾರತ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ 1992 ಡಿಸೆಂಬರ್ 11ರಂದು ಸಹಿ ಹಾಕಿತು.

**13. ಬಾಲ್ಯ ವಿವಾಹ ನಿಷೇಧ ಕಾಯಿದೆಯು ಎಷ್ಟು ಪ್ರಮಾಣದ ಶಿಕ್ಷೆಯನ್ನು ಘೋಷಿಸಿದೆ?**

ಉತ್ತರ : ಬಾಲ್ಯವಿವಾಹ ನಡೆದಲ್ಲಿ ಮದುವೆ ಮಾಡಿದ, ಮಾಡಿಸಿದ, ಕುಮ್ಮಕ್ಕು ನೀಡಿದ, ಸಹಾಯ ಮಾಡಿದ ಭಾಗವಹಿಸಿದವರೆಲ್ಲರೂ 2 ವರ್ಷ ಜೈಲು, 1 ಲಕ್ಷ ರೂ. ದಂಡ ಶಿಕ್ಷೆ ವಿಧಿಸಲಾಗುತ್ತದೆ.

**14. ಬಾಲ್ಯ ವಿವಾಹ ನಿಷೇಧ ಕಾಯಿದೆಯ ಪ್ರಕಾರ ಯಾರು ಯಾರು ಅಪರಾಧಿಗಳಾಗುತ್ತಾರೆ?**

ಉತ್ತರ : ಬಾಲ್ಯ ವಿವಾಹ ನಿಷೇಧ ಕಾಯಿಯಲ್ಲಿ ಇರುವ ಕಾಲಂ – 9.10.11 ರ ಪ್ರಕಾರ ಬಾಲ್ಯವಿವಾಹ ಮಾಡಿಸಿದ ಪೂಜಾರಿ, ಅಡುಗೆಯವರು, ಶಾಮಿಯಾನದವರು, ಫೋಟೋಗ್ರಾಫರ್, ವೀಡಿಯೋಗ್ರಾಫರ್, ವಾಲಗದವರು, ವಾಹನ ಚಾಲಕರು ಹಾಗೂ ಮದುವೆಯಲ್ಲಿ ಭಾಗವಹಿಸಿದ ಎಲ್ಲರೂ ಅಪರಾಧಿಗಳಾಗುತ್ತಾರೆ.

**15. ಮಕ್ಕಳ ಮಾರಾಟ ಮತ್ತು ಸಾಗಾಣಿಕೆ ಎಂದರೇನು?**

ಉತ್ತರ : ಮಕ್ಕಳ ಮಾರಾಟ ಮತ್ತು ಸಾಗಾಣಿಕೆ ಎಂದರೆ – 18 ವರ್ಷದೊಳಗಿನ ಯಾವುದೇ ವ್ಯಕ್ತಿಯ ನೇಮಕಾತಿ, ಸಾಗಾಣಿಕೆ, ವರ್ಗಾವಣೆ, ಆಶ್ರಯ, ರವಾನಿಸುವುದು, ಸ್ವಾದೀನ ಪಡಿಸುವುದು ಅಥವಾ ಶೋಷಣೆಯ ಉದ್ದೇಶಕ್ಕಾಗಿ ನಡೆಯುವ ಕೃತ್ಯವನ್ನು ಮಕ್ಕಳ ಮಾರಾಟ ಮತ್ತು ಸಾಗಾಣಿಕೆ ಎಂದು ಕರೆಯುತ್ತಾರೆ.

**16. ಮಕ್ಕಳ ಸಾಗಾಣಿಕೆಗೆ ಸಂಬಂಧಿಸಿದಂತೆ ಯಾವ ಪ್ರಕರಣವನ್ನು ದಾಖಲಿಸಿ ಶಿಕ್ಷೆ ನೀಡಬಹುದು?**

ಉತ್ತರ : ಮಕ್ಕಳ / ಮಹಿಳೆಯರ ಸಾಗಾಣಿಕೆ ಸಂಬಂಧಿಸಿದಂತೆ ಐಪಿಸಿ–370 ತಂತೆ ಪ್ರಕರಣ ದಾಖಲಿಸಿ, ಅವರಿಗೆ 10 ವರ್ಷ ಅಥವಾ ಜೀವಾವಧಿ ಶಿಕ್ಷೆಗೆ ಒಳಪಡಿಸಲು ಅವಕಾಶವಿದೆ.

**16. ಲಿಂಗತಾರತಮ್ಯ ಎಂದರೇನು?**

ಉತ್ತರ : ಸ್ತ್ರೀ ಪುರುಷರ ನಡುವಿನ ತಾರತಮ್ಯವನ್ನು ಲಿಂಗತಾರತಮ್ಯ ಎಂದು ಕರೆಯುತ್ತಾರೆ.

**17. ಹೆಣ್ಣು ಭ್ರೂಣ ಹತ್ಯೆಯಂತಹ ಪ್ರಕರಣಗಳಿಂದ ಆಗುವ ದುಷ್ಪರಿಣಾಮಗಳಾವುವು?**

ಉತ್ತರ : ಹೆಣ್ಣು ಭ್ರೂಣ ಹತ್ಯೆಗಳಂತಹ ಪ್ರಕರಣಗಳಿಂದ ಸ್ತ್ರೀಪುರುಷರ ಲಿಂಗಾನುಪಾತದಲ್ಲಿ ಏರುಪೇರು, ಲಿಂಗ ತಾರತಮ್ಯತೆ, ಹೆಣ್ಣಿನ ಅಪಮೌಲ್ಯೀಕರಣ ಮುಂತಾದ ದುಷ್ಪರಿಣಾಮಗಳು ಉಂಟಾಗುತ್ತಿವೆ.

**18. ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಕಳ್ಳ ವ್ಯವಹಾರದ ನಂತರ ಎರಡನೇ ಅತ್ಯಂತ ದೊಡ್ಡ ವ್ಯವಹಾರ ಅಥವಾ ಮಾರಾಟ ಯಾವುದು?**

ಉತ್ತರ : ಮಕ್ಕಳ ಕಳ್ಳ ಸಾಗಾಣಿಕೆಯು ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಕಳ್ಳ ವ್ಯವಹಾರದ ನಂತರ ಎರಡನೇ ಅತ್ಯಂತ ದೊಡ್ಡ ವ್ಯವಹಾರ ಅಥವಾ ಮಾರಾಟವಾಗಿದೆ.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986ರ 2016ರ ತಿದ್ದುಪಡಿಯಲ್ಲಿರುವ ಪ್ರಮುಖ ಅಂಶಗಳೇನು?**

**ಉತ್ತರ : ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986ರ 2016ರ ತಿದ್ದುಪಡಿಯಲ್ಲಿರುವ ಪ್ರಮುಖ ಅಂಶಗಳು –**

- ಈ ಕಾಯ್ದೆ ಪ್ರಕಾರ 14 ವರ್ಷದೊಳಗಿನ ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ, ಯಾವುದೇ ಕ್ಷೇತ್ರದಲ್ಲಿ, ಎಲ್ಲಿಯೂ ಕೂಡ ದುಡಿಸುವಂತಿಲ್ಲ. ದುಡಿಮೆಗೆ ಇಟ್ಟುಕೊಳ್ಳುವಂತಿಲ್ಲ.
- ಈ ಕಾಯ್ದೆಯ ಪರಿಚ್ಛೇದದ – 14ರ ಪ್ರಕಾರ ಮಕ್ಕಳನ್ನು ದುಡಿಮೆಯಲ್ಲಿ ಇಟ್ಟು ಕೊಳ್ಳುವವರಿಗೆ 2 ವರ್ಷದ ತನಕ ಜೈಲು ಮತ್ತು ರೂ. 50,000/– ತನಕ ದಂಡ ವಿಧಿಸಲಾಗುತ್ತದೆ.
- ಯಾವುದೇ ಕುಟುಂಬದವರೂ ಕೂಡ ಅವರ ಹೊಲ, ಗದ್ದೆ, ವ್ಯಾಪಾರಗಳು ಅವರ 14 ವರ್ಷದೊಳಗಿನ ಅವರ ಸ್ವಂತ ಮಕ್ಕಳನ್ನು ಕೂಡ "ಶಾಲಾ" ಅವಧಿಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವಮತಿಲ್ಲ.
- ಒಂದು ವೇಳೆ ಕೆಲಸಕ್ಕೆ ಇಟ್ಟುಕೊಂಡರೆ ಮಕ್ಕಳ ತಂದೆ, ತಾಯಿ ಅಥವಾ ಕುಟುಂಬಸ್ಥರೇ ಮಾಲಿಕರಾಗಿ ಅಪರಾಧಿಗಳಾಗುತ್ತಾರೆ. ಅವರಿಗೆ 10 ಸಾವಿರ ರೂ. ದಂಡ ವಿಧಿಸಲಾಗುತ್ತದೆ.
- ಈ ಕಾಯ್ದೆಯು 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಹದಿಹರೆಯದವರು ಎಂದು ಹೇಳುತ್ತದೆ.
- ಜೊತೆಗೆ 15 ರಿಂದ 18 ವರ್ಷದೊಳಗಿನ ಯಾವುದೇ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವಂತಿಲ್ಲ.
- ಒಂದು ವೇಳೆ ದುಡಿಸಿದರೆ ಎರಡು ವರ್ಷ ಜೈಲು, ರೂ. 50,000/– ದಂಡ ವಿಧಿಸಲಾಗುತ್ತದೆ.

**2. ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986ರ 2016ರ ತಿದ್ದುಪಡಿಯ ಪ್ರಕಾರ 18 ವರ್ಷದೊಳಗಿನ ಮಕ್ಕಳನ್ನು ಯಾವ ಯಾವ ಕ್ಷೇತ್ರಗಳಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವಂತಿಲ್ಲ?**

ಉತ್ತರ : ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986ರ 2016ರ ತಿದ್ದುಪಡಿ ಕಾಯ್ದೆಯು 1948ರ ಕೈಗಾರಿಕೆ ಕಾಯ್ದೆಯಲ್ಲಿ ಗುರುತಿಸಿದ 29 ಕ್ಷೇತ್ರಗಳ ಜೊತೆಗೆ 2 ಕ್ಷೇತ್ರ ಸೇರಿಸಿ ಒಟ್ಟು 31 ಕ್ಷೇತ್ರಗಳನ್ನು ಅಪಾಯಕಾರಿ ಎಂದು ಗುರುತಿಸಿದೆ. ಉದಾ : ಗಣಿಗಾರಿಕೆ, ಸ್ಫೋಟಕ ವಸ್ತು ತಯಾರಿಕೆ, ಉರಿಯುವ ಸಾಮಗ್ರಿಗಳ ಉತ್ಪಾದನಾ ಘಟಕ, ಕಬ್ಬಿಣ ಮತ್ತು ಸ್ಟೀಲ್ ತಯಾರಿಕಾ ಘಟಕ, ಮೋಟಾರ್ ಸೈಕಲ್ ಮತ್ತು ವಾಹನ ರಿಪೇರಿ, ಸಿಮೆಂಟ್, ರಬ್ಬರ್, ರಾಸಾಯನಿಕ ಪದಾರ್ಥ ಉತ್ಪಾದನಾ ಘಟಕಗಳಲ್ಲಿ 18 ವರ್ಷದೊಳಗಿನ ಯಾವುದೇ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುವಂತಿಲ್ಲ. ಒಂದು ಪಕ್ಷ ಇಟ್ಟುಕೊಂಡರೆ ಅದು ಶಿಕ್ಷಾರ್ಹ ಅಪರಾಧ.

**3. ಮಕ್ಕಳ ದುಡಿಮೆ ಅಥವಾ ಬಾಲಕಾರ್ಮಿಕತೆಗೆ ಕಾರಣಗಳೇನು?**

**ಉತ್ತರ : ಮಕ್ಕಳ ದುಡಿಮೆ ಅಥವಾ ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳು –**

- ಮಕ್ಕಳ ಹಕ್ಕುಗಳನ್ನು ಗೌರವಿಸಲು, ಅವುಗಳನ್ನು ರಕ್ಷಣೆ ಮಾಡಲು ಅಗತ್ಯವಾಗಿ ಬೇಕಾದ ಸಾಮಾಜಿಕ ಪರಿಸರವಿಲ್ಲದಿರುವುದು.
- ಕಡಿಮೆ ಕೂಲಿಗೆ, ಹೆಚ್ಚು ದುಡಿಮೆಯನ್ನು ಹೆಚ್ಚು ಬಯಸುವ ಮಾಲೀಕರ ವರ್ಗದ ಸ್ವಾರ್ಥ ಲಾಭಕೋರತನವು ಮಕ್ಕಳ ದುಡಿಮೆಯನ್ನು ಹೆಚ್ಚು ಮಾಡಲು ಕಾರಣವಾಗಿದೆ.
- ಬರದಿಂದ ಉಂಟಾಗುವ ಕೃಷಿ ಸಮಾಜದ ಬಿಕ್ಕಟ್ಟುಗಳು, ವಲಸೆ, ಪೋಷಕರ ದುಶ್ಚಟಗಳು ಮಕ್ಕಳ ದುಡಿಮೆ ಹೆಚ್ಚಲು ಕಾರಣವಾಗಿವೆ.
- ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳು ಪರಿಣಾಮಕಾರಿಯಾಗಿ ಅನಷ್ಠಾನವಾಗದಿರುವುದು,

- ಎಲ್ಲಾ ಮಕ್ಕಳಿಗೂ 10ನೇ ತರಗತಿವರೆಗೆ ಶಿಕ್ಷಣ ಸಂಪೂರ್ಣ ಉಚಿತವಾಗಿ ದೊರಕದಿರುವುದು ಮಕ್ಕಳ ದುಡಿಮೆಯನ್ನು ಹೆಚ್ಚಿಸಿದೆ.
- ಕುಟುಂಬದ ಆರ್ಥಿಕ ಸ್ಥಿತಿ, ಕನಿಷ್ಠ ಕೂಲಿ, ಭೂಸುಧಾರಣಾ ಕಾಯ್ದೆಯ ಅನುಷ್ಠಾನದ ಕೊರತೆಗಳು ಸಹ ಬಾಲಕಾರ್ಮಿಕರನ್ನು ಹೆಚ್ಚು ಮಾಡಿವೆ.

**4. ಮಕ್ಕಳ ದುಡಿಮೆ ಅಥವಾ ಬಾಲಕಾರ್ಮಿಕತನದಿಂದಾಗುವ ದುಷ್ಪರಿಣಾಮಗಳಾವುವು?**

**ಉತ್ತರ : ಮಕ್ಕಳ ದುಡಿಮೆ ಅಥವಾ ಬಾಲಕಾರ್ಮಿಕತನದಿಂದಾಗುವ ದುಷ್ಪರಿಣಾಮಗಳು –**

- ಬಾಲಕಾರ್ಮಿಕತೆಯು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಅತ್ಯಂತ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡುತ್ತದೆ.
- ಚಿಕ್ಕ ವಯಸ್ಸಿನಲ್ಲಿಯೇ ದುಡಿಮೆಯಲ್ಲಿ ಭಾಗವಹಿಸುವುದರಿಂದ, ಕಲಿಕೆಯ ವಯಸ್ಸಿನಲ್ಲಿ ಶಿಕ್ಷಣದಿಂದ ವಂಚಿತರಾಗಿ ಅನಕ್ಷರಸ್ಥರಾಗುತ್ತಾರೆ.
- ಮಕ್ಕಳ ದುಡಿಮೆಯು ಕುಟುಂಬಗಳ ಸಾಮಾಜಿಕ ಚಲನೆ, ಆರ್ಥಿಕ ಚಲನೆ ಕುಸಿಯುವಂತೆ ಮಾಡುತ್ತದೆ.
- ಆರ್ಥಿಕ ಸಮಸ್ಯೆಯಿಂದ ಕುಟುಂಬಗಳಲ್ಲಿ ಮಕ್ಕಳು ಮತ್ತೆ ಮತ್ತೆ ದುಡಿಮೆಗೆ, ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾಗುತ್ತಿರುತ್ತಾರೆ.
- ಇಂತಹ ಬಿಕ್ಕಟ್ಟುಗಳು ಬಾಲ್ಯವಿವಾಹ, ಮಕ್ಕಳ ಮಾರಾಟ ಮತ್ತು ಸಾಗಾಣಿಕೆ ಮಾಡುವ, ಸಮಾಜ ವಿರೋಧಿ ಚಟುವಟಿಕೆಗೆ ಅವಕಾಶ ಮಾಡಿಕೊಡುತ್ತದೆ.
- ಮಕ್ಕಳು ಚಿಕ್ಕ ವಯಸ್ಸಿನಲ್ಲಿ, ಅದರಲ್ಲಿಯೂ ಹೆಣ್ಣು ಮಕ್ಕಳು ದೌರ್ಜನ್ಯ, ಹಿಂಸೆ, ಲೈಂಗಿಕ ಶೋಷಣೆಗೆ ಬಲಿಯಾಗುವ ಸಾಧ್ಯತೆ ಹೆಚ್ಚಾಗುತ್ತದೆ.
- ಚಿಕ್ಕ ವಯಸ್ಸಿನಲ್ಲಿ ವಿವಿಧ ಕಾಯಿಲೆಗೆ ತುತ್ತಾಗಿ, ಅಂಗವಿಕಲರಾಗುವ ಸಾಧ್ಯತೆಗಳು ಹೆಚ್ಚುತ್ತವೆ.

**5. ಬಾಲ ಕಾರ್ಮಿಕತನವನ್ನು ಹೋಗಲಾಡಿಸಲು ಇರುವ ಪರಿಹಾರೋಪಾಯಗಳೇನು?**

**ಉತ್ತರ : ಬಾಲ ಕಾರ್ಮಿಕತನವನ್ನು ಹೋಗಲಾಡಿಸಲು ಇರುವ ಪರಿಹಾರೋಪಾಯಗಳು –**

- 18 ವರ್ಷದೊಳಗಿನ ಎಲ್ಲಾ ಮಕ್ಕಳು ಶೇ. 100 ಶಾಲಾದಾಖಲಾತಿ ಆಗಿ 18 ವರ್ಷದ ತನಕ ನಿರಂತರ ಶಾಲಾ ಶಿಕ್ಷಣವನ್ನು ಪೂರೈಸುವುದು.
- ಎಲ್ಲಾ ಸಂದರ್ಭಗಳಲ್ಲಿ ಲಿಂಗ ಸಮಾನತೆಯನ್ನು ಕಾಪಾಡುವುದು ಮತ್ತು ತರುವುದು.
- ಅಸಹಾಯಕ ಕುಟುಂಬಗಳು ಬದುಕಿಗೆ ವಲಸೆ / ಗುಳೆ ಹೋಗುವುದನ್ನು ತಡೆಗಟ್ಟಿ ಅವರಿಗೆ ಉದ್ಯೋಗಾವಕಾಶ ಕಲ್ಪಿಸುವುದು.
- ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ/ಮಾರಾಟ ತಡೆ ಕುರಿತು ಅರಿವನ್ನು ಹೆಚ್ಚಿಸುವುದು.
- ಮಕ್ಕಳ ರಕ್ಷಣಾತ್ಮಕ ಹಕ್ಕುಗಳನ್ನು ಪಂಚಾಯತಿಗಳು ಜವಾಬ್ದಾರಿಯಿಂದ ನಿರ್ವಹಿಸುವುದು.
- ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು ಚಾಚುತಪ್ಪದೆ ಅನುಷ್ಠಾನಗೊಳಿಸುವುದು.

**6. ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳಾವುವು?**

ಉತ್ತರ : ಹೆಣ್ಣು ಬ್ರೂಣ ಹತ್ಯೆಗೆ ಕಾರಣಗಳೆಂದರೆ –

- ಮಗಳ ಮದುವೆ ಖರ್ಚು, ವರದಕ್ಷಿಣೆ, ಆಕೆಯ ಗಂಡನ ಮನೆಯವರ ನಿರಂತರ ಶೋಷಣೆ.
- ಲೈಂಗಿಕ ಶೋಷಣೆ ಮತ್ತು ದೌರ್ಜನ್ಯ, ಸಾರ್ವಜನಿಕ ಸ್ಥಳಗಳಲ್ಲಿಯೇ ಹೆಣ್ಣು ಮಕ್ಕಳ ಮೇಲೆ ನಡುತ್ತಿರುವ ದೌರ್ಜನ್ಯಗಳು.
- ವಂಶಪಾರಂಪರ್ಯವಾಗಿ ಬಂದ ಆಸ್ತಿಯ ಹಕ್ಕುದಾರ ಮಗನೇ ಆಗಬೇಕೆಂಬ ಬಯಕೆ.
- ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ವಿರೋಧಿ ನಿಲುವುಗಳು.

**7. 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ – 2012' ಕಾಯಿದೆಯ ಪ್ರಮುಖ ಅಂಶಗಳೇನು? ಅಥವಾ**

**'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ – 2012' ಜಾರಿಗೆ ತರಲು ಕಾರಣಗಳೇನು?**

**ಉತ್ತರ : 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ – 2012 'ಕಾಯಿದೆಯ ಪ್ರಮುಖ ಅಂಶಗಳು – 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ – 2012' ಜಾರಿಗೆ ತರಲು ಕಾರಣಗಳು –**

- ಲೈಂಗಿಕ ದೌರ್ಜನ್ಯ (ಭೇದಕ ಹಠದ ದೌರ್ಜನ್ಯ)
- ಬಲತ್ಕಾರ / ದುರುಪಯೋಗದ / ತೀವ್ರ ಭೇದಕ ಲೈಂಗಿಕ ದೌರ್ಜನ್ಯ.
- ಲೈಂಗಿಕ ಹಲ್ಲೆ.
- ತೀವ್ರ ಸ್ವರೂಪದ ಲೈಂಗಿಕ ಹಲ್ಲೆ.
- ಲೈಂಗಿಕ ಕಿರುಕುಳ.
- ಅಶ್ಲೀಲ ಚಿತ್ರ ತಯಾರಿಕೆಗೆ ಮಕ್ಕಳ ಬಳಕೆ.
- ಅಶ್ಲೀಲ ಚಿತ್ರ ಸಂಗ್ರಹ.

ಈ ಮೇಲೆ ಪ್ರಸ್ತಾಪಿಸಿರುವ ಯಾವುದೇ ರೀತಿಯ ದೌರ್ಜನ್ಯವನ್ನು ಮಕ್ಕಳ ಮೇಲೆ ನಡೆಸಿದಲ್ಲಿ ಹಲ್ಲೆಯ ಸ್ವರೂಪವನ್ನಾಧರಿಸಿ ಶಿಕ್ಷೆ ವಿಧಿಸಲು ಈ ಕಾಯ್ದೆ ಅವಕಾಶ ಕಲ್ಪಿಸಿದೆ.

**8. ಹಸಿವಿನ ಸೂಚಕಗಳನ್ನು ತಿಳಿಸಿ. ಅಥವಾ ಹಸಿವಿನ ಸೂಚಕವನ್ನು ಹೇಗೆ ಕಂಡು ಹಿಡಿಯಲಾಗುವುದು?**

**ಉತ್ತರ : ಹಸಿವಿನ ಸೂಚಕಗಳನ್ನು ಕೆಳಕಂಡ ಮೂರು ಪ್ರಮುಖ ಅಂಶಗಳ ಸರಾಸರಿಯಿಂದ ತಿಳಿಯಬಹುದು.**

- ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವರ ಶೇಕಡವಾರು ಪ್ರಮಾಣ.
- ಸರಾಸರಿ ತೂಕಕ್ಕಿಂತ ಕಡಿಮೆ ತೂಕ ಇರುವ 5 ವರ್ಷದವರೆಗಿನ ಮಕ್ಕಳ ಶೇಕಡವಾರು ಪ್ರಮಾಣ.
- 5 ವರ್ಷದವರೆಗಿನ ಮಕ್ಕಳ ಮರಣದ ಶೇಕಡವಾರು ಪ್ರಮಾಣ.

**9. ಅಪೌಷ್ಠಿಕತೆಯ ಬಗ್ಗೆ 2011ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–4ರ ವರದಿಯೇನು?**

ಉತ್ತರ : ಅಪೌಷ್ಠಿಕತೆಯ ಬಗ್ಗೆ 2011ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–4ರ ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿರುವ ಶೇ. 24.3 ರಷ್ಟು ಮಹಿಳೆಯರ ಮತ್ತು ನಗರ ಪ್ರದೇಶದ ಶೇ. 16.2 ಮಹಿಳೆಯ ಬಾಡಿ ಮಾಸ್ ಸೂಚಿ ಕನಿಷ್ಠ ಮಟ್ಟಕ್ಕಿಂತಲೂ ಕಡಿಮೆ ತೂಕ ಹೊಂದಿದ್ದಾರೆ. ಗರ್ಭಿಣಿಯರಲ್ಲಿ ಶೇ. 45.2 ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಮದುವೆಯಾಗಿರುವ ಶೇ. 80.4ರಷ್ಟು ಮಹಿಳೆಯರು ಅತ್ಯಂತ ವಿರಳವಾಗಿ ಕೌಟಂಬಿಕ ನಿರ್ಧಾರಗಳಲ್ಲಿ ಭಾಗವಹಿಸುತ್ತಿದ್ದರೆ, ಶೇ. 79.5 ಮಹಿಳೆಯರು ಗಂಡನಿಂದಲೇ ಹಿಂಸೆಗೆ ಒಳಪಡುತ್ತಿದ್ದಾಳೆ ಎಂದು 2011ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–4ರ ವರದಿ ತಿಳಿಸುತ್ತದೆ.

**10. ಮಹಿಳೆ ಮತ್ತು ಪುರುಷರ ನಡುವೆ ಇರುವ ಸ್ಥೂಲವಾದ ಅಸಮಾನತೆಗಳನ್ನು ಅಮರ್ತ್ಯಸೇನರವರು ಹೇಗೆ ಗುರುತಿಸಿದ್ದಾರೆ? ಅಥವಾ ಲಿಂಗ ತಾರತಮ್ಯದ ಪ್ರಕಾರಗಳನ್ನು ತಿಳಿಸಿ.**

**ಉತ್ತರ : ಮಹಿಳೆ ಮತ್ತು ಪುರುಷರ ನಡುವೆ ಇರುವ ಸ್ಥೂಲವಾದ ಅಸಮಾನತೆಗಳನ್ನು ಅಮರ್ತ್ಯಸೇನರವರು ಈ ಕೆಳಗಿನಂತೆ ಗುರುತಿಸಿದ್ದಾರೆ**

**ಲಿಂಗತಾರತಮ್ಯದ ಪ್ರಕಾರಗಳು**

- ಜನನ ಪ್ರಮಾಣದಲ್ಲಿ ಅಸಮಾನತೆ.
- ಮೂಲಸೌಕರ್ಯದಲ್ಲಿ ಅಸಮಾನತೆ.
- ಅವಕಾಶಗಳಲ್ಲಿ ಅಸಮಾನತೆ.
- ಒಡೆತನದ ಅಸಮಾನತೆ.
- ಕೌಟಂಬಿಕ ಅಸಮಾನತೆ.

**11. ಬಾಲ್ಯ ವಿವಾಹ ಮಾಡುವುದರಿಂದ ಹೆಣ್ಣು ಮಕ್ಕಳ ಮೇಲಾಗುವ ದುಷ್ಪರಿಣಾಮಗಳೇನು? ಅಥವಾ ಬಾಲ್ಯ ವಿವಾಹ ಯಾಕೆ ಮಾಡಬಾರದು?**

**ಉತ್ತರ : ಬಾಲ್ಯ ವಿವಾಹ ಮಾಡುವುದರಿಂದ ಹೆಣ್ಣು ಮಕ್ಕಳ ಮೇಲಾಗುವ ದುಷ್ಪರಿಣಾಮಗಳು –**

- ವೈದ್ಯಕೀಯ ಸಂಶೋಧನೆಯ ಪ್ರಕಾರ ಹೆಣ್ಣುಮಕ್ಕಳು ಗರ್ಭ ಧರಿಸಲು ಅಂದರೆ ಗರ್ಭಕೋಶ ಸಮರ್ಥವಾಗಿ ಬೆಳೆಯಲು 18 ವರ್ಷ ಬೇಕು.
- ಒಂದು ವೇಳೆ ಬಾಲ್ಯವಿವಾಹವಾಗಿ ಹೆಣ್ಣು ಗರ್ಭ ಧರಿಸಿದರೆ ಭ್ರೂಣಕ್ಕೆ ತೊಂದರೆಯಾಗಿ ರಕ್ತಸ್ರಾವವಾಗಿ, ಭ್ರೂಣ ಸಾಯುವ ಸಾಧ್ಯತೆಗಳೇ ಹೆಚ್ಚು.
- ಚಿಕ್ಕ ವಯಸ್ಸಿನಲ್ಲಿ ಗರ್ಭ ಧರಿಸುವುದರಿಂದ ಹೆರಿಗೆಯ ಸಮಯದಲ್ಲಿ ತಾಯಿ ಸಾವಿಗೆ ಒಳಗಾಗುವ ಸಾಧ್ಯತೆ ಹೆಚ್ಚು.
- ಈ ಕಾರಣಕ್ಕೆ ಹೆಣ್ಣಿಗೆ 18 ವರ್ಷ ಆದ ಮೇಲೆಯೇ ಮದುವೆ ಮಾಡಬೇಕು ಎಂದು ಕಾನೂನು ರೂಪಿಸಲಾಗಿದೆ.

**12. ಬಾಲ್ಯ ವಿವಾಹಕ್ಕೆ ಕಾರಣಗಳೇನು?**

**ಉತ್ತರ : ಬಾಲ್ಯ ವಿವಾಹಕ್ಕೆ ಕಾರಣಗಳು**

- ಬಾಲ್ಯ ವಿವಾಹಕ್ಕೆ ಪ್ರಮುಖ ಕಾರಣ 'ಲಿಂಗ ತಾರತಮ್ಯ'. ಹೆಣ್ಣು ಬೇರೆಯವರ ಮನೆಗೆ ಹೋಗುವವಳು ಅವಳನ್ನು ಬೇಗ ಮದುವೆ ಮಾಡಿ ಕಳಿಸಬೇಕು ಎಂಬ ನಂಬಿಕೆ.
- ಬಾಲ್ಯ ವಿವಾಹಕ್ಕೆ ಪ್ರಮುಖ ಕಾರಣ ಶಿಕ್ಷಣ ಇಲ್ಲದಿರುವಿಕೆ. ಬಾಲಕಾರ್ಮಿಕತೆ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ.
- ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ.

- ಶಿಕ್ಷಣ ವ್ಯವಸ್ಥೆಯಲ್ಲಿ ಕಾನೂನುಗಳ ಅನುಷ್ಠಾನದ ಕೊರತೆ.
- ಶಿಕ್ಷಣಕ್ಕೆ ಸಮಾಜದ/ ಸಮುದಾಯಗಳ/ ಸಾರ್ವಜನಿಕರ ಅಸಹಕಾರ.
- ಗಂಡು ಮತ್ತು ಹೆಣ್ಣು ಮಕ್ಕಳ ನಡುವಿನ ಬೇಧಭಾವ.
- ಮಕ್ಕಳ ಹಕ್ಕುಗಳ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ದೋಷಪೂರಿತವಾದ ಅನುಷ್ಠಾನ.

**13. ಬಾಲ್ಯ ವಿವಾಹದ ದುಷ್ಪರಿಣಾಮಗಳಾವುವು?**

**ಉತ್ತರ : ಬಾಲ್ಯ ವಿವಾಹದ ದುಷ್ಪರಿಣಾಮಗಳು –**

- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತವಾಗಿ, ಅವರು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ.
- ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯಗಳು ಹೆಚ್ಚುತ್ತವೆ.
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ – ಬಾಲ್ಯತನ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ಧಕ್ಕೆ, ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ.
- ವಿಶೇಷವಾಗಿ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗುವ ಸಂಭವ ಹೆಚ್ಚು.
- ಹೆಣ್ಣು ಮಕ್ಕಳು ಯಾವುದೇ ಸಾಮಾಜಿಕ ಭದ್ರತೆಗಳಿಲ್ಲದೆ ಆಗಾಗ ದೌರ್ಜನ್ಯಕ್ಕೆ ಒಳಗಾಗುವ ಸಂದರ್ಭಗಳು ಹೆಚ್ಚು.

**14. ಬಾಲ್ಯ ವಿವಾಹಕ್ಕೆ ಪರಿಹಾರೋಪಾಯಗಳೇನು?**

**ಉತ್ತರ : ಬಾಲ್ಯ ವಿವಾಹಕ್ಕೆ ಪರಿಹಾರೋಪಾಯಗಳು –**

- 18 ವರ್ಷದ ತನಕ ಯಾವ ಮಕ್ಕಳು ಶಾಲೆ/ಕಾಲೇಜು ಬಿಡದಿರುವಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ.
- ಶಾಲೆಯ ಹಾಜರಾತಿಯ ಜೊತೆಗೆ 100% ಜನನ ನೋಂದಣಿ ಮತ್ತು ಜನನ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ ಮಾಡುವುದು.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವುದು.
- ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣಕ್ಕೆ ಆಧ್ಯತೆ.
- ಎಲ್ಲೇ ಬಾಲ್ಯವಿವಾಹ ನಡೆದರೂ ತಪ್ಪದೇ ದೂರು ನೀಡುವುದು, ಖಂಡಿಸುವುದು, ಪ್ರಶ್ನಿಸುವುದು.

**15. ಮಕ್ಕಳ ಸಾಗಾಣಿಕೆಗೆ ಕಾರಣಗಳಾವುವು?**

**ಉತ್ತರ : ಮಕ್ಕಳ ಸಾಗಾಣಿಕೆಗೆ ಕಾರಣಗಳು –**

- ಬಾಲಕಾರ್ಮಿಕತೆ, ಬಾಲ್ಯವಿವಾಹ, ಶಾಲೆಬಿಡುವುದು, ಬಡತನ, ಕುಟುಂಬಗಳಲ್ಲಿ ಮಕ್ಕಳ ಬಗ್ಗೆ ಅಸಡ್ಡೆ, ಜೀತಪದ್ಧತಿ ಪ್ರಮುಖ ಕಾರಣಗಳು.
- ಅನಿಯಮಿತ ವಲಸೆ ಮತ್ತು ಸ್ಥಳಾಂತರ,
- ಹೆಚ್ಚಾಗುತ್ತಿರುವ ಸಂಪರ್ಕ ತಂತ್ರಜ್ಞಾನ ಹಾಗು ಇಂಟರ್‌ನೆಟ್ ಬಳಕೆಯು ಕಾರಣಗಳಾಗಿವೆ.
- ಸಾಮಾಜಿಕ ಅಸಮಾನತೆ, ಲಿಂಗ ಅಸಮಾನತೆ, ತಾರತಮ್ಯ, ಕೌಶಲ್ಯಗಳ ಕೊರತೆ, ಹೆಚ್ಚಾಗುತ್ತಿರುವ ಸಾಲದ ಹೊರೆ – ಇವುಗಳೂ ಕಾರಣವಾಗುತ್ತವೆ.

**16. ಮಕ್ಕಳ ಸಾಗಾಣಿಕೆಯಿಂದಾಗುವ ದುಷ್ಪರಿಣಾಮಗಳಾವುವು?**

**ಉತ್ತರ : ಮಕ್ಕಳ ಸಾಗಾಣಿಕೆಯಿಂದಾಗುವ ದುಷ್ಪರಿಣಾಮಗಳು –**

- ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರಕ.
- ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಬಲಿ.
- ಮಕ್ಕಳ ಸಾವು ಮತ್ತು ಗಂಭೀರ ರೋಗದ ಅಪಾಯ/ಹೆಚ್.ಐ.ವಿ/ಲೈಂಗಿಕ ಕಾಯಿಲೆಗೆ ಒಳಗಾಗುವುದು.
- ಅನಗತ್ಯ ಗರ್ಭಧಾರಣೆ, ಬಲವಂತದ ಗರ್ಭಧಾರಣೆ.
- ಕೊಲೆ, ಮಾಧಕ ವ್ಯಸನಗಳಿಗೆ ಬಲಿ ಇತ್ಯಾದಿ.

**17. ಮಕ್ಕಳ ಸಾಗಾಣಿಕೆಯನ್ನು ತಪ್ಪಿಸುವ ಸಲುವಾಗಿ ಕೈಗೊಳ್ಳಬಹುದಾದ ಪರಿಹಾರ ಕ್ರಮಗಳಾವುವು?**

**ಉತ್ತರ : ಮಕ್ಕಳ ಹಕ್ಕು ಅನುಷ್ಠಾನಕ್ಕಾಗಿ ಹಾಗೂ ಬಾಲಕಾರ್ಮಿಕತೆ, ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಇನ್ನಿತರ ಶೋಷಣೆಯ ಮುಕ್ತಿಗಾಗಿ ಕೆಲವು ಕ್ರಮಗಳನ್ನು ಕೈಗೊಳ್ಳಬಹುದು. ಅವುಗಳೆಂದರೆ –**

- ಎಲ್ಲಾ ಸರ್ಕಾರಿ / ಅನುದಾನಿತ / ಅನುದಾನರಹಿತ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಹಕ್ಕುಗಳ ಕ್ಲಬ್" ರಚಿಸಿ ಅನುಷ್ಠಾನಕ್ಕೆ ತರುವುದು.
- ಎಲ್ಲಾ ಸರ್ಕಾರಿ / ಅನುದಾನಿತ / ಅನುದಾನರಹಿತ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಸುರಕ್ಷತಾ ಸಮಿತಿ" ರಚಿಸಿ ಅನುಷ್ಠಾನಕ್ಕೆ ತರುವುದು.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ವರ್ಷ ಕಡ್ಡಾಯವಾಗಿ "ಮಕ್ಕಳ ಗ್ರಾಮ ಸಭೆ"ಗಳನ್ನು ನಡೆಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ "ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ" ರಚಿಸಿ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಡ್ಡಾಯವಾಗಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ" ಸಮಿತಿ ರಚಿಸಿ ಪ್ರತಿ ಎರಡು ತಿಂಗಳಿಗೊಮ್ಮೆ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮಾರಾಟದ ಘಟನೆ ಆಗದಂತೆ ಪರಿಶೀಲನೆ ನಡೆಸುವುದು.
- ರಾಜ್ಯದ ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಒಂದು 'ಬಾಲಿಕಾ ಸಂಘ' ಪ್ರಾರಂಭಿಸಿ ಅದರಲ್ಲಿ 11–18 ವರ್ಷದ ಆ ಕೇಂದ್ರ ವ್ಯಾಪ್ತಿಯ ಎಲ್ಲಾ ಬಾಲಕಿಯರನ್ನು ಸೇರಿಸಿ ಅವರಲ್ಲಿ ಮಕ್ಕಳ ಸಾಗಾಣಿಕೆ ಅವುಗಳ ದುಷ್ಪರಿಣಾಮದ ಬಗ್ಗೆ ಬಾಲಕಿಯರನ್ನು ಸಬಲೀಕರಿಸಬೇಕು.

**9. ಹಸಿವಿನಿಂದಾಗುವ ದುಷ್ಪರಿಣಾಮಗಳೇನು? ಅಥವಾ ಹಸಿವಿನ ಸೂಚಕಗಳು ಯಾವುವು?**

**ಉತ್ತರ : ಹಸಿವಿನಿಂದಾಗುವ ಪರಿಣಾಮಗಳು ಅಥವಾ ಹಸಿವಿನ ಸೂಚಕಗಳು**

- ಬದುಕಿರಲು ಅಗತ್ಯವಾಗಿ ಬೇಕಾದಷ್ಟು ಆಹಾರ ಸಿಗದಿರುವುದು.
- ಸತತ ಆಹಾರದ ಮತ್ತು ಪೋಷಕಾಂಶಗಳ ಕೊರತೆಯಿಂದ ನಿಶ್ಯಕ್ತಿ.
- ತೀವ್ರ ಅನಾರೋಗ್ಯ.
- ವಿಕಲಾಂಗತೆ.
- ಅಕಾಲಿಕ ಮರಣ.

**17. ಭಾರತದ ಸಾಮಾಜಿಕ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.**

**ಉತ್ತರ : ಭಾರತದಲ್ಲಿ ಕಂಡು ಬರುವ ಸಾಮಾಜಿಕ ಸಮಸ್ಯೆಗಳೆಂದರೆ –**

- ಬಾಲಕಾರ್ಮಿಕ ಸಮಸ್ಯೆ
- ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ
- ಹೆಣ್ಣು ಭ್ರೂಣಹತ್ಯೆ
- ಹಸಿವು ಮತ್ತು ಅಪೌಷ್ಟಿಕತೆ
- ಲಿಂಗ ತಾರತಮ್ಯ
- ಬಾಲ್ಯ ವಿವಾಹ
- ಮಕ್ಕಳ ಸಾಗಾಣಿಕೆ ಮತ್ತು ಮಾರಾಟ.

## ಭೂಗೋಳ ಶಾಸ್ತ್ರ

## ಅಧ್ಯಾಯ – 1 ಭಾರತದ ಸ್ಥಾನ ಮತ್ತು ವಿಸ್ತೀರ್ಣ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು.**

1. ಭಾರತವು ಈ ಎರಡು ಅಕ್ಷಾಂಶಗಲ ನಡುವೆ ವಿಸ್ತರಿಸಿದೆ. –
   **$8°4^1$ ಉತ್ತರ ಅಕ್ಷಾಂಶದಿಂದ $37°6^1$ ಉತ್ತರ ಅಂಕ್ಷಾಂಶಗಳ ನಡುವೆ.**
2. ಭಾರತವು ಈ ಎರಡು ರೇಖಾಂಶಗಳ ನಡುವೆ ವಿಸ್ತರಿಸಿದೆ. –
   **$68°7^1$ ಪೂರ್ವ ರೇಖಾಂಶದಿಂದ $97°3^1$ ಪೂರ್ವ ರೇಖಾಂಶಗಳ ನಡುವೆ.**
3. ಭಾರತದ ಅತ್ಯಂತ ದಕ್ಷಿಣ ತುದಿ – **ಇಂದಿರಾ ಪಾಯಿಂಟ್.**
4. ಭಾರತದ ದಕ್ಷಿಣ ತುದಿಯಾದ ಇಂದಿರಾ ಪಾಯಿಂಟ್ ಈ ಅಕ್ಷಾಂಶದ ಮೇಲಿದೆ. – **$6°45^1$ ಉತ್ತ ಅಕ್ಷಾಂಶ.**
5. ಭಾರತದ ಅತ್ಯಂತ ಉತ್ತರ ತುದಿ – **ಜಮ್ಮು & ಕಾಶ್ಮೀರದ ಇಂದಿರಾಕೋಲ್.**
6. ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಅಕ್ಷಾಂಶ –
   **23 1/2° ಕರ್ಕಾಟಕ ಸಂಕ್ರಾಂತಿ ವೃತ್ತ.**
7. ಭಾರತದ ಮಧ್ಯಭಾಗದಲ್ಲಿ ಹಾದು ಹೋಗುವ ರೇಖಾಂಶ –
   **82 1/2° ಪೂರ್ವ ರೇಖಾಂಶ.**
8. ಭಾರತದ ಆದರ್ಶಕಾಲಮಾನವು ಈ ರೇಖಾಂಶವನ್ನಾಧರಿಸಿದೆ. –
   **82 1/2° ಪೂರ್ವ ರೇಖಾಂಶ.**
9. ಭಾರತವು ಪ್ರಪಂಚದ ______ ನೇ ದೊಡ್ಡ ರಾಷ್ಟ್ರ – **7ನೇಯ ದೊಡ್ಡ ರಾಷ್ಟ್ರ.**
10. ಭಾರತದ ಒಟ್ಟು ವಿಸ್ತೀರ್ಣ – **32,87,263 ಚ.ಕಿ.ಮೀ.**
11. ಪ್ರಪಂಚದ ಒಟ್ಟು ವಿಸ್ತೀರ್ಣದಲ್ಲಿ ಭಾರತದ ಶೇ. ಪಾಲು – **ಶೇ. 2.42%.**
12. ಭಾರತವು ಪೂರ್ವ–ಪಶ್ಚಿಮವಾಗಿ ಇರುವ ಅಗಲ – **2933 ಕಿ.ಮೀ.**
13. ಭಾರತವು ದಕ್ಷಿಣ – ಉತ್ತರವಾಗಿ ಇರುವ ಉದ್ದ – **3214 ಕಿ.ಮೀ.**

14. ಭಾರತದ ಒಟ್ಟು ಭೂಮೇರೆಯ ಉದ್ದ – **15,200 ಕಿ.ಮೀ.**

15. ಭಾರತ ಮತ್ತು ಚೀನಾಗಳ ನಡುವಿನ ನೈಸರ್ಗಿಕ ಗಡಿ – **ಹಿಮಾಲಯ ಪರ್ವತಗಳು.**

16. ಭಾರತವು ದ್ವೀಪರಹಿತವಾಗಿ _______ ಕಿ.ಮೀ. ಉದ್ದವಾದ ಕರಾವಳಿ ತೀರವನ್ನು ಹೊಂದಿದೆ. – **6100 ಕಿ.ಮೀ.**

17. ಭಾರತವು ದ್ವೀಪಸಹಿತವಾಗಿ _____ ಕಿ.ಮೀ. ಉದ್ದವಾದ ಕರಾವಳಿ ತೀರವನ್ನು ಹೊಂದಿದೆ. – **7515.5 ಕಿ.ಮೀ.**

18. ಭಾರತವು ______ ದೇಶಗಳ ಜೊತೆಗೆ ಭೂಗಡಿಯನ್ನು ಹಂಚಿಕೊಂಡಿದೆ. – **7 ದೇಶಗಳು.**

19. ಶ್ರೀಲಂಕಾವು ____ ಮತ್ತು _____ಗಳಿಂದ ಭಾರತದಿಂದ ಪ್ರತ್ಯೇಕಗೊಂಡಿದೆ. – **ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿ.**

20. ದೇಶದ ರಾಷ್ಟ್ರೀಯ ರಾಜಧಾನಿ ಕೇಂದ್ರ – **ದೆಹಲಿ.**

21. ಇತ್ತೀಚೆಗೆ ನಿರ್ಮಾಣಗೊಂಡ ಹೊಸ ರಾಜ್ಯ – **ತೆಲಂಗಾಣ.**

22. ಭಾರತವನ್ನು ಆಡಳಿತಾತ್ಮಕ ಅನುಕೂಲಕ್ಕಾಗಿ _____ ರಾಜ್ಯಗಳು ಮತ್ತು ದೆಹಲಿಯೂ ಸೇರಿದಂತೆ ____ ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿದೆ. – **29 ರಾಜ್ಯಗಳು & 07 ಕೇಂದ್ರಾಡಳಿತ ಪ್ರದೇಶಗಳು.**

23. ಭಾರತದಲ್ಲಿ ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡ ರಾಜ್ಯ – **ರಾಜಸ್ತಾನ.**

24. ಭಾರತದಲ್ಲಿ ವಿಸ್ತೀರ್ಣದಲ್ಲಿ ಅತ್ಯಂತ ಚಿಕ್ಕ ರಾಜ್ಯ – **ಗೋವಾ.**

25. ಇಂದಿರಾ ಪಾಯಿಂಟ್ _____ ದ್ವೀಪದಲ್ಲಿದೆ. – **ನಿಕೋಬಾರ್ ದ್ವೀಪ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ವಿಸ್ತೀರ್ಣದಲ್ಲಿ ಭಾರತಕ್ಕಿಂತ ದೊಡ್ಡ ರಾಷ್ಟ್ರಗಳನ್ನು ಪಟ್ಟಿ ಮಾಡಿ.**

ಉತ್ತರ : ರಷ್ಯ, ಕೆನಡಾ, ಚೀನಾ, ಅಮೇರಿಕ ಸಂಯುಕ್ತ ಸಂಸ್ಥಾನ, ಬ್ರೆಜಿಲ್ ಮತ್ತು ಆಸ್ಟ್ರೇಲಿಯಾಗಳು ಭಾರತಕ್ಕಿಂತ ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡ ರಾಷ್ಟ್ರಗಳಾಗಿವೆ.

**2. ಭಾರತದ ನೈಸರ್ಗಿಕ ಗಡಿಗಳನ್ನು ತಿಳಿಸಿ.**

ಉತ್ತರ : ಭಾರತದ ಉತ್ತರಕ್ಕೆ ಹಿಮಾಲಯ ಪರ್ವತಗಳು, ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ಪೂರ್ವಕ್ಕೆ ಬಂಗಾಲ ಕೊಲ್ಲಿ ಮತ್ತು ದಕ್ಷಿಣಕ್ಕೆ ಹಿಂದು ಮಹಾಸಾಗರಗಳು ದೇಶದ ನೈಸರ್ಗಿಕ ಗಡಿಗಳಾಗಿವೆ.

**3. ಭಾರತವು ಯಾವ ಯಾವ ದೇಶಗಳೊಂದಿಗೆ ಭೂಗಡಿ ಮತ್ತು ಜಲಗಡಿಗಳನ್ನು ಹಂಚಿಕೊಂಡಿದೆ? ಅಥವಾ ಭಾರತದ ನೆರೆಯ ರಾಷ್ಟ್ರಗಳಾವುವು?**

ಉತ್ತರ : ಭಾರತವು ವಾಯುವ್ಯದಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ, ಉತ್ತರದಲ್ಲಿ ನೇಪಾಳ, ಭೂತಾನ ಮತ್ತು ಚೀನಾ, ಪೂರ್ವದಲ್ಲಿ ಬಾಂಗ್ಲಾದೇಶ ಮತ್ತು ಮ್ಯೆಯನ್ಮಾರ್ ದೇಶಗಳೊಂದಿಗೆ ಭೂಗಡಿಯನ್ನು, ಮತ್ತು ಶ್ರೀಲಂಕಾದೊಂದಿಗೆ ಜಲಗಡಿಯನ್ನು ಹಂಚಿಕೊಂಡಿದೆ.

## ಅಧ್ಯಾಯ – 2 ಭಾರತದ ಮೇಲ್ಮೈ ಲಕ್ಷಣಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಮೇಲ್ಮೈ ಲಕ್ಷಣಗಳನ್ನಾಧರಿಸಿ ಭಾರತವನ್ನು _____ ಪ್ರಮುಖ ವಿಭಾಗಗಳಾಗಿ ವಿಂಗಡಿಸಲಾಗಿದೆ. – **04 ವಿಭಾಗಗಳು.**

2. ಹಿಮಾಲಯ ಪರ್ವತಗಳು ಭಾರತದಲ್ಲಿ ಪಶ್ಚಿಮದಲ್ಲಿ ಸಿಂಧೂ ನದಿ ಕಂದರದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ನದಿ ಕಂದರದವರೆಗೆ ____ ಕಿ.ಮೀ. ಉದ್ದವಾಗಿದೆ. – **2400 ಕಿ.ಮೀ.**

3. ಹಿಮಾಲಯ ಪರ್ವತಗಳು ______ ಚ.ಕಿ.ಮೀ. ಹರಡಿವೆ. – **5 ಲಕ್ಷ ಚ.ಕಿ.ಮೀ.**

4. ಹಿಮಾಲಯ ಪರ್ವತಗಳ ಸರಾಸರಿ ಅಗಲ – **240 ರಿಂದ 320 ಕಿ.ಮೀ.**

5. ಹಿಮಾಲಯ ಪರ್ವತಗಳಲ್ಲಿ ________ ಸಮಾನಾಂತರ ಸರಣಿಗಳಿವೆ. – **03 ಸಮಾನಾಂತರ ಸರಣಿಗಳು.**

6. ಮಹಾ ಹಿಮಾಲಯ ಸರಣಿಯು ಸಮುದ್ರ ಮಟ್ಟದಿಂದ ಇರುವ ಸರಾಸರಿ ಎತ್ತರ – **6100 ಮೀಟರ್‌ಗಳು.**

7. ಪ್ರಪಂಚದಲ್ಲಿಯೇ ಅತ್ಯಂತ ಎತ್ತರವಾದ ಶಿಖರ – **ಮೌಂಟ್ ಎವರೆಸ್ಟ್ (8848ಮೀ.)**

8. ಮಹಾ ಹಿಮಾಲಯ ಸರಣಿಗಳನ್ನು _______ ಎಂತಲೂ ಕರೆಯಲಾಗುತ್ತದೆ. – **ಹಿಮಾದ್ರಿ.**

9. ಮಹಾ ಹಿಮಾಲಯವನ್ನು ಹಿಮಾದ್ರಿ ಎಂದು ಕರೆಯಲು ಕಾರಣ – **ವರ್ಷವೆಲ್ಲಾ ಹಿಮಾವೃತ್ತವಾಗಿರುವದರಿಂದ.**

10. ಭಾರತದ ಅತ್ಯಂತ ಎತ್ತರವಾದ ಶಿಖರ – **ಕಾರಾಕೋರಂ ಸರಣಿಯಲ್ಲಿರುವ ಕೆ2 ಅಥವಾ ಮೌಂಟ್ ಗಾಡ್ವಿನ್ ಅಸ್ಟಿನ್ (8611 ಮೀ.)**

11. ಒಳ ಹಿಮಾಲಯಕ್ಕಿರುವ ಇನ್ನೊಂದು ಹೆಸರು – **ಹಿಮಾಚಲ್.**

12. ಒಳ ಹಿಮಾಲಯದ ಸರಾಸರಿ ಅಗಲ – **60 ರಿಂದ 80 ಕಿ.ಮೀ.ಗಳು**

13. ಒಳ ಹಿಮಾಲಯದ ಸರಾಸರಿ ಎತ್ತರ – **1500 ರಿಂದ 4500 ಮೀ.ಗಳು.**

14. ಸಿವಾಲಿಕ್ ಬೆಟ್ಟಗಳಿಗಿರುವ ಇನ್ನೊಂದು ಹೆಸರು – **ಹಿಮಾಲಯದ ಪಾದಬೆಟ್ಟಗಳು.**

15. ಸಿವಾಲಿಕ್ ಬೆಟ್ಟಗಳ ಸರಾಸರಿ ಎತ್ತರ – **600 ರಿಂದ 1500 ಮೀ.ಗಳು.**

16. ಸಿವಾಲಿಕ್ ಬೆಟ್ಟಗಳ ಸರಾಸರಿ ಉದ್ದ – **15 ರಿಂದ 150 ಕಿ.ಮೀ.ಗಳು.**

17. ಸಿವಾಲಿಕ್ ಬೆಟ್ಟಗಳು ______ ದಿಂದ _____ ವರೆಗೆ ಹಬ್ಬಿವೆ. – **ಜಮ್ಮು–ಕಾಶ್ಮೀರದಿಂದ ಅರುಣಾಚಲ ಪ್ರದೇಶದವರೆಗೆ.**

18. ಸಿವಾಲಿಕ್ ಬೆಟ್ಟಗಳಲ್ಲಿ ಸಮತಟ್ಟಾದ ತಳವುಳ್ಳ ಕಣಿವೆಗಳಿಗೆ ____ ಎಂದು ಹೆಸರು – **ಡೂನ್ಸ್.**

19. ಉತ್ತರ ಮೈದಾನ ಈ ನದಿಗಳ ಸಂಚಯನ ಕಾರ್ಯದಿಂದ ನಿರ್ಮಾಣಗೊಂಡಿದೆ. – **ಸಟ್ಲೇಜ್, ಗಂಗಾ, ಬ್ರಹ್ಮಪುತ್ರಾ.**

20. ಉತ್ತರದ ಮೈದಾನ ಪೂರ್ವ–ಪಶ್ಚಿಮವಾಗಿ ___ ಕಿ.ಮೀ. ಉದ್ದಕ್ಕೆ ಹರಡಿದೆ. – **2500 ಕಿ.ಮೀ.**

21. ಉತ್ತರ ಮೈದಾನದ ಸರಾಸರಿ ಅಗಲ – **240 ರಿಂದ 340 ಕಿ.ಮೀ.ಗಳು.**

22. ಉತ್ತರ ಮೈದಾನದ ವಿಸ್ತಾರ – **7 ಲಕ್ಷ ಚ.ಕಿ.ಮೀ.ಗಳು.**

23. ಉತ್ತರ ಮಹಾ ಮೈದಾನವಯ ________ ಮಣ್ಣಿನಿಂದ ಆವರಿಸಿದೆ. – **ಮೆಕ್ಕಲು ಮಣ್ಣು.**

24. ಪರ್ಯಾಯ ಪ್ರಸ್ಥಭೂಮಿಯು ______ ಭೂಭಾಗಕ್ಕೆ ಸೇರಿದ್ದು ಪುರಾತನ ಶಿಲೆಗಳಿಂದ ರಚಿತವಾಗಿದೆ. – **ಗೊಂಡ್ವಾನ್ ಭೂಭಾಗ.**

25. ಪರ್ಯಾಯ ಪ್ರಸ್ಥಭೂಮಿಯ ವಿಸ್ತೀರ್ಣ – **16 ಲಕ್ಷ ಚ.ಕಿ.ಮೀ.ಗಳು.**

26. ಪರ್ಯಾಯ ಪ್ರಸ್ಥಭೂಮಿಯ ದಕ್ಷಿಣ ತುದಿ – **ಕನ್ಯಾಕುಮಾರಿ.**

27. ಅರಾವಳಿ ಸರಣಿಯ ಅತಿ ಎತ್ತರವಾದ ಶಿಖರ – **ಅಬು ಪರ್ವತಗಳಲ್ಲಿನ ಗುರುಶಿಖರ (1772 ಮೀ.)**

28. ಪಶ್ಚಿಮ ಘಟ್ಟಗಳು _____ ನದಿ ಕಣಿವೆಯಿಂದ _____ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ ಸಮಾಂತರವಾಗಿ ಹಬ್ಬಿವೆ. – **ತಾಪಿ ನದಿಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ.**

29. ಪಶ್ಚಿಮ ಘಟ್ಟಗಳಿಗಿರುವ ಇನ್ನೊಂದು ಹೆಸರು – **ಸಹ್ಯಾದ್ರಿ ಸರಣಿ ಬೆಟ್ಟಗಳು**

30. ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ – **ಅಣ್ಣಾಮಲೈ ಬೆಟ್ಟಗಳಲ್ಲಿರುವ 'ಆನೈಮುಡಿ' (2695ಮೀ.)**

31. ಪೂರ್ವ ಘಟ್ಟಗಳು ಉತ್ತರದಲ್ಲಿ _______ ನದಿ ಕಣಿವೆಯಿಂದ ದಕ್ಷಿಣದಲ್ಲಿ _____ ಬೆಟ್ಟಗಳವರೆಗೆ ವಿಸ್ತರಿಸಿವೆ. – **ಮಹಾನದಿ ಕಣಿವೆಯಿಂದ ನೀಲಗಿರಿ ಬೆಟ್ಟಗಳವರೆಗೆ.**

32. ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ______ ಬೆಟ್ಟಗಳಲ್ಲಿ ಸಂಧಿಸುತ್ತವೆ. – **ನೀಲಗಿರಿ ಬೆಟ್ಟ.**

33. ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರ – **ಅರ್ಮಕೊಂಡ.**

34. ಪಶ್ಚಿಮ ಕರಾವಳಿಯು ___ ನಿಂದ ___ ವರೆಗೆ ವಿಸ್ತರಿಸಿದೆ. – **ಕಛ್‌ನಿಂದ ಕನ್ಯಾಕುಮಾರಿವರೆಗೆ.**

35. ಪೂರ್ವ ಕರಾವಳಿಯು ____ ನಿಂದ _____ ವರೆಗೆ ವಿಸ್ತರಿಸಿದೆ. – **ಸುವರ್ಣರೇಖಾ ನದಿಯ ಉತ್ತರ ಭಾಗದಿಂದ ಕನ್ಯಾಕುಮಾರಿಯವರೆಗೆ.**

36. ಭಾರತಕ್ಕೆ ಸೇರಿದ ____ ದ್ವೀಪಗಳಿವೆ. – **247 ದ್ವೀಪಗಳು.**

37. _____ ದ್ವೀಪಗಳು ಬಂಗಾಳಕೊಲ್ಲಿಯಲ್ಲಿವೆ. – **204 ದ್ವೀಪಗಳು.**

38. _____ ದ್ವೀಪಗಳು ಅರಬ್ಬಿ ಸಮುದ್ರದಲ್ಲಿವೆ. – **43 ದ್ವೀಪಗಳು.**

39. ಬಂಗಾಳಕೊಲ್ಲಿಯಲ್ಲಿರುವ ದ್ವೀಪಗಳು – **ಅಂಡಮಾನ್ & ನಿಕೋಬಾರ್ ದ್ವೀಪಗಳು.**

40. ಅರಬ್ಬಿ ಸಮುದ್ರದಲ್ಲಿರುವ ದ್ವೀಪಗಳು – **ಲಕ್ಷದ್ವೀಪಗಳು.**

41. ಲಕ್ಷದ್ವೀಪಗಳು _____ ಗಳಿಂದ ನಿರ್ಮಿತವಾಗಿವೆ. – **ಹವಳ**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಹಿಮಾಲಯ ಪರ್ವತಗಳ ಮೂರು ಸಮಾನಾಂತರ ಸರಣಿಗಳನ್ನು ತಿಳಿಸಿ.**

ಉತ್ತರ : ಹಿಮಾಲಯ ಪರ್ವತಗಳ ಮೂರು ಸಮಾನಾಂತರ ಸರಣಿಗಳಿವೆ. ಅವುಗಳೆಂದರೆ – 1. ಮಹಾ ಹಿಮಾಲಯ (ಹಿಮಾದ್ರಿ) 2. ಒಳ ಹಿಮಾಲಯ (ಹಿಮಾಚಲ್) 3. ಸಿವಾಲಿಕ್ ಬೆಟ್ಟಗಳು.

**2. ಮಹಾ ಹಿಮಾಲಯದಲ್ಲಿ ಕಂಡುಬರುವ ಪ್ರಮುಖ ಶಿಖರಗಳು ಯಾವುವು?**

ಉತ್ತರ : ಮಹಾ ಹಿಮಾಲಯದಲ್ಲಿ ಕಂಡುಬರುವ ಪ್ರಮುಖ ಶಿಖರಗಳೆಂದರೆ – ಮೌಂಟ್ ಎವರೆಸ್ಟ್, ಕಾಂಚನಜುಂಗ, ಮಾಕಲು, ಧವಳಗಿರಿ, ಮಾನಸ್ಸು, ನಂದಾದೇವಿ ಇತ್ಯಾದಿ.

**3. ಒಳ ಹಿಮಾಲಯದಲ್ಲಿ ಕಂಡು ಬರುವ ಪ್ರಮುಖ ಗಿರಿಧಾಮಗಳನ್ನು ತಿಳಿಸಿ.**

ಉತ್ತರ : ಒಳ ಹಿಮಾಲಯದಲ್ಲಿ ಕಂಡು ಬರುವ ಆಕರ್ಷಕ ಗಿರಿಧಾಮಗಳೆಂದರೆ – ಶಿಮ್ಲಾ, ರಾಣಿಕೇಟ್, ಮಸ್ಸೂರಿ, ನೈನಿತಾಲ್ ಮತ್ತು ಡಾರ್ಜಲಿಂಗ್.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?**

ಉತ್ತರ : ಮೇಲ್ಮೈ ಲಕ್ಷಣಗಳನ್ನಾಧರಿಸಿ ಭಾರತವನ್ನು ನಾಲ್ಕು ಪ್ರಾಕೃತಿಕ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ –

1. ಉತ್ತರ ಪರ್ವತಗಳು, 2. ಉತ್ತರದ ಮೈದಾನಗಳು
3. ಪರ್ಯಾಯ ಪ್ರಸ್ಥಭೂಮಿ 4. ಕರಾವಳಿ ಮೈದಾನ ಮತ್ತು ದ್ವೀಪಗಳು

**2. ಶಿವಾಲಿಕ್ ಬೆಟ್ಟಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ :**

- ➢ಶಿವಾಲಿಕ್ ಶ್ರೇಣಿಯು ಅತಿ ಕಡಿಮೆ ಎತ್ತರವನ್ನು ಹೊಂದಿದೆ. ಆದ್ದರಿಂದ ಇದನ್ನು ಹಿಮಾಲಯದ ಪಾದಬೆಟ್ಟಗಳೆಂದು ಕರೆಯುವರು.
- ➢ಇವು ಪ್ರಾಧಾನ ಹಿಮಾಲಯದ ದಕ್ಷಿಣ ಭಾಗದಲ್ಲಿವೆ.
- ➢ಇವುಗಳ ಸರಾಸರಿ ಎತ್ತರ 600 ರಿಂದ 1500 ಮೀ. ಮತ್ತು ಅಗಲ 15 ರಿಂದ 150 ಕಿ.ಮೀ.ಗಳು.
- ➢ಇವು ಜಮ್ಮು–ಕಾಶ್ಮೀರದಿಂದ ಅರಣಾಚಲ ಪ್ರದೇಶದವರೆಗೆ ಹಬ್ಬಿವೆ.
- ➢ಇವು ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಹೊಂದಿದ್ದು, ಇವುಗಳನ್ನು 'ಡೂನ್ಸ್' ಎನ್ನುವರು. ಉದಾ : ಡೆಹರಾಡೂನ್.

**3. ಹಿಮಾಲಯ ಪರ್ವತಗಳ (ಉತ್ತರ ಪರ್ವತಗಳ) ಪ್ರಾಮುಖ್ಯತೆಯನ್ನು ತಿಳಿಸಿ.**

**ಉತ್ತರ : ಹಿಮಾಲಯ ಪರ್ವತಗಳ (ಉತ್ತರ ಪರ್ವತಗಳ) ಪ್ರಾಮುಖ್ಯತೆ –**

- ➢ಹಿಮಾಲಯ ಪರ್ವತಗಳು ನೈಸರ್ಗಿಕ ಗಡಿಯಾಗಿದ್ದು, ಪರಕೀಯರ ದಾಳಿಯನ್ನು ತಡೆಗಟ್ಟುತ್ತವೆ.
- ➢ಇವು ಮಧ್ಯ ಏಶಿಯಾದಿಂದ ಬೀಸುವ ಶೀತಗಾಳಿಯನ್ನು ನಿಯಂತ್ರಿಸುತ್ತವೆ.
- ➢ಇವು ಮಳೆ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ನೆರವಾಗುತ್ತವೆ.
- ➢ಉತ್ತರ ಪರ್ವತಗಳ ಇಳಿಜಾರುಗಳಲ್ಲಿ ದಟ್ಟ ಕಾಡುಗಳಿವೆ. ಮತ್ತು ನೆಡುತೋಟದ ಬೆಳೆಗಳಿಗೆ ಸೂಕ್ತವಾಗಿವೆ. ಉದಾ : ಅಸ್ಸಾಂನ ಚಹ ತೋಟಗಳು.
- ➢ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ.
- ➢ಹಲವು ನದಿಗಳ ಉಗಮ ಸ್ಥಾನಗಳಾಗಿವೆ.
- ➢ಇಲ್ಲಿನ ಜಲಪಾತಗಳು ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯುಕ್ತವಾಗಿವೆ.

**4. ಉತ್ತರ ಮೈದಾನಗಳು ಹೇಗೆ ರಚನೆಯಾಗಿವೆ?**

ಉತ್ತರ : ಉತ್ತರ ಮೈದಾನಗಳು ಸಟ್ಲೇಜ್, ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಸಂಚಯನ ಕಾರ್ಯದಿಂದ ನಿರ್ಮಾಣಗೊಂಡಿದ್ದು, ಮೆಕ್ಕಲು ಮಣ್ಣಿನಿಂದ ರಚನೆಯಾಗಿವೆ. ಇವು ಸಮತಟ್ಟಾದ ಮೈದಾನವಾಗಿದ್ದು, ಮೇಲ್ಭಾಗದಲ್ಲಿ ಎಲ್ಲಿಯೂ ಕಲ್ಲುಗಳು ಕಂಡಬರುವುದಿಲ್ಲ.

**5. ಉತ್ತರ ಮೈದಾನಗಳ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ ಉತ್ತರದ ಮಹಾಮೈದಾನಗಳು ಭಾರತದ ಆರ್ಥಿಕಾಭಿವೃದ್ಧಿಗೆ ಹೇಗೆ ಸಹಾಯಕವಾಗಿವೆ?**

**ಉತ್ತರ : ಉತ್ತರ ಮೈದಾನಗಳ ಪ್ರಾಮುಖ್ಯತೆ –**

- ➢ಉತ್ತರ ಮೈದಾನವು ವಿಶಾಲವಾದ ಮೈದಾನವಾಗಿದ್ದು, ಫಲವತ್ತಾಗಿದೆ.
- ➢ಇಲ್ಲಿ ಸರ್ವಕಾಲಿಕ ನದಿಗಳು ಹರಿಯುತ್ತವೆ. ಹೀಗಾಗಿ ಕೃಷಿಗೆ ಉಪಯುಕ್ತವಾಗಿವೆ.
- ➢ಇಲ್ಲಿನ ಸಮತಟ್ಟಾದ ಭೂಮಿಯು ರಸ್ತೆ, ರೈಲು ಮಾರ್ಗಗಳ ನಿರ್ಮಾಣ ಮತ್ತು ಸಂಪರ್ಕ ಮಾಧ್ಯಮಕ್ಕೂ ಯೋಗ್ಯವಾಗಿವೆ.
- ➢ಕೈಗಾರಿಕೀಕರಣ, ನಗರೀಕರಣ ಮತ್ತು ವ್ಯಾಪಾರಕ್ಕೂ ನೆರವಾಗುತ್ತವೆ.
- ➢ಇಲ್ಲಿ ಅನೇಕ ಯಾತ್ರಾ ಸ್ಥಳಗಳಿವೆ.

**6. ಪರ್ಯಾಯ ಪ್ರಸ್ಥಭೂಮಿಯ ರಚನೆಯನ್ನು ತಿಳಿಸಿ.**

**ಉತ್ತರ : ಪರ್ಯಾಯ ಪ್ರಸ್ಥಭೂಮಿಯ ರಚನೆ –**

- ➢ಪರ್ಯಾಯ ಪ್ರಸ್ಥಭೂಮಿಯು ಗೊಂಡ್ವಾನ್ ಭೂಭಾಗಕ್ಕೆ ಸೇರಿದ್ದು, ಪುರಾತನ ಶಿಲೆಗಳಿಂದ ರಚಿತವಾಗಿವೆ.
- ➢ಇದು ಸುಮಾರು 16 ಲಕ್ಷ ಚ.ಕಿ.ಮೀ. ಪ್ರದೇಶವನ್ನಾವರಿಸಿದೆ.
- ➢ಇದು ತ್ರಿಕೋನಾಕಾರದಲ್ಲಿದ್ದು, ಇದರ ದಕ್ಷಿಣ ತುದಿಯು ಕನ್ಯಾಕುಮಾರಿ ಭೂಶಿರವಾಗಿದೆ.
- ➢ಪರ್ಯಾಯ ಪ್ರಸ್ಥಭೂಮಿಯು ಅನೇಕ ಬೆಟ್ಟ ಮತ್ತು ಪ್ರಸ್ಥಭೂಮಿಗಳಿಂದ ಆವರಿಸಿದೆ. ಉದಾ : ಅರಾವಳಿ, ವಿದ್ಯಾ, ಸಾತ್ಪುರ, ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟಗಳು, ಛೋಟಾನಾಗಪುರ ಸರಣಿ, ದಖನ್ ಪ್ರಸ್ಥಭೂಮಿ, ಮಾಳ್ವ ಪ್ರಸ್ಥಭೂಮಿ ಮೊದಲಾದವು.

**7. ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ. ಅಥವಾ ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳಿಗಿಂತ ಹೇಗೆ ಭಿನ್ನವಾಗಿವೆ?**

**ಉತ್ತರ : ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸ –**

| ಪೂರ್ವ ಘಟ್ಟಗಳು | ಪಶ್ಚಿಮ ಘಟ್ಟಗಳು |
|---|---|
| ➢ಪೂರ್ವ ಘಟ್ಟಗಳು ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ ಪೂರ್ವ ಕರಾವಳಿಗೆ ಹೊಂದಿಕೊಂಡಂತೆ ವಿಸ್ತರಿಸಿವೆ. | ➢ಪಶ್ಚಿಮ ಘಟ್ಟಗಳು ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ ಸಮಾಂತರವಾಗಿ ಹಬ್ಬಿವೆ. |
| ➢ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ. ಮತ್ತು ನಿರಂತರವಾಗಿಲ್ಲ. | ➢ಪಶ್ಚಿಮ ಘಟ್ಟಗಳು ಅತ್ಯಂತ ಎತ್ತರವಾಗಿವೆ. ಮತ್ತು ನಿರಂತರವಾಗಿವೆ. |
| ➢ಪೂರ್ವ ಘಟ್ಟಗಳು ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ ಮತ್ತು ಸಮುದ್ರದಿಂದ ದೂರದಲ್ಲಿ ಹರಡಿವೆ. | ➢ಪಶ್ಚಿಮ ಘಟ್ಟಗಳು ಕರಾವಳಿಗೆ ಹೊಂದಿಕೊಂಡಿದ್ದು, ತುಂಬಾ ಕಡಿದಾಗಿವೆ. |
| ➢ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿಲ್ಲ. | ➢ಪಶ್ಚಿಮ ಘಟ್ಟಗಳು ಅನೇಕ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸೃಷ್ಟಿಸಿವೆ. |

**8. ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ ಭಾರತದ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಸಮರ್ಥಿಸಿ.**

**ಉತ್ತರ : ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆ –**

- ➢ಪರ್ಯಾಯ ಪ್ರಸ್ಥಭೂಮಿಯು ಸಮೃದ್ಧ ಖನಿಜಗಳು, ದಟ್ಟ ಕಾಡುಗಳು ಹಾಗೂ ಜೈವಿಕ ವೈವಿಧ್ಯತೆಯಿಂದ ಕೂಡಿವೆ.
- ➢ನೈರುತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಬೀರುತ್ತವೆ.
- ➢ಕಪ್ಪು ಮಣ್ಣಿನಿಂದ ಕೂಡಿದ್ದು, ಕೃಷಿಗೆ ಪೂರಕವಾಗಿವೆ.
- ➢ಅನೇಕ ದಕ್ಷಿಣ ಭಾರತದ ನದಿಗಳಿಗೆ ಉಗಮ ಸ್ಥಾನವಾಗಿದ್ದು, ಜಲಶಕ್ತಿ ತಯಾರಿಕೆಗೆ ಉಪಯುಕ್ತವಾಗಿವೆ.
- ➢ಇಲ್ಲಿ ಗಿರಿಧಾಮಗಳೂ ಇವೆ. ಉದಾ : ಉದಕಮಂಡಲ ( ಊಟಿ)

**9. ಪಶ್ಚಿಮ ಕರಾವಳಿಗೂ ಮತ್ತು ಪೂರ್ವ ಕರಾವಳಿಗೂ ಇರುವ ವ್ಯತ್ಯಾಸ ತಿಳಿಸಿ. ಅಥವಾ ಪೂರ್ವ ಕರಾವಳಿಯು ಪಶ್ಚಿಮ ಕರಾವಳಿಗಿಂತ ಹೇಗೆ ಭಿನ್ನವಾಗಿದೆ.**

**ಉತ್ತರ : ಪಶ್ಚಿಮ ಕರಾವಳಿಗೂ ಮತ್ತು ಪೂರ್ವ ಕರಾವಳಿಗೂ ಇರುವ ವ್ಯತ್ಯಾಸ –**

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| ➢ಪಶ್ಚಿಮ ಕರಾವಳಿ ಮೈದಾನವು ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡುಬರುತ್ತದೆ. | ➢ಪೂರ್ವ ಕರಾವಳಿ ಮೈದಾನವು ಸುವರ್ಣರೇಖಾ ನದಿಯ ಉತ್ತರ ಭಾಗದಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ. |
| ➢ಇದು ಕಛ್‌ನಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ. | ➢ಇದು ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ವಿಸ್ತರಿಸಿದೆ. |
| ➢ಪಶ್ಚಿಮ ಕರಾವಳಿಯು ಕಿರಿದಾಗಿದ್ದು, ಕಡಿದಾದ ಇಳಿಜಾರು ಮತ್ತು ಶಿಲಾಮಯವಾಗಿದೆ. | ➢ಪಶ್ಚಿಮ ಕರಾವಳಿಗಿಂತ ಅಗಲವಾಗಿದೆ. |
| ➢ಇದು ವಿಶಾಲವಾದ ನದಿಮುಖಜ ಭೂಮಿಯನ್ನು ಒಳಗೊಂಡಿಲ್ಲ. | ➢ಇದು ನದಿಮುಖಜ ಭೂಮಿಗಳನ್ನು ನಿರ್ಮಿಸಿದೆ. ಉದಾ : ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿಮುಖಜ ಭೂಮಿಗಳು. |
| ➢ಪಶ್ಚಿಮ ಕರಾವಳಿಯನ್ನು ಕೊಂಕಣ ತೀರ, ಕರ್ನಾಟಕ ತೀರ, ಮಲಬಾರ ತೀರವೆಂದು ಕರೆಯುವರು. | ➢ಪೂರ್ವ ಕರಾವಳಿಯನ್ನು ಉತ್ತರ ಸರ್ಕಾರ್ ಮತ್ತು ಕೋರಮಂಡಲ ತೀರಗಳೆಂದು ಕರೆಯುವರು. |

**10. ಭಾರತದ ಕರಾವಳಿಯ ಪ್ರಾಮುಖ್ಯತೆಯನ್ನು ತಿಳಿಸಿ.**

**ಉತ್ತರ : ಭಾರತದ ಕರಾವಳಿಯ ಪ್ರಾಮುಖ್ಯತೆ –**

- ಭಾರತದ ಕರಾವಳಿ ಮೈದಾನಗಳು ಕೆಲವು ನೈಸರ್ಗಿಕ ಬಂದರುಗಳನ್ನು ಹೊಂದಿವೆ.
- ಭಾರತದ ವ್ಯಾಪಾರ ಅಭಿವೃದ್ಧಿಗೆ ಈ ಬಂದರುಗಳು ಪೂರಕವಾಗಿವೆ. ಉದಾ : ಕಾಂಡ್ಲ, ಮುಂಬಯಿ, ಚನ್ನೈ, ಕೊಲ್ಕತ ಇತ್ಯಾದಿ.
- ಕರಾವಳಿಯು ಮೀನುಗಾರಿಕೆ, ಹಡಗು ನಿರ್ಮಾಣ ಕೈಗಾರಿಕೆ, ಕೃಷಿ ಮತ್ತು ಉಪ್ಪು ಉತ್ಪಾದನೆಗಳಿಗೂ ನೆರವಾಗುತ್ತವೆ.
- ಆಕರ್ಷಕ ಬೀಚಗಳಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುತ್ತವೆ.

**11. ಭಾರತಕ್ಕೆ ಸೇರಿರುವ ದ್ವೀಪಸ್ತೋಮಗಳಾವುವು? ಅವು ಎಷ್ಟಿವೆ?**

ಉತ್ತರ : ಭಾರತಕ್ಕೆ ಸೇರಿದ 247 ದ್ವೀಪಗಳಿವೆ. ಅವುಗಳಲ್ಲಿ 204 ಬಂಗಾಳಕೊಲ್ಲಿಯಲ್ಲಿ ಮತ್ತು 43 ಅರಬ್ಬಿ ಸಮುದ್ರಗಳಲ್ಲಿವೆ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಬಂಗಾಳಕೊಲ್ಲಿಯಲ್ಲಿವೆ. ಲಕ್ಷದ್ವೀಪಗಳು ಅರಬ್ಬಿ ಸಮುದ್ರದಲ್ಲಿದ್ದು, ಅವು ಹವಳ ದ್ವೀಪಗಳಾಗಿವೆ.

## ಅಧ್ಯಾಯ – 3 ಭಾರತದ ವಾಯುಗುಣ

**ಪ್ರಶ್ನೆ 1] ಬಹುಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು.**

1. ಭಾರತದಲ್ಲಿ ______ ಮಾದರಿಯ ವಾಯುಗುಣವಿದೆ. – **ಉಷ್ಣವಲಯದ ಮಾನ್ಸೂನ್ ಮಾದರಿ.**
2. ಭಾರತದಲ್ಲಿ ಒಂದು ವರ್ಷದ ವಾಯುಗುಣವನ್ನು ______ ಋತು ಕಾಲಗಳಾಗಿ ವಿಂಗಡಿಸಲಾಗಿದೆ. – **04 ಋತುಕಾಲಗಳು.**
3. ಚಳಿಗಾಲದ ಅವಧಿಯಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ ಮತ್ತು ಆಕಾಶವು ಮೋಡರಹಿತವಾಗಿರಲು ಕಾರಣ –
**ಈ ಅವಧಿಯಲ್ಲಿ ಸೂರ್ಯನ ಕಿರಣಗಳು ಭಾರತದಲ್ಲಿ ಓರೆಯಾಗಿ ಬೀಳುವುದರಿಂದ.**
4. ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶ ದಾಖಲಾದ ಸ್ಥಳ –
**ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ (–4°ಸೆಂ.)**
5. ಭಾರತದಲ್ಲಿ ______ ತಿಂಗಳು ಅತಿ ಶೀತವಾದ ತಿಂಗಳಾಗಿದೆ. – **ಜನವರಿ.**
6. ಚಳಿಗಾಲದ ಅವಧಿಯಲ್ಲಿ ಭಾರತವು ಪಡೆಯುವ ವಾರ್ಷಿಕ ಶೇ. ಮಳೆಯ ಪ್ರಮಾಣ – **ಶೇ. 02%.**
7. ದೇಶದಲ್ಲಿಯೇ ಅತಿ ಹೆಚ್ಚು ಉಷ್ಣಾಂಶ ದಾಖಲಾದ ಸ್ಥಳ –
**ರಾಜಸ್ತಾನದ ಗಂಗಾನಗರ (ಶೇ.49.4°ಸೆಂ.)**
8. ಬೇಸಿಗೆಯಲ್ಲಾಗುವ ಪರಿಸರಣ ಮಳೆಯನ್ನು ಅಂಧಿಸ್ ಎಂದು ______ ರಾಜ್ಯದಲ್ಲಿ ಕರೆಯಲಾಗುತ್ತದೆ. – **ಉತ್ತರ ಪ್ರದೇಶ.**
9. ಬೇಸಿಗೆಯಲ್ಲಾಗುವ ಪರಿಸರಣ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ ______ ಎಂದು ಕರೆಯಲಾಗುತ್ತದೆ. – **ಕಾಲಬೈಸಾಕಿ.**
10. ಬೇಸಿಗೆಯಲ್ಲಾಗುವ ಪರಿಸರಣ ಮಳೆಯನ್ನು ಕೇರಳದಲ್ಲಿ ______ ಎಂದು ಕರೆಯಲಾಗುತ್ತದೆ. – **ಮಾವಿನ ಹೊಯ್ಲು.**
11. ಕರ್ನಾಟಕದಲ್ಲಿ ಪರಿಸರಣ ಮಳೆಗೆ ಕಾಫಿಯ ಹೂಮಳೆ ಎಂದು ಕರೆಯಲು ಕಾರಣ – **ಕಾಫಿ ಬೆಳೆಗೆ ನೆರವಾಗುವುದರಿಂದ.**
12. ಭಾರತದ ವಾರ್ಷಿಕ ಮಳೆ ಹಂಚಿಕೆಯಲ್ಲಿ ಶೇ. ______ ಭಾಗವು ಬೇಸಿಗೆಯಲ್ಲಿ ಬೀಳುವುದು. – **ಶೇ 10%.**
13. ಮಳೆಗಾಲಕ್ಕಿರುವ ಇನ್ನೊಂದು ಹೆಸರು –
**ನೈರುತ್ಯ ಮಾನ್ಸೂನ್ ಮಾರುತಗಳ ಕಾಲ.**
14. ದೇಶದ ವಾರ್ಷಿಕ ಮಳೆಯ ಹಂಚಿಕೆಯಲ್ಲಿ ಶೇ. ______ ಭಾಗವು ಮಳೆಗಾಲದಲ್ಲಿ ಹಂಚಿಕೆಯಾಗುವುದು. – **ಶೇ. 75%.**
15. ನೈರುತ್ಯ ಮಾನ್ಸೂನ್ ಮಾರುತಗಳನ್ನು ______ ಮತ್ತು ______ ಶಾಖೆಗಳೆಂದು ವಿಂಗಡಿಸಬಹುದು. –
**ಅರಬ್ಬಿಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿ ಶಾಖೆ.**
16. ಭಾರತದಲ್ಲೇ ಅತಿ ಹೆಚ್ಚು ಮಳೆ ದಾಖಲಾದ ಸ್ಥಳ –
**ಮೇಘಾಲಯದ ಮಾಸಿನ್‌ರಾಮ್ (1141 ಸೆಂ.ಮೀ.)**
17. ಭಾರತದಲ್ಲೇ ಅತಿ ಹೆಚ್ಚು ಮಳೆಯನ್ನು ಸುರಿಸುವ ಮಾರುತಗಳು –
**ನೈರುತ್ಯ ಮಾನ್ಸೂನ್ ಮಾರುತಗಳು.**
18. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ –
**ರಾಜಸ್ತಾನದ ಜೈಸಲ್ಮೇರ್‌ನಲ್ಲಿರುವ ರೂಯ್ಲಿ ( 8.3 ಸೆಂ.ಮೀ)**
19. ಸೈಕ್ಲೋನ್ (ಚಂಡಮಾರುತಗಳು)ಗಳು ಸಂಭವಿಸುವುದು ಈ ಋತುಕಾಲದಲ್ಲಿ – **ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ.**
20. ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ದೇಶ ಪಡೆಯುವ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ – **ಶೇ. 13%.**
21. ಬೇಸಿಗೆಯಲ್ಲಿ ಉತ್ತರ ಭಾರತವು ಹೆಚ್ಚು ಉಷ್ಣಾಂಶ ಹೊಂದಿರಲು ಕಾರಣ – **ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುವುದು.**
22. ಮಳೆಯ ನೆರಳಿನ ಪ್ರದೇಶವೆಂದು ಕರೆಯಲ್ಪಡುವ ಭಾರತದ ಭೂಭಾಗ –
**ಪಶ್ಚಿಮ ಘಟ್ಟಗಳ ಪೂರ್ವ ಭಾಗ.**
23. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳ ಆರಂಭದಲ್ಲಿ ಭಾರತದಿಂದ ಹಿಮ್ಮೆಟ್ಟಲು ಪ್ರಾರಂಭಿಸುತ್ತವೆ. ಏಕೆಂದರೆ –
**ಉಷ್ಣಾಂಶ ಕಡಿಮೆಯಾಗಿ ಅಧಿಕ ಒತ್ತಡ ಪ್ರದೇಶ ನಿರ್ಮಾಣವಾಗುವುದರಿಂದ.**
24. ಅಕ್ಟೋಬರ್ ತಿಂಗಳಲ್ಲಿ ಮಾನ್ಸೂನ್ ಮಾರುತಗಳು ನಿರ್ಗಮಿಸಲು ಕಾರಣ– **ಭೂಭಾಗ ಅಧಿಕ ಒತ್ತಡ ಮತ್ತು ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡದ ಪರಿಣಾಮ.**

**ಪ್ರಶ್ನೆ 2] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

ಉತ್ತರ : ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳೆಂದರೆ – ಸ್ಥಾನ, ಜಲರಾಶಿಗಳು, ಮೇಲ್ಮೈ ಲಕ್ಷಣ ಮತ್ತು ಮಾನ್ಸೂನ್ ಮಾರುತಗಳು. ಹೀಗಾಗಿ ದೇಶದ ವಾಯುಗುಣ ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ.

**2. ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣಕ್ಕೆ ಕಾರಣವೇನು?**

ಉತ್ತರ : ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣವಿದೆ. ಏಕೆಂದರೆ ದೇಶದ ಹೆಚ್ಚು ಭಾಗವು ಉಷ್ಣವಲಯದಲ್ಲಿದೆ. ಮತ್ತು ವಾಯುಗುಣವು ಹೆಚ್ಚಾಗಿ ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಪಟ್ಟಿದೆ.

**3. ಭಾರತದ ಪ್ರಮುಖ ವಾಯುಗುಣದ ಋತುಕಾಲಗಳಾವುವು?**

ಉತ್ತರ : ಭಾರತದಲ್ಲಿ ಒಂದು ವರ್ಷದಲ್ಲಿ ವಾಯುಗುಣವನ್ನು 4 ಋತುಕಾಲಗಳಾಗಿ ವಿಂಗಡಿಸಬಹುದು. ಅವುಗಳೆಂದರೆ –

- ಚಳಿಗಾಲ (ಡಿಸೆಂಬರ್ – ಫೆಬ್ರುವರಿ)
- ಬೇಸಿಗೆ ಕಾಲ (ಮಾರ್ಚ – ಮೇ)
- ಮಳೆಗಾಲ ( ಜೂನ್ – ಸೆಪ್ಟೆಂಬರ್)
- ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ (ಸೆಪ್ಟೆಂಬರ್ ಮಧ್ಯ – ನವೆಂಬರ್)

**4. ಚಳಿಗಾಲದ ಹವಾಗುಣದ ಪರಿಸ್ಥಿತಿಯನ್ನು ಕುರಿತು ವಿವರಿಸಿ.**

**ಉತ್ತರ :**

- ಈ ಅವಧಿಯಲ್ಲಿ ಭಾರತದಲ್ಲಿ ಸೂರ್ಯನ ಕಿರಣಗಳು ಓರೆಯಾಗಿ ಬೀಳುವುದರಿಂದ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ ಮತ್ತು ಆಕಾಶವು ಮೋಡ ರಹಿತವಾಗಿರುತ್ತದೆ.
- ಜನವರಿ ತಿಂಗಳು ಅತಿ ಶೀತವಾಗಿರುತ್ತದೆ.
- ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳ ಪರ್ವತಗಳಲ್ಲಿ ಅತಿ ಕಡಿಮೆ ಉಷ್ಣಾಂಶ ದಾಖಲಾಗುತ್ತದೆ.
- ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ ಎಂಬಲ್ಲಿ ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶ (–4°ಸೆಂ) ದಾಖಲಾಗುತ್ತದೆ.
- ಇಬ್ಬನಿ ಕಾವಳಗಳು ಸರ್ವಸಾಮಾನ್ಯ.
- ಪರ್ವತ ಭಾಗಗಳಲ್ಲಿ ಹೆಚ್ಚು ಹಿಮವೃಷ್ಟಿಯಾಗುತ್ತದೆ.
- ಈ ಅವಧಿಯಲ್ಲಿ ಭಾರತವು ತನ್ನ ವಾರ್ಷಿಕ ಮಳೆಯಲ್ಲಿ ಶೇ. 2% ಭಾಗ ಮಳೆ ಬೀಳುತ್ತದೆ.

**5. ಬೇಸಿಗೆ ಕಾಲದ ಹವಾಮಾನದ ಪರಿಸ್ಥಿತಿಯನ್ನು ತಿಳಿಸಿ.**

**ಉತ್ತರ :**

- ಬೇಸಿಗೆಯಲ್ಲಿ ಸೂರ್ಯನ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶವು ಹೆಚ್ಚು.
- ಹವಾಗುಣವು ಅತಿ ಶಾಖ, ಶುಷ್ಕ ಮತ್ತು ಸೆಖೆಯಿಂದ ಕೂಡಿರುತ್ತದೆ.
- ದೇಶದ ಕೆಲವು ಭಾಗಗಳಲ್ಲಿ ಪರಿಸರಣ ಮಳೆ ಬೀಳುತ್ತದೆ.
- ಭಾರತದಲ್ಲಿ ವಾರ್ಷಿಕ ಮಳೆ ಹಂಚಿಕೆಯಲ್ಲಿ ಶೇ. 10% ಭಾಗವು ಬೇಸಿಗೆಯಲ್ಲಿ ಬೀಳುವುದು.

**6. ಮಾವಿನ ಹೊಯ್ಲು ಎಂದರೇನು?**

ಉತ್ತರ : ಬೇಸಿಗೆ ಅವಧಿಯಲ್ಲಿ ದೇಶದ ಕೆಲವು ಭಾಗಗಳಲ್ಲಿ ಪರಿಸರಣ ಮಳೆ ಬೀಳುತ್ತದೆ. ಇದು ಕೇರಳದಲ್ಲಿ ಮಾವಿನ ಬೆಳೆಗೆ ನೆರವಾಗುವುದರಿಂದ ಮಾವಿನ



PSG

ಹೊಯ್ಲು ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಕಾಫಿ ಬೆಳೆಗೆ ನೆರವಾಗುವುದರಿಂದ ಕಾಫಿಯ ಹೂಮಳೆ ಎಂದು ಕರೆಯಲಾಗುತ್ತದೆ. ಈ ಮಳೆಯನ್ನು ಬೇರೆ ಬೇರೆ ಸ್ಥಳೀಯ ಹೆಸರುಗಳಿಂದ ಕರೆಯಲಾಗುತ್ತದೆ. ಉದಾ : ಉತ್ತರಪ್ರದೇಶದಲ್ಲಿ ಅಂಧೀಸ್, ಪಶ್ಚಿಮಬಂಗಾಳದಲ್ಲಿ ಕಾಲಬೈಸಾಕಿ ಎಂದು ಕರೆಯಲಾಗುತ್ತದೆ.

**7. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದೊಡನೆ ಹಿಂದಿರುಗಲು ಪ್ರಾರಂಭಿಸುತ್ತವೆ. ಕಾರಣ ಕೊಡಿ.**

ಉತ್ತರ : ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದೊಡನೆ ಹಿಂದಿರುಗಲು ಪ್ರಾರಂಭಿಸುತ್ತವೆ ಏಕೆಂದರೆ ಭಾರತದ ಒಳನಾಡಿನ ಉಷ್ಣಾಂಶ ಕಡಿಮೆಯಾಗಿ ಒತ್ತಡ ಹೆಚ್ಚಾಗುತ್ತಾ ಹೋಗುವುದರಿಂದ ಮಾನ್ಸೂನ್ ಮಾರುತಗಳು ಹಿಂದಿರುಗಲು ಪ್ರಾರಂಭಿಸುತ್ತವೆ.

**8. ಪಶ್ಚಿಮ ಘಟ್ಟಗಳ ಪೂರ್ವಭಾಗವನ್ನು ಮಳೆ ನೆರಳಿನ ಪ್ರದೇಶವೆನ್ನಲು ಕಾರಣವೇನು?**

ಉತ್ತರ : ನೈರುತ್ಯ ಮಾನ್ಸೂನ್ ಮಾರುತಗಳ ಅರಬ್ಬಿ ಸಮುದ್ರ ಶಾಖೆ ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಆದರೆ ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಕಡಿಮೆ ಮಳೆ ಸುರಿಸುತ್ತವೆ. ಆದ್ದರಿಂದ ಪಶ್ಚಿಮ ಘಟ್ಟಗಳ ಪೂರ್ವಭಾಗವು ಮಳೆ ನೆರಳಿನ ಪ್ರದೇಶ ಎನಿಸಿಕೊಂಡಿದೆ.

**9. ನೈರುತ್ಯ ಮಾನ್ಸೂನ್ ಮಾರುತಗಳ ಪ್ರಕ್ರಿಯೆಯನ್ನು ವಿವರಿಸಿ.**

**ಉತ್ತರ :**

- ಬೇಸಿಗೆಯ ಅಂತ್ಯಾವಧಿಯಲ್ಲಿ ಭಾರತದಲ್ಲಿ ಉಷ್ಣಾಂಶ ಹೆಚ್ಚಾಗಿ ಕಡಿಮೆ ಒತ್ತಡ ಪ್ರದೇಶ ನಿರ್ಮಾಣವಾಗುವುದು. ಇದಕ್ಕೆ ಪ್ರತಿಯಾಗಿ ಹಿಂದೂಮಹಾಸಾಗರದಲ್ಲಿ ಅಧಿಕ ಒತ್ತಡವಿರುತ್ತದೆ. ಆದ್ದರಿಂದ ತೇವಾಂಶಭರಿತ ಮಾರುತಗಳು ನೈರುತ್ಯದಿಂದ ಭಾರತದೆಡೆಗೆ ಬೀಸುತ್ತವೆ.
- ನೈರುತ್ಯ ಮಾನ್ಸೂನ್ ಮಾರುಗಳನ್ನು ಅರಬ್ಬಿ ಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿ ಶಾಖೆಗಳೆಂದು ವಿಂಗಡಿಸಬಹುದು.
- ಅರಬ್ಬಿಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಿಗೆ ಅಧಿಕ ಮಳೆಯನ್ನು ಸುರಿಸುತ್ತದೆ. ಪೂರ್ವ ಭಾಗಗಳಿಗೆ ಹೋದಂತೆ ಕಡಿಮೆಯಾಗುತ್ತದೆ.
- ಬಂಗಾಳಕೊಲ್ಲಿಯ ಶಾಖೆಯು ಮೇಘಾಲಯ ಮತ್ತು ಅಸ್ಸಾಂ ಬೆಟ್ಟಗಳಿಂದ ತಡೆಯಲ್ಪಟ್ಟು ಅಧಿಕ ಮಳೆ ಬೀಳುವುದು. ಪಶ್ಚಿಮದ ಕಡೆಗೆ ಹೋದಂತೆ ಮಳೆ ಕಡಿಮೆಯಾಗುವುದು.
- ಈ ಅವಧಿಯಲ್ಲಿ ದೇಶದಲ್ಲಿ ವಾರ್ಷಿಕ ಶೇ. 75% ಭಾಗದಷ್ಟು ಮಳೆಯಾಗುವುದು.

**10. ಭಾರತದಲ್ಲಿ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ.**

ಉತ್ತರ : ವಾರ್ಷಿಕ 50 ಸೆಂ.ಮೀ.ಗಳಿಗಿಂತ ಕಡಿಮೆ ಮಳೆ ಬೀಳವ ಪ್ರದೇಶಗಳೆಂದರೆ – ಕಛ್‌ನ ಪಶ್ಚಿಮ ಭಾಗ, ರಾಜಸ್ತಾನದ ಮರುಭೂಮಿ ಹಾಗೂ ಅದರ ಸುತ್ತಮುತ್ತಲಿನ ಭಾಗಗಳಾದ ಪಶ್ಚಿಮ ಪಂಜಾಬ, ಹರಿಯಾಣ ಮತ್ತು ಗುಜರಾತ್, ಉತ್ತರ ಜಾಸ್ಕರ್ ಶ್ರೇಣಿ ಮತ್ತು ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶಗಳು ಸೇರಿವೆ.

**11. ಭಾರತದಲ್ಲಿ ಅಧಿಕ ಮಳೆ ಬೀಳುವ ಪ್ರದೇಶಗಳನ್ನು ಹೆಸರಿಸಿ.**

**ಉತ್ತರ : ಭಾರತದಲ್ಲಿ ಅಧಿಕ ಮಳೆಯಾಗುವ ಪ್ರದೇಶಗಳು ನಾಲ್ಕು ಪ್ರತ್ಯೇಕ ವಲಯಗಳಲ್ಲಿ ಹಂಚಿಕೆಯಾಗಿದೆ. ಅವುಗಳೆಂದರೆ –**

- ಪಶ್ಚಿಮ ಘಟ್ಟಗಳ ಕಿರಿದಾದ ವಲಯ
- ಜಮ್ಮುವಿನಿಂದ ಆರಂಭಗೊಂಡು ಹಿಮಾಚಲ ಪ್ರದೇಶ, ಉತ್ತರ ಪ್ರದೇಶದ ಉತ್ತರ ಭಾಗ, ಬಿಹಾರ ಮತ್ತು ಪಶ್ಚಿಮ ಬಂಗಾಳ.
- ಈಶಾನ್ಯ ಭಾರತ.
- ಪಶ್ಚಿಮ ಮಾನ್ಸೂನ್ ತೀರ ಪ್ರದೇಶ.

**12. ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳ ನಡುವಿನ ವ್ಯತ್ಯಾಸ ತಿಳಿಸಿ.**

**ಉತ್ತರ :**

- ನೈರುತ್ಯ ಮಾನ್ಸೂನ್ ಮಾರುತಗಳನ್ನು ಅರಬ್ಬಿಸಮುದ್ರದ ಶಾಖೆ ಮತ್ತು ಬಂಗಾಳಕೊಲ್ಲಿಯ ಶಾಖೆಗಳೆಂದು ವಿಂಗಡಿಸಬಹುದು.
- ಅರಬ್ಬಿಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಗೆ ಎದುರಾಗಿ ಬೀಸುತ್ತದೆ. ಮತ್ತು ಅವು ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಿಗೆ ಅಧಿಕ ಮಳೆಯನ್ನು ಸುರಿಸುತ್ತವೆ. ಮಳೆಯ ಪ್ರಮಾಣವು ಪಶ್ಚಿಮ ಘಟ್ಟಗಳ ಪೂರ್ವಭಾಗಗಳಿಗೆ ಹೋದಂತೆ ಕಡಿಮೆಯಾಗುತ್ತದೆ.
- ಬಂಗಾಳಕೊಲ್ಲಿಯ ಶಾಖೆಯು ಮೇಘಾಲಯ ಮತ್ತು ಅಸ್ಸಾಂನ ಬೆಟ್ಟಗಳಿಂದ ತಡೆಯಲ್ಪಡುವುದರಿಂದ ಅಧಿಕ ಮಳೆ ಬೀಳುವುದು. ಪಶ್ಚಿಮದ ಕಡೆಗೆ ಹೋದಂತೆಲ್ಲಾ ಮಳೆಯ ಪ್ರಮಾಣವು ಕಡಿಮೆಯಾಗುತ್ತದೆ.

## ಅಧ್ಯಾಯ – 4 ಭಾರತದ ಮಣ್ಣುಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭಾರತದ ಮಣ್ಣುಗಳನ್ನು ಪ್ರಮುಖವಾಗಿ ________ ವಿಧಗಳಾಗಿ ವಿಂಗಡಿಸಬಹುದು. – **06ವಿಧಗಳು.**

2. ನದಿಗಳು ಪರ್ವತ ಪ್ರದೇಶದಿಂದ ತಂದು ಸಂಚಯಿಸಿದ ಮಣ್ಣು – **ಮೆಕ್ಕಲು ಮಣ್ಣು.**

3. ಮೆಕ್ಕಲು ಮಣ್ಣು ಸುಮಾರು _____ ಚ.ಕಿ.ಮೀ. ಪ್ರದೇಶದಲ್ಲಿ ಹಂಚಿಕೆಯಾಗಿದೆ. – **15 ಲಕ್ಷ ಚ.ಕಿ.ಮೀ.**

4. ಕಪ್ಪು ಮಣ್ಣಿಗಿರುವ ಇನ್ನೊಂದು ಹೆಸರು – **ರೀಗರ್ ಮಣ್ಣು ಅಥವಾ ಹತ್ತಿ ಕಪ್ಪುಮಣ್ಣು.**

5. ಕಪ್ಪು ಮಣ್ಣು ________ ಬೆಳೆಗೆ ಅತ್ಯಂತ ಸೂಕ್ತವಾದುದು. **– ಹತ್ತಿ ಬೆಳೆ.**

6. ಕಪ್ಪು ಮಣ್ಣು ಉತ್ಪತ್ತಿಯಾದುದು __________ ಶಿಲಾಕಣಗಳಿಂದ. – **ಬಸಾಲ್ಟ್ ಶಿಲಾಕಣಗಳು.**

7. ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದ ಮಣ್ಣು **– ಕಪ್ಪು ಮಣ್ಣು.**

8. ಕಪ್ಪು ಮಣ್ಣು ಸುಮಾರು ________ ಚ.ಕಿ.ಮೀ. ವಿಸ್ತೀರ್ಣದಲ್ಲಿ ಹಂಚಿಕೆಯಾಗಿದೆ. – **5.46 ಲಕ್ಷ ಚ.ಕಿ.ಮೀ.**

9. ಗ್ರ್ಯಾನೈಟ್, ನೀಸ್ ಮತ್ತು ಇತರೆ ಸ್ಪಟಿಕ ಶಿಲೆಗಳ ಶಿಥಿಲೀಕರಣದ ವಸ್ತುಗಳಿಂದ ಉತ್ಪತ್ತಿಯಾದ ಮಣ್ಣು – **ಕೆಂಪು ಮಣ್ಣು.**

10. ಕೆಂಪು ಮಣ್ಣು ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ ಹೊಂದಿದೆ. ಇದಕ್ಕೆ ಕಾರಣ – **ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ ಇರುವುದರಿಂದ.**

11. ಕೆಂಪು ಮಣ್ಣು ಸುಮಾರು ____ ಚ.ಕಿ.ಮೀ. ಕ್ಷೇತ್ರದಲ್ಲಿ ಹಂಚಿಕೆಯಾಗಿದೆ. – **5.2 ಲಕ್ಷ ಚ.ಕಿ.ಮೀ.**

12. ಅತಿ ಹೆಚ್ಚು ಕೆಂಪು ಮಣ್ಣನ್ನು ಹೊಂದಿದ ರಾಜ್ಯ – **ತಮಿಳುನಾಡು.**

13. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯುಳ್ಳ ಉಷ್ಣವಲಯದ ಭಾಗಗಳಲ್ಲಿ ಕಂಡು ಬರುವ ಮಣ್ಣು – **ಲ್ಯಾಟರೈಟ್ ಮಣ್ಣು.**

14. ಲ್ಯಾಟರೈಟ್ ಮಣ್ಣು (ಜಂಬಿಟ್ಟಿಗೆ ಮಣ್ಣು) ಸುಮಾರು ________ ಚ.ಕಿ.ಮೀ. ಪ್ರದೇಶದಲ್ಲಿ ಕಂಡುಬರುತ್ತದೆ. – **2.48 ಲಕ್ಷ ಚ.ಕಿ.ಮೀ.**

15. ಲ್ಯಾಟರೈಟ್ ಮಣ್ಣು (ಜಂಬಿಟ್ಟಿಗೆ ಮಣ್ಣು) ಹೆಚ್ಚು ಫಲವತ್ತಾದುದಲ್ಲ. ಇದಕ್ಕೆ ಕಾರಣ – **ಜಲವಿಲೀನಿಕರಣಕ್ಕೊಳಪಡುವುದರಿಂದ.**

16. ಭಾರತದ ವಾಯುವ್ಯ ಭಾಗದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು. – **ಮರುಭೂಮಿ ಮಣ್ಣು.**

17. ಮರುಭೂಮಿ ಮಣ್ಣು ಸುಮಾರು ______ ಚ.ಕಿ.ಮೀ. ಪ್ರದೇಶದಲ್ಲಿ ಕಂಡುಬರುವುದು. – **1.42 ಲಕ್ಷ ಚ.ಕಿ.ಮೀ.**

18. ಜೈವಿಕ ವಸ್ತುಗಳು ಕೊಳೆಯುವದರಿಂದ ಈ ಮಣ್ಣು ನಿರ್ಮಾಣವಾಗುವುದು **– ಪರ್ವತ ಮಣ್ಣು.**

19. ಪರ್ವತ ಮಣ್ಣು _______ ಬೆಳೆಗಳ ಸಾಗುವಳಿಗೆ ಅತಿ ಸೂಕ್ತವಾದುದು. – **ನೆಡುತೋಟದ ಬೆಳೆಗಳು.**

20. ಪರ್ವತ ಮಣ್ಣು ಸುಮಾರು _____ ಚ.ಕಿ.ಮೀ. ಕ್ಷೇತ್ರದಲ್ಲಿ ಹಂಚಿಕೆಯಾಗಿದೆ. **– 2.85 ಲಕ್ಷ ಚ.ಕಿ.ಮೀ.**

21. ಕಪ್ಪು ಮಣ್ಣು ಒಣಬೇಸಾಯಕ್ಕೆ ಸೂಕ್ತವಾಗಿದೆ. ಏಕೆಂದರೆ – **ಇದು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ.**

22. ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ನಿರ್ಮಾಣವಾಗುವ ಮಣ್ಣು – **ಮರುಭೂಮಿ ಮಣ್ಣು.**

**ಪ್ರಶ್ನೆ 2] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಪ್ರಮುಖ ಮಣ್ಣಿನ ಪ್ರಕಾರಗಳಾವುವು?**

ಉತ್ತರ : **ಭಾರತದಲ್ಲಿ ಕಂಡು ಬರುವ ಮಣ್ಣನ್ನು ಆರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ.ಅವುಗಳೆಂದರೆ –** 1. ಮೆಕ್ಕಲುಮಣ್ಣು, 2. ಕಪ್ಪುಮಣ್ಣು, 3. ಕೆಂಪುಮಣ್ಣು, 4. ಜಂಬಿಟ್ಟಿಗೆ ಮಣ್ಣು, 5. ಮರುಭೂಮಿ ಮಣ್ಣು, 6. ಪರ್ವತ ಮಣ್ಣು.

**2. ಮೆಕ್ಕಲು ಮಣ್ಣಿನ ಗುಣಲಕ್ಷಣಗಳು ಮತ್ತು ಹಂಚಿಕೆಯನ್ನು ತಿಳಿಸಿ.**

ಉತ್ತರ : ಮೆಕ್ಕಲು ಮಣ್ಣಿನ ಗುಣಲಕ್ಷಣಗಳು ಮತ್ತು ಹಂಚಿಕೆ

- ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತುತಂದು ಸಂಚಯಿಸಿರುವ ಮೆಕ್ಕಲು ಮಣ್ಣಿನಿಂದ ರಚನೆಯಾಗಿದೆ.
- ಮೆಕ್ಕಲು ಮಣ್ಣು ಅತ್ಯಂತ ಫಲವತ್ತಾಗಿರುವುದರಿಂದ ದೇಶದ ಕೃಷಿ ಪ್ರಗತಿಯಲ್ಲಿ ಮುಖ್ಯ ಪಾತ್ರವಹಿಸುತ್ತದೆ.
- ಸುಮಾರು 15 ಲಕ್ಷ ಚ.ಕಿ.ಮೀ. ಪ್ರದೇಶದಲ್ಲಿ ಹಂಚಿಕೆಯಾಗಿದೆ.
- ಭಾರತದಲ್ಲಿ ಮೆಕ್ಕಲು ಮಣ್ಣು ಹೆಚ್ಚಾಗಿ ನದಿ ಬಯಲುಗಳಲ್ಲಿ ಹಂಚಿಕೆಯಾಗಿದೆ. ಉದಾ : ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ ಹಾಘೂ ನರ್ಮದ, ತಾಪಿ, ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿ ಬಯಲು ಪ್ರದೇಶಗಳು.
- ಮೆಕ್ಕಲು ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ – ಗೋದಿ, ಭತ್ತ, ಕಬ್ಬು, ಹತ್ತಿ, ಸೆಣಬು, ಆಲೂಗಡ್ಡೆ ಮತ್ತು ತರಕಾರಿಗಳು.

**3. ಕಪ್ಪು ಮಣ್ಣಿನ ಗುಣಲಕ್ಷಣಗಳು ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಕಪ್ಪು ಮಣ್ಣಿನ ಗುಣಲಕ್ಷಣಗಳು.**

- ಈ ಮಣ್ಣು ಹತ್ತಿ ಬೆಳೆಗೆ ಹೆಚ್ಚು ಉಪಯುಕ್ತವಾದುದು.
- ಈ ಮಣ್ಣು ಬಸಾಲ್ಟ್ ಶಿಲಾಕಣಗಳಿಂದ ಉತ್ಪತ್ತಿಯಾಗಿದೆ.
- ಇದರಲ್ಲಿ ಜೇಡಿ ಮಿಶ್ರಣ ಹೆಚ್ಚು, ಒತ್ತೊತ್ತಾದ ಕಣಗಳಿಂದ ರಚನೆಯಾಗಿದೆ.
- ಮಣ್ಣು ಫಲವತ್ತಾಗಿದ್ದು ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ.
- ಹತ್ತಿ, ಜೋಳ, ಕಬ್ಬು, ಮೆಕ್ಕೆಜೋಳ, ದ್ವಿದಳಧಾನ್ಯ, ಗೋದಿ ಮತ್ತು ಮೆಣಸಿನಕಾಯಿ ಬೆಳೆಗಳ ಸಾಗುವಳಿಗೆ ಸೂಕ್ತ.
- ಭಾರತದಲ್ಲಿ ಕಪ್ಪು ಮಣ್ಣು ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣದ ಕೆಲಭಾಗಗಳು, ಉತ್ತರ ಕರ್ನಾಟಕ, ಗುಜರಾತ ಮತ್ತು ತಮಿಳುನಾಡಿನ ಕೆಲಭಾಗಗಳಲ್ಲಿ ಕಂಡುಬರುತ್ತದೆ.
- ಕಪ್ಪು ಮಣ್ಣು ಭಾರತದಲ್ಲಿ ಸುಮಾರು 5.46 ಲಕ್ಷ ಚ.ಕಿ.ಮೀ. ವಿಸ್ತೀರ್ಣದಲ್ಲಿ ಹಂಚಿಕೆಯಾಗಿದೆ.

**4. ಕೆಂಪು ಮಣ್ಣಿನ ಗುಣಲಕ್ಷಣ & ಹಂಚಿಕೆಯನ್ನು ತಿಳಿಸಿ.**

**ಉತ್ತರ : ಕೆಂಪು ಮಣ್ಣಿನ ಗುಣಲಕ್ಷಣಗಳು**

- ಕೆಂಪು ಮಣ್ಣು ಗ್ರಾನೈಟ್, ನೀಸ್ ಮತ್ತು ಇತರೆ ಸ್ಪಟಿಕ ಶಿಲೆಗಳ ಶಿಥಿಲೀಕರಣದ ವಸ್ತುಗಳಿಂದ ಉತ್ಪತ್ತಿಯಾಗಿದೆ.
- ಇದರಲ್ಲಿ ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ.
- ಈ ಮಣ್ಣಿಗೆ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ.
- ಈ ಮಣ್ಣು ಸುಮಾರು 5.2 ಲಕ್ಷ ಚ.ಕಿ.ಮೀ. ಕ್ಷೇತ್ರದಲ್ಲಿ ಹಂಚಿಕೆಯಾಗಿದೆ.
- ಕೆಂಪು ಮಣ್ಣು ರಾಗಿ, ತೃಣಧಾನ್ಯ, ಶೇಂಗ, ತಂಬಾಕು ಮತ್ತು ಆಲುಗಡ್ಡೆಗಳ ಬೇಸಾಯಕ್ಕೆ ಸೂಕ್ತವಾದುದು.
- ತಮಿಳುನಾಡು, ದಕ್ಷಿಣ ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಒಡಿಸಾ, ಕೇರಳ, ಗೋವ, ಬಿಹಾರ, ಉತ್ತರಪ್ರದೇಶ, ಆಸ್ಸಾಂ, ಮಣಿಪುರ, ನಾಗಾಲ್ಯಾಂಡ್ ಮತ್ತು ಪಶ್ಚಿಮಬಂಗಾಳ ರಾಜ್ಯಗಳ ಕೆಲವು ಭಾಗಗಳಲ್ಲಿಯೂ ಕಂಡುಬರುತ್ತದೆ.

**5. ಲ್ಯಾಟರೈಟ್ (ಜಂಬಿಟ್ಟಿಗೆ) ಮಣ್ಣಿನ ಗುಣಲಕ್ಷಣ & ಹಂಚಿಕೆಯನ್ನು ತಿಳಿಸಿ.**

**ಉತ್ತರ : ಲ್ಯಾಟರೈಟ್ (ಜಂಬಿಟ್ಟಿಗೆ) ಮಣ್ಣಿನ ಗುಣಲಕ್ಷಣ & ಹಂಚಿಕೆ**

- ಲ್ಯಾಟರೈಟ್ (ಜಂಬಿಟ್ಟಿಗೆ) ಮಣ್ಣು ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯುಳ್ಳ ಉಷ್ಣವಲಯದ ಭಾಗಗಳಲ್ಲಿ ಉತ್ಪತ್ತಿಯಾಗುತ್ತದೆ.
- ಸುಮಾರು 2.48 ಲಕ್ಷ ಚ.ಕಿ.ಮೀ. ಪ್ರದೇಶವನ್ನಾವರಿಸಿದೆ.
- ಲ್ಯಾಟರೈಟ್ (ಜಂಬಿಟ್ಟಿಗೆ) ಮಣ್ಣು ಜಲವಿಲೀಕರಣಕ್ಕೊಳಪಡುವುದರಿಂದ ಫಲವತ್ತಾದುದಲ್ಲ. ಕೃಷಿಗೆ ಅಷ್ಟೊಂದು ಉಪಯುಕ್ತವಲ್ಲ.
- ಈ ಮಣ್ಣಿನಲ್ಲಿ ಗೋಡಂಬಿ, ರಬ್ಬರ್, ಚಹ, ಕಾಫಿ ಮತ್ತು ಭತ್ತವನ್ನು ಬೆಳೆಯಬಹುದು.
- ಈ ಮಣ್ಣು ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟಗಳು, ಛೋಟನಾಗಪುರ ಪ್ರಸ್ಥಭೂಮಿ, ಮೇಘಾಲಯದ ಪ್ರಸ್ಥಭೂಮಿ, ರಾಜಮಹಲ್ ಬೆಟ್ಟಗಳು, ವಿಂಧ್ಯಾ ಮತ್ತು ಸಾತ್ಪುರ ಸರಣಿಗಳಲ್ಲಿ ಹಂಚಿಕೆಯಾಗಿದೆ.

**6. ಮರುಭೂಮಿ ಮಣ್ಣಿನ ಗುಣಲಕ್ಷಣ & ಹಂಚಿಕೆಯನ್ನು ತಿಳಿಸಿ.**

**ಉತ್ತರ : ಮರುಭೂಮಿ ಮಣ್ಣಿನ ಗುಣಲಕ್ಷಣ & ಹಂಚಿಕೆ**

- ಮರುಭೂಮಿ ಮತ್ತು ಅರೆಮರುಭೂಮಿಯ ಪರಿಸ್ಥಿತಿಯುಳ್ಳ ಭಾಗಗಳಲ್ಲಿ ಈ ವಿಧದ ಮಣ್ಣು ಉತ್ಪತ್ತಿಯಾಗಿರುತ್ತದೆ.
- ಈ ಮಣ್ಣಿನಲ್ಲಿ ಮರಳಿನ ಪ್ರಮಾಣ ಹೆಚ್ಚು, ತೇವಾಂಶ ಮತ್ತು ಸಸ್ಯಾಂಶಗಳು ಕಡಿಮೆ.
- ನೀರಾವರಿ ಸೌಲಭ್ಯವಿರುವಲ್ಲಿ ಕೆಲವು ಬೆಳೆಗಳನ್ನು ಬೆಳೆಯುವರು.
- ಸುಮಾರು 1.42 ಲಕ್ಷ ಚ.ಕಿ.ಮೀ. ಕ್ಷೇತ್ರದಲ್ಲಿ ಹಂಚಿಕೆಯಾಗಿದೆ.
- ಭಾರತದಲ್ಲಿ ಮರುಭೂಮಿ ಮಣ್ಣು ಹೆಚ್ಚಾಗಿ ವಾಯುವ್ಯ ಭಾಗದಲ್ಲಿ ಕಂಡುಬರುತ್ತದೆ. ಉದಾ : ರಾಜಸ್ತಾನದ ಬಹುಭಾಗ, ದಕ್ಷಿಣ ಹರಿಯಾಣ, ಪಂಜಾಬ್ ಮತ್ತು ಗುಜರಾತಿನ ಉತ್ತರ ಭಾಗಗಳು.

**7. ಪರ್ವತ ಮಣ್ಣಿನ ಗುಣಲಕ್ಷಣ & ಹಂಚಿಕೆಯನ್ನು ತಿಳಿಸಿ.**

**ಉತ್ತರ : ಪರ್ವತ ಮಣ್ಣಿನ ಗುಣಲಕ್ಷಣ & ಹಂಚಿಕೆ**

- ಜೈವಿಕ ವಸ್ತುಗಳು ಕೊಳೆಯುವುದರಿಂದ ಪರ್ವತ ಮಣ್ಣು ನಿರ್ಮಾಣವಾಗುವುದು.
- ಪರ್ವತ ಮಣ್ಣು ಅರಣ್ಯಗಳಿಂದಾವರಿಸಿದ ಪರ್ವತ ಮತ್ತು ಬೆಟ್ಟಗಳ ಇಳಿಜಾರುಗಳಲ್ಲಿ ಕಂಡುಬರುತ್ತದೆ.
- ಈ ಮಣ್ಣಿನಲ್ಲಿ ಸಸ್ಯಾಂಶ ಅಧಿಕವಾಗಿದ್ದು ಫಲವತ್ತಾಗಿರುತ್ತದೆ.
- ನೆಡುತೋಟದ ಬೆಳೆಗಳ ಸಾಗುವಳಿಗೆ ಸೂಕ್ತವಾದುದು. ಉದಾ : ಚಹ, ಕಾಫಿ ಮತ್ತು ಹಣ್ಣು ಬೆಳೆಗಳು
- ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಮಣಿಪುರ ಹಾಗೂ ಪಶ್ಚಿಮ ಘಟ್ಟಗಳಲ್ಲಿ ಪರ್ವತ ಮಣ್ಣು ಹೆಚ್ಚಾಗಿ ಕಂಡುಬರುತ್ತದೆ.
- ಇದು ಸುಮಾರು 2.85 ಲಕ್ಷ ಚ.ಕಿ.ಮೀ. ಕ್ಷೇತ್ರದಲ್ಲಿ ಹಂಚಿಕೆಯಾಗಿದೆ.

**8. ಮಣ್ಣಿನ ಸವೆತ ಎಂದರೇನು? ಮಣ್ಣಿನ ಸವೆತಕ್ಕೆ ಕಾರಣಗಳಾವುವು?**

**ಉತ್ತರ : ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕರ್ತೃಗಳಿಂದ ಕೊಚ್ಚಿ ಹೋಗುವುದನ್ನು ಮಣ್ಣಿನ ಸವೆತವೆನ್ನುವರು.**

**ಮಣ್ಣಿನ ಸವೆತಕ್ಕೆ ಕಾರಣಗಳು**

1. ಅರಣ್ಯ ನಾಶ 2. ಅತಿಯಾಗಿ ಮೇಯಿಸುವುದು
3. ವರ್ಗಾವಣೆ ಬೇಸಾಯ ಪದ್ಧತಿ 4. ಅವೈಜ್ಞಾನಿಕ ಬೇಸಾಯ ಪದ್ಧತಿ
5. ಮೇಲ್ಪದರದ ಮಣ್ಣನ್ನು ಇಟ್ಟಿಗೆ, ಹೆಂಚು ಇತ್ಯಾದಿ ಉದ್ದೇಶಗಳಿಗೆ ಬಳಕೆ ಮಾಡುವುದು.

**9. ಮಣ್ಣಿನ ಸವೆತದಿಂದಾಗುವ ಪರಿಣಾಮಗಳೇನು?**

**ಉತ್ತರ : ಮಣ್ಣಿನ ಸವೆತದ ಪರಿಣಾಮಗಳು**

- ಮಣ್ಣಿನ ಸಾರವು ಕಡಿಮೆಯಾಗಿ. ಕೃಷಿಯ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ.
- ನದಿ ಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದು, ಪ್ರವಾಹ ಉಂಟಾಗುವುದು ಮತ್ತು ನದಿ ಪಾತ್ರದ ಬದಲಾವಣೆ ಹಾಗೂ ಜಲಾಶಯಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.
- ಅಂತರ್ಜಲದ ಮಟ್ಟದಲ್ಲಿ ಕುಸಿತ ಮತ್ತು ಮಣ್ಣಿನ ತೇವಾಂಶವು ಕಡಿಮೆಯಾಗುತ್ತದೆ.
- ಸಸ್ಯವರ್ಗವು ಒಣಗುತ್ತದೆ. ಮತ್ತು ಬರ ಪರಿಸ್ಥಿತಿ ಹೆಚ್ಚುತ್ತದೆ.
- ದೇಶದ ಸಮಗ್ರ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯಾಗುತ್ತದೆ.

**10. ಮಣ್ಣಿನ ಸಂರಕ್ಷಣೆ ಎಂದರೇನು? ಮಣ್ಣಿನ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿಸಿ.**

**ಉತ್ತರ : ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡುವುದನ್ನು ಮಣ್ಣಿನ ಸಂರಕ್ಷಣೆ ಎನ್ನುವರು.**

ಮಣ್ಣಿನ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು

- ಅರಣ್ಯಪೋಷಣೆ ಮತ್ತು ಮರು ಅರಣ್ಯೀಕರಣ.
- ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
- ಸಮೋನ್ನತಿ ಬೇಸಾಯ
- ಚೆಕ್ ಡ್ಯಾಮುಗಳ ನಿರ್ಮಾಣ.
- ಬದುಗಳ ನಿರ್ಮಾಣ
- ಕೊರಕಲು ನಿಯಂತ್ರಣ ಮತ್ತು ಮೆಟ್ಟಲು ಪಂಕ್ತಿ ಬೇಸಾಯ
- ನೀರಿನ ಸೂಕ್ತ ಬಳಕೆ ಮಾಡುವುದು.

## ಅಧ್ಯಾಯ – 5 ಭಾರತದ ಅರಣ್ಯ ಸಂಪತ್ತು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭಾರತದ ಅರಣ್ಯಗಳನ್ನು ಪ್ರಮುಖವಾಗಿ ______ ವಿಧಗಳಾಗಿ ವಿಂಗಡಿಸಲಾಗಿದೆ. – **6 ವಿಧಗಳು**
2. ವಾರ್ಷಿಕ 250 ಸೆಂ.ಮೀ.ಗಳಿಗಿಂತ ಹೆಚ್ಚು ಮಳೆಯಾಗುವ ಭಾಗಗಳಲ್ಲಿ ಕಂಡು ಬರುವ ಅರಣ್ಯ – **ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು.**

3. ಉಷ್ಣವಲಯದ ಎಲೆ ಉದುರಿಸುವ ಕಾಡುಗಳಿಗಿರುವ ಇನ್ನೊಂದು ಹೆಸರು – **ಪರ್ಣಪಾತಿ ಅರಣ್ಯ.**

4. ಮಾನ್ಸೂನ್ ಕಾಡುಗಳು ಎಂದು ಈ ಅರಣ್ಯಗಳನ್ನು ಕರೆಯುವರು – **ಉಷ್ಣವಲಯದ ಎಲೆ ಉದುರಿಸುವ ಕಾಡುಗಳು**

5. ಖರ್ಜೂರದ ಮರಗಳು ಕಂಡುಬರುವುದು ಈ ಕಾಡುಗಳಲ್ಲಿ – **ಮರುಭೂಮಿ ಸಸ್ಯವರ್ಗ**

6. ಭಾರತದ ಅರಣ್ಯದ ಒಟ್ಟು ವಿಸ್ತೀರ್ಣ – **7.74 ಲಕ್ಷ ಚ.ಕಿ.ಮೀ.**

7. ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಈಗ ಇರುವ ಅರಣ್ಯಗಳ ಶೇ. ಪಾಲು – **ಶೇ. 23.6%**

8. 1952ರ ರಾಷ್ಟ್ರೀಯ ಅರಣ್ಯ ನೀತಿ ನಿರ್ಣಯದ ಪ್ರಕಾರ ಇರಬೇಕಾದ ಅರಣ್ಯ **– ಶೇ. 33.3%**

9. ಪ್ರಪಂಚದ ಸರಾಸರಿ ಅರಣ್ಯ **– ಶೇ. 29.5%**

10. ಭಾರತದಲ್ಲಿ ಅತಿ ಹೆಚ್ಚು ಅರಣ್ಯವನ್ನು ಹೊಂದಿದ ರಾಜ್ಯ – **ಮಧ್ಯಪ್ರದೇಶ.**

11. ಭಾರತದಲ್ಲಿ ಅತಿ ಕಡಿಮೆ ಅರಣ್ಯವನ್ನು ಹೊಂದಿದ ರಾಜ್ಯ – **ಗೋವಾ**

12. ಭಾರತದಲ್ಲಿ ಸುಮಾರು ______ ವನ್ಯ ಜೀವಿಧಾಮಗಳಿವೆ. – **523 ವನ್ಯ ಜೀವಿಧಾಮಗಳು**

13. ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು _____ ಗಳೆಂದು ಕರೆಯುವರು. **ವನ್ಯಜೀವಿಧಾಮಗಳು**

14. ಭಾರತದಲ್ಲಿ _ ರಾಷ್ಟ್ರೀಯ ಉದ್ಯಾನಗಳಿವೆ. – **99 ರಾಷ್ಟ್ರೀಯ ಉದ್ಯಾನಗಳು**

15. ಭಾರತದಲ್ಲಿ _____ ಜೀವಿ ಸಂರಕ್ಷಣಾ ವಲಗಳನ್ನು ಗುರುತಿಸಲಾಗಿದೆ. – **18 ಜೀವಿ ಸಂರಕ್ಷಣಾ ವಲಯಗಳು**

16. ವರ್ಷದ ಯಾವುದೇ ಕಾಲದಲ್ಲೂ ______ ಅರಣ್ಯಗಳು ಎಲೆ ಉದುರಿಸುವುದಿಲ್ಲ. – **ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು.**

17. ಹಿಮಾಲಯ ಪರ್ವತಗಳಲ್ಲಿ ______ ವಿಧದ ಅರಣ್ಯಗಳಿವೆ. – **ಪರ್ವತ ಕಾಡುಗಳು**

18. ಹೆಚ್ಚಾಗಿ ನದಿಮುಖಜ ಭೂಮಿಗಳಲ್ಲಿ ________ ಅರಣ್ಯಗಳು ಕಂಡುಬರುತ್ತವೆ. – **ಮ್ಯಾಂಗ್ರೋವ್ ಅರಣ್ಯಗಳು**

19. ನಾಗಾರ್ಜುನ ಸಾಗರ ವನ್ಯಜೀವಿಧಾಮವು _______ ರಾಜ್ಯದಲ್ಲಿದೆ. – **ತೆಲಂಗಾಣ ರಾಜ್ಯ**

20. ಶ್ರೀಗಂಧದ ಮರಗಳು ಹೆಚ್ಚಾಗಿ _________ ಕಾಡುಗಳಲ್ಲಿ ಕಂಡುಬರುತ್ತವೆ. – **ಉಷ್ಣವಲಯದ ಎಲೆ ಉದುರಿಸುವ ಕಾಡುಗಳು**

## ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಅರಣ್ಯಗಳೆಂದರೇನು?**
ಉತ್ತರ : ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗವನ್ನು 'ಅರಣ್ಯ'(ಕಾಡು) ಎಂದು ಕರೆಯಲಾಗಿದೆ.

**2. ಭಾರತದಲ್ಲಿ ಅರಣ್ಯಗಳ ವಿಧಗಳನ್ನು ನಿರ್ಧರಿಸುವ ಅಂಶಗಳು ಯಾವುವು?**
ಉತ್ತರ : ಭಾರತದಲ್ಲಿ ಅರಣ್ಯಗಳ ವಿಧಗಳನ್ನು ನಿರ್ಧರಿಸುವ ಅಂಶಗಳೆಂದರೆ ವಾಯುಗುಣ, ಮಣ್ಣು ಮತ್ತು ಮೇಲ್ಮೈ ಲಕ್ಷಣಗಳು.

**3. ಅರಣ್ಯ ಸಂರಕ್ಷಣೆ ಎಂದರೇನು?**
ಉತ್ತರ : ಅರಣ್ಯಗಳನ್ನು ಮಾನವ, ಪ್ರಾಣಿಗಳಿಂದ, ನೈಸರ್ಗಿಕ ವಿಪತ್ತುಗಳಿಂದ ಕಾಪಾಡಿ ಅರಣ್ಯ ಸಂಪತ್ತಿನ ಸಮಗ್ರ ನಿಯಂತ್ರಣ ಹಾಗೂ ಅರಣ್ಯ ನಿರ್ವಹಣೆ ಪ್ರಕ್ರಿಯೆಗಳಿಗೆ ಅರಣ್ಯ ಸಂರಕ್ಷಣೆ ಎನ್ನುವರು.

**4. ವನ್ಯ ಜೀವಿಧಾಮಗಳೆಂದರೇನು?**
ಉತ್ತರ : ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ವನ್ಯಜೀವಿಧಾಮ ಗಳೆನ್ನುವರು.

**5. ರಾಷ್ಟ್ರೀಯ ಉದ್ಯಾನಗಳೆಂದರೇನು?**
ಉತ್ತರ : ಸಾರ್ವಜನಿಕ ವಿಹಾರ ಮತ್ತು ವೈಜ್ಞಾನಿಕ ಹಿತದೃಷ್ಟಿಯಿಂದ ನೈಸರ್ಗಿಕ ಸೌಂದರ್ಯ, ಸಸ್ಯ ಮತ್ತು ಪ್ರಾಣಿಸಂಕುಲಗಳ ಸಂರಕ್ಷಣೆಗಾಗಿ ವಿಶೇಷವಾದ ರಕ್ಷಣೆ ನೀಡುವ ವಿಶಾಲವಾದ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವೆನ್ನುವರು.

**6. ಜೀವಿ ಸಂರಕ್ಷಣಾ ವಲಯ ಎಂದರೇನು?**
ಉತ್ತರ : ಸಂರಕ್ಷಿಸಲ್ಪಟ್ಟ ಭೂಪ್ರದೇಶಗಳ ವಿಶೇಷವಾದ ಒಂದು ಭಾಗ ಅಥವಾ ಕರಾವಳಿಯ ಪರಿಸರವನ್ನು 'ಜೀವಿ ಸಂರಕ್ಷಣಾವಲಯ' ಎನ್ನುವರು.

**7. ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳನ್ನು ತಿಳಿಸಿ.**
ಉತ್ತರ : ಜೀವಿಗಳ ಸಂರಕ್ಷಣೆ, ಸಂಶೋಧನೆ, ಶಿಕ್ಷಣ ಮತ್ತು ಸ್ಥಳೀಯರನ್ನು ಇದರಲ್ಲಿ ಭಾಗಿಯಾಗುವಂತೆ ಮಾಡುವುದು ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳಾಗಿವೆ.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಅರಣ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ.**
**ಉತ್ತರ : ಅರಣ್ಯಗಳ ಪ್ರಾಮುಖ್ಯತೆ :**

- ಪ್ರತ್ಯಕ್ಷವಾಗಿ ಮರದ ವಸ್ತುಗಳನ್ನು ಪೂರೈಸುತ್ತವೆ.
- ಸೌದೆ ಮತ್ತು ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳಾಗಿ ಬಳಕೆಯಾಗುವುವು.
- ಅರಣ್ಯಗಳು ಜಾನುವಾರುಗಳಿಗೆ ಬೇಕಾದ ಮೇವು ಮತ್ತು ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತವೆ.
- ಅರಣ್ಯಗಳು ಪರೋಕ್ಷವಾಗಿ ಮೇಲ್ಮೈ ಲಕ್ಷಣಗಳನ್ನು ಸಂರಕ್ಷಿಸುತ್ತವೆ.
- ಹರಿಯುವ ನದಿಯ ರಭಸವನ್ನು ಮಿತಗೊಳಿಸಿ, ಪ್ರವಾಹ ಮತ್ತು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ.
- ಮರುಭೂಮಿಕರಣವನ್ನು ತಡೆಯುತ್ತವೆ.
- ಮಣ್ಣಿನ ಫಲವತ್ತತೆ ವೃದ್ಧಿಗೆ ನೆರವಾಗುತ್ತವೆ.
- ವಾಯುಗುಣವನ್ನು ಸಮತೋಲನಗೊಳಿಸಲು ಮತ್ತು ಪರಿಯಾವರಣ ಸಮತೋಲನವನ್ನು ಕಾಪಾಡಲು ನೆರವಾಗುತ್ತವೆ.
- ವನ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.

**2. ಭಾರತದಲ್ಲಿ ಅರಣ್ಯಗಳನ್ನು ಎಷ್ಟು ವಿಧಗಳಾಗಿ ವಿಂಗಡಿಸಲಾಗಿದೆ? ಅವು ಯಾವುವು?**
**ಉತ್ತರ : ಭಾರತದಲ್ಲಿ ಅರಣ್ಯಗಳನ್ನು ಆರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ –**

- ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು
- ಉಷ್ಣವಲಯದ ಎಲೆ ಉದುರಿಸುವ ಕಾಡುಗಳು
- ಕುರುಚಲು ಸಸ್ಯ ಮತ್ತು ಹುಲ್ಲುಗಾವಲು
- ಮರುಭೂಮಿ ಸಸ್ಯವರ್ಗ
- ಪರ್ವತ ಕಾಡುಗಳು
- ಮ್ಯಾಂಗ್ರೋವ್ ಕಾಡುಗಳು

**3. ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳ ಲಕ್ಷಣ ಮತ್ತು ಹಂಚಿಕೆ ತಿಳಿಸಿ.**
**ಉತ್ತರ : ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

- ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು 250 ಸೆಂ.ಮೀ.ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ.
- ಈ ಕಾಡುಗಳು ದಟ್ಟವಾಗಿವೆ. ಮತ್ತು ಇಲ್ಲಿ ಮರಗಳು ಎತ್ತರಕ್ಕೆ ಬೆಳೆಯುತ್ತವೆ.
- ಮರಗಿಡಗಳು ಯಾವುದೇ ಒಂದೇ ಅವಧಿಯಲ್ಲಿ ಎಲೆಗಳನ್ನು ಉದುರಿಸುವುದಿಲ್ಲ. ಹೀಗಾಗಿ ಅವು ಸದಾ ಹಸಿರಾಗಿರುತ್ತವೆ.
- ತೇಗ, ಬೀಟೆ, ಎಬೋನಿ, ಮಹೊಗನಿ, ಗುರ್ಜಾನ್ ಮತ್ತು ಚಂಪ ಇಲ್ಲಿ ಬೆಳೆಯುವ ಪ್ರಮುಖ ಮರಗಳು
- ಇವು ಪ್ರಮುಖವಾಗಿ ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ ಹಾಗೂ ಈಶಾನ್ಯ ರಾಜ್ಯಗಳಾದ ಅಸ್ಸಾಂ, ನಾಗಾಲ್ಯಾಂಡ, ಮೇಘಾಲಯ, ತ್ರಿಪುರ, ಮಣಿಪುರಗಳ ಬೆಟ್ಟಗಳು ಮತ್ತು ಅಂಡಮಾನ್ – ನಿಕೋಬಾರ್ ದ್ವೀಪಗಳಲ್ಲಿ ಹಂಚಿಕೆಯಾಗಿವೆ.

**4. ಉಷ್ಣವಲಯದ ಎಲೆ ಉದುರಿಸುವ ಕಾಡುಗಳ ಲಕ್ಷಣ ಮತ್ತು ಹಂಚಿಕೆ ತಿಳಿಸಿ.**
**ಉತ್ತರ : ಉಷ್ಣವಲಯದ ಎಲೆ ಉದುರಿಸುವ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

- ಉಷ್ಣವಲಯದ ಎಲೆ ಉದುರಿಸುವ ಕಾಡುಗಳಿಗೆ "ಪರ್ಣಪಾತಿ ಅರಣ್ಯ" ಎಂತಲೂ ಕರೆಯುವರು.
- ಇವು ವರ್ಷದಲ್ಲಿ 100–200 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತವೆ.
- ಈ ಅರಣ್ಯಗಳ ಮರಗಳು ವಸಂತಋತು ಮತ್ತು ಬೇಸಿಗೆಯ ಆರಂಭದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು "ಮಾನ್ಸೂನ್ ಕಾಡುಗಳು" ಎಂತಲೂ ಕರೆಯಲಾಗಿದೆ.
- ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ತೇಗ, ಸಲ, ಶ್ರೀಗಂಧ, ಕೆಂದಾಳ, ತಪಸಿಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ ಮೊದಲಾದವು.
- ಈ ಅರಣ್ಯಗಳು ಮುಖ್ಯವಾಗಿ ಪಶ್ಚಿಮ ಘಟ್ಟಗಳು ಪೂರ್ವ ಇಳಿಜಾರು ಭಾಗಗಳನ್ನೊಳಗೊಂಡ ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಹಾಗೂ ಛೋಟಾನಾಗಪುರ ಪ್ರಸ್ಥಭೂಮಿ, ಹಿಮಾಲಯದ ಪಾದ ಭಾಗಗಳು, ಒಡಿಶಾ ಮತ್ತು ಪಶ್ಚಿಮ ಬಂಗಾಳಗಳ ಕೆಲಭಾಗಗಳಲ್ಲಿ ಕಂಡುಬರುತ್ತವೆ.

**5. ಕುರುಚಲು ಸಸ್ಯ ಮತ್ತು ಹುಲ್ಲುಗಾವಲುಗಳ ಲಕ್ಷಣ ಮತ್ತು ಹಂಚಿಕೆ ತಿಳಿಸಿ.**
**ಉತ್ತರ : ಕುರುಚಲು ಸಸ್ಯ ಮತ್ತು ಹುಲ್ಲುಗಾವಲುಗಳ ಲಕ್ಷಣ ಮತ್ತು ಹಂಚಿಕೆ**

➢ಈ ಸಸ್ಯವರ್ಗವು 60–100 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತವೆ.

➢ಕುರುಚಲು ಗಿಡಮರ ಮತ್ತು ಕುಬ್ಜ ಒರಟಾದ ಹುಲ್ಲು ಮುಳ್ಳಿನ ಮರ–ಗಿಡಗಳು ಅಲ್ಲಲ್ಲಿ ಚದುರಿದಂತೆ ಕಂಡುಬರುತ್ತವೆ.

➢ಕುರುಚಲು ಸಸ್ಯವರ್ಗವು ಕಛ್ ಮತ್ತು ಥಾರ್ ಮರುಭೂಮಿಯ ಅಂಚಿನ ಭಾಗಗಳಲ್ಲಿ ಕಂಡುಬರುತ್ತವೆ.

➢ಹುಲ್ಲುಗಾವಲು ಪ್ರಮುಖವಾಗಿ ರಾಜಸ್ಥಾನದ ಪೂರ್ವಭಾಗ, ಪಂಜಾಬ್, ಪಶ್ಚಿಮ ಘಟ್ಟಗಳ ಕೆಲಭಾಗ ಮತ್ತು ಕಾರ್ಡಮಮ್ ಬೆಟ್ಟಗಳಲ್ಲಿ ಕಂಡುಬರುತ್ತವೆ.

**6. ಮರುಭೂಮಿ ಸಸ್ಯವರ್ಗಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಮರುಭೂಮಿ ಸಸ್ಯವರ್ಗಗಳ ಲಕ್ಷಣ ಮತ್ತು ಹಂಚಿಕೆ**

➢ಮರುಭೂಮಿ ಮಣ್ಣು 10–50 ಸೆಂ.ಮೀ. ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡು ಬರುತ್ತದೆ.

➢ಮಳೆಯ ಕೊರತೆಯಿಂದಾಗಿ ಈ ಭಾಗಗಳಲ್ಲಿ ಅಲ್ಲಲ್ಲಿ ಚದುರಿದಂತೆ ಮರಗಳು ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ ಉದಾ : ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಇತ್ಯಾದಿ.

➢ಮರುಭೂಮಿ ಸಸ್ಯವರ್ಗವು ಥಾರ್ ಮರುಭೂಮಿಯು ಕಂಡುಬರುವ ರಾಜಸ್ಥಾನ, ಪಂಜಾಬ್ ಮತ್ತು ಹರಿಯಾಣಗಳ ಕೆಲವು ಭಾಗಗಳು ಮತ್ತು ದಖನ್ ಪ್ರಸ್ಥಭೂಮಿಯ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ.

**7. ಪರ್ವತ ಕಾಡುಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಪರ್ವತ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

➢ಪರ್ವತಗಳ ಇಳಿಜಾರುಗಳಲ್ಲಿ ಬೆಳೆಯುವ ಸಸ್ಯ ಮತ್ತು ಮರಗಳನ್ನು 'ಪರ್ವತ ಕಾಡುಗಳು' ಎನ್ನುವರು.

➢ಇವು ಹಿಮಾಲಯ ಪರ್ವತಗಳು ಹಾಗೂ ಸ್ವಲ್ಪಮಟ್ಟಿಗೆ ನೀಲಗಿರಿ ಬೆಟ್ಟಗಳಲ್ಲಿ ಕಂಡುಬರುತ್ತವೆ.

➢ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಓಕ್, ಚೆಸ್ಟನಟ್, ಆಶ್, ಬೀಚ್, ಪೈನ್, ಸಿಡಾರ್, ಸ್ಪ್ರೂಸ್, ಫರ್ ಮತ್ತು ವಾಲ್‌ನಟ್ ಇತ್ಯಾದಿ.

**8. ಮ್ಯಾಂಗ್ರೋವ್ ಕಾಡುಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಮ್ಯಾಂಗ್ರೋವ್ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

➢ಮ್ಯಾಂಗ್ರೋವ್ ಕಾಡುಗಳು ಅಧಿಕ ಮಳೆ ಬೀಳುವ ಜವುಗು ಪ್ರದೇಶ, ನದಿಮುಖಜ ಭೂಮಿ ಮತ್ತು ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ.

➢ಭಾರತದಲ್ಲಿ ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿ ಹೆಚ್ಚು ಕಂಡುಬರುತ್ತವೆ.

➢ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಸುಂದರಿ, ಬೆತ್ತ, ಜರಿಗಿಡ, ತಾಳೆ, ಕಂದಾಳೆ, ಕೇದಿಗೆ ಮುಂತಾದವು.

➢ನದಿಮುಖಜ ಭೂಮಿಗಳಲ್ಲಿ ಸಮುದ್ರದ ಕಡೆಗೆ ಬಾಗಿರುವ ಕೊಂಬೆಗಳಿಂದ ಬೆಳೆದಿರುವ ಬಿಳಲುಗಳು ಮರಗಳಿಗೆ ಆಧಾರವಾಗಿರುತ್ತವೆ.

**9. ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿದೆ. ಈ ಹೇಳಿಕೆಯನ್ನು ವಿಮರ್ಶಿಸಿ.**

ಉತ್ತರ : ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿದೆ. ಏಕೆಂದರೆ ಕೃಷಿ ಕ್ಷೇತ್ರದ ವಿಸ್ತರಣೆ, ರಸ್ತೆ ಮತ್ತು ರೈಲು ಮಾರ್ಗಗಳು ಹಾಗೂ ನೀರಾವರಿ ಯೋಜನೆಗಳ ನಿರ್ಮಾಣ, ಕೈಗಾರಿಕೀಕರಣ, ನಗರೀಕರಣ, ಅತಿಯಾಗಿ ಮೇಯಿಸುವಿಕೆ, ಕಾಡ್ಗಿಚ್ಚು ಮೊದಲಾದವು.

**10. ಅರಣ್ಯ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.**

**ಉತ್ತರ : ಅರಣ್ಯ ಸಂರಕ್ಷಣಾ ಕ್ರಮಗಳು**

➢ಅರಣ್ಯ ನಾಶ ನಿಯಂತ್ರಣ.

➢ಮಿತಿಮೀರಿ ಮೇಯಿಸುವುದನ್ನು ತಡೆಗಟ್ಟುವುದು.

➢ಕಾಡ್ಗಿಚ್ಚು ನಿಯಂತ್ರಣ.

➢ಅರಣ್ಯ ಅತಿಕ್ರಮಣದ ತಡೆ.

➢ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ.

➢ಮರಗಳ ಕಳ್ಳಸಾಗಣೆ ತಡೆ.

➢ವೈಜ್ಞಾನಿಕವಾಗಿ ಮರಗಳನ್ನು ಕಡಿಯುವುದು.

➢ಅರಣ್ಯನಾಶ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರುವುದು.

➢ಅರಣ್ಯ ಬೆಳೆಸಲು ಪ್ರೋತ್ಸಾಹ ನೀಡುವುದು.

➢10 ಅರಣ್ಯಗಳ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವನ್ನುಂಟುಮಾಡುವುದು.

**11. ಭಾರತದಲ್ಲಿರುವ ಪ್ರಮುಖ ವನ್ಯಜೀವಿಧಾಮಗಳು ಯಾವುವು?**

ಉತ್ತರ : ಭಾರತದಲ್ಲಿ ಸುಮಾರು 523 ವನ್ಯ ಜೀವಿಧಾಮಗಳಿವೆ. ಪ್ರಮುಖ ವನ್ಯಜೀವಿಧಾಮಗಳೆಂದರೆ – ಅಣ್ಣಾಮಲೈ ಮತ್ತು ಮದುಮಲೈ (ತಮಿಳುನಾಡು), ದಾಂಡೇಲಿ, ಭದ್ರ, ತಲಕಾವೇರಿ, ಬಿಳಿಗಿರಿರಂಗನಬೆಟ್ಟ (ಕರ್ನಾಟಕ), ಪರಿಯಾರ್ (ಕೇರಳ), ನಾಗಾರ್ಜುನ ಸಾಗರ (ತೆಲಂಗಾಣ), ಭರತ್‌ಪುರ ಮತ್ತು ರಣಥಂಬೋರ (ರಾಜಸ್ಥಾನ), ಮಾನಸ (ಅಸ್ಸಾಂ), ಜಲ್ದಪಾರ (ಪಶ್ಚಿಮ ಬಂಗಾಳ) ಮೊದಲಾದವು.

**12. ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನವನಗಳಾವುವು?**

ಉತ್ತರ : ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನಗಳೆಂದರೆ – ಕಾಜಿರಂಗ (ಅಸ್ಸಾಂ), ಸುಂದರಬನ (ಪಶ್ಚಿಮ ಬಂಗಾಳ), ಕಾರ್ಬೆಟ್ (ಉತ್ತರಾಂಚಲ), ಗಿರ್ (ಗುಜರಾತ್), ಕನ್ಹಾ (ಮಧ್ಯಪ್ರದೇಶ), ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ (ಕರ್ನಾಟಕ), ಸರಿಕ್ಸ (ರಾಜಸ್ಥಾನ), ಧುದವ (ಉತ್ತರ ಪ್ರದೇಶ), ತೊಡೋಬ (ಮಹಾರಾಷ್ಟ್ರ) ಇತ್ಯಾದಿ.

**13. ಭಾರತದ ಪ್ರಮುಖ ಜೀವಿ ಸಂರಕ್ಷಣಾ ವಲಯಗಳು ಯಾವುವು?**

ಉತ್ತರ : ಭಾರತದಲ್ಲಿ 18 ಜೀವಿ ಸಂರಕ್ಷಣಾ ವಲಯಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ – ನೀಲಗಿರಿ, ನಂದಾದೇವಿ, ನೋಕ್ರೆಕ್, ಮಾನಸ, ಗ್ರೇಟ್ ನಿಕೋಬಾರ್, ಮನ್ನಾರ್‌ಖಾರಿ, ಸುಂದರಬನ, ಸಮಿಲಿಪಾಲ್, ಕಾಂಚನಜಂಗ, ಪಚಮ್ಹಾರಿ, ಅಗಸ್ತ್ಯಮಲೈ, ದಿಬ್ರು, ಸೈಖೋವ, ದಿಬಾಂಗ್ ಇತ್ಯಾದಿ.

## ಅಧ್ಯಾಯ – 6 ಭಾರತದ ಜಲಸಂಪನ್ಮೂಲಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಸಿಂಧೂನದಿಯು ____ ಪರ್ವತದಲ್ಲಿ ಉಗಮವಾಗುತ್ತದೆ. – **ಕೈಲಾಸ ಪರ್ವತ**
2. ಸಿಂಧೂನದಿಯು ______ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. – **ಕರಾಚಿ.**
3. ಸಿಂಧೂನದಿಯ ಉದ್ದ – **2897 ಕಿ.ಮೀ.**
4. ಸಿಂಧೂನದಿಯು ಭಾರತದಲ್ಲಿ ಹರಿಯುವ ಉದ್ದ – **709 ಕಿ.ಮೀ.**
5. ಭಾರತದ ಉದ್ದವಾದ ನದಿ – **ಗಂಗಾ ನದಿ.**
6. ಗಂಗಾ ನದಿಯ ಒಟ್ಟು ಉದ್ದ – **2525 ಕಿ.ಮೀ.**
7. ಗಂಗಾ ನದಿಯ ಉಗಮ ಸ್ಥಾನ – **ಗಂಗೋತ್ರಿ ಹಿಮನದಿ.**
8. ಗಂಗಾ ನದಿಯು ಬಾಂಗ್ಲಾ ದೇಶದಲ್ಲಿ ______ ನದಿಯನ್ನು ಸೇರುತ್ತದೆ. – **ಬ್ರಹ್ಮಪುತ್ರ ನದಿ**
9. ಬಾಂಗ್ಲಾದಲ್ಲಿ ಗಂಗಾ ನದಿಯನ್ನು ಈ ಹೆಸರಿನಿಂದ ಕರೆಯುತ್ತಾರೆ. – **ಪದ್ಮನದಿ**
10. ಗಂಗಾ ನದಿಗೆ ಬಂದು ಸೇರುವ ______ ನದಿಯು ಉದ್ದವಾದ ಉಪನದಿಯಾಗಿದೆ. – **ಯಮುನಾ ನದಿ.**
11. ಬ್ರಹ್ಮಪುತ್ರ ನದಿಯ ಉಗಮ ಸ್ಥಾನ – **ಮಾನಸ ಸರೋವರ ಸಮೀಪದ ಚೆಮಯಂಗ್‌ಡಂಗ್**
12. ಬ್ರಹ್ಮಪುತ್ರ ನದಿಯು ಭಾರತವನ್ನು ____ ಎಂಬಲ್ಲಿ ಪ್ರವೇಶಿಸುತ್ತದೆ. – **ಅರುಣಾಚಲ ಪ್ರದೇಶ**
13. ಬ್ರಹ್ಮಪುತ್ರ ನದಿಯ ಉದ್ದ – **2589 ಕಿ.ಮೀ.**
14. ಮಹಾನದಿಯ ಉಗಮ ಸ್ಥಾನ – **ಸಿವಾಹ ಸರಣಿ.**
15. ಮಹಾನದಿಯ ಉದ್ದ – **851 ಕಿ.ಮೀ.**
16. ದಕ್ಷಿಣ ಭಾರತದಲ್ಲೇ ಉದ್ದವಾದ ನದಿ – **ಗೋದಾವರಿ.**
17. ಗೋದಾವರಿ ನದಿಯ ಉಗಮಸ್ಥಾನ – **ತ್ರಯಂಬಕ್**
18. ಗೋದಾವರಿ ನದಿಯ ಉದ್ದ – **1465 ಕಿ.ಮೀ.**
19. ಕೃಷ್ಣ ನದಿಯ ಉಗಮಸ್ಥಾನ – **ಮಹಬಲೇಶ್ವರ**
20. ಕೃಷ್ಣ ನದಿಯ ಉದ್ದ – **1400 ಕಿ.ಮೀ.**
21. ಕಾವೇರಿ ನದಿಯ ಉಗಮಸ್ಥಾನ – **ತಲಕಾವೇರಿ.**
22. ಪಶ್ಚಿಮಕ್ಕೆ ಹರಿಯುವ ಪ್ರಮುಖ ನದಿಗಳು – **ನರ್ಮದಾ & ತಾಪಿ**
23. ನರ್ಮದಾ ನದಿಯ ಉಗಮಸ್ಥಾನ – **ಅಮರಕಂಟಕ**
24. ತಾಪಿ ನದಿಯ ಉಗಮಸ್ಥಾನ – **ಮೂಲ್ತಾಯಿ**
25. ತಾಪಿನದಿಯ ಉದ್ದ – **724 ಕಿ.ಮೀ.**
26. ದೇಶದಲ್ಲಿ ಅತಿ ಹೆಚ್ಚು ನೀರಾವರಿ ಈ ನೀರಾವರಿ ಪದ್ಧತಿಯಿಂದ ಲಭ್ಯವಾಗುತ್ತದೆ. – **ಬಾವಿ ನೀರಾವರಿ.**
27. ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಬಾವಿ ನೀರಾವರಿ ಕ್ಷೇತ್ರ – **ಶೇ. 60.7%**
28. ಅತಿ ಕಡಿಮೆ ವೆಚ್ಚದ ನೀರಾವರಿ ಪದ್ಧತಿ – **ಬಾವಿ ನೀರಾವರಿ.**

29. ದೇಶದಲ್ಲಿ ಅತಿ ಹೆಚ್ಚು ಬಾವಿ ನೀರಾವರಿ ಪದ್ಧತಿ ಜನಪ್ರೀಯವಾಗಲು ಕಾರಣ – **ಬಾವಿಯ ನಿರ್ಮಾಣ & ನಿರ್ವಹಣೆಯು ಸುಲಭವಾದ್ದರಿಂದ.**

30. ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಕಾಲುವೆ ನೀರಾವರಿ ಕ್ಷೇತ್ರ– **ಶೇ. 27%**

31. ದೇಶದ ನೀರಾವರಿ ಪ್ರದೇಶದಲ್ಲಿ ____ ಭಾಗ ಕೆರೆ ನೀರಾವರಿಗೊಳಪಟ್ಟಿದೆ. – **ಶೇ. 3%**

32. ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿಕಣಿವೆ ಯೋಜನೆ – **ದಾಮೋದರ ನದಿ ಕಣಿವೆ ಯೋಜನೆ.**

33. ದಾಮೋದರ ನದಿ ಕಣಿವೆ ಯೋಜನೆಯನ್ನು ___ ಮಾದರಿಯನ್ನಾಧರಿಸಿ ರೂಪಿಸಲಾಗಿದೆ. – **ಅಮೇರಿಕ ಸಂಯುಕ್ತ ಸಂಸ್ಥಾನದ ಟೆನಿಸ್ಸಿ ಕಣಿವೆ ಯೋಜನೆ**

34. ಈ ನದಿಯನ್ನು ಬಂಗಾಳದ ದುಖಃಕಾರಿ ನದಿ ಎಂದು ಕರೆಯಲಾಗುತ್ತದೆ. – **ದಾಮೋದರ ನದಿ.**

35. ದಾಮೋದರ ನದಿ ಕಣಿವೆ ಯೋಜನೆ ಈ ಎರಡು ರಾಜ್ಯಗಳ ಸಂಯುಕ್ತ ಯೋಜನೆ – **ಬಿಹಾರ & ಪಶ್ಚಿಮಬಂಗಾಳ**

36. ಬಾಕ್ರಾ–ನಂಗಲ್ ಯೋಜನೆ ಈ ರಾಜ್ಯಗಳ ಸಂಯುಕ್ತ ಯೋಜನೆ – **ಪಂಜಾಬ್, ಹರಿಯಾಣ & ರಾಜಸ್ತಾನ**

37. ಬಾಕ್ರಾ–ನಂಗಲ್ ಯೋಜನೆಯನ್ನು ಈ ನದಿಗೆ ನಿರ್ಮಿಸಲಾಗಿದೆ – **ಸಟ್ಲಜ ನದಿ (ಹಿಮಾಚಲ ಪ್ರದೇಶ)**

38. ಭಾರತದ ಅತ್ಯಂತ ಎತ್ತರವಾದ ವಿವಿದೊದ್ದೇಶ ಯೋಜನೆ – **ಬಾಕ್ರಾ ಯೋಜನೆ (226 ಮೀ ಎತ್ತರ)**

39. ಬಾಕ್ರಾ ಆಣೆಕಟ್ಟೆಯ ಜಲಾಶಯಕ್ಕಿರುವ ಹೆಸರು – **ಗೋವಿಂದ ಸಾಗರ.**

40. ಒಡಿಶಾದ ಅತ್ಯಂತ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆ – **ಹಿರಾಕುಡ್ ಯೋಜನೆ.**

41. ಭಾರತದಲ್ಲೇ ಅತಿ ಉದ್ದವಾದ ವಿವಿಧೋದ್ದೇಶ ನದಿಕಣಿವೆ ಯೋಜನೆ – **ಹಿರಾಕುಡ್ ಯೋಜನೆ. (4801 ಮೀ ಉದ್ದ)**

42. ತುಂಗಭದ್ರ ಯೋಜನೆಯು ಈ ಎರಡು ರಾಜ್ಯಗಳ ಸಂಯುಕ್ತ ಯೋಜನೆ – **ಕರ್ನಾಟಕ & ಆಂದ್ರಪ್ರದೇಶ**

43. ತುಂಗಭದ್ರ ನದಿಗೆ ಆಣೆಕಟ್ಟೆಯನ್ನು ನಿರ್ಮಿಸಿದ ಸ್ಥಳ – **ಹೊಸಪೇಟೆ ಬಳಿಯ ಮಲ್ಲಾಪುರಂ ಎಂಬಲ್ಲಿ**

44. ತುಂಗಭದ್ರ ಜಲಾಶಯಕ್ಕಿರುವ ಹೆಸರು – **ಪಂಪಸಾಗರ.**

45. ಉತ್ತರ ಕರ್ನಾಟಕದ ಅತಿ ದೊಡ್ಡ ವಿವಿಧೋದ್ದೇಶ ನದಿಕಣಿವೆ ಯೋಜನೆ – **ಕೃಷ್ಣ ಮೇಲ್ದಂಡೆ ಯೋಜನೆ.**

46. ಕೃಷ್ಣ ನದಿಗೆ ಕರ್ನಾಟಕದಲ್ಲಿ ______ & ______ ಎಂಬಲ್ಲಿ ಆಣೆಕಟ್ಟುಗಳನ್ನು ನಿರ್ಮಿಸಲಾಗಿದೆ. – **ಆಲಮಟ್ಟಿ & ನಾರಾಯಣಪುರ.**

47. ಭಾರತ ಮತ್ತು ನೇಪಾಳ ದೇಶಗಳ ಸಂಯುಕ್ತ ವಿವಿಧೋದ್ದೇಶ ಯೋಜನೆ – **ಕೋಸಿ ಯೋಜನೆ.**

48. ಕೋಸಿ ನದಿಗೆ ನೇಪಾಳದ ________ ನಗರದ ಬಳಿ ಆಣೆಕಟ್ಟನ್ನು ನಿರ್ಮಿಸಲಾಗಿದೆ. – **ಹನುಮಾನ್ ನಗರ**

49. ಉತ್ತರ ಪ್ರದೇಶದ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆ – **ರಿಹಾಂದ್ ಯೋಜನೆ.**

50. ರಿಹಾಂದ್ ಯೋಜನೆಯ ಜಲಾಶಯಕ್ಕಿರುವ ಹೆಸರು – **ಗೋವಿಂದವಲ್ಲಭಪಂತ್ ಸಾಗರ.**

51. ನಾಗಾರ್ಜುನ ಸಾಗರ ಯೋಜನೆಯನ್ನು ತೆಲಂಗಾಣ ರಾಜ್ಯದ ನಾಗಾರ್ಜುನಕೊಂಡದ ಬಳಿ ___ ನದಿಗೆ ನಿರ್ಮಿಸಲಾಗಿದೆ. – **ಕೃಷ್ಣ ನದಿ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ನದಿಗಳ ನೀರುನ್ನು ಯಾವ ಯಾವ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತದೆ?**

ಉತ್ತರ : ನದಿಗಳ ನೀರನ್ನು ನೀರಾವರಿ, ಜಲವಿದ್ಯತ್ ತಯಾರಿಕೆ, ಒಳನಾಡಿನ ಜಲಸಾರಿಗೆ, ಮೀನುಗಾರಿಕೆ, ಮನರಂಜನೆ ಮೊದಲಾದ ಉದ್ದೇಶಗಳಿಗೆ ಉಪಯೋಗಿಸಲಾಗುತ್ತದೆ.

**2. ಭಾರತದ ನದಿಗಳ ಜಾಲವನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ? ಅವು ಯಾವುವು?**

ಉತ್ತರ : ಭಾರತದ ನದಿಗಳ ಜಾಲವನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ –

1. ಉತ್ತರ ಭಾರತದ ನದಿಗಳು. 2. ದಕ್ಷಿಣ ಭಾರತದ ನದಿಗಳು.

**3. ಉತ್ತರ ಭಾರತದ ಪ್ರಮುಖ ನದಿಗಳಾವುವು?**

ಉತ್ತರ : ಸಿಂಧೂ, ಗಂಗ, ಬ್ರಹ್ಮಪುತ್ರ ನದಿಗಳು ಉತ್ತರ ಭಾರತದ ಪ್ರಮುಖ ನದಿಗಳಾಗಿವೆ. ಈ ನದಿಗಳನ್ನು ಹಿಮಾಲಯದ ನದಿಗಳು ಎಂತಲೂ ಕರೆಯುತ್ತಾರೆ.

**4. ದಕ್ಷಿಣ ಭಾರತದ ಪ್ರಮುಖ ನದಿಗಳನ್ನು ಹೆಸರಿಸಿ.**

ಉತ್ತರ : ದಕ್ಷಿಣ ಭಾರತದ ಪ್ರಮುಖ ನದಿಗಳೆಂದರೆ – ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದಾ, ತಾಪಿ ಮತ್ತು ಅವುಗಳ ಉಪನದಿಗಳು.

**5. ದಕಿಣ ಭಾರತದಲ್ಲಿ ಪೂರ್ವಕ್ಕೆ ಹರಿಯುವ ಪ್ರಮುಖ ನದಿಗಳು ಯಾವುವು?**

ಉತ್ತರ : ದಕಿಣ ಭಾರತದಲ್ಲಿ ಪೂರ್ವಕ್ಕೆ ಹರಿಯುವ ಪ್ರಮುಖ ನದಿಗಳೆಂದರೆ – ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ ನದಿಗಳು.

**6. ನೀರಾವರಿ ಎಂದರೇನು?**

ಉತ್ತರ : ಕೃಷಿ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವುದನ್ನು 'ನೀರಾವರಿ' ಎನ್ನುವರು.

**7. ನೀರಾವರಿಯ ಮೂಲಗಳು ಯಾವುವು?**

ಉತ್ತರ : ನೀರಾವರಿಯ ಮೂಲಗಳೆಂದರೆ – ನದಿಗಳು, ಜಲಾಶಯ, ಕೆರೆ ಮತ್ತು ಅಂತರ್ಜಲ ಮೂಲಗಳು.

**8. ನೀರಾವರಿಯ ವಿಧಗಳನ್ನು ತಿಳಿಸಿ.**

ಉತ್ತರ : ಭಾರತದಲ್ಲಿ ಬಾವಿ, ಕಾಲುವೆ ಮತ್ತು ಕೆರೆ ನೀರಾವರಿ ವಿಧಾನಗಳು ರೂಢಿಯಲ್ಲಿವೆ.

**9. ಸಣ್ಣ ಹಿಡುವಳಿದಾರರಿಗೆ ಬಾವಿ ನೀರಾವರಿಯು ಅತ್ಯಂತ ಸೂಕ್ತವಾದುದು ಏಕೆ?**

ಉತ್ತರ : ಸಣ್ಣ ಹಿಡುವಳಿದಾರರರಿಗೆ ಬಾವಿ ನೀರಾವರಿಯು ಸೂಕ್ತವಾದದು ಏಕೆಂದರೆ ಬಾವಿಗಳ ನಿರ್ಮಾಣಕ್ಕೆ ಅಧಿಕ ಬಂಡವಾಳ ಅಥವಾ ತಾಂತ್ರಿಕತೆಯ ಅವಶ್ಯಕತೆ ಇಲ್ಲ. ವರ್ಷದ ಎಲ್ಲಾ ಕಾಲದಲ್ಲಿಯೂ ಬಾವಿಗಳಿಂದ ನೀರಾವರಿ ಸೌಲಭ್ಯ ಸಾಧ್ಯ.

**10.. ದಾಮೋದರ ನದಿಯನ್ನು 'ಬಂಗಾಳದ ದುಖಃಕಾರಿ ನದಿ' ಎಂದು ಕರೆಯುತ್ತಾರೆ. ಏಕೆ?**

ಉತ್ತರ : ದಾಮೋದರ ನದಿಯು ಪಶ್ಚಿಮ ಬಂಗಾಳದಲ್ಲಿ ಪ್ರವಾಹದಿಂದಾಗಿ ಅಪಾರ ಹಾನಿಯನ್ನುಂಟು ಮಾಡುತ್ತಿದ್ದು, ಇದನ್ನು ಬಂಗಾಳದ ದುಖಃಕಾರಿ ನದಿಯೆಂದೇ ಕರೆಯುತ್ತಿದ್ದರು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ನೀರು ಅತ್ಯಮೂಲ್ಯ ಸಂಪನ್ಮೂಲ ಹೇಗೆ? ಅಥವಾ ನೀರಿನ ಪ್ರಾಮುಖ್ಯತೆಯನ್ನು ತಿಳಿಸಿ.**

ಉತ್ತರ : ನೀರು ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದು. ನೀರಿಲ್ಲದೆ ಸುಸ್ಥಿರ ಜೀವನ ಸಾಧ್ಯವಿಲ್ಲ. ಮಾನವನಿಗೆ ಕುಡಿಯಲು, ಅಡಿಗೆ, ಸ್ವಚ್ಛತೆ, ವ್ಯವಸಾಯ, ವಿದ್ಯುಚ್ಛಕ್ತಿ ತಯಾರಿಕೆ, ಕೈಗಾರಿಕೆ, ನೌಕಾಯಾನ, ಮೀನುಗಾರಿಕೆ ಮೊದಲಾದ ಉದ್ದೇಶಗಳಿಗೆ ನೀರು ಅವಶ್ಯಕ.

**2. ಸಿಂಧೂನದಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

ಉತ್ತರ : ಸಿಂಧೂ ನದಿಯು ಕೈಲಾಸ ಪರ್ವತದಲ್ಲಿ ಉಗಮವಾಗುತ್ತದೆ. ಇದು ಪಶ್ಚಿಮಾಭಿಮುಖವಾಗಿ ಹರಿದು ಪಾಕಿಸ್ತಾನವನ್ನು ಸೇರಿ ಕರಾಚಿ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಸಿಂಧೂನದಿ ಉದ್ದ 2897 ಕಿ.ಮೀ ಅದರಲ್ಲಿ 709 ಕಿ.ಮೀ. ಭಾರತದಲ್ಲಿದೆ. ಇದು ಅನೇಕ ಉಪನದಿಗಳನ್ನು ಒಳಗೊಂಡಿದೆ. ಅವುಗಳೆಂದರೆ – ಝೀಲಂ, ಚೀನಾಬ್, ಬಿಯಾಸ್, ರಾವಿ, ಮತ್ತು ಸಟ್ಲೇಜ್ ಮುಂತಾದವು.

**3. ಗಂಗಾನದಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

ಉತ್ತರ : ಗಂಗಾನದಿಯು ಭಾರತದ ಉದ್ದವಾದ ನದಿ. ಇದರ ಒಟ್ಟು ಉದ್ದ 2525 ಕಿ.ಮೀ. ಇದು ಗಂಗೋತ್ರಿ ಎಂಬಲ್ಲಿ ಹುಟ್ಟುತ್ತದೆ. ಇದು ಬಾಂಗ್ಲಾದಲ್ಲಿ ಬ್ರಹ್ಮಪುತ್ರ ನದಿಯನ್ನು ಸೇರಿ ಪದ್ಮ ಎಂಬ ಹೆಸರಿನಿಂದ ಹರಿದು ಅಂತಿಮವಾಗಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಗಂಗಾನದಿ ಸೇರುವ ಪ್ರಮುಖ ಉಪನದಿಗಳೆಂದರೆ – ಯಮುನ, ಘಾಗ್ರ, ಗಂಡಕ್, ರಾಮಗಂಗ, ಶಾರದ, ಸೋನೆ ಮತ್ತು ಕೋಸಿ.

**4. ಬ್ರಹ್ಮಪುತ್ರನದಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

ಉತ್ತರ : ಬ್ರಹ್ಮಪುತ್ರ ನದಿಯು ಮಾನಸ ಸರೋವರದ ಸಮೀಪ ಚೆಮಯುಂಗ್‌ಡಂಗ್ ಎಂಬಲ್ಲಿ (ಟಿಬೆಟ್) ಉಗಮವಾಗುತ್ತದೆ. ಆರಂಭದಲ್ಲಿ ಪೂರ್ವಾಭಿಮುಖವಾಗಿ ಹರಿದು ಅರುಣಾಚಲ ಪ್ರದೇಶದಲ್ಲಿ ಭಾರತವನ್ನು ಪ್ರವೇಶಿಸುತ್ತದೆ. ಇದು ಬಾಂಗ್ಲಾದಲ್ಲಿ ಗಂಗಾ ನದಿಯನೊಂದಿಗೆ ಸೇರುತ್ತದೆ. ಇದರ ಉದ್ದ 2589 ಕಿ.ಮೀ.ಗಳು

**5. ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ? ಅಥವಾ ಭಾರತದ ವ್ಯವಸಾಯವು ಹೆಚ್ಚಾಗಿ ನೀರಾವರಿಯನ್ನು ಅವಲಂಬಿಸಿದೆ. ಏಕೆ?**

ಉತ್ತರ : ಭಾರತ ಕೃಷಿ ಪ್ರಧಾನ ದೇಶ. ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದರೆ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ. ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ. ಉದಾ : ಬತ್ತ,

ಕಬ್ಬು ಇತ್ಯಾದಿ. ಜೊತೆಗೆ ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ. ಆದ್ದರಿಂದ ಭಾರತದ ವ್ಯವಸಾಯವು ಹೆಚ್ಚಾಗಿ ನೀರಾವರಿಯನ್ನು ಅವಲಂಬಿಸಿದೆ.

**6. ವಿವಿಧೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳಾವವು?**

**ಉತ್ತರ : ವಿವಿಧೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳು**

- ನೀರಾವರಿ ಸೌಲಭ್ಯವನ್ನು ಒದಗಿಸುವದು.
- ಜಲವಿದ್ಯುಚ್ಛಕ್ತಿ ಉತ್ಪಾದಿಸುವದು.
- ನದಿಗಳ ಪ್ರವಾಹಗಳನ್ನು ನಿಯಂತ್ರಿಸುವದು.
- ನೌಕಾಯಾನದ ಸೌಲಭ್ಯವನ್ನು ಒದಗಿಸುವದು.
- ಗೃಹಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವದು.
- ಮಣ್ಣಿನ ಸವಕಳಿಯನ್ನು ನಿಯಂತ್ರಿಸುವದು.
- ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು.
- ಅರಣ್ಯ ಸಂಪತ್ತನ್ನು ವೃದ್ಧಿಸುವದು.
- ಮನರಂಜನೆಯ ಸೌಲಭ್ಯ ಒದಗಿಸುವುದು.
- ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಪರಿವರ್ತಿಸುವುದು.

**7. ದಾಮೋದರ ನದಿ ಕಣಿವೆ ಯೋಜನೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ದಾಮೋದರ ನದಿ ಕಣಿವೆ ಯೋಜನೆ**

- ದಾಮೋದರ ನದಿಕಣಿವೆ ಯೋಜನೆಯು ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿಕಣಿವೆ ಯೋಜನೆಯಾಗಿದೆ.
- ಇದು ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ.
- ಈ ಯೋಜನೆಯು ತಿಲೈಯಾ, ಕೊನಾರ್, ಮೈಥಾನ್ ಮತ್ತು ಪಂಚತ್‌ಹಿಲ್ ಎಂಬಲ್ಲಿ 4 ಆಣೆಕಟ್ಟುಗಳನ್ನು ಒಳಗೊಂಡಿದೆ.
- ಬೊಕಾರೋ, ದುರ್ಗಾಪುರ ಮತ್ತು ಚಂದ್ರಾಪುರಗಳಲ್ಲಿ 3 ಥರ್ಮಲ್ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸಲಾಗಿದೆ.

**8. ಭಾರತದ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆಗಳಾವುವು?**

**ಉತ್ತರ : ಭಾರತದ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆಗಳು**

1. ದಾಮೋದರ ನದಿಕಣಿವೆ ಯೋಜನೆ
2. ಭಾಕ್ರಾ–ನಂಗಲ್ ನದಿಕಣಿವೆ ಯೋಜನೆ
3. ಹಿರಾಕುಡ್ ಯೋಜನೆ
4. ತುಂಗಭದ್ರ ಯೋಜನೆ
5. ಕೃಷ್ಣ ಮೇಲ್ದಂಡೆ ಯೋಜನೆ
6. ಕೋಸಿ ಯೋಜನೆ
7. ರಿಹಾಂದ್ ಯೋಜನೆ
8. ನಾಗಾರ್ಜುನ ಸಾಗರ ಯೋಜನೆ.

**9. ಕೃಷ್ಣ ಮೇಲ್ದಂಡೆ ಯೋಜನೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ಕೃಷ್ಣ ಮೇಲ್ದಂಡೆ ಯೋಜನೆ**

- ಈ ಯೋಜನೆಯು ಕೃಷ್ಣ ನದಿಗೆ ನಿರ್ಮಿಸಲಾಗಿರುವ ಉತ್ತರ ಕರ್ನಾಟಕದ ಅತಿದೊಡ್ಡ ವಿವಿಧೋದ್ದೇಶ ಯೋಜನೆಯಾಗಿದೆ.
- ಈ ಯೋಜನೆಯು ಆಲಮಟ್ಟಿ ಮತ್ತು ನಾರಾಯಣಪುರ ಎಂಬಲ್ಲಿ ನಿರ್ಮಾಣ ಮಾಡಿರುವ ಎರಡು ಆಣೆಕಟ್ಟೆಗಳು ಮತ್ತು ಒಂದು ಜಲವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಒಳಗೊಂಡಿದೆ.
- ನೀರಾವರಿ ಪೂರೈಕೆ, ಕುಡಿಯುವ ನೀರು ಸರಬರಾಜು ಮತ್ತು ಜಲವಿದ್ಯುಚ್ಛಕ್ತಿ ತಯಾರಿಕೆಗಳು ಈ ಯೋಜನೆಯ ಮುಖ್ಯ ಉದ್ದೇಶಗಳಾಗಿವೆ.

**10. ಬಾವಿ ನೀರಾವರಿಯ ಪ್ರಾಮುಖ್ಯತೆ ಮತ್ತು ಹಂಚಿಕೆ ಕುರಿತು ಬರೆಯಿರಿ.**

**ಉತ್ತರ : ಬಾವಿ ನೀರಾವರಿಯ ಪ್ರಾಮುಖ್ಯತೆ ಮತ್ತು ಹಂಚಿಕೆ**

- ಬಾವಿ ನೀರಾವರಿಯ ಭಾರತದ ಅತಿ ಪ್ರಮುಖವಾದ ನೀರಾವರಿ ವಿಧಾನವಾಗಿದೆ.
- ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಶೇ. 60.7% ಭಾಗವು ಬಾವಿ ನೀರಾವರಿ ಸೌಕರ್ಯ ಹೊಂದಿದೆ.
- ಕಡಿಮೆ ವೆಚ್ಚದಲ್ಲಿ ಬಾವಿ ತೋಡಬಹುದು, ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ. ಆದ್ದರಿಂದ ಸಣ್ಣ ಭೂ ಹಿಡುವಳಿ ರೈತರಿಗೂ ಇದು ಲಭ್ಯವಾಗಬಲ್ಲದು.
- ಗಂಗಾ ಬಯಲಿನಲ್ಲಿ ಬಾವಿ ನೀರಾವರಿಯು ವ್ಯಾಪಕವಾಗಿ ರೂಢಿಯಲ್ಲಿದೆ.
- ಪಂಜಾಬ, ಹರಿಯಾಣ, ಉತ್ತರಪ್ರದೇಶ, ಬಿಹಾರ, ಮತ್ತು ಪಶ್ಚಿಮಬಂಗಾಳ ರಾಜ್ಯಗಳು ಮತ್ತು ದಕ್ಷಿಣ ಭಾರತದಲ್ಲಿ ತಮಿಳುನಾಡು, ಆಂದ್ರಪ್ರದೇಶ, ಕರ್ನಾಟಕ ಮತ್ತು ಒಡಿಶಾ ರಾಜ್ಯಗಳಲ್ಲಿ ಬಾವಿ ನೀರಾವರಿ ಹೆಚ್ಚು ರೂಢಿಯಲ್ಲಿದೆ.

## ಅಧ್ಯಾಯ – 7. ಭಾರತದ ಭೂ ಸಂಪನ್ಮೂಲಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭೂ ಬಳಕೆಯ ಮಾದರಿಯನ್ನು ____ ವರ್ಗಗಳಾಗಿ ವಿಂಗಡಿಸಬಹುದು. – **7 ವರ್ಗಗಳು**

**2.** ಭಾರತದ ಒಟ್ಟು ಭೂಪ್ರದೇಶದಲ್ಲಿ ನಿವ್ವಳ ಸಾಗುವಳಿ ಕ್ಷೇತ್ರದ ಪ್ರಮಾಣ – **ಶೇ. 42.2%**

**3.** ಭಾರತದ ಒಟ್ಟು ಭೂಪ್ರದೇಶದಲ್ಲಿ ಅರಣ್ಯ ಕ್ಷೇತ್ರದ ಪ್ರಮಾಣ **– ಶೇ. 22.8%**

**4.** ಭಾರತದ ಒಟ್ಟು ಭೂಪ್ರದೇಶದಲ್ಲಿ ಕೃಷಿಗಾಗಿ ದೊರೆಯದ ಭೂಮಿಯ ಪ್ರಮಾಣ **– ಶೇ. 14.1%**

**5.** ಭಾರತದ ಒಟ್ಟು ಭೂಪ್ರದೇಶದಲ್ಲಿ ಪಾಳು ಭೂಮಿಯ ಪ್ರಮಾಣ – **ಶೇ. 8.2%**

**6.** ಭಾರತದ ಒಟ್ಟು ಭೂಪ್ರದೇಶದಲ್ಲಿ ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳದ ಪ್ರಮಾಣ **– ಶೇ. 3.4%**

**7.** ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.___ ಜನರು ಕೃಷಿಯನ್ನೇ ಆಧರಿಸಿದ್ದಾರೆ– **ಶೇ.65% ರಷ್ಟು ಜನರು.**

**8.** ಭಾರತದಲ್ಲಿ ಮಿಶ್ರಣ ಬೇಸಾಯ ರೂಢಿಗೆ ಬಂದದ್ದು ____ ರಲ್ಲಿ – **ಕ್ರಿ ಶ 1951ರಲ್ಲಿ.**

**9.** ಭಾರತವು ____ ದೇಶದ ತರುವಾಯ ಪ್ರಪಂಚದ ಎರಡನೇ ಹೆಚ್ಚು ಭತ್ತ ಉತ್ಪಾದಿಸುವ ದೇಶವಾಗಿದೆ. **– ಚೀನಾ.**

**10.** ____ ರಾಜ್ಯವು ದೇಶದಲ್ಲೇ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯವಾಗಿದೆ. **– ಪಶ್ಚಿಮ ಬಂಗಾಳ.**

**11.** ದೇಶದ ಉತ್ತರ ಮತ್ತು ವಾಯುವ್ಯ ಪ್ರದೇಶಗಳ ಜನರ ಅತಿ ಮುಖ್ಯ ಆಹಾರಧಾನ್ಯ ಬೆಳೆ **– ಗೋದಿ.**

**12.** ಚಹ ಒಂದು ________ ಬೆಳೆಯಾಗಿದೆ **–** ನೆಡುತೋಪು.

**13.** ಭಾರತವು ___ ದೇಶದ ತರುವಾಯ ಪ್ರಪಂಚದ ಎರಡನೇ ಹೆಚ್ಚು ಚಹ ಉತ್ಪಾದಿಸುವ ದೇಶವಾಗಿದೆ. **– ಚೀನಾ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಭೂಬಳಕೆ ಎಂದರೇನು?**

ಉತ್ತರ : ಅರಣ್ಯ, ವ್ಯವಸಾಯ, ಹುಲ್ಲುಗಾವಲು ಇತ್ಯಾದಿಗಳಂತಹ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದನ್ನು 'ಭೂಬಳಕೆ' ಎನ್ನುವರು.

**2. ಭೂಬಳಕೆಯನ್ನು ನಿರ್ಧರಿಸುವ ಅಂಶಗಳಾವುವು?**

ಉತ್ತರ : ಭೂಬಳಕೆಯನ್ನು ನಿರ್ಧರಿಸುವ ಅಂಶಗಳೆಂದರೆ – ಭೂ ಮೈಲ್ಮೈ ಲಕ್ಷಣ, ವಾಯುಗುಣ, ಮಣ್ಣು, ಜನಸಾಂದ್ರತೆ, ಸಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಅಂಶಗಳು.

**3. ಕೃಷಿ ಎಂದರೇನು?**

ಉತ್ತರ : ಮನುಷ್ಯ ತನಗೆ ಅಗತ್ಯವಾದ ಆಹಾರ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು "ವ್ಯವಸಾಯ ಅಥವಾ ಕೃಷಿ" ಎನ್ನುವರು.

**4. ಜೀವನಾಧಾರ ಬೇಸಾಯ ಎಂದರೇನು? ಇದರ ಎರಡು ವಿಧಗಳು ಯಾವುವು?**

ಉತ್ತರ : ರೈತ ಮತ್ತು ಆತನ ಕುಟುಂಬದ ಬಳಕೆಗಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ ಜೀವನಾಧಾರ ಬೇಸಾಯ ಎನ್ನುವರು. ಜೀವನಾಧಾರ ಬೇಸಾಯದಲ್ಲಿ 2 ವಿಧಗಳಿವೆ. ಅವುಗಳೆಂದರೆ – 1. ವರ್ಗಾವಣೆ ಬೇಸಾಯ 2. ಸ್ಥಿರ ಬೇಸಾಯ

**5. ವರ್ಗಾವಣೆ ಬೇಸಾಯ ಎಂದರೇನು?**

ಉತ್ತರ : ಕಾಡಿನ ಸ್ವಲ್ಪ ಭಾಗವನ್ನು ಕತ್ತರಿಸಿ, ಸುಟ್ಟು ವಿಸ್ತರಿಸಿ ಕೆಲವು ವರ್ಷಗಳ ಕಾಲ ಬೇಸಾಯ ಮಾಡಲಾಗುತ್ತದೆ. ಅಲ್ಲಿನ ಮಣ್ಣಿನ ಸಾರವು ಕಡಿಮೆಯಾದ ಮೇಲೆ ಅದನ್ನು ಬಿಟ್ಟು ಮತ್ತೊಂದೆಡೆಗೆ ವಲಸೆ ಹೋಗಿ ಅದೇ ರೀತಿಯ ಬೇಸಾಯ ಕ್ರಮ ಮುಂದುವರೆಸುವುದನ್ನು 'ವರ್ಗಾವಣೆ ಬೇಸಾಯ' ಎನ್ನುವರು.

**6. ಸ್ಥಿರ ಬೇಸಾಯ ಎಂದರೇನು?**

ಉತ್ತರ : ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳ ಬದಲಾವಣೆ ಮಾಡದೆ ಶಾಶ್ವತವಾಗಿ ಒಂದೇ ಕಡೆ ನೆಲೆಸಿ ಸಾಗುವಳಿ ಮಾಡುವುದನ್ನು 'ಸ್ಥಿರ ಅಥವಾ ಸ್ಥಾಯಿ ಬೇಸಾಯ ಎನ್ನುವರು.

**7. ಸಾಂದ್ರ ಬೇಸಾಯ ಎಂದರೇನು?**

ಉತ್ತರ : ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸಿ ವರ್ಷದಲ್ಲಿ ಎರಡು ಅಥವಾ ಮೂರು ಬೆಳೆಗಳನ್ನು ಸಾಗುವಳಿ ಮಾಡುವ ಬೇಸಾಯ ಪದ್ಧತಿಗೆ 'ಸಾಂದ್ರ ಬೇಸಾಯ' ಎನ್ನುವರು.

**8. ವಾಣಿಜ್ಯ ಬೇಸಾಯ ಎಂದರೇನು?**

ಉತ್ತರ : ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವ ಕೃಷಿ ವಿಧಾನಕ್ಕೆ 'ವಾಣಿಜ್ಯ ಬೇಸಾಯ' ಎನ್ನುವರು.

**9. ಮಿಶ್ರಣ ಬೇಸಾಯ ಎಂದರೇನು?**

ಉತ್ತರ : ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಸಾಗುವ ಕೃಷಿ ಪದ್ಧತಿಗೆ ಮಿಶ್ರಣ ಬೇಸಾಯ ಎನ್ನುವರು.

**10. ನೆಡುತೋಪು ಬೇಸಾಯ ಎಂದರೇನು?**

ಉತ್ತರ : ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ ನೆಡುತೋಪು ಬೇಸಾಯ ಎನ್ನುವರು. ಉದಾ : ಚಹ, ಕಾಫಿ.

**11. ಒಣ ಬೇಸಾಯ ಎಂದರೇನು?**

ಉತ್ತರ : ಅತಿ ಕಡಿಮೆ ಬೀಳುವ ಹಾಗೂ ನೀರಾವರಿ ಸೌಲಭ್ಯವಿಲ್ಲದ, ಇದ್ದರೂ ಅದು ಮಿತವಾಗಿರುವ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ ಪದ್ಧತಿಯನ್ನು ಒಣ ಬೇಸಾಯ ಎನ್ನುವರು.

**12. ಆರ್ದ್ರ ಬೇಸಾಯ ಎಂದರೇನು?**

ಉತ್ತರ : ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿಯ ನೆರವಿಲ್ಲದೆ ಬೆಳೆಗಳನ್ನು ಬೆಳಯುವುದನ್ನು 'ಆರ್ದ್ರ ಬೇಸಾಯ' ಎನ್ನುವರು.

**13. ನೀರಾವರಿ ಬೇಸಾಯ ಎಂದರೇನು?**

ಉತ್ತರ : ನೀರಾವರಿ ಸಹಾಯದಿಂದ ಬೆಳೆ ಬೆಳೆಯುವ ಕೃಷಿ ವಿಧಾನವನ್ನು 'ನೀರಾವರಿ ಬೇಸಾಯ' ಎನ್ನುವರು.

**14. ಬೆಳೆ ಋತು ಎಂದರೇನು? ಬೆಳೆ ಋತುಗಳ ವಿಧಗಳನ್ನು ತಿಳಿಸಿ.**

ಉತ್ತರ : ಕೃಷಿ ಪ್ರದೇಶವೊಂದರಲ್ಲಿ ವಿವಿಧ ಬೆಳೆಗಳನ್ನು ಸಾಗುವಳಿ ಮಾಡುವ ನಿರ್ದಿಷ್ಟ ಅವಧಿಗೆ 'ಬೆಳೆ ಋತು' ಎನ್ನುವರು. ಭಾರತದಲ್ಲಿ ಮುಖ್ಯವಾಗಿ ಮೂರು ಬೆಳೆ ಋತುಗಳಿವೆ. ಅವುಗಳೆಂದರೆ – 1. ಮುಂಗಾರು ಋತು, 2. ಹಿಂಗಾರು ಋತು, 3. ಜ್ಯಾಡ್ ಬೆಳೆ ಋತು.

**15. ಮುಂಗಾರು ಬೆಳೆ ಋತು ಎಂದರೇನು?**

ಉತ್ತರ : ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು. ಈ ಋತುವಿನಲ್ಲಿ ನೈಋತ್ಯ ಮಾನ್ಸೂನ್ ಮಳೆಗಾಲದ ಆರಂಭದೊಡನೆ ಅಂದರೆ ಜೂನ್–ಜುಲೈ ತಿಂಗಳಲ್ಲಿ ಬಿತ್ತನೆ ಮಾಡಲಾಗುವುದು. ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲಿ ಬೆಳೆ ಕಟಾವು ಮಾಡಲಾಗುವುದು.

**16. ಹಿಂಗಾರು ಬೆಳೆ ಋತು ಎಂದರೇನು?**

ಉತ್ತರ : ಹಿಂಗಾರು ಮಳೆಗಾಲವೆಂದು ಕರೆಯುವ ಈಶಾನ್ಯ ಮಾನ್ಸೂನ್ ಆರಂಭದಲ್ಲಿ ಅಂದರೆ ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಲಾಗುವುದು. ಫೆಬ್ರುವರಿ–ಮಾರ್ಚ ತಿಂಗಳಲ್ಲಿ ಬೆಳೆ ಕಟಾವು ಮಾಡುವುದನ್ನು 'ಹಿಂಗಾರು ಬೆಳೆ ಋತು' ಎನ್ನುವರು.

**17. ಜ್ಯಾಡ್ ಬೆಳೆ ಋತು ಎಂದರೇನು?**

ಉತ್ತರ : ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆ ಬೆಳೆಯುವದನ್ನು ಜ್ಯಾಡ್ ಬೆಳೆ ಋತು ಎನ್ನುವರು.

**18. ಬೆಳೆಯಿಡುವ ಮಾದರಿ ಎಂದರೇನು?**

ಉತ್ತರ : ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು 'ಬೆಳೆಯಿಡುವ ಮಾದರಿ' ಎನ್ನುವರು.

**19. ಭಾರತದಲ್ಲಿ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಇದಕ್ಕೆ ಕಾರಣಗಳೇನು?**

ಉತ್ತರ : ಭಾರತದಲ್ಲಿ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಅದಕ್ಕೆ ಪ್ರಮುಖ ಕಾರಣಗಳೆಂದರೆ – ಮೇಲ್ಮೈ ಲಕ್ಷಣ, ಮಣ್ಣು, ವಾಯುಗುಣ, ಭೂಹಿಡುವಳಿಯ ಗಾತ್ರ, ನೀರಿನ ಪೂರೈಕೆ, ರೈತರ ಆರ್ಥಿಕ ಪರಿಸ್ಥಿತಿ, ತಂತ್ರಜ್ಞಾನ ಇತ್ಯಾದಿ.

**20. ಕಬ್ಬಿನಿಂದ ಉತ್ಪಾದಿಸುವ ಉತ್ಪನ್ನಗಳು ಯಾವುವು?**

ಉತ್ತರ : ಕಬ್ಬಿನಿಂದ ಸಕ್ಕರೆ, ಬೆಲ್ಲ ಮತ್ತು ಖಂಡಸಾರಿಗಳನ್ನು ಉತ್ಪಾದಿಸಲಾಗುತ್ತದೆ.

**21. ನಾರು ಬೆಳೆಗಳು ಎಂದರೇನು?**

ಉತ್ತರ : ಜವಳಿ ಉದ್ಯಮಗಳಿಗೆ ಅಗತ್ಯವಾದ ಕಚ್ಚಾಪದಾರ್ಥಗಳನ್ನು ಪೂರೈಸುವ ಬೆಳೆಗಳಿಗೆ ನಾರು ಬೆಳೆಗಳು ಎನ್ನುವರು. ಉದಾ : ಹತ್ತಿ, ಸೆಣಬು.

**22. ತೋಟಗಾರಿಕೆ ಬೇಸಾಯ ಎಂದರೇನು?**

ಉತ್ತರ : ಹಣ್ಣು, ತರಕಾರಿ, ಹೂವು, ಔಷದೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದನ್ನು "ತೋಟಗಾರಿಕೆ ಬೇಸಾಯ" ಎನ್ನುವರು.

**23. ಪುಷ್ಪ ಕೃಷಿ ಎಂದರೇನು?**

ಉತ್ತರ : ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ 'ಪುಷ್ಪ ಕೃಷಿ ಎನ್ನುವರು.

**24. ಪಾನೀಯ ಬೆಳೆಗಳೆಂದರೇನು? ಉದಾಹರಣೆ ಕೊಡಿ.**

ಉತ್ತರ : ಆಹ್ಲಾದಕರ ಪಾನೀಯಗಳ ತಯಾರಿಕೆಗೆ ಉಪಯುಕ್ತವಾಗುವ ಬೆಳೆಗಳಿಗೆ ಪಾನೀಯ ಬೆಳೆಗಳೆಂದು ಹೆಸರು. ಉದಾ : ಚಹ & ಕಾಫಿ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಭೂಬಳಕೆಯನ್ನು ಎಷ್ಟು ವರ್ಗಗಳಾಗಿ ವಿಂಗಡಿಸಲಾಗಿದೆ? ಅವು ಯಾವುವು?**

**ಉತ್ತರ : ಭಾರತದ ಭೂಬಳಕೆಯನ್ನು 7 ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ–**

1. ನಿವ್ವಳ ಸಾಗುವಳಿ ಪ್ರದೇಶ 2. ಅರಣ್ಯ ಪ್ರದೇಶ,
3. ಕೃಷಿಗಾಗಿ ದೊರೆಯದ ಭೂಮಿ 4. ಪಾಳುಭೂಮಿ
5. ಬಳಕೆಯಾಗದ ಕೃಷಿ ಯೋಗ್ಯಭೂಮಿ
6. ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳ 7. ಇತರೆ

**2. ಕೃಷಿಯ ಪ್ರಾಮುಖ್ಯತೆಯನ್ನು ತಿಳಿಸಿ.**

**ಉತ್ತರ : ಕೃಷಿಯ ಪ್ರಾಮುಖ್ಯತೆ**

- ಭಾರತವು ಕೃಷಿ ಪ್ರಧಾನ ದೇಶವಾಗಿದ್ದು, ದೇಶದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ. 65% ಭಾಗವು ಕೃಷಿ ಆಧರಿಸಿದೆ.
- ಜನರು ಮತ್ತು ಜಾನುವಾರುಗಳಿಗೆ ಅಗತ್ಯವಾದ ಆಹಾರವನ್ನು ಪೂರೈಸುವ ವೃತ್ತಿಯಾಗಿದೆ.
- ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ.
- ದೇಶದ ತೃತೀಯ ವೃತ್ತಿಗಳಾದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ.
- ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತದೆ. ಉದಾ : ಹತ್ತಿ, ಸೆಣಬು, ಸಕ್ಕರೆ, ಕಾಗದ ಕೈಗಾರಿಕೆ.
- ಕೈಗಾರಿಕಾ ವಸ್ತುಗಳಿಗೆ ಮಾರುಕಟ್ಟೆಯನ್ನು ಒದಗಿಸುತ್ತದೆ. ಉದಾ : ರಸಗೊಬ್ಬರ, ಕ್ರಿಮಿನಾಶಕ, ಯಂತ್ರೋಪಕರಣಗಳು.

**3. ಭತ್ತದ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ ತಿಳಿಸಿ.**

**ಉತ್ತರ : ಭತ್ತದ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ.**

- ಭತ್ತವು ಭಾರತದ ಅತಿ ಪ್ರಮುಖ ಮುಂಗಾರು ಬೆಳೆ.
- ಭತ್ತವು ಉಷ್ಣವಲಯದ ಬೆಳೆ ಹೀಗಾಗಿ ಈ ಬೆಳೆಗೆ 18° ರಿಂದ 25° ಸೆಂ. ಉಷ್ಣಾಂಶ ಅವಶ್ಯಕ.
- 100 ರಿಂದ 200 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
- ಫಲವತ್ತಾದ ಜೇಡಿ ಮಿಶ್ರಿತ ಮರಳು ಮಣ್ಣು ಮತ್ತು ಮೆಕ್ಕಲು ಮಣ್ಣು ಭತ್ತದ ಬೆಳೆಗೆ ಸೂಕ್ತವಾಗಿರುತ್ತದೆ.
- ಬೆಳೆಯು ಕೊಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರಬೇಕಾದುದರಿಂದ ಸಮತಟ್ಟಾದ ಭೂಮಿ ಬೇಕಾಗುತ್ತದೆ.
- ಕಡಿಮೆ ಮಳೆ ಬೀಳುವ ಕಡೆ ನೀರಾವರಿ ಅತ್ಯಾವಶ್ಯಕ.
- ಪಶ್ಚಿಮ ಬಂಗಾಳ ರಾಜ್ಯವು ಅತಿ ಹೆಚ್ಚು ಭತ್ತವನ್ನು ಬೆಳೆಯುವ ರಾಜ್ಯವಾಗಿದೆ. 8. ಇತರ ಭತ್ತ ಉತ್ಪಾದಿಸುವ ಪ್ರಮುಖ ರಾಜ್ಯಗಳೆಂದರೆ – ಆಂಧ್ರಪ್ರದೇಶ, ಉತ್ತರಪ್ರದೇಶ, ಪಂಜಾಬ್, ತಮಿಳುನಾಡು, ಒಡಿಶಾ ಮತ್ತು ಕರ್ನಾಟಕ.

**4. ಗೋದಿ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ ತಿಳಿಸಿ.**

**ಉತ್ತರ : ಗೋದಿ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ.**

- ಗೋದಿಯು ಪ್ರಮುಖ ಹಿಂಗಾರು ಬೆಳೆಯಾಗಿದೆ.
- ಗೋದಿ ಸಮಶಿತೋಷ್ಣ ಬೆಳೆಯಾಗಿದೆ. ಈ 10°ಯಿಂದ 15° ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- 50 ರಿಂದ 70 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
- ಮರಳು ಮಿಶ್ರಿತ ಮತ್ತು ಕಪ್ಪು ಮಣ್ಣು ಈ ಬೆಳೆಗೆ ಸೂಕ್ತವಾದುದು.
- ಉತ್ತರ ಪ್ರದೇಶವು ಗೋದಿಯ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.
- ಪಂಜಾಬ, ಹರಿಯಾಣ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಗುಜರಾತ್, ಮಹಾರಾಷ್ಟ್ರ ಹಾಗೂ ಕರ್ನಾಟಕದ ಉತ್ತರ ಭಾಗಗಳು ಗೋದಿ ಉತ್ಪಾದಿಸುವ ಪ್ರದೇಶಗಳಾಗಿವೆ.

**5. ಕಬ್ಬು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಕಬ್ಬು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು**

- ಇದು ವಾರ್ಷಿಕ ಬೆಳೆಯಾಗಿದ್ದು, ನೀರಾವರಿ ಪ್ರದೇಶದಲ್ಲಿ ಬೆಳೆಯುವ ಬೆಳೆಯಾಗಿದೆ.
- ಈ ಬೆಳೆಗೆ ಹೆಚ್ಚು ಉಷ್ಣಾಂಶ & ತೇವಾಂಶ ಹೊಂದಿರುವ ವಾಯುಗುಣ ಅವಶ್ಯಕ.
- ಕಬ್ಬಿನ ಬೆಳೆಗೆ 21$^{o}$ ರಿಂದ 26$^{o}$ ಸೆಲ್ಸಿಯಸ್ ಉಷ್ಣಾಂಶ.
- 100 ರಿಂದ 150 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
- ಮೆಕ್ಕಲು ಮಣ್ಣು & ಜೇಡಿಮಿಶ್ರಿತ ಮರಳು ಮಣ್ಣಿನಲ್ಲಿ ಕಬ್ಬು ಚೆನ್ನಾಗಿ ಬೆಳೆಯುತ್ತದೆ.
- ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ, ಆಂದ್ರಪ್ರದೇಶ ರಾಜ್ಯಗಳಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ.

**6. ಹೊಗೆಸೊಪ್ಪು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆಯನ್ನು ತಿಳಿಸಿ.**

**ಉತ್ತರ : ತಂಬಾಕು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು & ಹಂಚಿಕೆ**

- ಇದು ಉಷ್ಣವಲಯದ ಬೆಳೆಯಾಗಿದ್ದು, 21$^{o}$ ರಿಂದ 23$^{o}$ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- ಸಾಧಾರಣ ಮಳೆ ಬೀಳುವ ಪ್ರದೇಶ ಅವಶ್ಯವಿದ್ದು, ಸರಾಸರಿ 50–100 ಸೆಂ.ಮೀ. ಮಳೆ ಬೇಕು.
- ಮರಳು ಮಿಶ್ರಿತ ಜೇಡಿಮಣ್ಣು & ರಾಸಾಯನಿಕ ಗೊಬ್ಬರ ಅವಶ್ಯಕ.
- 4.ಆಂದ್ರಪ್ರದೇಶ, ಗುಜರಾತ, ಉತ್ತರಪ್ರದೇಶ, ಕರ್ನಾಟಕ, ಬಿಹಾರ, ತಮಿಳುನಾಡು & ಮಹಾರಾಷ್ಟ್ರಗಳಲ್ಲಿ ಹೆಚ್ಚು ಹೊಗೆಸೊಪ್ಪನ್ನು ಉತ್ಪಾದಿಸುವರು.

**9. ಹತ್ತಿ ಬೆಳೆ ಬೆಳೆಯಲು ಅವಶ್ಯವಿರುವ ಪೂರಕಾಂಶಗಳು ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಹತ್ತಿ ಬೆಳೆ ಬೆಳೆಯಲು ಅವಶ್ಯವಿರುವ ಪೂರಕಾಂಶಗಳು**

- ಹತ್ತಿಯು ಉಷ್ಣವಲಯ & ಉಪ ಉಷ್ಣವಲಯ ಬೆಳೆ.
- ಹತ್ತಿ ಬೆಳೆಯ ಉತ್ಪಾದನೆಗೆ 21$^{o}$ ರಿಂದ 24$^{o}$ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- ಸುಮಾರು 50 ರಿಂದ 100 ಸೆಂ.ಮೀ. ಗಿಂತ ಹೆಚ್ಚು ಮಳೆ ಅವಶ್ಯಕ.
- ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಕಪ್ಪು ಮಣ್ಣು ಇದಕ್ಕೆ ಹೆಚ್ಚು ಸೂಕ್ತ.
- ಗುಜರಾತ್, ಮಹಾರಾಷ್ಟ್ರ, ಆಂದ್ರಪ್ರದೇಶ, ಹರಿಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶ ಪಂಜಾಬ, ತಮಿಳುನಾಡು ರಾಜ್ಯಗಳಲ್ಲಿ ಹತ್ತಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ.

**10. ಚಹ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ**

**ಉತ್ತರ : ಚಹ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು & ಹಂಚಿಕೆ**

- ಚಹವು ಉಷ್ಣವಲಯ & ಉಪ ಉಷ್ಣವಲಯದ ಬೆಳೆಯಾಗಿದೆ.
- ಚಹ ಬೆಳೆಗೆ 21$^{o}$–30$^{o}$ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- 150 – 250 ಸೆಂ.ಮೀ. ಮಳೆ ಅವಶ್ಯಕ.
- ಹೆಚ್ಚು ಸಸ್ಯಾಂಶವುಳ್ಳ ಆಳವಾದ ಫಲವತ್ತಾದ ಮಣ್ಣು ಈ ಬೆಳೆಗೆ ಬಹು ಸೂಕ್ತ.
- ಸಮುದ್ರ ಮಟ್ಟಕ್ಕೆ 1200 ರಿಂದ 2400 ಮೀ ಎತ್ತರವುಳ್ಳ ಬೆಟ್ಟಗಳ ಇಳಿಜಾರು ಅವಶ್ಯಕ.
- ಬಾರತದಲ್ಲಿ ಚಹವನ್ನು ಹೆಚ್ಚಾಗಿ ಆಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಕೇರಳ ರಾಜ್ಯಗಳು ಬೆಳೆಯುತ್ತವೆ.

**11. ಭಾರತದಲ್ಲಿ ತೋಟಗಾರಿಕೆಯ ಮಹತ್ವ ತಿಳಿಸಿ.**

**ಉತ್ತರ : ಭಾರತದಲ್ಲಿ ತೋಟಗಾರಿಕೆಯ ಮಹತ್ವ**

- ಹಣ್ಣು, ತರಕಾರಿ, ಹೂವು, ಔಷಧೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದನ್ನು "ತೋಟಗಾರಿಕೆ ಬೇಸಾಯ" ಎನ್ನುವರು.
- ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಪೂರೈಕೆ ಮಾಡುವುದರೊಂದಿಗೆ ತೋಟಗಾರಿಕೆಯು ಭಾರತದ ಕೃಷಿಯನ್ನು ಲಾಭದಾಯಕ ಗೊಳಿಸಲು ಉತ್ತೇಜನ ನೀಡುತ್ತದೆ.
- ಇದು ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ.
- ಆಹಾರ ಭದ್ರತೆಗೆ ನೆರವಾಗುತ್ತದೆ.
- ಪ್ರಪಂಚದಲ್ಲಿ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಭಾರತವು ಚೀನಾದ ತರುವಾಯ ಎರಡನೆಯ ಸ್ಥಾನದಲ್ಲಿದೆ.
- ಪ್ರಪಂಚದ ಒಟ್ಟು ಹಣ್ಣು ಉತ್ಪಾದನೆಯಲ್ಲಿ ಶೇ. 11% ಮತ್ತು ತರಕಾರಿಯಲ್ಲಿ ಶೇ. 7% ಭಾಗವನ್ನು ಭಾರತವು ಪೂರೈಸುತ್ತದೆ.

## ಅಧ್ಯಾಯ – 8 ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದಿರನ್ನು ಉತ್ಪಾದಿಸುವ ರಾಜ್ಯ – **ಒಡಿಶಾ.**
2. ಪ್ರಪಂಚದಲ್ಲಿ ಕಬ್ಬಿಣದ ಅದಿರನ್ನು ಉತ್ಪಾದಿಸುವಲ್ಲಿ ಭಾರತದ ಸ್ಥಾನ – **ನಾಲ್ಕನೇ ಸ್ಥಾನ.**
3. ಕಬ್ಬಿಣ ಅದಿರಿನ ಒಟ್ಟು ಉತ್ಪಾದನೆಯಲ್ಲಿ ಶೇ. _____ ಭಾಗದಷ್ಟು ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತದೆ. – **35%**
4. ಪ್ರಮುಖ ಮಿಶ್ರಲೋಹ ಖನಿಜ – **ಮ್ಯಾಂಗನೀಸ್**
5. ____ ರಾಜ್ಯವು ದೇಶದಲ್ಲೇ ಅಧಿಕ ಪ್ರಮಾಣದ ಮ್ಯಾಂಗನೀಸ್ ನಿಕ್ಷೇಪಗಳನ್ನು ಹೊಂದಿರುವ ಹಾಗೂ ಉತ್ಪಾದಿಸುವ ರಾಜ್ಯ – **ಒಡಿಶಾ ರಾಜ್ಯ.**
6. ಪ್ರಪಂಚದಲ್ಲಿ ಭಾರತವು _____ ನೆಯ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ದೇಶ. **5ನೇ**
7. ಅಲ್ಯೂಮಿನಿಯಂ ಲೋಹ ತಯಾರಿಕೆಗೆ ಅಗತ್ಯವಾದ ಮುಖ್ಯ ಕಚ್ಚಾವಸ್ತು ಅದಿರು – **ಬಾಕ್ಸೈಟ್.**
8. ____ ರಾಜ್ಯವು ದೇಶದಲ್ಲೇ ಅಧಿಕ ಪ್ರಮಾಣದ ಬಾಕ್ಸೈಟ್ ನಿಕ್ಷೇಪಗಳನ್ನು ಹೊಂದಿರುವ ಹಾಗೂ ಉತ್ಪಾದಿಸುವ ರಾಜ್ಯ – **ಒಡಿಶಾ ರಾಜ್ಯ.**
9. _____ ಖನಿಜವು ಒಂದು ಪ್ರಮುಖ ಅಲೋಹ ಖನಿಜವಾಗಿದೆ. – **ಅಬ್ರಕ್**
10. _____ ರಾಜ್ಯವು ಭಾರತದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ರಾಜ್ಯವಾಗಿದೆ. – **ಆಂದ್ರಪ್ರದೇಶ.**
11. ಪ್ರಪಂಚದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ಮತ್ತು ರಫ್ತು ಮಾಡುವ ರಾಷ್ಟ್ರ – **ಭಾರತ.**
12. ಸಸ್ಯಾವಶೇಷ ಇಂಧನ ಖನಿಜ – **ಕಲ್ಲಿದ್ದಲು.**
13. ದೇಶದಲ್ಲಿ ಬಳಕೆಯಾಗುವ ಒಟ್ಟು ವಿದ್ಯುಚ್ಛಕ್ತಿಯಲ್ಲಿ ಶೇ. _____ ಭಾಗವು ಕಲ್ಲಿದ್ದಲು ಮೂಲದ್ದಾಗಿದೆ. – **ಶೇ. 67%**
14. ಪ್ರಪಂಚದ ಕಲ್ಲಿದ್ದಲು ಉತ್ಪಾದಿಸುವ ಮುಖ್ಯ ದೇಶಗಳಲ್ಲಿ ಭಾರತದ ಸ್ಥಾನ – **3ನೇಯ ಸ್ಥಾನ.**
15. ಹೈಡ್ರೋಕಾರ್ಬನ್‌ವುಳ್ಳ ಖನಿಜತೈಲ ------ **ಪೆಟ್ರೋಲಿಯಂ**
16. ಭಾರತದಲ್ಲೇ ಹೆಚ್ಚು ಕಚ್ಚಾ ತೈಲ ಉತ್ಪಾದಿಸುವ ಪ್ರದೇಶ – **ಬಾಂಬೆ ಹೈ ಪ್ರದೇಶ.**
17. ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಮೊಟ್ಟಮೊದಲಿಗೆ ಅಸ್ಸಾಂನ ____ ಎಂಬಲ್ಲಿ ಕಂಡುಹಿಡಿಯಲಾಯಿತು. – **ಮಾಕುಂ ಎಂಬಲ್ಲಿ.**
18. ಭಾರತದಲ್ಲಿ ಮೊಟ್ಟಮೊದಲಿಗೆ (1897) ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವನ್ನು ______ನಲ್ಲಿ ಸ್ಥಾಪಿಸಲಾಗಿತ್ತು – **ಪಶ್ಚಿಮಬಂಗಾಳದ ದಾರ್ಜಲಿಂಗ್.**
19. ವಾಸ್ತವ ಜಲವಿದ್ಯುತ್ ಉತ್ಪಾದನೆಯು --------- ಬಳಿ ನಿರ್ಮಿಸಿದ ಜಲವಿದ್ಯುದಾಗಾರದಿಂದ ಆರಂಭವಾಯಿತು. – **ಕಾವೇರಿ ನದಿಗೆ ಶಿವನಸಮುದ್ರ**
20. ವಿದ್ಯುತ್ ಉತ್ಪಾದನೆಗೆ ಬೇಕಾಗುವ ಪ್ರಮುಖ ಪರಮಾಣು ಖನಿಜಗಳು _______ & _______ – **ಯುರೋನಿಯಂ ಮತ್ತು ಥೋರಿಯಂ.**
21. ಭಾರತದಲ್ಲಿ ಮೊಟ್ಟಮೊದಲ ಪರಮಾಣು ವಿದ್ಯುತ್ ತಯಾರಿಕಾ ಕೇಂದ್ರವನ್ನು ______ ಎಂಬಲ್ಲಿ ಸ್ಥಾಪಿಸಲಾಯಿತು. – **ತಾರಾಪುರ (1969)**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಗಣಿಗಾರಿಕೆ ಎಂದರೇನು?**

ಉತ್ತರ : ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು 'ಗಣಿಗಾರಿಕೆ' ಎನ್ನುವರು.

**2. ಖನಿಜ ಎಂದರೇನು?**

ಉತ್ತರ : ರಾಸಾಯನಿಕ ಸಂಯೋಜನೆ ಮತ್ತು ಭೌತಿಕ ಗುಣಧರ್ಮಗಳನ್ನು ಹೊಂದಿರುವ ಒಂದು ನೈಸರ್ಗಿಕ ಅಜೈವಿಕ ಮೂಲಧಾತುವನ್ನು ಖನಿಜ ಎನ್ನುವರು.

**3. ಕರ್ನಾಟಕದ ಪ್ರಮುಖ ಕಬ್ಬಿಣ ಅದಿರಿನ ನಿಕ್ಷೇಪಗಳನ್ನು ತಿಳಿಸಿ.**

ಉತ್ತರ : ಕರ್ನಾಟಕದ ಸಂಡೂರು, ಹೊಸಪೇಟೆ, ಕೆಮ್ಮಣ್ಣುಗುಂಡಿ ಮತ್ತು ಕುದುರೆಮುಖ ಭಾಗಗಳು ಪ್ರಮೂಖ ಕಬ್ಬಿಣ ಅದಿರಿನ ನಿಕ್ಷೇಪಗಳಾಗಿವೆ.

**4. ಮ್ಯಾಂಗನೀಸ್ ಅದಿರನ್ನು ಒಂದು ಮಿಶ್ರ ಲೋಹವನ್ನಾಗಿ ಪರಿಗಣಿಸಲಾಗಿದೆ. ಏಕೆ?**

ಉತ್ತರ : ಮ್ಯಾಂಗನೀಸ್ ಅದಿರನ್ನು ಕಬ್ಬಿಣ & ಉಕ್ಕಿನ ಕೈಗಾರಿಕೆಯನ್ನೊಳಗೊಂಡು ಪ್ರತಿಯೊಂದು ಕೈಗಾರಿಕೆಯಲ್ಲಿ ಮಿಶ್ರಲೋಹನ್ನಾಗಿ ಬಳಸುವುದರಿಂದಾಗಿ ಇದನ್ನು ಒಂದು ಮಿಶ್ರ ಲೋಹವೆಂದು ಪರಿಗಣಿಸಲಾಗಿದೆ.

**5. ಅಭ್ರಕನಲ್ಲಿರುವ ಗುಣವಿಶೇಷತೆ ಏನು?**

ಉತ್ತರ : ಅಬ್ರಕನ್ನು ಬಹಳ ತೆಳುವಾದ ಹಾಳೆಗಳಾಗಿ ವಿಭಜಿಸಬಹುದು. ಮತ್ತು ಪಾರದರ್ಶಕವೂ ಮತ್ತು ಶಾಖ ನಿರೋಧಕ ಗುಣವಳ್ಳದ್ದು ಆಗಿದೆ.

**6. ಅಬ್ರಕನ ಉಪಯೋಗವನ್ನು ತಿಳಿಸಿ.**

ಉತ್ತರ : ಅಬ್ರಕವನ್ನು ಹೆಚ್ಚಾಗಿ ವಿದ್ಯುದುಪಕರಣ ಉದ್ಯಮ, ಟೆಲಿಫೋನ್, ವಿಮಾನ ತಯಾರಿಕೆ, ಸ್ವಚಾಲನಾ ವಾಹನ ಕೈಗಾರಿಕೆ ಮತ್ತು ನಿಸ್ತಂತು ಸಂಪರ್ಕ ಮಾಧ್ಯಮಗಳಲ್ಲಿ ಬಳಕೆ ಮಾಡಲಾಗುತ್ತದೆ.

**7. ಭಾರತದಲ್ಲಿ ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ರಾಜ್ಯಗಳನ್ನು ಹೆಸರಿಸಿ.**

ಉತ್ತರ : ಭಾರತದಲ್ಲಿ ಅಪಾರವಾದ ಬಾಕ್ಸೈಟ್ ನಿಕ್ಷೇಪಗಳಿವೆ. ಅದು ಹೆಚ್ಚಾಗಿ ಒಡಿಶಾ, ಗುಜರಾತ್, ಜಾರ್ಖಂಡ್, ಮಹಾರಾಷ್ಟ್ರ, ಛತ್ತಿಸ್‌ಗಡ್, ತಮಿಳುನಾಡು ಮತ್ತು ಮಧ್ಯಪ್ರದೇಶ. ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ರಾಜ್ಯಗಳಾಗಿವೆ.

**8. ಇತ್ತೀಚಿಗೆ ಅಭ್ರಕದ ರಫ್ತು ಏಕೆ ಕಡಿಮೆಯಾಗುತ್ತಿದೆ?**

ಉತ್ತರ : ಹಲವು ರಾಷ್ಟ್ರಗಳಲ್ಲಿ ಕೃತಕ ಅಬ್ರಕವನ್ನು ಉತ್ಪಾದಿಸಿಕೊಳ್ಳುತ್ತಿರುವುದರಿಂದ ಇತ್ತೀಚೆಗೆ ಭಾರತದ ಅಬ್ರಕದ ರಫ್ತು ಪ್ರಮಾಣವು ಕಡಿಮೆಯಾಗಿದೆ.

**9. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು ಯಾವುವು?**

ಉತ್ತರ : ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ ಇತ್ಯಾದಿ ಸೇರುತ್ತವೆ.

**10. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು ಯಾವುವು?**

ಉತ್ತರ : ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಲ್ಲಿ ಸೌರಶಕ್ತಿ, ಪವನಶಕ್ತಿ, ಉಬ್ಬರವಿಳಿತ ಶಕ್ತಿ, ಭೂಗರ್ಭಶಕ್ತಿ, ಜೈವಿಕ ಅನಿಲ ಮೊದಲಾದವು ಸೇರುತ್ತವೆ.

**11. ಕಲ್ಲಿದ್ದಲು ಹೇಗೆ ನಿರ್ಮಾಣಗೊಂಡಿದೆ?**

ಉತ್ತರ : ಸಾವಿರಾರು ವರ್ಷಗಳ ಹಿಂದೆ ಭೂಗರ್ಭದಲ್ಲಿ ಹುದುಗಿ ಹೋಗಿದ್ದ ಸಸ್ಯಾವಶೇಷವು ಅಧಿಕ ಉಷ್ಣಾಂಶ ಮತ್ತು ಒತ್ತಡಗಳಿಂದ ಕಲ್ಲಿದ್ದಲಾಗಿ ಪರಿವರ್ತನೆಗೊಂಡಿದೆ.

**12. ಕಲ್ಲಿದ್ದಲಿನ ಉಪವಸ್ತುಗಳನ್ನು ತಿಳಿಸಿ.**

ಉತ್ತರ : ಕಲ್ಲಿದ್ದಲಿನಿಂದ ಅನೇಕ ಉಪವಸ್ತುಗಳು ದೊರೆಯುತ್ತವೆ. ಉದಾ : ಅಮೋನಿಯ, ಕೋಲ್‌ಟಾರ್, ಕೋಲ್‌ಗ್ಯಾಸ್, ಬೆಂಜಾಲ್, ನ್ಯಾಪ್ತ, ಸಲ್ಫರ್ ಇತ್ಯಾದಿ.

**13. ಭಾರತದ ಪ್ರಮುಖ ಕಲ್ಲಿದ್ದಲಿನ ನಿಕ್ಷೇಪವನ್ನು ಹೊಂದಿದ ರಾಜ್ಯಗಳು ಯಾವುವು?**

ಉತ್ತರ : ಭಾರತದಲ್ಲಿ ಕಲ್ಲಿದ್ದಲು ನಿಕ್ಷೇಪವು ಹೆಚ್ಚಾಗಿ ಕೆಲವು ರಾಜ್ಯಗಳಲ್ಲಿ ಹಂಚಿಕೆಯಾಗಿದೆ. ಉದಾ : ಜಾರ್ಖಂಡ್, ಛತ್ತೀಸ್‌ಗರ್, ಒಡಿಶಾ, ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣ ಮತ್ತು ಪಶ್ಚಿಮಬಂಗಾಳ. ಈ ರಾಜ್ಯಗಳು ಭಾರತದ ಒಟ್ಟು ಕಲ್ಲಿದ್ದಲು ನಿಕ್ಷೇಪದಲ್ಲಿ ಶೇ. 96 ಭಾಗವನ್ನು ಹೊಂದಿವೆ.

**14. ಭಾರತದ ಪ್ರಮುಖ ಪೆಟ್ರೋಲಿಯಂ ನಿಕ್ಷೇಪಗಳನ್ನು ತಿಳಿಸಿ.**

ಉತ್ತರ : ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವು ಹೆಚ್ಚಾಗಿ ಬಾಂಬೆ ಹೈ, ಹಾಗೂ ಗುಜರಾತ್, ಅಸ್ಸಾಂ, ಆಂದ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಂಚಿಕೆಯಾಗಿದೆ.

**15. ಜಲವಿದ್ಯುಚ್ಛಕ್ತಿ ಎಂದರೇನು?**

ಉತ್ತರ : ಧುಮುಕುವ ನೀರಿನ ರಭಸದಿಂದ ಉತ್ಪಾದಿಸುವ ವಿದ್ಯುತ್‌ನ್ನು ಜಲವಿದ್ಯುಚ್ಛಕ್ತಿ ಎನ್ನುವರು.

**16. ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳನ್ನು ಪಟ್ಟಿ ಮಾಡಿ.**

ಉತ್ತರ : ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳು – ಶಿವನಸಮುದ್ರ, ಶರಾವತಿ, ಲಿಂಗನಮಕ್ಕಿ, ಆಲಮಟ್ಟಿ, ಕಾಳಿ, ಭದ್ರ ಇತ್ಯಾದಿ.

**17. ತಮಿಳುನಾಡಿನ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳನ್ನು ಪಟ್ಟಿ ಮಾಡಿ.**

ಉತ್ತರ : ತಮಿಳುನಾಡಿನ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳು – ಮೆಟ್ಟೂರು, ಪೈಕಾರ, ಪಾಪನಾಸಂ, ಪೆರಿಯಾರ್, ಮೊಯಾರ್, ಕುಂದ್ಹಾ, ಶೋಲಯಾರ್ ಮತ್ತು ಕೊಡಯಾರ್.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಖನಿಜಗಳ ಪ್ರಾಮುಖ್ಯತೆಯನ್ನು ತಿಳಿಸಿ.**

**ಉತ್ತರ : ಖನಿಜಗಳ ಪ್ರಾಮುಖ್ಯತೆ**

- ಖನಿಜಗಳು ದೇಶವೊಂದರ ಸಮೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.
- ಇವು ಕೈಗಾರಿಕೆ, ನಿರ್ಮಾಣ ಕಾರ್ಯ, ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿ, ವ್ಯಾಪಾರ ಮತ್ತು ವ್ಯಾಣಿಜ್ಯೋದ್ಯಮಗಳ ಪ್ರಗತಿಗೆ ಹೆಚ್ಚು ಉಪಯುಕ್ತ.
- ಕೆಲವು ಖನಿಜಗಳು ಆರ್ಥಿಕ ಮೌಲ್ಯಗಳನ್ನುಳ್ಳವು. ಉದಾ : ಚಿನ್ನ, ವಜ್ರ ಇತ್ಯಾದಿ.

**2. ಮ್ಯಾಂಗನೀಸ್‌ನ ಉಪಯೋಗಗಳನ್ನು ತಿಳಿಸಿ.**

**ಉತ್ತರ : ಮ್ಯಾಂಗನೀಸ್‌ನ ಉಪಯೋಗಗಳು**

- ಮ್ಯಾಂಗನೀಸ್ ಅದಿರು ಅತ್ಯಂತ ಪ್ರಮುಖವಾದ ಮಿಶ್ರಲೋಜ ಖನಿಜ.
- ಇದನ್ನು ಹೆಚ್ಚಾಗಿ ಉಕ್ಕು ತಯಾರಿಸಲು ಉಪಯೋಗಿಸಲಾಗುವುದು.
- ಬ್ಯಾಟರಿ, ಬಣ್ಣ, ಗಾಜು, ಪಿಂಗಾಣಿ ವಸ್ತು ಮತ್ತು ಕ್ಯಾಲಿಕೊ ಪ್ರಿಂಟಿಂಗ್‌ಗಾಗಿಯೂ ಮ್ಯಾಂಗನೀಸನ್ನು ಬಳಸಲಾಗುವುದು.

**3. ಶಕ್ತಿ ಸಂಪನ್ಮೂಲಗಳ ಅರ್ಥ ಮತ್ತು ಭಾರತದಲ್ಲಿ ಅವುಗಳ ಪ್ರಾಮುಖ್ಯತೆ ಕುರಿತು ವಿವರಿಸಿ.**

ಉತ್ತರ : ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು 'ಶಕ್ತಿ ಸಂಪನ್ಮೂಲಗಳು' ಎಂದು ಕರೆಯಲಾಗಿದೆ.

**ಭಾರತದಲ್ಲಿ ಶಕ್ತಿ ಸಂಪನ್ಮೂಲಗಳ ಪ್ರಾಮುಖ್ಯತೆ**

- ಒಂದು ದೇಶದ ಆರ್ಥಿಕಾಭಿವೃದ್ಧಿಗೆ ಮತ್ತು ಜನರ ಜೀವನ ಮಟ್ಟದ ಸುಧಾರಣೆಗೆ ಶಕ್ತಿ ಸಂಪನ್ಮೂಲಗಳು ಅತ್ಯಗತ್ಯ.
- ಕೈಗಾರಿಕೆ, ಕೃಷಿ, ವಾಣಿಜ್ಯೋದ್ಯಮ, ಸಾರಿಗೆ–ಸಂಪರ್ಕ ಮೊದಲಾದವುಗಳ ಪ್ರಗತಿಯಲ್ಲಿ ಶಕ್ತಿ ಸಂಪನ್ಮೂಲಗಳ ಪಾತ್ರ ಮುಖ್ಯವಾದುದು.

**4. ಪೆಟ್ರೋಲಿಯಂನ ಪ್ರಮುಖ ಉಪಯೋಗಗಳನ್ನು ತಿಳಿಸಿ.**

**ಉತ್ತರ : ಪೆಟ್ರೋಲಿಯಂನ ಪ್ರಮುಖ ಉಪಯೋಗಗಳು**

- ಪೆಟ್ರೋಲಿಯಂ ಹಲವು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ ಮೂಲವು ಆಗಿದೆ.
- ವಾಣಿಜ್ಯ ದೃಷ್ಟಿಯಲ್ಲಿ ಮುಖ್ಯ ಶಕ್ತಿಯ ಮೂಲ ಮತ್ತು ಇದನ್ನು ಹೆಚ್ಚಾಗಿ ಸಾರಿಗೆಯಲ್ಲಿ ಬಳಸಲಾಗುತ್ತದೆ.
- ಕೃತಕ ರಬ್ಬರ್, ಕೃತಕ ರೇಷ್ಮೆ, ಔಷಧಿ, ರಾಸಾಯನಿಕ ಗೊಬ್ಬರ, ಬಣ್ಣ ತಯಾರಿಕೆ ಮೊದಲಾದ ಕೈಗಾರಿಕೆಗಳಿಗೆ ಬೇಕಾದ ಕಚ್ಚಪದಾರ್ಥಗಳನ್ನು ಪೂರೈಸುವುದು.

**5. ಭಾರತದ ಪ್ರಮುಖ ಪರಮಾಣು ವಿದ್ಯುತ್ ಕೇಂದ್ರಗಳನ್ನು ಪಟ್ಟಿ ಮಾಡಿ.**

**ಉತ್ತರ : ಭಾರತದ ಪ್ರಮುಖ ಪರಮಾಣು ವಿದ್ಯುತ್ ಕೇಂದ್ರಗಳೆಂದರೆ –**

- ತಾರಾಪುರ ; ಮುಂಬಯಿ ಸಮೀಪ – ಮಹಾರಾಷ್ಟ್ರ,
- ರಾಣಪ್ರತಾಪಸಾಗರ; ಕೋಟಾ ಬಳಿ – ರಾಜಸ್ತಾನ.
- ಕಲ್ಪಾಕಂ; ಚನ್ನೈ ಸಮೀಪ – ತಮಿಳುನಾಡು,
- ನರೋರ – ಉತ್ತರ ಪ್ರದೇಶ,
- ಕಾಕ್ರಪಾರ – ಗುಜರಾತ್,
- ಕೈಗಾ ; ಕರಾವಳಿ ಬಳಿ – ಕರ್ನಾಟಕ,
- ಕಂದನ್ ಕುಲಂ – ತಮಿಳುನಾಡು.

**6. ದೇಶದಲ್ಲಿ ಇಂದು ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ಹೆಚ್ಚಾಗಿದೆ. ಏಕೆ? ವಿಶ್ಲೇಷಿಸಿ.**

**ಉತ್ತರ : ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ**

- ದೇಶದಲ್ಲಿ ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು ಮಿತವಾಗಿರುವುದರಿಂದ ಇಂದು ದೇಶದಲ್ಲಿ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ಹೆಚ್ಚಾಗಿದೆ.
- ಭಾರತದಲ್ಲಿ ಅಪರಿಮಿವಾದ ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು ದೊರೆಯುತ್ತವೆ.
- ಇವು ನವೀಕರಿಸಬಲ್ಲ ಮೂಲಗಳು. ಮಾಲಿನ್ಯ ಮುಕ್ತವಾದವು ಮತ್ತು ಪರಿಸರ ಸ್ನೇಹಿಗಳಾಗಿವೆ.
- ಅವುಗಳನ್ನು ಸುಲಭವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸರಬರಾಜು ಮಾಡಬಹುದು.
- ಅವುಗಳ ಉತ್ಪಾದನೆಯಿಂದ ದೇಶದ ವಿದ್ಯುತ್ ಅಭಾವವನ್ನು ನೀಗಿಸಬಹುದು.
- ಭಾರತದಲ್ಲಿ ಇತ್ತೀಚೆಗೆ ವಿದ್ಯುಚ್ಛಕ್ತಿ ಬಳಕೆಯ ದರವು ಹೆಚ್ಚಾಗಿದೆ.
- ಹೀಗಾಗಿ ತುರ್ತಾಗಿ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕತೆ ಇದೆ.

**7. ಭಾರತದಲ್ಲಿ ವಿದ್ಯುತ್ ಅಭಾವಕ್ಕೆ ಪ್ರಮುಖ ಕಾರಣಗಳೇನು?**

**ಉತ್ತರ : ಭಾರತದಲ್ಲಿ ವಿದ್ಯುತ್ ಅಭಾವಕ್ಕೆ ಪ್ರಮುಖ ಕಾರಣಗಳು**

- ದೇಶದಲ್ಲಿ ಕಡಿಮೆ ಪೆಟ್ರೋಲಿಯಂ ನಿಕ್ಷೇಪದ ಲಭ್ಯತೆ ಮತ್ತು ತೈಲದ ಕೊರತೆ.
- ಕಡಿಮೆ ದರ್ಜೆಯ ಕಲ್ಲಿದ್ದಲು.
- ಅಕಾಲಿಕ ಮಳೆ ಮತ್ತು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರಿನ ಕೊರತೆ.
- ಪ್ರಸರಣ ಪ್ರಕ್ರಿಯೆಯಲ್ಲಾಗುವ ವಿದ್ಯುತ್‌ನ ನಷ್ಟ.
- ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಕಡಿಮೆ ಬಳಕೆ.

**8. ಭಾರತದಲ್ಲಿ ವಿದ್ಯುತ್ ಅಭಾವ ನೀಗಿಸಲು ಇರುವ ಪರಿಹಾರ ಕ್ರಮಗಳೇನು?**

**ಉತ್ತರ : ಭಾರತದಲ್ಲಿ ವಿದ್ಯುತ್ ಅಭಾವ ನೀಗಿಸಲು ಇರುವ ಪರಿಹಾರ ಕ್ರಮಗಳು**

- ದೇಶದಲ್ಲಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಉತ್ಪಾದನೆಯನ್ನು ಹೆಚ್ಚಿಸುವುದು.
- ಕಲ್ಲಿದ್ದಲು ಮತ್ತುಪೆಟ್ರೋಲಿಯಂಗಳಿಗೆ ಬದಲಾಗಿ ಇತರೆ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಬಳಸಲು ಕ್ರಮಕೈಗೊಳ್ಳುವುದು.
- ಹೆಚ್ಚೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.
- ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಕೆ ಮಾಡುವುದು.

## ಅದ್ಯಾಯ – 9 ಭಾರತದ ಸಾರಿಗೆ ಮತ್ತು ಸಂಪರ್ಕ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭಾರತದಲ್ಲಿ ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ ______ ಸಾರಿಗೆ ಮಾಧ್ಯಮ ಅತ್ಯಾವಶ್ಯಕವಾದುದು. – **ರಸ್ತೆ ಸಾರಿಗೆ.**
2. ಪ್ರಧಾನಮಂತ್ರಿಗಳ 'ಗ್ರಾಮಸಡಕ್ ಯೋಜನೆ'ಯ ಪ್ರಮುಖ ಉದ್ದೇಶ – **ಗ್ರಾಮೀಣ ರಸ್ತೆಗಳನ್ನು ಸುಧಾರಿಸುವುದು**
3. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಬ್ದಾರಿ ______ ಗೆ ಸಂಬಂಧಿಸಿದೆ. – **ಕೇಂದ್ರ ಲೋಕೋಪಯೋಗಿ ಇಲಾಖೆ.**
4. ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಬ್ದಾರಿ ______ ಗೆ ಸಂಬಂಧಿಸಿದೆ. – **ರಾಜ್ಯ ಲೋಕೋಪಯೋಗಿ ಇಲಾಖೆ.**
5. ಗಡಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಬ್ದಾರಿ ______ ಗೆ ಸಂಬಂಧಿಸಿದೆ. – **ಗಡಿ ರಸ್ತೆ ಅಭಿವೃದ್ಧಿ ಪ್ರಾಧಿಕಾರ.**
6. ಭಾರತದಲ್ಲಿ ರೈಲು ಸಾರಿಗೆ ನಿರ್ಮಾಣವು ____ ರ ಕಾಲದಲ್ಲಿ ಆರಂಭವಾಯಿತು. – **ಬ್ರಿಟಿಷರ**
7. ಭಾರತದ ಪ್ರಥಮ ರೈಲು ಮಾರ್ಗವು _____ ರಲ್ಲಿ ______ & ______ ಗಳ ನಡುವೆ ನಿರ್ಮಾಣವಾಯಿತು. – **1853ರಲ್ಲಿ, ಮುಂಬಯಿ – ಥಾಣೆ.**
8. ಕೊಲ್ಕತ್ತಾ – ರಾಣಿಗಂಜ್ ಗಳ ನಡುವೆ ರೈಲು ಮಾರ್ಗವು ______ ರಲ್ಲಿ ನಿರ್ಮಾಣಗೊಂಡಿತು – **1854ರಲ್ಲಿ**
9. ಮದ್ರಾಸ್ – ಅರ್ಕೊನಾಮ್ ಗಳ ನಡುವೆ ರೈಲು ಮಾರ್ಗವು ______ ರಲ್ಲಿ ನಿರ್ಮಾಣಗೊಂಡಿತು. – **1864ರಲ್ಲಿ**
10. ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ – **ರೈಲು ಸಾರಿಗೆ.**
11. ಇಂದು ದೇಶದಲ್ಲಿ ______ ಕಿ.ಮೀ. ಉದ್ದದ ರೈಲು ಮಾರ್ಗವಿದೆ. – **64015 ಕಿ.ಮೀ.**
12. ಇಂದು ದೇಶದಲ್ಲಿ ___ ರೈಲು ನಿಲ್ದಾಣಗಳಿವೆ. – **7031 ರೈಲು ನಿಲ್ದಾಣಗಳು**
13. ಭಾರತದಲ್ಲಿರುವ ರೈಲ್ವೆ ವಲಯಗಳ ಸಂಖ್ಯೆ – **16 ರೈಲ್ವೆ ವಲಯಗಳು.**
14. ಭಾರತದಲ್ಲಿರುವ ಒಟ್ಟು ಕೊಳವೆ ಮಾರ್ಗಗಳ ಉದ್ದ – **35676 ಕಿ.ಮೀ.**
15. ದೇಶದ ಒಟ್ಟು ವಿದೇಶಿ ವ್ಯಾಪಾರದಲ್ಲಿ ಶೇ. ______ ಭಾಗವು ಸಾಗರ ಮಾರ್ಗದ ಮೂಲಕ ಸಾಗುತ್ತದೆ. – **ಶೇ. 85 ಭಾಗ.**
16. ಕಾಂಡ್ಲ ಬಂದರು ಗುಜರಾತಿನ ______ ಖಾರಿಯ ಶಿರೋಭಾಗದಲ್ಲಿದೆ. – **ಕಛ್ ಖಾರಿ.**
17. ಭಾರತದ ಹೆಬ್ಬಾಗಿಲು ಎಂದು ಕರೆಯಲ್ಪಡುವ ಬಂದರು – **ಮುಂಬಯಿ ಬಂದರು.**
18. ಜವಹರಲಾಲ್ ನೆಹರು ಬಂದರಿಗೆ ಹಿಂದೆ ಈ ಹೆಸರಿನಿಂದ ಕರೆಯಲಾಗುತ್ತಿತ್ತು. – **ನವ್ಹಾಶೇವ ಬಂದರು.**
19. ಜವಹರಲಾಲ್ ನೆಹರು ಮುಂಬಯಿ ನಗರದಿಂದ 10 ಕಿ.ಮೀ. ದೂರದಲ್ಲಿರುವ ______ ಗುಹೆಗಳಿಗೆ ಸಮೀಪದಲ್ಲಿದೆ. –**ಎಲಿಫೆಂಟಾ ಗುಹೆ**
20. ಜವಾಹರಲಾಲ್ ನೆಹರು ಬಂದರನ್ನು ನಿರ್ಮಿಸಿದ ಉದ್ದೇಶ – **ಮುಂಬಯಿ ಬಂದರಿನ ಒತ್ತಡವನ್ನು ಕುಗ್ಗಿಸಲು.**
21. ಮರ್ಮಗೋವಾ ಬಂದರು ಗೋವಾ ರಾಜ್ಯದ ______ ನದಿಯ ಅಳಿವೆಯ ಅಂಚಿನಲ್ಲಿದೆ. – **ಜುವಾರಿ ನದಿ.**
22. ಕರ್ನಾಟಕ ಹೆಬ್ಬಾಗಿಲು ಎಂದು ಕರೆಯಲ್ಪಡುವ ಬಂದರು – **ನವ ಮಂಗಳೂರು ಬಂದರು.**
23. ___ ಬಂದರನ್ನು 'ಅರಬ್ಬಿ ಸಮುದ್ರದ ರಾಣಿ' ಎಂದು ಕರೆಯುತ್ತಾರೆ. – **ಕೇರಳದ ಕೊಚಿ ಬಂದರು.**
24. ತಮಿಳುನಾಡಿನ ಅತಿ ಹಳೆಯ ಬಂದರು – **ಚೆನ್ನೈ ಬಂದರು.**
25. ಎನ್ನೋರ್ ಬಂದರನ್ನು ನಿರ್ಮಿಸಿದ ಉದ್ದೇಶ – **ಚೆನ್ನೈ ಬಂದರಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ.**
26. ಭೂಭಾಗದಿಂದ ಸುತ್ತುವರಿದ ಆಳವಾದ ಮತ್ತು ಸುರಕ್ಷಿತವಾದ ಬಂದರು– **ವಿಶಾಖಪಟ್ಟಣ ಬಂದರು.**
27. _____ ಬಂದರು ಹೂಗ್ಲಿ ಮತ್ತು ಹಾಲ್ದಿ ನದಿಗಳ ಸಂಗಮ ಸ್ಥಳದಲ್ಲಿ ನೆಲೆಸಿದ ಬಂದರು – **ಹಾಲ್ದಿಯಾ ಬಂದರು.**
28. ಕೊಲ್ಕತ ಬಂದರಿಗೆ ಪ್ರವೇಶಿಸಲಾಗದ ದೊಡ್ಡ ಹಡಗುಗಳು ಈ ಬಂದರಿಗೆ ಪ್ರವೇಶಿಸುವವು – **ಹಾಲ್ದಿಯಾ ಬಂದರು.**
29. ಭಾರತದ ಎರಡನೇ ಅತಿ ದೊಡ್ಡ ಬಂದರು – **ಕೊಲ್ಕತ ಬಂದರು.**
30. ಸಮುದ್ರ ಯಾನದಲ್ಲಿ ನಡೆಯುವ ವ್ಯಾಪಾರ ಕಾರ್ಯನಿರ್ವಹಿಸುವ ಆಗ್ನೇಯ ಏಷ್ಯಾದ ದೊಡ್ಡ ಬಂದರು – **ಕೊಲ್ಕತ ಬಂದರು.**
31. ಕೊಲ್ಕತ ಬಂದರಿನಲ್ಲಿ ಹೂಳು ತೆಗೆಯುವ ಕಾರ್ಯ ಅವಶ್ಯಕವಾಗಿದೆ. ಏಕೆಂದರೆ – **ಹೂಗ್ಲಿ ನದಿಯಿಂದ ಹೂಳು ತುಂಬುವುದರಿಂದ.**
32. ಭಾರತದಲ್ಲಿ ______ ವಿಮಾನ ನಿಲ್ದಾಣಗಳಿವೆ. – **141 ವಿಮಾನ ನಿಲ್ದಾಣಗಳು.**
33. ಟೆಲಿಫೋನ್ ಮತ್ತು ಮೊಬೈಲ್ ಸೌಲಭ್ಯವು ______ ಸೇವೆಗೆ ಬದಲಿ ವ್ಯವಸ್ಥೆಯಾಗಿದ್ದು ಬಹು ವ್ಯಾಪಕವಾಗಿ ಬಳಕೆಯಲ್ಲಿದೆ. – **ಟೆಲಿಗ್ರಾಫ್.**
34. ಆಲ್ ಇಂಡಿಯಾ ರೇಡಿಯೋ ಆರಂಭವಾದದ್ದು ______ ರಲ್ಲಿ. – **1936ರಲ್ಲಿ**
35. ಭಾರತದಲ್ಲಿ ಟೆಲಿವಿಷನ್ ಪ್ರಸಾರವು ___ ರಲ್ಲಿ ___ ಯಿಂದ ದೂರದರ್ಶನ ಎಂಬ ಹೆಸರಿನಿಂದಲೇ ಆರಂಭಗೊಂಡಿತು. – **1959ರಲ್ಲಿ, ದೆಹಲಿಯಿಂದ**
36. ಗುಜರಾತಿ ಭಾಷೆಯ ____ ಎಂಬ ಪತ್ರಿಕೆಯು ಭಾರತದ ಅತ್ಯಂತ ಹಳೆಯ ಮತ್ತು ಈಗಲೂ ಅಸ್ತಿತ್ವದಲ್ಲಿರುವ ವೃತ್ತಪತ್ರಿಕೆಯಾಗಿದೆ. – **ಬಾಂಬೆ ಸಮಾಚಾರ**
37. ಗುಜರಾತಿ ಭಾಷೆಯ ಬಾಂಬೆ ಸಮಾಚಾರ ಪತ್ರಿಕೆಯು ______ ರಿಂದಲೇ ತನ್ನ ಪ್ರಸಾರವನ್ನು ಆರಂಭಿಸಿತು. – **1822.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಸಾರಿಗೆ ಎಂದರೇನು?**

ಉತ್ತರ : ಸರಕು, ಸೇವೆ ಮತ್ತು ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂಡೆಗೆ ಸಾಗಿಸುವುದನ್ನು 'ಸಾರಿಗೆ. ಎನ್ನುವರು.

**2. ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ಥಾಪನೆಯ ಉದ್ದೇಶವೇನು?**

ಉತ್ತರ : ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗೋಸ್ಕರ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ.

**3. ಗಡಿ ರಸ್ತೆಗಳು ಎಂದರೇನು?**

ಉತ್ತರ : ದೇಶದ ಗಡಿಪ್ರದೇಶದಲ್ಲಿ ರಕ್ಷಣಾ ಪಡೆಯ ಬಳಕೆಗಾಗಿಯೇ ನಿರ್ಮಿಸಿದ ರಸ್ತೆಗಳಿಗೆ 'ಗಡಿ ರಸ್ತೆಗಳು' ಎನ್ನುವರು.

**4. ಬ್ರಿಟಿಷರು ರೈಲು ಮಾರ್ಗವನ್ನು ನಿರ್ಮಿಸಿದ ಉದ್ದೇಶವೇನು?**

ಉತ್ತರ : ಕ್ಷಾಮ ಪೀಡಿತ ಭಾಗಗಳಿಗೆ ಆಹಾರ ಧಾನ್ಯ ಮತ್ತು ಮೇವನ್ನು ಸಾಗಿಸಲು ಮತ್ತು ಸೈನ್ಯವನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಉದ್ದೇಶದಿಂದ ಬ್ರಿಟಿಷರು ರೈಲು ಮಾರ್ಗಗಳನ್ನು ನಿರ್ಮಿಸಿದರು.

**5. ಕೊಳವೆ ಮಾರ್ಗಗಳನ್ನು ಯಾವ ಉದ್ದೇಶಗಳಿಗಾಗಿ ಬಳಸಲಾಗುತ್ತದೆ?**

ಉತ್ತರ : ಕೊಳವೆ ಮಾರ್ಗಗಳನ್ನು ವಿಶೇಷವಾಗಿ ಕಚ್ಚಾ ತೈಲವನ್ನು ತೈಲ ಶುದ್ಧೀಕರಣ ಕೇಂದ್ರಗಳಿಗೆ, ನೈಸರ್ಗಿಕ ಅನಿಲ ಮತ್ತು ಕೆಸರು ರೂಪದಲ್ಲಿರುವ ಖನಿಜಗಳನ್ನು ಸಾಗಿಸಲು ಕೊಳವೆ ಮಾರ್ಗಗಳನ್ನು ಬಳಸಲಾಗುವುದು.

**6. ಇಂದು ಒಳನಾಡಿನ ಜಲಸಾರಿಗೆಯ ಮಹತ್ವ ಕಡಿಮೆಯಾಗುತ್ತಿದೆ. ಏಕೆ?**

ಉತ್ತರ : ಇಂದು ರಸ್ತೆ ಮತ್ತು ರೈಲುಸಾರಿಗೆಗಳ ಪ್ರಗತಿಯಿಂದಾಗಿ ಒಳನಾಡಿನ ಜಲಸಾರಿಗೆಯ ಮಹತ್ವ ಕಡಿಮೆಯಾಗುತ್ತದೆ.

**7. ಬಂದರು ಎಂದರೇನು?**

ಉತ್ತರ : ಸರಕು ತುಂಬಲು ಮತ್ತು ಇಳಿಸುವುದಕ್ಕಾಗಿ ಹಡಗು ತಂಗುವ ಸ್ಥಳವೇ ಬಂದರು.

**8. ಭಾರತದಲ್ಲಿರುವ ಎರಡು ಪ್ರಮುಖ ವಾಯು ಸಂಚಾರ ಸಂಸ್ಥೆಗಳು ಯಾವುವು?**

ಉತ್ತರ : ಇಂದು ಭಾರತದಲ್ಲಿ ಎರಡು ಪ್ರಮುಖ ವಾಯು ಸಂಚಾರ ಸಂಸ್ಥೆಗಳಿವೆ. ಅವುಗಳೆಂದರೆ – 1. ಏರ್ ಇಂಡಿಯಾ ನ್ಯಾಷನಲ್, 2. ಇಂಡಿಯನ್ ಏರ್‌ಲೈನ್ಸ್.

**9. ಸಂಪರ್ಕ ಮಾಧ್ಯಮ ಎಂದರೇನು?**

ಉತ್ತರ : ಒಬ್ಬಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸಮಾಚಾರವನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು.

**10. ಸಂಪರ್ಕ ಮಾಧ್ಯಮಗಳಲ್ಲಿ ಎಷ್ಟು ವಿಧ? ಅವು ಯಾವುವು?**

ಉತ್ತರ : ಸಂಪರ್ಕ ಮಾಧ್ಯಮಗಳಲ್ಲಿ ಎರಡು ವಿಧ. ಅವುಗಳೆಂದರೆ – 1. ವೈಯಕ್ತಿಕ ಸಂಪರ್ಕ ಮಾಧ್ಯಮ. 2. ಸಮುದಾಯ ಸಂಪರ್ಕ ಮಾಧ್ಯಮ.

**11. ವೈಯಕ್ತಿಕ ಸಂಪರ್ಕ ಮಾಧ್ಯಮಗಳು ಯಾವುವು?**

ಉತ್ತರ : ವೈಯಕ್ತಿಕ ಸಂಪರ್ಕ ಮಾಧ್ಯಮಗಳೆಂದರೆ – ಅಂಚೆ, ಟೆಲಿಗ್ರಾಫ್, ಟೆಲಿಫೋನ್, ಫ್ಯಾಕ್ಸ್, ಈ–ಮೇಲ್, ಅಂತರ್ಜಾಲ, ಸೆಮಿನಾರ್ ಇತ್ಯಾದಿಗಳು.

**12. ಸಮುದಾಯ ಸಂಪರ್ಕ ಮಾಧ್ಯಮಗಳು ಯಾವುವು?**

ಉತ್ತರ : ಸಮುದಾಯ ಸಂಪರ್ಕ ಮಾಧ್ಯಮಗಳೆಂದರೆ – ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳು, ಆಕಾಶವಾಣಿ, ದೂರದರ್ಶನ, ಪುಸ್ತಕಗಳು ಇತ್ಯಾದಿ.

**13. ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಆಯ್‌ಎಸ್) ಎಂದರೇನು?**

ಉತ್ತರ : ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಪಿಎಸ್) ಎಂದರೆ – ಪೃಥ್ವಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಯುವ ಒಂದ ಕಂಪ್ಯೂಟರ್ ವ್ಯವಸ್ಥೆಯಾಗಿದೆ.

**14. ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ (ಜಿಪಿಎಸ್)ಯ ಬಗ್ಗೆ ವಿವರಿಸಿ.**

ಉತ್ತರ : ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ (ಜಿಪಿಎಸ್)ಯು ಸಂಕೇತ ಆಧಾರಿತವಾಗಿದ್ದು ಪೃಥ್ವಿಯ ಮೇಲಿನ ಚರ, ಸ್ಥಿರ ವಸ್ತು ಅಥವಾ ವ್ಯಕ್ತಿಯ ಸ್ಥಾನ ನಿರ್ಧರಿಸುವ ವ್ಯವಸ್ಥೆಯಾಗಿದೆ. ಇದರಲ್ಲಿ ಅಕ್ಷಾಂಶ, ರೇಖಾಂಶ ಮತ್ತು ಸಮುದ್ರ ಮಟ್ಟದಿಂದ ಎತ್ತರಗಳನ್ನಾಧರಿಸಿ ಸ್ಥಳ ನಿರ್ಧರಿಸಲಾಗುವುದು.

**15. ಅಂಚೆ ಕಛೇರಿಯು ಒದಗಿಸುವ ಸೇವೆಗಳನ್ನು ತಿಳಿಸಿ.**

ಉತ್ತರ : ಪ್ರಮುಖ ಅಂಚೆ ಸೇವೆಗಳೆಂದರೆ – ಪತ್ರಗಳು ಪಾರ್ಸಲ್, ಪ್ಯಾಕೇಟ್, ಮನಿಆರ್ಡರ್ ಮುಂತಾದವುಗಳನ್ನು ಸ್ಥಳದಿಂದ ಸ್ಥಳಕ್ಕೆ ರವಾನಿಸುವುವು. ಜೊತೆಗೆ ಸಣ್ಣ ಉಳಿತಾಯ ಖಾತೆ, ಠೇವಣಿಗಳು, ರಾಷ್ಟ್ರೀಯ ಉಳಿತಾಯ ಪತ್ರಗಳು ಇತ್ಯಾದಿ ಸೇವೆಗಳನ್ನು ಪೂರೈಸುತ್ತದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಸಾರಿಗೆಯ ಪ್ರಾಮುಖ್ಯತೆಯನ್ನು ತಿಳಿಸಿ.**

**ಉತ್ತರ : ಸಾರಿಗೆಯ ಪ್ರಾಮುಖ್ಯತೆ**

- ಸಾರಿಗೆ ಸೌಲಭ್ಯವು ಸಂಪನ್ಮೂಲಗಳು ಮತ್ತು ಕೃಷಿಯ ಅಭಿವೃದ್ಧಿಗೆ ನೆರವಾಗುತ್ತದೆ.
- ಕೈಗಾರಿಕೆಗಳ ಪ್ರಗತಿಗೆ ಉತ್ತೇಜನ ನೀಡುತ್ತದೆ.
- ಮಾರುಕಟ್ಟೆಯ ವಿಸ್ತರಣೆಗೆ ಅವಕಾಶ ಕಲ್ಪಿಸುತ್ತದೆ.
- ದೇಶಿಯ ಮತ್ತು ವಿದೇಶಿಯ ವ್ಯಾಪಾರ ವೃದ್ಧಿಗೆ ಸಹಾಯ ಮಾಡುತ್ತದೆ.
- ಸಾರಿಗೆಯಿಂದ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ.
- ಜನರ ಆದಾಯ ಮತ್ತು ಜೀವನ ಮಟ್ಟದ ಸುಧಾರಣೆಯಾತ್ತದೆ.
- ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ಮತ್ತು ರಕ್ಷಣಾ ಪಡೆಗೂ ನೆರವಾಗುತ್ತದೆ.

**2. ಸಾರಿಗೆಯ ವಿಧಗಳನ್ನು ತಿಳಿಸಿ.**

**ಉತ್ತರ : ಭಾರತದ ಸಾರಿಗೆ ವಿಧಗಳು**

- ಭೂಸಾರಿಗೆ – 1. ರಸ್ತೆ ಸಾರಿಗೆ, 2. ರೈಲುಸಾರಿಗೆ, 3. ಕೊಳವೆ ಮಾರ್ಗಗಳು
- 2. ಜಲಸಾರಿಗೆ – 1. ಒಳನಾಡಿನ ಜಲಸಾರಿಗೆ, 2. ಸಾಗರ ಜಲಸಾರಿಗೆ
- 3. ವಾಯುಸಾರಿಗೆ – 1. ರಾಷ್ಟ್ರೀಯ ವಾಯು ಸಾರಿಗೆ, 2. ಅಂತರಾಷ್ಟ್ರೀಯ ವಾಯು ಸಾರಿಗೆ.

**3. ರಸ್ತೆ ಸಾರಿಗೆಯ ಪ್ರಾಮುಖ್ಯತೆ ತಿಳಿಸಿ.**

**ಉತ್ತರ : ರಸ್ತೆ ಸಾರಿಗೆಯ ಪ್ರಾಮುಖ್ಯತೆ**

- ಕೃಷಿ ಮತ್ತು ಗ್ರಾಮೀಣ ಪ್ರದೇಶಗಳ ಪ್ರಗತಿಗಾಗಿ ರಸ್ತೆಗಳು ಅತ್ಯಾವಶ್ಯಕ.
- ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ಯಲು ರಸ್ತೆ ಸಾರಿಗೆ ಅವಶ್ಯಕ.
- ಹಳ್ಳಿಗಳಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳಲು ರಸ್ತೆ ಸಾರಿಗೆ ಬೇಕು.
- ರಸ್ತೆ ಸಾರಿಗೆಯು ರೈಲು ಸಂಚಾರ, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತದೆ.
- ಅವು ಪ್ರವಾಸೋದ್ಯಮ, ವ್ಯಾಪಾರ ಮತ್ತು ವಾಣಿಜ್ಯ ಹಾಗೂ ಕೈಗಾರಿಕಾಭಿವೃದ್ಧಿಗೆ ಹೆಚ್ಚು ನೆರವಾಗುತ್ತದೆ.
- ರಸ್ತೆ ಸಾರಿಗೆಯು ಉದ್ಯೋಗಾವಕಾಶ ಕಲ್ಪಿಸುತ್ತದೆ.
- ರಕ್ಷಣಾ ಇಲಾಖೆಯಲ್ಲಿ, ಅದರಲ್ಲೂ ಗಡಿಪ್ರದೇಶದಲ್ಲಿ ರಸ್ತೆಗಳು ಹೆಚ್ಚು ಉಪಯುಕ್ತ.

**4. ನಿರ್ಮಾಣ ಮತ್ತು ನಿರ್ವಹಣೆಯ ಆಧಾರದ ಮೇಲೆ ರಸ್ತೆಯ ಪ್ರಕಾರಗಳನ್ನು ತಿಳಿಸಿ.**

**ಉತ್ತರ : ನಿರ್ಮಾಣ ಮತ್ತು ನಿರ್ವಹಣೆಗಳನ್ನು ಆಧರಿಸಿ ರಸ್ತೆಗಳನ್ನು ಐದು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ –**

1. ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳು 2. ರಾಷ್ಟ್ರೀಯ ಹೆದ್ದಾರಿಗಳು 3. ರಾಜ್ಯ ಹೆದ್ದಾರಿಗಳು 4. ಜಿಲ್ಲಾ ರಸ್ತೆಗಳು 5. ಗ್ರಾಮೀಣ ರಸ್ತೆಗಳು

**5. ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳ ಪ್ರಾಮುಖ್ಯತೆ ತಿಳಿಸಿ.**

**ಉತ್ತರ : ಸುವರ್ಣ ಚತುಷ್ಕೋನ ಪ್ರಾಮುಖ್ಯತೆ**

- ಸುವರ್ಣ ಚತುಷ್ಕೋನ ಹೆದ್ದಾರಿಗಳು ನಾಲ್ಕರಿಂದ ಆರು ಪಥಗಳ ಉತ್ತಮ ರಸ್ತೆಗಳ ರಚನಾ ಯೋಜನೆಯಾಗಿದೆ.
- ಈ ಯೋಜನೆಯು 1999ರಲ್ಲಿ ಆರಂಭವಾಯಿತು.
- ಈ ಹೆದ್ದಾರಿ ಜಾಲವು ದೇಶದ ಪ್ರಮುಖ ನಗರ, ಸಾಂಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ.
- ಇದು ದೆಹಲಿ–ಜೈಪುರ–ಅಹ್ಮದಾಬಾದ–ಸೂರತ್–ಮುಂಬಯಿ–ಪುಣೆ–ಬೆಂಗಳೂರು–ಚನ್ನೈ–ವಿಶಾಖಪಟ್ಟಣ–ಭುವನೇಶ್ವರ–ಕೊಲ್ಕತ್ತ–ಅಲಹಾಬಾದ್–ಕಾನ್ಪುರ–ದೆಹಲಿಗಳೊಂದಿಗೆ ಸಂಪರ್ಕಕಲ್ಪಿಸುವುದು.

**<u>ಸೂಪರ್ ಹೆದ್ದಾರಿಗಳ ಪ್ರಾಮುಖ್ಯತೆ</u>**

**ಸೂಪರ್ ಹೆದ್ದಾರಿಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.**

- ಉತ್ತರ–ದಕ್ಷಿಣ ಕಾರಿಡಾರ್ :– ಇದು ಶ್ರೀನಗರದಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ.
- ಪೂರ್ವ–ಪಶ್ಚಿಮ ಕಾರಿಡಾರ್ :– ಇದು ಅಸ್ಸಾಂನ ಸಿಲ್ಚಾರ್‌ನಿಂದ ಗುಜರಾತ್‌ನ ಪೋರ್‌ಬಂದರಿನವರೆಗೆ ಹಬ್ಬಿದೆ.
- ಇವು ಅನೇಕ ನಗರ, ಕೈಗಾರಿಕಾ ಕೇಂದ್ರಗಳು ಮತ್ತು ಬಂದರುಗಳನ್ನು ಸಂಪರ್ಕಿಸುತ್ತವೆ.

**6. ಭಾರತದ ರೈಲು ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.**

**ಉತ್ತರ : ಭಾರತದ ರೈಲು ಸಾರಿಗೆ ಪ್ರಾಮುಖ್ಯತೆ**

- ರೈಲು ಸಾರಿಗೆಯು ಅಧಿಕ ಸಂಖ್ಯೆಯ ಪ್ರಯಾಣಿಕರನ್ನು ದೂರದ ಸ್ಥಳಗಳಿಗೆ ಸಾಗಿಸಲು ಹೆಚ್ಚು ಉಪಯುಕ್ತವಾದವು.
- ಕೃಷಿ, ಕೈಗಾರಿಕೆ ಮತ್ತು ಭಾರತದ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.
- ದೇಶದ ವ್ಯಾಪಾರ ಮತ್ತು ಪ್ರವಾಸೋದ್ಯಮದ ಬೆಳವಣಿಗೆಗೂ ನೆರವಾಗಬಲ್ಲದು.

**7. ಭಾರತದ ರೈಲು ಸಾರಿಗೆ ಬೆಳೆದು ಬಂದ ರೀತಿಯನ್ನು ವಿವರಿಸಿ.**

**ಉತ್ತರ : ಭಾರತದ ರೈಲು ಸಾರಿಗೆ ಬೆಳೆದು ಬಂದ ರೀತಿ**

- ಭಾರತದಲ್ಲಿ ರೈಲು ಸಾರಿಗೆ ನಿರ್ಮಾಣವು ಬ್ರಿಟಿಷರ ಕಾಲದಲ್ಲಿ ಆರಂಭಗೊಂಡಿತು.
- ಕ್ಷಾಮ ಪೀಡಿತ ಭಾಗಗಳಿಗೆ ಆಹಾರ ಧಾನ್ಯ ಮತ್ತು ಮೇವನ್ನು ಸಾಗಿಸಲು ಮತ್ತು ಸೈನ್ಯವನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಉದ್ದೇಶದಿಂದ ಬ್ರಿಟಿಷರು ರೈಲು ಮಾರ್ಗಗಳನ್ನು ನಿರ್ಮಿಸಿದರು.
- ಭಾರತದ ಪ್ರಥಮ ರೈಲು ಮಾರ್ಗವು 1853ರಲ್ಲಿ ಬಾಂಬೆ ಮತ್ತು ಥಾಣೆಗಳ ನಡುವೆ ನಿರ್ಮಾಣಗೊಂಡಿತು.
- ರೈಲು ಸಾರಿಗೆಯು ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆಯಾಗಿದೆ.
- ಇಂದು ದೇಶದಲ್ಲಿ 64015 ಕಿ.ಮೀ. ಉದ್ದದ ರೈಲು ಮಾರ್ಗಗಳಿದ್ದು, ಸುಮಾರು 7031 ರೈಲು ನಿಲ್ದಾಣಗಳಿವೆ.
- ಸಮರ್ಥನೀಯ ಆಡಳಿತ ವ್ಯವಸ್ಥೆಗಾಗಿ ಭಾರತೀಯ ರೈಲ್ವೆಯನ್ನು 16 ವಲಯಗಳನ್ನಾಗಿ ವಿಂಗಡಿಸಲಾಗಿದೆ.

**8. ಭಾರತದ ವಾಯುಸಾರಿಗೆಯನ್ನು ಕುರಿತು ವಿವರಿಸಿ.**

**ಉತ್ತರ : ಭಾರತದ ವಾಯುಸಾರಿಗೆ**

- ವಾಯು ಸಾರಿಗೆಯು ಅತ್ಯಂತ ವೇಗಯುತ ಸಾರಿಗೆ ಮಾಧ್ಯಮವಾಗಿದೆ.

- ಪ್ರಯಾಣಿಕರು ಮತ್ತು ಟಪಾಲು ಸಾಗಿಸಲು ಬಹಳ ಉಪಯುಕ್ತ ಸಮರ್ಪಕವಾದ ಸಾರಿಗೆ ಸೌಲಭ್ಯವಾಗಿದೆ.
- ಸಮರ, ಪ್ರವಾಹ, ಭೂಕಂಪಗಳಂತಹ ತುರ್ತುಪರಿಸ್ಥಿತಿಗೆ ಇದು ಬಹು ಉಪಯುಕ್ತವಾಗಿದೆ.
- ಭಾರತದಲ್ಲಿ ಎರಡು ಪ್ರಮುಖ ವಾಯು ಸಂಚಾರ ಸಂಸ್ಥೆಗಳಿವೆ. ಅವುಗಳೆಂದರೆ – 1. ಏರ್ ಇಂಡಿಯಾ ನ್ಯಾಷನಲ್, 2. ಇಂಡಿಯನ್ ಏರ್‌ಲೈನ್ಸ್.
- ಇಂದು ದೇಶದಲ್ಲಿ ಖಾಸಗಿ ಸಂಸ್ಥೆಗಳು ವಾಯುಸಂಚಾರ ಸೇವೆ ನೀಡುತ್ತವೆ. ಉದಾ : ಜೆಟ್ ಏರ್‌ವೇಸ್, ಸಹರಾ ಸಂಸ್ಥೆ ಇತ್ಯಾದಿ.

**9. ಭಾರತದಲ್ಲಿ ಪ್ರಮುಖ ಬಂದರುಗಳನ್ನು ಪಟ್ಟಿ ಮಾಡಿ.**

ಉತ್ತರ : ಭಾರತದಲ್ಲಿ 14 ಪ್ರಮುಖ ಬಂದರುಗಳಿವೆ. ಅವುಗಳಲ್ಲಿ 6 ಪಶ್ಚಿಮ ತೀರದಲ್ಲಿ ಮತ್ತು ಉಳಿದ 7 ಪೂರ್ವ ತೀರದಲ್ಲಿ ಇವೆ. ಮತ್ತೊಂದು ಪ್ರಮುಖ ಬಂದರು ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿದೆ.

**ಭಾರತದ ಪಶ್ಚಿಮ ತೀರದ ಪ್ರಮುಖ ಬಂದರುಗಳು** –
- ಗುಜರಾತಿನ – ಕಾಂಡ್ಲ, ಕೇರಳದ – ಕೊಚ್ಚಿ.
- ಮಹಾರಾಷ್ಟ್ರದ – ಮುಂಬೈ & ಜವಾಹರಲಾಲ ನೆಹರು ಬಂದರು,
- ಗೋವಾದ – ಮರ್ಮಗೋವಾ, ಕರ್ನಾಟಕದ – ನವ ಮಂಗಳೂರು,

**ಭಾರತದ ಪೂರ್ವ ತೀರದ ಪ್ರಮುಖ ಬಂದರುಗಳು** –
- ತಮಿಳುನಾಡಿನ – ತುತಕುಡಿ, ಚನ್ನೈ & ಎನ್ನೋರ್,
- ಆಂದ್ರಪ್ರದೇಶದ – ವಿಶಾಖಪಟ್ಟಣ, ಒಡಿಶಾದ – ಪಾರಾದೀಪ್,
- ಪಶ್ಚಿಮ ಬಂಗಾಳದ – ಹಾಲ್ದಿಯಾ ಮತ್ತು ಕೊಲ್ಕತ,
- ಅಂಡಮಾನ್ & ನಿಕೋಬಾರ್ ದ್ವೀಪದಲ್ಲಿರುವ – ಪೋರ್ಟಬ್ಲೇರ್.

**10. ಭಾರತದ ಪ್ರಮುಖ ಅಂತರಾಷ್ಟ್ರೀಯ ನಿಲ್ದಾಣಗಳನ್ನು ಪಟ್ಟಿ ಮಾಡಿ.**

**ಉತ್ತರ : ಭಾರತದ ಪ್ರಮುಖ ಅಂತರಾಷ್ಟ್ರೀಯ ನಿಲ್ದಾಣಗಳು**
- ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ದೆಹಲಿ
- ಛತ್ರಪತಿ ಶಿವಾಜಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಮುಂಬಯಿ
- ನೇತಾಜಿ ಸುಭಾಷ್‌ಚಂದ್ರಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಕೊಲ್ಕತ.
- ಅಣ್ಣಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಚೆನ್ನೈ.
- ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಬೆಂಗಳೂರು.
- ರಾಜೀವಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಹೈದರಾಬಾದ.
- ಶ್ರೀಗುರು ರಾಮದಾಸ್‌ಜಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಅಮೃತಸರ.
- ಲೋಕಪ್ರಿ ಗೋಪಿನಾಥ್ ಬೋರ್ಡೋಲೊಯಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಗುವಹಾತಿ.
- ಬಿಜು ಪಾಟ್ನಾಯಿಕ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಅಹ್ಮದಾಬಾದ್.
- ಸರ್ದಾರ್ ವಲ್ಲಬಾಯ್ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಅಹ್ಮದಾಬಾದ್.
- ವೀರ ಸಾವರ್ಕರ್ ಅಂತರಾಷ್ಟ್ರೀಯ ವಿಮಾನ ನಿಲ್ದಾನ– ಫೋರ್ಟ್ ಬ್ಲೇರ್.
- ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ನಾಗ್ಪುರ.
- ಜಾರುಕಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ – ಶಿಲ್ಲಾಂಗ್.
- ಲಾಲ್ ಬಹದ್ದೂರ್ ಶಾಸ್ತ್ರಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ– ವಾರಣಾಸಿ

**11. ಸಂಪರ್ಕ ಮಾಧ್ಯಮದ ಪ್ರಾಮುಖ್ಯತೆಯನ್ನು ವಿವರಿಸಿ.**

**ಉತ್ತರ : ಸಂಪರ್ಕ ಮಾಧ್ಯಮದ ಪ್ರಾಮುಖ್ಯತೆ.**
- ಸರ್ಕಾರದ ನೀತಿ ನಿಯಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಸಂಪರ್ಕ ಮಾಧ್ಯಮ ನೆರವಾಗುತ್ತದೆ.
- ಇದು ನೈಸರ್ಗಿಕ ವಿಪತ್ತು ಮತ್ತು ವಿನಾಶಗಳು, ಹವಾಗುಣ ಮುನ್ಸೂಚನೆಗಳನ್ನು ನಾವು ತಿಳಿಯಲು ಸಹಾಯವಾಗುವುದು.
- ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಕೃಷಿ ಇತ್ಯಾದಿಗಳ ಅಭಿವೃದ್ಧಿಗೂ ನೆರವಾಗುವುದು.
- ಮನರಂಜನೆ, ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ಪೂರೈಸುತ್ತದೆ.
- ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೂ ನೆರವಾಗುತ್ತದೆ.

**13. ದೂರದರ್ಶನ ಮತ್ತು ಆಕಾಶವಾಣಿಯಿಂದಾಗುವ ಪ್ರಯೋಜನಗಳೇನು?**

**ಉತ್ತರ : ದೂರದರ್ಶನ ಮತ್ತು ಆಕಾಶವಾಣಿಯಿಂದಾಗುವ ಪ್ರಯೋಜನಗಳು**
- ನಮ್ಮ ರೈತರು ಕೃಷಿ ಸಮಸ್ಯೆ, ಕೃಷಿ ಉತ್ಪನ್ನಗಳ ಬೆಲೆ, ಹವಾಗುಣ ಮುನ್ಸೂಚನೆ, ಆಧುನಿಕ ಕೃಷಿ ವಿಧಾನ ಮೊದಲಾದವುಗಳ ಬಗ್ಗೆ ತಾಜಾಸುದ್ಧಿಗಳನ್ನು ಪಡೆಯುವರು.
- ಶಿಕ್ಷಣ, ಮನರಂಜನೆ ಮತ್ತು ಮಾಹಿತಿ ಆಧಾರಿತವಾದಂತಹ ವಿವಿಧ ಕಾರ್ಯಕ್ರಮಗಳ ಬಗ್ಗೆ ಸುದ್ಧಿಗಳನ್ನು ಬಿತ್ತರಿಸುವವು.

**14. ದೂರ ಸಂವೇದಿ ತಂತ್ರಜ್ಞಾನದ ಬಗ್ಗೆ ವಿವರಿಸಿ.**

ಉತ್ತರ : ದೂರ ಸಂವೇದಿ ತಂತ್ರಜ್ಞಾನವು ಪೃಥ್ವಿಯ ಮೇಲಿನ ಮಾಹಿತಿಗಳನ್ನು ಸಂವೇದನೆಯ ಮೂಲಕ ಸಂಗ್ರಹಿಸುತ್ತದೆ. ಇದು ಒಂದು ವಸ್ತು, ಸ್ಥಳ ಅಥವಾ ಲಕ್ಷಣಗಳನ್ನು ನೇರ ಸಂಪರ್ಕ ಹೊಂದದೆ ಮಾಹಿತಿಗಳನ್ನು ಸಂಗ್ರಹಿಸುವ ಮಾಧ್ಯಮ. ದೂರ ಸಂವೇದಿಯ ಮುಖಾಂತರ ಬಾಹ್ಯ ಮತ್ತು ಉಪಗ್ರಹ ಛಾಯಾಚಿತ್ರಗಳನ್ನು ತೆಗೆದುಕೊಳ್ಳಬಹುದು.

**15. ಭಾರತದ ಸಾಗರ ಜಲಸಾರಿಗೆಗೆ ಪೂರಕವಾಗಿರುವ ಅಂಶಗಳಾವುವು?**

**ಉತ್ತರ : ಭಾರತದ ಸಾಗರ ಜಲಸಾರಿಗೆಗೆ ಪೂರಕವಾಗಿರುವ ಅಂಶಗಳು –**
- ಸಮುದ್ರ ಮತ್ತು ಸಾಗರಗಳ ಮೂಲಕ ಏರ್ಪಡುವ ನೌಕಾಯಾನವೇ ಸಾಗರ ಜಲಸಾರಿಗೆ.
- ಭಾರತದ ಉದ್ದವಾದ ಸಮುದ್ರತೀರ ಮತ್ತು ಕೆಲವು ನೈಸರ್ಗಿಕ ಬಂದರುಗಳ ಜೊತೆಗೆ ದೇಶವು ಪೂರ್ವಾರ್ಧಗೋಳದ ಮಧ್ಯದಲ್ಲಿ ನೆಲೆಸಿದೆ.
- ದೇಶದ ವಿದೇಶಿ ವ್ಯಾಪಾರದಲ್ಲಿ ಶೇ. 85 ಭಾಗವು ಸಾಗರ ಮಾರ್ಗದ ಮೂಲಕ ಸಾಗುತ್ತದೆ.
- ಈ ಎಲ್ಲಾ ಅಂಶಗಳು ದೇಶದ ಸಾಗರ ಜಲಸಾರಿಗೆಗೆ ಪೂರಕವಾಗಿವೆ.

## ಅದ್ಯಾಯ – 10 ಭಾರತದ ಕೈಗಾರಿಕೆಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭಾರತದಲ್ಲಿ ____ ಪ್ರಮುಖ ಕೈಗಾರಿಕೆ ಪ್ರದೇಶಗಳನ್ನು ಗುರುತಿಸಲಾಗಿದೆ.– **08 ಕೈಗಾರಿಕೆ ಪ್ರದೇಶಗಳು.**

2. ______ ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ. – **ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ**

3. ಕಬ್ಬಿಣ ಅದಿರು ಕರಗಿಸುವ ಮತ್ತು ಕಬ್ಬಿಣ ತಯಾರಿಸುವ ಕಲೆ ಭಾರತೀಯರಿಗೆ ಪ್ರಾಚೀನ ಕಾಲದಿಂದಲೂ ತಿಳಿದಿತ್ತು ಎಂಬುದಕ್ಕೆ ಉದಾಹರಣೆ – **ದೆಹಲಿಯಲ್ಲಿರುವ ಮೆಹ್ರಾಲಿ ಕಬ್ಬಿಣದ ಸ್ತಂಭ.**

4. ಭಾರತದಲ್ಲಿ ಮೊಟ್ಟಮೊದಲಿಗೆ ಆಧುನಿಕ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು _____ ರಲ್ಲಿ _______ ಎಂಬಲ್ಲಿ ಸ್ಥಾಪನೆಗೊಂಡಿತು. – **1874ರಲ್ಲಿ, ಪಶ್ಚಿಮಬಂಗಾಳದ ಕುಲ್ಟಿ ಎಂಬಲ್ಲಿ.**

5. ವಾಸ್ತವ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಆರಂಭದ ಕೀರ್ತಿ ______ ರವರಿಗೆ ಸಲ್ಲುತ್ತದೆ. – **ಜೆ. ಎನ್. ಟಾಟಾ.**

6. ಜೆ. ಎನ್. ಟಾಟಾ ರವರು _______ ರಲ್ಲಿ ಜಾರ್ಖಂಡ್ ರಾಜ್ಯದ ________ ಬಳಿ ಟಾಟಾ ಕಬ್ಬಿಣ್ಣ ಉಕ್ಕು ಕಂಪನಿಯ ಕಾರ್ಖಾನೆಯನ್ನು ಸ್ಥಾಪಿಸಿದರು. – **1907ರಲ್ಲಿ, ಸಾಕ್ಚಿ (ಜೆಂಷೆಡ್ಪುರ)**

**7.** ಭಾರತದಲ್ಲಿ ಇಂದು ____ಸಮಗ್ರ ಕಬ್ಬಿಣ ಮತ್ತು ಉಕ್ಕು ಸ್ಥಾವರಗಳಿವೆ.– **14.**

**8.** ಉಕ್ಕು ಉತ್ಪಾದಿಸುವ ದೇಶಗಳಲ್ಲಿ ಭಾರತದ ಸ್ಥಾನ – **8ನೇ ಸ್ಥಾನ.**

**9.** ಅಲ್ಯೂಮಿನಿಯಂ ಕೈಗಾರಿಕೆಯು ಮೊದಲಿಗೆ _____ ನಗರದಲ್ಲಿ ____ ರಲ್ಲಿ ಆರಂಭವಾಯಿತು. – **ಪಶ್ಚಿಮ ಬಂಗಾಳದ ಜಯಕಾಯ್ ನಗರ, 1942ರಲ್ಲಿ.**

**10.** ಪ್ರಪಂಚದಲ್ಲಿ ಅಲ್ಯೂಮಿನಿಯಂ ಉತ್ಪಾದಿಸುವ ದೇಶಗಳಲ್ಲಿ ಭಾರತದ ಸ್ಥಾನ – **11 ನೇ ಸ್ಥಾನ.**

**11.** ಭಾರತದ ಜವಳಿ ಉದ್ದಿಮೆಗಳಲ್ಲಿ _____ ಕೈಗಾರಿಕೆಯು ಅತ್ಯಂತ ದೊಡ್ಡದು. – **ಹತ್ತಿ ಬಟ್ಟೆ ಕೈಗಾರಿಕೆ.**

**12.** ಆಧುನಿಕ ಹತ್ತಿ ಬಟ್ಟೆ ಕೈಗಾರಿಕೆಯು _____ ಯಲ್ಲಿ ____ ರಲ್ಲಿ ಪ್ರಾರಂಭವಾಯಿತು. – **ಮುಂಬಯಿ, 1854ರಲ್ಲಿ.**

13. ದೇಶದಲ್ಲಿ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು ಪಶ್ಚಿಮ ಬಂಗಾಳದ _____ ಎಂಬಲ್ಲಿ _____ ರಲ್ಲಿ ಸ್ಥಾಪನೆಗೊಂಡಿತು. – **ಸೆರಾಂಪುರ, 1932ರಲ್ಲಿ**

14. ವಾಸ್ತವ ಯಶಸ್ವಿ ಕಾಗದ ಕಾರ್ಖಾನೆಯೊಂದು ಕೊಲ್ಕತ ಸಮೀಪದ _____ ಯಲ್ಲಿ ______ ರಲ್ಲಿ ಸ್ಥಾಪನೆಯಾಯಿತು. – **ಬಾಲಿ, 1870ರಲ್ಲಿ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಕೈಗಾರಿಕೆ ಎಂದರೇನು?**

ಉತ್ತರ : ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಕೈಗಾರಿಕೆ ಎನ್ನುವರು. ಉದಾ : ಕಬ್ಬನ್ನು ಸಕ್ಕರೆಯಾಗಿ.

**2. ಕೈಗಾರಿಕಾ ಪ್ರದೇಶ ಎಂದರೇನು?**

ಉತ್ತರ : ಒಂದೇ ಬಗೆಯ ಅಥವಾ ವಿವಿಧ ಬಗೆಯ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ಪ್ರದೇಶವನ್ನು 'ಕೈಗಾರಿಕಾ ಪ್ರದೇಶ' ಎನ್ನುವರು.

**3. ಮುಂಬಯಿ ನಗರವನ್ನು ಭಾರತದ ಕಾಟನ್‌ಪೊಲೀಸ್ ಮತ್ತು ಭಾರತದ ಮಾಂಚೆಸ್ಟರ್ ಎಂದು ಕರೆಯಲು ಕಾರಣವೇನು?**

ಉತ್ತರ : ಮುಂಬಯಿ ನಗರವು ಭಾರತದ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿದ್ದರಿಂದ ಮುಂಬಯಿ ನಗರವನ್ನು ಭಾರತದ ಕಾಟನ್‌ಪೊಲೀಸ್ ಮತ್ತು ಭಾರತದ ಮಾಂಚೆಸ್ಟರ್ ಎಂದು ಕರೆಯುತ್ತಾರೆ.

**4. ಕಾಗದ ಕೈಗಾರಿಕೆಯನ್ನು ಅರಣ್ಯ ಆಧಾರಿತ ಕೈಗಾರಿಕೆಯೆಂದು ಕರೆಯುತ್ತಾರೆ ಏಕೆ?**

ಉತ್ತರ : ಕಾಗದ ಕೈಗಾರಿಕೆಯನ್ನು ಅರಣ್ಯ ಆಧಾರಿತ ಕೈಗಾರಿಕೆಯೆಂದು ಕರೆಯುತ್ತಾರೆ ಏಕೆಂದರೆ ಈ ಉದ್ಯಮಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳೆಂದರೆ ಬಿದಿರು ಮತ್ತು ಮರದ ತಿರುಳುಗಳಂತಹ ಮೃದು ಮರಗಳ ವಸ್ತುಗಳು, ಸಬಾಯಿ ಮತ್ತು ಬಾಭರ್‌ನಂತಹ ಹುಲ್ಲು ಇತ್ಯಾದಿ.

**5. ಅರಣ್ಯದಿಂದ ದೊರೆಯುವ ಕಚ್ಚಾವಸ್ತುಗಳ ಕೊರತೆಯಿಂದ ಕಾಗದ ಕೈಗಾರಿಕೆಗೆ ಪರ್ಯಾಯವಾಗಿ ಯಾವ ಪದಾರ್ಥಗಳನ್ನು ಉಪಯೋಗಿಸುತ್ತಾರೆ?**

ಉತ್ತರ : ಅರಣ್ಯದಿಂದ ದೊರೆಯುವ ಕಚ್ಚಾವಸ್ತುಗಳ ಕೊರತೆಯಿಂದ ಕಾಗದ ಕೈಗಾರಿಕೆಗೆ ಪರ್ಯಾಯವಾಗಿ ಭತ್ತ, ಗೋಧಿ, ಬಾರ್ಲಿ ಹುಲ್ಲು, ಕಬ್ಬಿನ ಸಿಪ್ಪೆ, ಚಿಂದಿ ಕಾಗದ, ಚಿಂದಿಬಟ್ಟೆ ಮೊದಲಾದವುಗಳನ್ನು ಉಪಯೋಗಿಸಲಾಗುತ್ತದೆ.

**6. ಭಾರತವು ಹೆಚ್ಚಾಗಿ ಕಾಗದವನ್ನು ಆಮದು ಮಾಡಿಕೊಳ್ಳಲು ಕಾರಣವೇನು?**

ಉತ್ತರ : ಭಾರತದಲ್ಲಿ ಕಾಗದ ಉತ್ಪಾದನೆಯು ತನ್ನ ಸ್ಥಳೀಯ ಬೇಡಿಕೆಯನ್ನು ಪೂರೈಸಲು ಸಾಕಾಗುವುದಿಲ್ಲ. ಹೀಗಾಗಿ ಕಾಗದವನ್ನು ಆಮದು ಮಾಡಿಕೊಳ್ಳಬೇಕಾಗಿದೆ

**7. ಜ್ಞಾನಾಧಾರಿತ ಕೈಗಾರಿಕೆಗಳು ಎಂದರೇನು?**

ಉತ್ತರ : ಜ್ಞಾನ ಆಧಾರಿತ ಉತ್ಪಾದನೆ ಹಾಗೂ ಸೇವೆಗಳನ್ನೊಳಗೊಂಡ ಉದ್ಯಮಗಳನ್ನು ಜ್ಞಾನಾಧಾರಿತ ಕೈಗಾರಿಕೆಗಳು ಎನ್ನುವರು. ಇವುಗಳಿಗೆ ಯಾವುದೇ ದೈಹಿಕ ಬಲ ಮತ್ತು ಕಚ್ಚಾ ವಸ್ತುಗಳಿಗಿಂತಲೂ ಬುದ್ಧಿವಂತಿಕೆ ಸಾಮರ್ಥ್ಯ ಬೇಕು.

**8. ಬೆಂಗಳೂರನ್ನು 'ಭಾರತದ ಸಿಲಿಕಾನ್ ಸಿಟಿ(ವ್ಯಾಲಿ) ಎಂದು ಕರೆಯಲು ಕಾರಣವೇನು?**

ಉತ್ತರ : ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿದ್ದುದರಿಂದ ಇದನ್ನು ಸಿಲಿಕಾನ್ ಸಿಟಿ(ವ್ಯಾಲಿ) ಎಂದು ಕರೆಯುತ್ತಾರೆ.

**9. ಇಂದು ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ. ಏಕೆ?**

ಉತ್ತರ : ಭಾರತವು ಸಾಕಷ್ಟು ಯುವ ಜನಸಂಖ್ಯೆ ಮತ್ತು ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ಹೊಂದಿದೆ. ಹಾಗೂ ಪ್ರಮುಖ ಜ್ಞಾನಾಧಾರಿತ ಕೈಗಾರಿಕಾ ಪ್ರದೇಶವಾಗಿ ಹೊರಹೊಮ್ಮಲು ಉತ್ತಮ ಸಾಮರ್ಥ್ಯ ಹೊಂದಿದೆ. ಹೀಗಾಗಿ ಇಂದು ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಯು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಕೈಗಾರಿಕೆಗಳ ಪ್ರಾಮುಖ್ಯತೆ ತಿಳಿಸಿ.**

**ಉತ್ತರ : ಕೈಗಾರಿಕೆಗಳ ಪ್ರಾಮುಖ್ಯತೆ**

- ಕೈಗಾರಿಕೆಗಳು ನಮ್ಮ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.
- ಕೈಗಾರಿಕೆಗಳ ಅಭಿವೃದ್ಧಿಯಿಂದ ಪ್ರಾಥಮಿಕ ಸರಕುಗಳ ಅವಲಂಬನೆ ಮತ್ತು ಆಮದು ಕಡಿಮೆಯಾಗುತ್ತದೆ.
- ರಾಷ್ಟ್ರಾದಾಯ ಮತ್ತು ತಲಾದಾಯ ಹೆಚ್ಚಾಗುತ್ತದೆ.
- ವಿದೇಶಿ ವಿನಿಮಯ ಗಳಿಕೆಯಲ್ಲಿ ವೃದ್ಧಿಯಾಗುತ್ತದೆ.
- ಉದ್ಯೋಗಾವಕಾಶ, ಜಿಡಿಪಿ ಮತ್ತು ಜನರ ಜೀವನ ಮಟ್ಟದಲ್ಲಿ ಸುಧಾರಣೆಯಾಗುತ್ತದೆ.

**2. ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳು ಯಾವುವು?**

**ಉತ್ತರ : ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳು**

- ಕಚ್ಚಾ ವಸ್ತುಗಳ ಸರಬರಾಜು
- ಶಕ್ತಿ ಸಂಪನ್ಮೂಲಗಳ ಪೂರೈಕೆ
- ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ
- ಮಾರುಕಟ್ಟೆ ಸೌಲಭ್ಯ
- ಬಂಡವಾಳ
- ಕಾರ್ಮಿಕರು ಮತ್ತು ನೀರು ದೊರೆಯವಿಕೆ.
- ಸೂಕ್ತ ವಾಯುಗುಣ
- ಸರಕಾರದ ನೀತಿ ನಿಯಮಗಳು

**3. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಪಟ್ಟಿ ಮಾಡಿ.**

ಉತ್ತರ : ಭಾರತದಲ್ಲಿ 8 ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ – 1. ಹೂಗ್ಲಿ–ಕೊಲ್ಕತ ಪ್ರದೇಶ, 2. ಮುಂಬಯಿ–ಪುಣೆ ಪ್ರದೇಶ, 3. ಅಹ್ಮದಾಬಾದ್–ವಡೋದರ ಪ್ರದೇಶ, 4. ಮಧುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ, 5. ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ, 6. ದೆಹಲಿ–ಮೀರತ್ ಪ್ರದೇಶ, 7. ವಿಶಾಖಪಟ್ಟಣ–ಗುಂಟೂರು ಪ್ರದೇಶ, 8. ಕೊಲ್ಲಂ–ತಿರುವನಂತಪುರ ಪ್ರದೇಶ.

**4. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಸ್ಥಾಪಿಸಲು ಬೇಕಾದ ಸ್ಥಾನೀಕರಣದ ಅಂಶಗಳು ಯಾವುವು?**

**ಉತ್ತರ : ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಸ್ಥಾಪಿಸಲು ಬೇಕಾದ ಸ್ಥಾನೀಕರಣದ ಅಂಶಗಳೆಂದರೆ**

- ಮೂಲ ಕಚ್ಚಾವಸ್ತುವಾದ ಕಬ್ಬಿಣದ ಅದಿರು ಪೂರೈಕೆ,
- ಮುಖ್ಯ ಶಕ್ತಿ ಸಂಪನ್ಮೂಲವಾದ ಕೋಕಿಂಗ್ ಕಲ್ಲಿದ್ದಲು ಹಾಗೂ ಜಲವಿದ್ಯುತ್ ಪೂರೈಕೆ,
- ರೈಲು ಸಾರಿಗೆ ಹಾಗೂ ಬಂದರು ಸೌಲಭ್ಯ,
- ನೀರು ಪೂರೈಕೆ,
- ಕಡಿಮೆ ಕೂಲಿಗೆ ದುಡಿಯುವ ನುರಿತ ಕಾರ್ಮಿಕರು,
- ಬಂಡವಾಳ ಮತ್ತು ಸ್ಥಳೀಯ ಮಾರುಕಟ್ಟೆ ಸೌಲಭ್ಯ.

**5. ಖಾಸಗಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳನ್ನು ಪಟ್ಟಿ ಮಾಡಿ.**

**ಉತ್ತರ : ಖಾಸಗಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು.**

- ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿ (TISCO) ಜೆಂಷೆಪ್ಪುರ (ಸಾಕ್ಚಿ) ಜಾರ್ಖಂಡ್.
- ಜಿಂದಾಲ್ ವಿಜಯನಗರ ಉಕ್ಕು ಲಿ. (JVSL) ತೋರಣಗಲ್, ಬಳ್ಳಾರಿ ಜಿಲ್ಲೆ ಕರ್ನಾಟಕ.
- ಇಸ್ಪಾತ್ ಕಬ್ಬಿಣ ಮತ್ತು ಉಕ್ಕು ಲಿ. ದೋಲ್ವಿ, ರತ್ನಗಿರಿ ಜಿಲ್ಲೆ, ಮಹಾರಾಷ್ಟ್ರ.
- ದುಬಾರಿ ಉಕ್ಕು ಸ್ಥಾವರ, (NINL) ಗೋಪಾಲ್ಪುರ, ಒಡಿಶಾ.

**6. ಸರಕಾರಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳನ್ನು ಪಟ್ಟಿ ಮಾಡಿ.**

**ಉತ್ತರ : ಸರಕಾರಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು.**

- ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ (IISCO) ಬರ್ನಪುರ, ಪಶ್ಚಿಮ ಬಂಗಾಳ.
- ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿ (VISL) ಭದ್ರಾವತಿ, ಕರ್ನಾಟಕ.
- ಹಿಂದುಸ್ತಾನ್ ಉಕ್ಕು ಲಿಮಿಟೆಡ್, ಬಿಲಾಯಿ, ದುರ್ಗ್‌ಜಿಲ್ಲೆ, ಛತ್ತೀಸ್‌ಗರ್.
- ಹಿಂದುಸ್ತಾನ್ ಉಕ್ಕು ಲಿಮಿಟೆಡ್, ರೂರ್ಕೆಲ, ಸುಂದರ್‌ಗಡ ಜಿಲ್ಲೆ, ಒಡಿಶಾ.
- ಹಿಂದುಸ್ತಾನ್ ಉಕ್ಕು ಲಿಮಿಟೆಡ್, ದುರ್ಗಾಪುರ, ಪಶ್ಚಿಮ ಬಂಗಾಳ.
- ಬೊಕಾರೊ ಉಕ್ಕು ಸ್ಥಾವರ, ಬೊಕಾರೊ, ಜಾರ್ಖಂಡ್.
- ಸೇಲಂ ಉಕ್ಕು ಸ್ಥಾವರ, ಸೇಲಂ ತಮಿಳುನಾಡು.
- ವಿಶಾಖಪಟ್ಟಣಂ ಉಕ್ಕು ಸ್ಥಾವರ, ವಿಶಾಖಪಟ್ಟಣ, ಆಂದ್ರಪ್ರದೇಶ.
- ದಾಯಿತಿರಿ ಉಕ್ಕು ಸ್ಥಾವರ, ಪಾರಾದೀಪದ ಸಮೀಪ, ಒಡಿಶಾ.
- ಟಾಟಾ ಉಕ್ಕು ಸ್ಥಾವರ, ಕಳಿಂಗ ನಗರ, ಒಡಿಶಾ.

**7. ಅಲ್ಯೂಮಿನಿಯಂ ಲೋಹವನ್ನು ಬಹುಪಯೋಗಿ ಲೋಹವೆಂದು ಕರೆಯಲು ಕಾರಣವೇನು?**

ಉತ್ತರ : ಅಲ್ಯೂಮಿನಿಯಂ ಲೋಹವನ್ನು ಬಹುಪಯೋಗಿ ಲೋಹವೆಂದು ಕರೆಯಲು ಕಾರಣವೆಂದರೆ – ಇದನ್ನು ವಿಮಾನ, ಸ್ವಯಂಚಾಲಿತವಾಹನ, ರೈಲುಸಾರಿಗೆ, ಹಡಗು, ಬಣ್ಣ ತಯಾರಿಕೆ, ಗೃಹಬಳಕೆ ವಸ್ತುಗಳ ತಯಾರಿಕೆ, ವಿವಿಧ ಕೈಗಾರಿಕೆಗಳಲ್ಲಿ, ವಿದ್ಯುತ್ ಕೇಬಲ್ ತಯಾರಿಕೆ ಹಾಗೂ ಇದರ ರೇಕುಗಳನ್ನು ಪ್ಯಾಕಿಂಗ್ ಮಾಡಲು ಮೊದಲಾದ ಉದ್ದೇಶಗಳಿಗೆ ಉಪಯೋಗಿಸಲಾಗುತ್ತದೆ.

**8. ಭಾರತದಲ್ಲಿ ಅಲ್ಯೂಮಿನಿಯಂ ಕೈಗಾರಿಕೆಗಳ ಹಂಚಿಕೆಯನ್ನು ತಿಳಿಸಿ.**

ಉತ್ತರ : ಇಂದು ಭಾರತದಲ್ಲಿ 9 ಅಲ್ಯೂಮಿನಿಯಂ ತಯಾರಿಕಾ ಕೇಂದ್ರಗಳಿವೆ. ಅವುಗಳೆಂದರೆ – ಪಶ್ಚಿಮ ಬಂಗಾಳದ ಜಯಕಾಯ್‌ನಗರ, ಕೇರಳದ ಅಲುಪುರಂ, ತಮಿಳುನಾಡಿನ ಮೆಟ್ಟೂರು, ಕರ್ನಾಟಕದ ಬೆಳಗಾವಿ, ಒಡಿಶಾದ ಹಿರಾಕುಡ್ ಮತ್ತು ದಾಮನ್‌ಜೋಡಿ, ಉತ್ತರಪ್ರದೇಶದ ರೇಣೂಕೂಟ, ಛತ್ತೀಸ್‌ಗರ್‌ನ ಕೊರಬ ಮತ್ತು ಮಹಾರಾಷ್ಟ್ರದ ರತ್ನಗಿರಿ.

**9. ಭಾರತದ ಹತ್ತಿಬಟ್ಟೆ ಕೈಗಾರಿಕೆಗಳ ಹಂಚಿಕೆಯನ್ನು ತಿಳಿಸಿ.**

ಉತ್ತರ : ಭಾರತದಲ್ಲಿ ಹೆಚ್ಚಾಗಿ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಹತ್ತಿಬಟ್ಟೆ ಕೈಗಾರಿಕೆಗಳು ಹಂಚಿಕೆಯಾಗಿವೆ. ಅವುಗಳೆಂದರೆ – ಮಹಾರಾಷ್ಟ್ರ, ಗುಜರಾತ, ತಮಿಳುನಾಡು, ಕರ್ನಾಟಕ, ಮಧ್ಯಪ್ರದೇಶ, ರಾಜಸ್ತಾನ, ಉತ್ತರಪ್ರದೇಶ, ಪಂಜಾಬ್ ಮತ್ತು ಹರಿಯಾಣ ಪ್ರಮುಖವಾದವು.

**10. ಕಾಗದ ಕೈಗಾರಿಕೆಗೆ ಬೇಕಾದ ಸ್ಥಾನೀಕರಣದ ಅಂಶಗಳು ಯಾವುವು?**

**ಉತ್ತರ : ಕಾಗದ ಕೈಗಾರಿಕೆಗೆ ಬೇಕಾದ ಸ್ಥಾನೀಕರಣದ ಅಂಶಗಳೆಂದರೆ –**

- ಕಚ್ಚಾ ಪದಾರ್ಥಗಳಾದ ಬಿದಿರು ಮತ್ತು ಮರದ ತಿರುಳುಗಳಂತಹ ಮೃದು ಮರಗಳ ವಸ್ತುಗಳು, ಸಬಾಯಿ ಮತ್ತು ಬಾಭರ್‌ನಂತಹ ಹುಲ್ಲು ಇತ್ಯಾದಿ
- ಅರಣ್ಯಗಳ ಕಚ್ಚಾವಸ್ತುಗಳ ಕೊರತೆಯಿಂದ ಭತ್ತ, ಗೋದಿ, ಬಾರ್ಲಿ ಹುಲ್ಲು, ಕಬ್ಬಿನ ಸಿಪ್ಪೆ, ಚಿಂದಿ ಕಾಗದ, ಚಿಂದಿಬಟ್ಟೆ ಇತ್ಯಾದಿಗಳನ್ನು ಉಪಯೋಗಿಸುತ್ತಾರೆ.
- ಅಪಾರ ನೀರು, ವಿಶಾಲ ಮಾರುಕಟ್ಟೆ, ಕಾರ್ಮಿಕರ ಲಭ್ಯತೆ, ಸಾರಿಗೆ ಸೌಲಭ್ಯ, ವಿದ್ಯುತ್ ಮತ್ತು ರಾಸಾಯನಿಕಗಳ ಪೂರೈಕೆಗಳು ಕಾಗದ ಕೈಗಾರಿಕೆಗೆ ಬೇಕಾದ ಸ್ಥಾನೀಕರಣ ಅಂಶಗಳಾಗಿವೆ.

**11. ಭಾರತದಲ್ಲಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯನ್ನು ತಿಳಿಸಿ.**

**ಉತ್ತರ : ಭಾರತದಲ್ಲಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ –**

- ಮಾಹಿತಿ ತಂತ್ರಜ್ಞಾನವು ಜ್ಞಾನಾಧಾರಿತ ಕೈಗಾರಿಕೆಗೆ ಮಹತ್ವವುಳ್ಳದ್ದು. ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳು ಇದರ ಪ್ರಮುಖ ಅಂಗಭಾಗಗಳು.
- ಸಾಫ್ಟವೇರ್ ಉದ್ಯಮದ ಬೆಳವಣಿಗೆಗೆ ರಾಜ್ಯ ಮತ್ತು ಕೇಂದ್ರ ಸರಕಾರ ಎರಡರಿಂದಲೂ ಪ್ರೋತ್ಸಾಹವಿದೆ.
- ಈ ಉದ್ಯಮದ ಉತ್ತೇಜನಕ್ಕಾಗಿ ದೇಶದ ವಿವಿದೆಡೆ ಹಲವು ಸಾಫ್ಟವೇರ್ ತಂತ್ರಜ್ಞಾನ ಪಾರ್ಕಗಳನ್ನು 1995ರಲ್ಲಿ ಸ್ಥಾಪಿಸಲಾಗಿದೆ.
- ಸಾಫ್ಟ್‌ವೇರ್ ತಂತ್ರಜ್ಞಾನವು ಹೆಚ್ಚು ದಕ್ಷಿಣ ಭಾರತದ ರಾಜ್ಯಗಳಲ್ಲಿ ಅಭಿವೃದ್ಧಿ ಹೊಂದಿದೆ. ಉದಾ: ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ
- ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಬೆಂಗಳೂರು, ಮುಂಬಯಿ, ಪುಣೆ, ಚೆನ್ನೈ, ಹೈದರಾಬಾದ್, ಕೊಲ್ಕತ, ದೆಹಲಿ ಮತ್ತು ನೊಯಿಡಾಗಳಲ್ಲಿ ಕೇಂದ್ರಿಕೃತಗೊಂಡಿವೆ.

**12. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ಕುರಿತು ಬರೆಯಿರಿ.**

**ಉತ್ತರ : ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ**

- ಇದು ಜ್ಞಾನ ಆಧಾರಿತ, ಉತ್ಪಾದನೆ ಹಾಗೂ ಸೇವೆಗಳನ್ನೊಳಗೊಂಡ ಉದ್ಯಮವಾಗಿದೆ.
- ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆಯನ್ನು ತ್ವರಿತಗೊಳಿಸುವುದಕ್ಕೆ ನೆರವಾಗುವ ಅಧಿಕೋತ್ಪಾದಕ ಕ್ರಿಯೆಗಳನ್ನುಳ್ಳ ಉದ್ಯಮವಾಗಿದೆ.
- ಜ್ಞಾನಾಧಾರಿತ ಕೈಗಾರಿಕೆಗಳ ಬೆಳವಣಿಗೆಯು ಸಾಮಾಜಿಕ – ಆರ್ಥಿಕ ಪ್ರಭಾವವುಳ್ಳ ಸಾಧನವಾಗಿದೆ.
- ಭಾರತದಿಂದ ರಫ್ತಾಗುವ ಸರಕುಗಳಲ್ಲಿ ಸಾಫ್ಟ್‌ವೇರ್ ವಸ್ತುಗಳು ಪ್ರಮುಖವಾದುದು.
- ಸಾಫ್ಟ್‌ವೇರ್ ಉದ್ಯಮದಿಂದ ಸಾಕಷ್ಟು ವಿದೇಶಿ ವಿನಿಮಯವು ಗಳಿಕೆಯಾಗುತ್ತದೆ.

**13. ಮುಂಬಯಿ ನಗರವು ಇಂದಿಗೂ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿದೆ ಏಕೆ?**

ಉತ್ತರ : ಹತ್ತಿ ಬಟ್ಟೆ ಕೈಗಾರಿಕೆಯನ್ನು ಸ್ಥಾಪಿಸಲು ಬೇಕಾದ ಕಚ್ಚಾಹತ್ತಿಯ ಸರಬರಾಜು, ವಿಶಾಲ ಮಾರುಕಟ್ಟೆ, ವಿದ್ಯುತ್ ಪೂರೈಕೆ, ಬಂಡವಾಳ, ನುರಿತ ಕಾರ್ಮಿಕರ ಪೂರೈಕೆ ಮತ್ತು ತೇವಾಂಶಭರಿತ ವಾಯುಗುಣ ಮುಂತಾದ ಸೌಲಭ್ಯಗಳು ಇರುವುದರಿಂದ ಮುಂಬಯಿ ನಗರವು ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿದೆ. ಆದ್ದರಿಂದ ಇದನ್ನು 'ಭಾರತದ ಕಾಟನೋಪೊಲೀಸ್' ಮತ್ತು 'ಭಾರತದ ಮಾಂಚೆಸ್ಟರ್' ಎಂದು ಕರೆಯಲಾಗಿದೆ.

## ಅಧ್ಯಾಯ – 11 ಭಾರತದ ನೈಸರ್ಗಿಕ ವಿಪತ್ತುಗಳು

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. ________ ಅರಣ್ಯಗಳನ್ನು ಬೆಳೆಸುವುದರಿಂದ ಕಡಲಕೊರೆತವನ್ನು ತಡೆಗಟ್ಟಬಹುದು. – **ಮ್ಯಾಂಗ್ರೋವ್ ಅರಣ್ಯಗಳು**

2. ಸಾಮಾನ್ಯವಾಗಿ ಅತಿ ಹೆಚ್ಚು ಆವರ್ತಮಾರುತಗಳು ಈ ತಿಂಗಳುಗಳಲ್ಲಿ ಸಂಭವಿಸುತ್ತವೆ. – **ಅಕ್ಟೋಬರ್ – ನವಂಬರ್ ತಿಂಗಳುಗಳಲ್ಲಿ**

3. ಭಾರತದಲ್ಲಿ ಆವರ್ತಮಾರುತಗಳು ಬಹುವಾಗಿ ____ ಯಲ್ಲಿ ಸಂಭವಿಸುತ್ತವೆ. – **ಬಂಗಾಳಕೊಲ್ಲಿ.**

4. ಅತ್ಯಂತ ವಿನಾಶಕಾರಿ ವಾಯುಗೋಳೀಯ ವಿಪತ್ತು – **ಆವರ್ತ ಮಾರುತಗಳು.**

5. ಭಾರತದ ಪೂರ್ವ ಕರಾವಳಿಯು ಹೆಚ್ಚು ______ ಪೀಡಿತ ಪ್ರದೇಶವಾಗಿದೆ. – **ಆವರ್ತ ಮಾರುತ**

6. ಭಾರತದ ಪರ್ಯಾಯ ಪ್ರಸ್ಥಭೂಮಿಯಲ್ಲಿ __ ಗಳು ಸಂಭವಿಸುವುದು ಅಪರೂಪ. – **ಭೂಕಂಪಗಳು.**

7. ಭಾರತದಲ್ಲಿ ಆಗಾಗ್ಗೆ ________ ಗಳು ಬೆಟ್ಟ–ಗುಡ್ಡಗಳುಳ್ಳ ರಾಜ್ಯಗಳಲ್ಲಿ ಸಂಭವಿಸುವವು. – **ಭೂಕುಸಿತಗಳು.**

8. ಕಡಲ ಕೊರೆತಗಳು ಬಹುವಾಗಿ ________ ಗಳ ಕ್ರಿಯೆಗಳಿಂದ ಸಂಭವಿಸುವವು. – **ಸಮುದ್ರ ಅಲೆ ಮತ್ತು ಸಮುದ್ರ ಪ್ರವಾಹಗಳು.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ನೈಸರ್ಗಿಕ ವಿಪತ್ತುಗಳು ಎಂದರೇನು?**

ಉತ್ತರ : ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ, ಆಸ್ತಿ–ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳನ್ನು ನೈಸರ್ಗಿಕ ವಿಪತ್ತುಗಳೆಂದು ಕರೆಯುವರು.

**2. ವಿಪತ್ತುಗಳಲ್ಲಿ ಎಷ್ಟು ವಿಧ? ಅವು ಯಾವುವು?**

ಉತ್ತರ : ವಿಪತ್ತುಗಳಲ್ಲಿ ಎರಡು ವಿಧ. ಅವುಗಳೆಂದರೆ – 1. ನೈಸರ್ಗಿಕ ವಿಪತ್ತು, 2. ಮಾನವ ನಿರ್ಮಿತ ವಿಪತ್ತು.

**3. ಭೂಆಂತರಿಕ ಕ್ರಿಯೆಗಳಿಂದ ಸಂಭವಿಸುವ ನೈಸರ್ಗಿಕ ವಿಪತ್ತುಗಳು ಯಾವುವು?**

ಉತ್ತರ : ಭೂಕಂಪ, ಜ್ವಾಲಾಮುಖಿ, ಸುನಾಮಿ, ಭೂಕುಸಿತ ಮತ್ತು ಹಿಮಪಾತಗಳು ಭೂಆಂತರಿಕ ಕ್ರಿಯೆಗಳಿಂದ ಸಂಭವಿಸುವ ನೈಸರ್ಗಿಕ ವಿಪತ್ತುಗಳಾಗಿವೆ.

**4. ವಾಯುಗೋಳಕ್ಕೆ ಸಂಬಂಧಿಸಿದ ನೈಸರ್ಗಿಕ ವಿಪತ್ತುಗಳು ಯಾವುವು?**

ಉತ್ತರ : ಆವರ್ತಮಾರುತ (ಸೈಕ್ಲೋನ್), ಬರಗಾಲ, ಪ್ರವಾಹ ಮತ್ತು ಸಾಂಕ್ರಾಮಿಕ ಪಿಡುಗುಗಳು ವಾಯುಗೋಳಕ್ಕೆ ಸಂಬಂಧಿಸಿದ ನೈಸರ್ಗಿಕ ವಿಪತ್ತುಗಳಾಗಿವೆ.

**5. ಆವರ್ತ ಮಾರುತಗಳು ಎಂದರೇನು?**

ಉತ್ತರ : ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದೇ ಆವರ್ತಮಾರುತವಾಗಿದೆ.

**6. ಪ್ರವಾಹ ಎಂದರೇನು?**

ಉತ್ತರ : ಅತ್ಯಧಿಕ ಮಳೆಯಾದಾಗ ನದಿಗಳು ತಮ್ಮ ದಂಡೆಗಳಾಚೆಗೂ ಉಕ್ಕಿ ಹರಿದಾಗ ಪಕ್ಕದ ಭಾಗಗಳು ಜಲಾವೃತ್ತಗೊಳ್ಳುತ್ತವೆ. ಇದನ್ನು ಪ್ರವಾಹ ಎನ್ನುವರು.

**7. ಭೂಕುಸಿತ ಎಂದರೇನು?**

ಉತ್ತರ : ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವ ಭೂರಾಶಿಗಳಿಗೆ **"ಭೂಕುಸಿತ"** ಎನ್ನುವರು.

**8. ಸಮುದ್ರದ ಕೊರೆತ ಎಂದರೇನು?**

ಉತ್ತರ : ಸಮುದ್ರದ ಅಲೆಗಳ ಅವಿರತ ಸಂಘರ್ಷಣಾ ಪ್ರಕ್ರಿಯೆಯಿಂದ ತೀರವು ಸವೆಯುವ ಮತ್ತು ವಸ್ತುಗಳ ಒಯ್ಯುವಿಕೆಗೆ ಸಮುದ್ರದ ಕೊರೆತ ಎನ್ನುವರು.

**9. ಭೂಕಂಪ ಎಂದರೇನು?**

ಉತ್ತರ : ಭೂಚಿಪ್ಪಿನಲ್ಲಾಗುವ ರಭಸವಾದ ಕಂಪನವನ್ನು ಭೂಕಂಪವೆನ್ನುವರು.

### ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಉಷ್ಣವಲಯದ ಆವರ್ತಮಾರುತಗಳ ಉಗಮ ಮತ್ತು ಬೆಳವಣಿಗೆಗೆ ಕಾರಣವಾದ ಪರಿಸ್ಥಿತಿಗಳು ಯಾವುವು? ಅಥವಾ ಆವರ್ತ ಮಾರುತಗಳು ಹೇಗೆ ಸಂಭವಿಸುತ್ತವೆ ವಿವರಿಸಿ.**

ಉತ್ತರ : ಉಷ್ಣವಲಯದ ಆವರ್ತಮಾರುತಗಳ ಉಗಮ ಮತ್ತು ಬೆಳವಣಿಗೆಗೆ ಕಾರಣವಾದ ಪರಿಸ್ಥಿತಿಗಳೆಂದರೆ – 1. ಅಧಿಕ ಉಷ್ಣಾಂಶ, 2. ಪ್ರಶಾಂತ ವಾಯು, ಮತ್ತು 3. ಹೆಚ್ಚು ತೇವಾಂಶ ಭರಿತ ವಾಯು. ಈ ಪರಿಸ್ಥಿತಿಗಳು ಕಡಿಮೆ ಒತ್ತಡ ಕೋಶಗಳನ್ನು ನಿರ್ಮಿಸುತ್ತವೆ. ಕಡಿಮೆ ಒತ್ತಡ ಕೋಶದ ಸುತ್ತಲೂ ಸಾಪೇಕ್ಷವಾದ ಅಧಿಕ ಒತ್ತಡವಿರುತ್ತದೆ. ಹೀಗಾಗಿ ಸುತ್ತಲಿನ ಅಧಿಕ ಒತ್ತಡ ಪ್ರದೇಶದಿಂದ ಕಡಿಮೆ ಒತ್ತಡದ ಕೇಂದ್ರದ ಕಡೆಗೆ ಚಕ್ರಾಕಾರದಲ್ಲಿ ಮಾರುತಗಳು ಬೀಸುವುದರಿಂದ ಆವರ್ತಮಾರುತ ಅಥವಾ ಸೈಕ್ಲೋನಗಳು ಸಂಭವಿಸುತ್ತವೆ.

**2. ಉಷ್ಣವಲಯದ ಆವರ್ತಮಾರುತಗಳಿಂದಾಗುವ ಪರಿಣಾಮಗಳೇನು?**

**ಉತ್ತರ : ಉಷ್ಣವಲಯದ ಆವರ್ತಮಾರುತಗಳಿಂದಾಗುವ ಪರಿಣಾಮಗಳು**

- ಇವುಗಳಿಂದ ಅಪಾರ ಸಾವು ನೋವು ಉಂಟಾಗುತ್ತದೆ.
- ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.
- ಕಟ್ಟಡಗಳಿಗೆ ದಕ್ಕೆ, ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುವದು.

➢ಒಳನಾಡಿಗೆ ಸಾಕಷ್ಟು ಮಳೆಯನ್ನು ತರುತ್ತವೆ.

➢ಸಾಗರದ ಅಲೆಗಳು ಒಳನಾಡಿಗೂ ಚಾಚಿ ಜಲರಾಶಿಗಳು ಲವಣಯುಕ್ತವಾಗುತ್ತವೆ.

➢ಆವರ್ತಮಾರುತಗಳು ನಿಂತ ನಂತರ ಸಾಂಕ್ರಾಮಿಕ ರೋಗಗಳು ಅಪಾರ ಹಾನಿಯನ್ನುಂಟು ಮಾಡುತ್ತವೆ.

**3. ಭಾರತದಲ್ಲಿ ಚಂಡಮಾರುತಗಳು ಯಾವಾಗ ಸಂಭವಿಸುತ್ತವೆ?**

ಉತ್ತರ : ಭಾರತದಲ್ಲಿ ಉಷ್ಣವಲಯದ ಆವರ್ತಮಾರುತಗಳು ಹೆಚ್ಚಾಗಿ ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಸಂಭವಿಸುವವು. ಅದರಲ್ಲೂ ಅಕ್ಟೋಬರ್ ಮತ್ತು ನವಂಬರ್ ತಿಂಗಳಲ್ಲಿ ಅವುಗಳ ತೀವ್ರತೆ ಹೆಚ್ಚು. ಅಪರೂಪಕ್ಕೊಮ್ಮೆ ಮೇ ಮತ್ತು ತಿಂಗಳಲ್ಲಿ ಸಂಭವಿಸುವವು.

**4. ಭಾರತದಲ್ಲಿ ಆವರ್ತಮಾರುತಗಳ ಹಂಚಿಕೆಯನ್ನು ತಿಳಿಸಿ.**

ಉತ್ತರ : ಭಾರತದಲ್ಲಿ ಆವರ್ತಮಾರುತಗಳ ಹಂಚಿಕೆ – ಭಾರತದಲ್ಲಿ ಉಷ್ಣವಲಯದ ಆವರ್ತಮಾರುತಗಳು ಬಹುವಾಗಿ ಬಂಗಾಳಕೊಲ್ಲಿಯಲ್ಲಿ ಸಂಭವಿಸುತ್ತವೆ. ಹೀಗಾಗಿ ದೇಶದ ಪೂರ್ವ ಕರಾವಳಿಯು ಆವರ್ತಮಾರುತ ಪೀಡಿತ ಪ್ರದೇಶವಾಗಿ ಪರಿಣಮಿಸಿದೆ. ಇದರಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮಬಂಗಾಳ ರಾಜ್ಯಗಳ ತೀರಗಳು ಸೇರಿವೆ. ಅಪರೂಪವಾಗಿ ಕೆಲವೇ ಆವರ್ತಮಾರುತಗಳು ಅರಬ್ಬಿಸಮುದ್ರದಲ್ಲಿ ಸಂಭವಿಸುವವು.

**5. ಆವರ್ತಮಾರುತಗಳಿಂದಾಗುವ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳಾವುವು?**

**ಉತ್ತರ : ಆವರ್ತಮಾರುತಗಳ ಬಗ್ಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು.**

➢ಅಪಾಯಕಾರಿ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವುದು.

➢ವಿದ್ಯುಜ್ಜನಕ ಯಂತ್ರಗಳು, ದೋಣಿಗಳು, ಹೆಲಿಕಾಪ್ಟರ್ ಮೊದಲಾದ ಸಾರಿಗೆಗಳನ್ನು ಸಜ್ಜಾಗಿರಿಸುವುದು.

➢ರೈಲು–ಬಸ್ಸು ಮೊದಲಾದ ಮಾರ್ಗಗಳನ್ನು ಆವರ್ತಮಾರುತ ಪ್ರಭಾವದ ವಲಯದಿಂದ ಬದಲಾಯಿಸುವುದು.

➢ಸಮೂಹ ಮಾಧ್ಯಮಗಳ ಮೂಲಕ ಆವರ್ತಮಾರುತಗಳ ಬಗ್ಗೆ ವಿವರಗಳನ್ನು ನಿರಂತರವಾಗಿ ಜನರಿಗೆ ನೀಡುವುದು.

➢ಅಗತ್ಯವಿರುವ ಸೇನಾ ತುಕಡಿಗಳನ್ನು ಸಿದ್ಧಗೊಳಿಸಿಡುವುದು.

➢ಸಾಕಷ್ಟು ಸಿಹಿನೀರು ಹಾಗೂ ಉಡುಪುಗಳನ್ನು ಸಂಗ್ರಹಿಸಿಡುವುದು.

➢ಔಷಧ ಹಾಗೂ ಇತರ ವೈದ್ಯಕೀಯ ನೆರವಿಗಾಗಿ ಸಿದ್ಧರಾಗಿರುವುದು.

➢ಆವರ್ತಮಾರುತಗಳ ಹೊಡೆತ ಮತ್ತು ಕಡಲಕೊರೆತಗಳನ್ನು ನಿಯಂತ್ರಿಸಲು ಮ್ಯಾಂಗ್ರೋವ್ ಕಾಡು ಮತ್ತು ಆಳಕ್ಕೆ ಬೇರು ಬಿಡುವ ಇತರೆ ಮರಗಳನ್ನು ಸಮುದ್ರ ತೀರದಲ್ಲಿ ಬೆಳೆಸಬೇಕು.

**6. ಪ್ರವಾಹಗಳುಂಟಾಗಲು ಕಾರಣಗಳೇನು?**

**ಉತ್ತರ : ಪ್ರವಾಹಗಳುಂಟಾಗಲು ಕಾರಣಗಳು.–**

➢ನೈಸರ್ಗಿಕ ಕಾರಣಗಳಲ್ಲಿ ಅತ್ಯಧಿಕ ಮಳೆ, ಹಿಮಕರಗುವಿಕೆ, ಆವರ್ತಮಾರುತ, ಮೇಘಸ್ಫೋಟ, ನದಿ ಸರಾಗವಾಗಿ ಹರಿಯಲಾರದಷ್ಟು ಅಡಚಣೆ, ನದಿ ಪತ್ರದಲ್ಲಿ ಹೂಳುತುಂಬುವಿಕೆ ಇತ್ಯಾದಿಗಳು ಸೇರುತ್ತವೆ.

➢ಮಾನವ ಕೃತ್ಯಗಳಲ್ಲಿ ಅರಣ್ಯನಾಶ, ಅವೈಜ್ಞಾನಿಕ ನೀರಾವರಿ ವ್ಯವಸ್ಥೆ ಮತ್ತು ಕೃಷಿ ಪದ್ಧತಿ, ಒಡ್ಡು ಮತ್ತು ಆಣೆಕಟ್ಟುಗಳು ಒಡೆದು ಹೋಗುವುದರಿಂದ ಮತ್ತು ಶೀಘ್ರಗತಿಯ ನಗರೀಕರಣ ಮುಖ್ಯವಾದವು.

**7. ಪ್ರವಾಹಗಳಿಂದಾಗುವ ಪರಿಣಾಮಗಳೇನು?**

ಉತ್ತರ : ಪ್ರವಾಹಗಳಿಂದಾಗುವ ಪರಿಣಾಮಗಳೆಂದರೆ – ಜೀವಹಾನಿ, ಆಸ್ತಿಗೆ ಧಕ್ಕೆ, ಬೆಳೆ ಮತ್ತು ಸಸ್ಯವರ್ಗಗಳಿಗೆ ಹಾನಿ, ಸಾರಿಗೆ ಸಂಪರ್ಕಗಳ ಅವ್ಯವಸ್ಥೆ, ಮಣ್ಣಿನ ಸವೆತ, ಮೂಲಸೌಲಭ್ಯಗಳ ವ್ಯತ್ಯಯ ಇತ್ಯಾದಿ.

**8. ಭಾರತದ ಪ್ರವಾಹಪೀಡಿತ ಪ್ರದೇಶಗಳನ್ನು ಪಟ್ಟಿ ಮಾಡಿ.**

**ಉತ್ತರ : ಭಾರತದ ಪ್ರವಾಹಪೀಡಿತ ಪ್ರದೇಶಗಳು**

➢ಗಂಗಾ ಮತ್ತು ಬ್ರಹ್ಮಪುತ್ರ ನದಿಬಯಲುಗಳು

➢ಸಟ್ಲೇಜ್, ಬಿಯಾಸ್, ರಾವಿ ಮತ್ತು ಚಿನಾಬ್ ನದಿಬಯಲುಗಳು.

➢ಪರ್ಯಾಯ ಪ್ರಸ್ಥಭೂಮಿ, ನದಿಮುಖಜ ಭೂಮಿಗಳು ಉದಾ : ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿಮುಖಜ ಭೂಮಿಗಳು.

➢ನರ್ಮದಾ ಮತ್ತು ತಪತಿ ನದಿಗಳ ತಗ್ಗು ಭಾಗಗಳು ಉದಾ : ಗುಜರಾತ್.

**9. ಪ್ರವಾಹ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

**ಉತ್ತರ : ಪ್ರವಾಹ ನಿಯಂತ್ರಣ ಕ್ರಮಗಳು**

➢ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು ಮತ್ತು ವೇಗವಾಗಿ ನೀರಿನ ಹರಿವು ನಿಯಂತ್ರಣ ಮಾಡುವುದು.

➢ಆಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ನದಿ ನೀರಿನ ಪ್ರಮಾಣವನ್ನು ಕಡಿಮೆ ಮಾಡುವುದು.

➢ಜನವಸತಿ ಪ್ರದೇಶ ಮತ್ತು ಕೃಷಿ ಭೂಮಿಗಳನ್ನು ಪ್ರವಾಹದಿಂದ ರಕ್ಷಿಸಲು ಒಡ್ಡುಗಳ ನಿರ್ಮಾಣ.

➢ಪ್ರವಾಹಗಳ ಸಕಾಲಿಕ ಮುನ್ನೆಚ್ಚರಿಕೆ ನೀಡುವುದು.

➢ಜನ, ಜಾನುವಾರುಗಳ ಸಾವು–ನೋವು ಮತ್ತು ಆಸ್ತಿಗಳಿಗಾಗುವ ನಷ್ಟವನ್ನು ತಡೆಯಲು ಅಗತ್ಯವಾದ ಸಕಾಲಿಕ ಕ್ರಮ ಕೈಗೊಳ್ಳುವುದು.

➢ನದಿಗಳ ಇಕ್ಕೆಲಗಳಲ್ಲಿ ಒಡ್ಡುಗಳನ್ನು ನಿರ್ಮಿಸುವುದು.

**10. ಭೂಕುಸಿತಕ್ಕೆ ಕಾರಣಗಳೇನು? ಅಥವಾ ಪ್ರಪಂಚದಲ್ಲಿ ಇಂದು ಸಂಭವಿಸುವ ಭೂಕುಸಿತಗಳಿಗೆ ನೈಸರ್ಗಿಕ ಮತ್ತು ಮಾನವ ಕೃತ್ಯಗಳು ಕಾರಣವಾಗಿವೆ ಹೇಗೆ?**

**ಉತ್ತರ : ಭೂಕುಸಿತಕ್ಕೆ ನೈಸರ್ಗಿಕ ಮತ್ತು ಮಾನವ ಶಕ್ತಿಗಳೆರಡೂ ಕಾರಣವಾಗುತವೆ. ಅವುಗಳೆಂದರೆ –**

➢ಸಮುದ್ರದ ಅಲೆಗಳಿಂದ ಕಡಲತೀರ ಕೊರೆತಕ್ಕಿಡಾಗುವದರಿಂದ.

➢ಕಡಿದಾದ ಪರ್ವತಪ್ರದೇಶಗಳಲ್ಲಿ ರಸ್ತೆ, ರೈಲುಮಾರ್ಗ, ಕಾಲುವೆ ನಿರ್ಮಿಸುವದರಿಂದ.

➢ಅತ್ಯಧಿಕ ಮಳೆ ಮತ್ತು ಭೂಕಂಪನಗಳಿಂದ

➢3.ಆಳವಾದ ತೀವ್ರಗತಿಯ ಗಣಿಗಾರಿಕೆ ಮತ್ತು ಕಲ್ಲುಗಣಿಗಾರಿಕೆ ಮಾಡುವುದರಿಂದ.

➢ಆಣೆಕಟ್ಟು, ಜಲಾಶಯ, ಜಲವಿದ್ಯುತ್ ಯೋಜನೆಗಳ ನಿರ್ಮಾಣ

➢ಅರಣ್ಯಗಳನ್ನು ಅತಿಯಾಗಿ ಕಡಿಯುವದರಿಂದ.

**11. ಭೂಕುಸಿತದಿಂದಾಗುವ ಪರಿಣಾಮಗಳೇನು?**

**ಉತ್ತರ : ಭೂಕುಸಿತದಿಂದಾಗುವ ಪರಿಣಾಮಗಳು**

➢ರೈಲುಮಾರ್ಗ, ರಸ್ತೆಗಳಿಗೆ ಅಡಚಣೆ.

➢ಜನವಸತಿ ಮತ್ತು ಸಸ್ಯವರ್ಗಗಳು ಭೂಗತವಾಗುವುದು.

➢ಸಾವು–ನೋವು ಮತ್ತು ಆಸ್ತಿಗಳಿಗೆ ಹಾನಿ.

**12. ಭೂಕುಸಿತ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

**ಉತ್ತರ : ಭೂಕುಸಿತ ನಿಯಂತ್ರಣ ಕ್ರಮಗಳು**

➢ಇಳಿಜಾರನ್ನು ತಗ್ಗಿಸುವುದು.

➢ಹೆದ್ದಾರಿಗಳ ಬದಿ ಮತ್ತಿತರ ಇಳಿಜಾರುಗಳಲ್ಲಿ ಬಂಡೆಗಳು ಬೀಳದಂತೆ ತಡೆಯುವುದು.

➢ಇಳಿಜಾರುಳ್ಳ ಭಾಗ ಮತ್ತು ಜನವಸತಿ ಭಾಗಗಳಲ್ಲಿ ಗಣಿಗಾರಿಕೆ ಮತ್ತು ಕಲ್ಲುಗಣಿ ಚಟುವಟಿಕೆಗಳ ನಿಯಂತ್ರಣ.

➢ಅರಣ್ಯೀಕರಣದಂತಹ ಕ್ರಮಗಳು.

**13. ಸಮುದ್ರದ ಕೊರೆತಕ್ಕೆ ಕಾರಣಗಳೇನು?**

**ಉತ್ತರ : ಸಮುದ್ರದ ಕೊರೆತಕ್ಕೆ ಕಾರಣಗಳು**

➢ಸಮುದ್ರದ ತೀರದ ಸವೆತಕ್ಕೆ ಸಮುದ್ರ ಅಲೆ ಮತ್ತು ಸಮುದ್ರ ಪ್ರವಾಹಗಳು ಮುಖ್ಯ ಕಾರಣ.

➢ನೈರುತ್ಯ ಮಾನ್ಸೂನ್ ಮಾರುತಗಳು ಪಶ್ಚಿಮ ಕರಾವಳಿಗೆ ಅಪ್ಪಳಿಸುವುದರಿಂದ ತೀವ್ರಗತಿಯಲ್ಲಿ ಸವೆತಕ್ಕೆ ಕಾರಣವಾಗುತ್ತದೆ.

➢ಈಶಾನ್ಯ ಮಾನ್ಸೂನ್ ಕಾಲದಲ್ಲಿ ಉಂಟಾಗುವ ಆವರ್ತ ಮಾರುತಗಳು ಹೆಚ್ಚು ವಿನಾಶಕಾರಿಯಾಗಿದ್ದು ಪೂರ್ವ ಕರಾವಳಿಯ ತೀವ್ರ ಸವೆತಕ್ಕೆ ಕಾರಣವಾಗುತ್ತವೆ.

➢ಸಮುದ್ರ ತಳದಲ್ಲಿ ಸಂಭವಿಸುವ ಭೂಕಂಪನಗಳಿಂದಾಗಿ ಉಂಟಾಗುವ ದೈತ್ಯಾಕಾರದ ಅಲೆ (ಸುನಾಮಿ) ಗಳಿಂದ ಭಾರತದ ತೀರಗಳ ಸವೆತಕ್ಕೆ ಕಾರಣವಾಗುವವು.

➢ಮಾನವನ ಕೆಲವು ಕೃತ್ಯಗಳು ಸಹ ಸಮುದ್ರ ತೀರಗಳ ಕೊರೆತಕ್ಕೆ ಕಾರಣವಾಗುತ್ತವೆ. ಉದಾ : ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ.

**14. ಸಮುದ್ರ ಕೊರೆತದಿಂದಾಗುವ ಪರಿಣಾಮಗಳಾವುವು?**

**ಉತ್ತರ : ಸಮುದ್ರ ಕೊರೆತದಿಂದಾಗುವ ಪರಿಣಾಮಗಳು.**

➢ಕರಾವಳಿ ಪ್ರದೇಶಗಳ ಕಟ್ಟಡ ಮತ್ತು ಮರಗಳು ಕೊಚ್ಚಿಹೋಗುವುದು.

➢ಕರಾವಳಿಯ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ.

➢ಹೆಚ್ಚು ಕಾಲ ಕರಾವಳಿಯಲ್ಲಿ ನೀರು ತುಂಬಿಕೊಳ್ಳುವುದರಿಂದ ಅಲ್ಲಿ ಜನರಿಗೆ ಪುನರ್ವಸತಿ ಕಲ್ಪಿಸುವ ಸಮಸ್ಯೆ.

**15. ಸಮುದ್ರದ ಕೊರೆತವನ್ನು ತಪ್ಪಿಸಲು ಕೈಗೊಳ್ಳಬೇಕಾದ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

**ಉತ್ತರ : ಸಮುದ್ರದ ಕೊರೆತವನ್ನು ತಪ್ಪಿಸಲು ಕೈಗೊಳ್ಳಬೇಕಾದ ನಿಯಂತ್ರಣ ಕ್ರಮಗಳು**

➢ಸಮುದ್ರ ಅಲೆಗಳ ಹೊಡೆತವನ್ನು ನಿಯಂತ್ರಿಸಲು ಸಮುದ್ರ ಗೋಡೆ, ತಡೆಗಟ್ಟು ಮತ್ತು ಅಲೆತಡೆಗಳ ನಿರ್ಮಾಣ.

➢ತೀರಗಳಲ್ಲಿ ಮರಳು ಮತ್ತು ಗಣಿಗಾರಿಕೆಗಳ ನಿಷೇದ.

➢ಸಮುದ್ರ ದಡ ಮತ್ತು ಮರಳು ರಾಶಿಗಳ ಉಳಿಸಲು ಮತ್ತು ಸುಸ್ಥಿರತೆಗಾಗಿ ಮರಗಳನ್ನು ಬೆಳೆಸುವುದು.

**16. ಭೂಕಂಪಕ್ಕೆ ಕಾರಣಗಳೇನು?**

ಉತ್ತರ : ಭೂಕಂಪಗಳು ಭೂಫಲಕಗಳ ಚಲನೆ, ಜ್ವಾಲಾಮುಖಿ, ಶಿಲಾಸ್ತರಗಳ ಭಂಗ ಮತ್ತು ಮಡಿಕೆ, ಭೂಕುಸಿತ, ಅಂತರ್ಗುಹೆ ಮೇಲ್ಚಾವಣಿಯ ಕುಸಿತ, ಮಾನವ ನಿರ್ಮಿತ ಜಲಾಶಯಗಳ ನೀರಿನ ಭಾರ ಮೊದಲಾದ ಕಾರಣಗಳಿಂದ ಸಂಭವಿಸುತ್ತವೆ.

**17. ಭೂಕಂಪದಿಂದಾಗುವ ಪರಿಣಾಮಗಳೇನು?**

**ಉತ್ತರ : ಭೂಕಂಪಗಳ ಅನಾಹುತಗಳಿಂದಾಗುವ ಪ್ರಮುಖ ಪರಿಣಾಮಗಳೆಂದರೆ–**

➢ನೆಲದ ಮೇಲಿನ ಬಿರುಕು, ಕಟ್ಟಡ, ರೈಲುಮಾರ್ಗ, ರಸ್ತೆ, ವಿದ್ಯುತ್ ಸಂಚಾರ ಹಾಳಾವವು.

➢ಸಂಪರ್ಕ ಮಾಧ್ಯಮ, ಸೇತುವೆ, ಆಣೆಕಟ್ಟುಗಳು ಒಡೆದು ಹೋಗುವವು.

➢ಕಾರ್ಖಾನೆಗಳಿಗೆ ಹಾನಿಯಾಗುವುದು.

➢ಮಾನವ ಮತ್ತು ಜಾನುವಾರುಗಳ ಸಾವು ಮತ್ತು ಆಸ್ತಿಗಳಿಗೆ ಹಾನಿಯಾವುದು.

➢ಬೆಂಕಿ ಅನಾಹುತ, ಭೂಕುಸಿತ, ಅಂತರ್ಜಲ ಮಟ್ಟದಲ್ಲಿ ವ್ಯತ್ಯಾಸ ಉಂಟಾಗುವುದು.

➢ನದಿ ವ್ಯವಸ್ಥೆಯ ವಿಚಲನೆ ಅಥವಾ ಅಡಚಣೆಯಾಗಿ ಹರಿಯುವ ದಿಕ್ಕು ಬದಲಾಯಿಸುವವು.

**18. ಭೂಕಂಪದ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳೇನು?**

**ಉತ್ತರ : ಭೂಕಂಪ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು**

➢ಭೂಕಂಪನಾವಲಯಗಳಲ್ಲಿ ಜನವಸತಿಗಳ ನಿರ್ಮಾಣ ನಿಷೇಧ.

➢ಭೂಕಂಪನ ನಿರೋಧಕ ಕಟ್ಟಡಗಳ ನಿರ್ಮಾಣವನ್ನು ಅನುಸರಿಸುವುದು.

➢ಉತ್ತಮ ದರ್ಜೆಯ ಕಟ್ಟಡ ನಿರ್ಮಾಣದ ವಸ್ತುಗಳ ಬಳಕೆ ಮತ್ತು ಬಹುಮಹಡಿ ಕಟ್ಟಡ ನಿರ್ಮಾಣವನ್ನು ಕೈಬಿಡುವುದು.

➢ಅಂತರ್ಜಲಕ್ಕಾಗಿ ಬಾವಿಗಳ ಆಳಕೊರೆತವನ್ನು ನಿಷೇಧಿಸುವುದು.

➢ಭೂಕಂಪನ ತೀವ್ರತೆಯುಳ್ಳ ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ ನಗರ ಬೆಳವಣಿಗೆಗೆ ನಿರ್ಬಂಧ.

➢ಬಹುದೊಡ್ಡ ಆಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣಕ್ಕೆ ನಿಷೇಧ.

➢ಅರಣ್ಯನಾಶ ಮತ್ತು ತೀವ್ರ ಸ್ವರೂಪದ ಗಣಿಗಾರಿಕಾ ಚಟುವಟಿಕೆಗಳನ್ನು ತಡೆಗಟ್ಟುವುದು.

➢ಸಂತ್ರಸ್ತರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವುದು. ಉದಾ : ಆಹಾರ ಪೂರೈಕೆ, ಪುನರ್ವಸತಿ ವ್ಯವಸ್ಥೆ, ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಕ್ರಮ. ವೈದ್ಯಕೀಯ ವ್ಯವಸ್ಥೆ ಇತ್ಯಾದಿ.

## ಅಧ್ಯಾಯ – 12 ಭಾರತದ ಜನಸಂಖ್ಯೆ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ – **121.01 ಕೋಟಿ.**
2. ಪ್ರಪಂಚದ ಒಟ್ಟು ಭೂಪ್ರದೇಶದಲ್ಲಿ ಭಾರತದ ಶೆ. ಪಾಲು – **ಶೇ. 2.4%**
3. ಭಾರತದ ಜನಸಂಖ್ಯೆ ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇ. ____ಭಾಗವಾಗಿರುತ್ತದೆ. – **ಶೇ. 17.5%.**
4. ಭಾರತದಲ್ಲಿ ______ ರಾಜ್ಯವು ಅಧಿಕ ಜನಸಂಖ್ಯೆಯನ್ನು ಹೊಂದಿದೆ. – **ಉತ್ತರ ಪ್ರದೇಶ (1995 ಕೋಟಿ)**
5. ಭಾರತದಲ್ಲಿ ______ ರಾಜ್ಯವು ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿದೆ. – **ಸಿಕ್ಕಿಂ (6.1 ಲಕ್ಷ)**
6. ಕೇಂದ್ರಾಡಳಿತ ಪ್ರದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆಯನ್ನು ______ ಹೊಂದಿದೆ. – **ದೆಹಲಿ (1.67 ಕೋಟಿ)**
7. ಕೇಂದ್ರಾಡಳಿತ ಪ್ರದೇಶದಲ್ಲಿ ಅತಿ ಕಡಿಮೆ ಜನಸಂಖ್ಯೆಯನ್ನು ______ ಹೊಂದಿದೆ. – **ಲಕ್ಷ ದ್ವೀಪ (64,429)**
8. 2011ರ ಜನಗಣತಿಯಂತೆ ಭಾರತದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ ____ ಜನರು – **382 ಜನರು**
9. ಅತಿ ಹೆಚ್ಚು ಜನಸಾಂದ್ರತೆಯನ್ನು ಹೊಂದಿದ ರಾಜ್ಯ – **ಬಿಹಾರ (ಪ್ರತಿ ಚ.ಕಿ.ಮೀ.ಗೆ 1102 ಜನರು)**
10. ಅತಿ ಕಡಿಮೆ ಜನಸಾಂದ್ರತೆಯನ್ನು ಹೊಂದಿದ ರಾಜ್ಯ – **ಸಿಕ್ಕಿಂ (ಪ್ರತಿ ಚ.ಕಿ.ಮೀ.ಗೆ 17 ಜನರು)**
11. ಕೇಂದ್ರಾಡಳಿತ ಪ್ರದೇಶದಲ್ಲಿ ಹೆಚ್ಚು ಜನಸಾಂದ್ರತೆ ಹೊಂದಿದ ಪ್ರದೇಶ – **ದೆಹಲಿ (ಪ್ರತಿ ಚ.ಕಿ.ಮೀ.ಗೆ 11,297 ಜನರು)**
12. ಕೇಂದ್ರಾಡಳಿತ ಪ್ರದೇಶದಲ್ಲಿ ಕಡಿಮೆ ಜನಸಾಂದ್ರತೆ ಹೊಂದಿದ ಪ್ರದೇಶ – **ಅಂಡಮಾನ್ ಮತ್ತು ನಿಕೋಬಾರ್ ದ್ವೀಪ (ಪ್ರತಿ ಚ.ಕಿ.ಮೀ.ಗೆ 463 ಜನರು)**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಜನಸಂಖ್ಯೆ ಎಂದರೇನು?**

ಉತ್ತರ : ನಿಗದಿತದ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಗೆ 'ಜನಸಂಖ್ಯೆ' ಎನ್ನುವರು.

**2. ಭಾರತದ ವಿರಳ ಜನಸಂಖ್ಯೆಯುಳ್ಳ ಪ್ರದೇಶಗಳು ಯಾವುವು?**

ಉತ್ತರ : ಭಾರತದ ವಿರಳ ಜನಸಂಖ್ಯೆಯುಳ್ಳ ಪ್ರದೇಶಗಳೆಂದರೆ – ಹಿಮಾಲಯ ಪರ್ವತ ಪ್ರದೇಶ, ಕೇಂದ್ರದ ಎತ್ತರ ಪ್ರದೇಶ, ಥಾರ್ ಮರುಭೂಮಿ ಮತ್ತು ದ್ವೀಪಗಳು.

**3. ಭಾರತದ ಜನಭರಿತ ಪ್ರದೇಶಗಳು ಯಾವುವು?**

ಉತ್ತರ : ಭಾರತದ ಜನಭರಿತ ಪ್ರದೇಶಗಳೆಂದರೆ – ಗಂಗಾ ನದಿ ಬಯಲು, ಕರಾವಳಿ ಪ್ರದೇಶಗಳು ಮತ್ತು ಕೈಗಾರಿಕಾ ಪ್ರದೇಶಗಳಲ್ಲಿವೆ.

**4. ಜನಸಾಂದ್ರತೆ ಎಂದರೇನು?**

ಉತ್ತರ : ಪ್ರತಿ ಚದರಕಿಲೋಮೀಟರ್‌ನಲ್ಲಿ ವಾಸಿಸುವ ಜನರ ಸಂಖ್ಯೆಗೆ 'ಜನಸಾಂದ್ರತೆ' ಎಂದು ಕರೆಯಲಾಗಿದೆ.

**5. ಜನಸಾಂದ್ರತೆಯನ್ನಾಧರಿಸಿ ಭಾರತವನ್ನು ಎಷ್ಟು ವಲಯಗಳನ್ನಾಗಿ ವಿಂಗಡಿಸಲಾಗಿದೆ? ಅವು ಯಾವುವು?**

ಉತ್ತರ : ಜನಸಾಂದ್ರತೆಯನ್ನಾಧರಿಸಿ ಭಾರತವನ್ನು 03 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ – 1. ಅಧಿಕ ಜನಸಾಂದ್ರತೆ ಪ್ರದೇಶಗಳು, 2. ಸಾಧಾರಣ ಜನಸಾಂದ್ರತೆ ಪ್ರದೇಶಗಳು, 3. ಕಡಿಮೆ ಜನಸಾಂದ್ರತೆ ಪ್ರದೇಶಗಳು.

**6. ಭಾರತದ ಕೆಲವು ಭಾಗಗಳ ಕಡಿಮೆ ಜನಸಾಂದ್ರತೆಗೆ ಕಾರಣಗಳನ್ನು ಕುರಿತು ವಿವರಿಸಿ.**

ಉತ್ತರ : ಪರ್ವತ, ಬೆಟ್ಟ ಗುಡ್ಡಗಳ ಭಾಗಗಳು, ಅರಣ್ಯ ಪ್ರದೇಶ, ಕನಿಷ್ಠ ಉಷ್ಣಾಂಶವುಳ್ಳ ಅಥವಾ ಅರೆಮರುಭೂಮಿ ವಾಯುಗುಣಗಳು ಕಡಿಮೆ ಜನಸಾಂದ್ರತೆ ಕಾರಣಗಳಾಗಿವೆ.

**7. ಭಾರತದ ಕೆಲವು ಭಾಗಗಳ ಹೆಚ್ಚು ಜನಸಾಂದ್ರತೆಗೆ ಕಾರಣಗಳನ್ನು ಕುರಿತು ವಿವರಿಸಿ.**

ಉತ್ತರ : ಅಧಿಕ ಜನಸಾಂದ್ರತೆಗೆ ಫಲವತ್ತಾದ ಮಣ್ಣು, ನೀರಾವರಿ, ಸಾರಿಗೆ-ಸಂಪರ್ಕಗಳ ಅಭಿವೃದ್ಧಿ ಪ್ರಮುಖ ಕಾರಣಗಳು.

**8. ಭೌಗೋಳಿಕ ಮೇಲ್ಮೈ ಲಕ್ಷಣಗಳು ಜನಸಂಖ್ಯಾ ಹಂಚಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ?**

ಉತ್ತರ : ಭಾರತದಲ್ಲಿ ಜನಸಂಖ್ಯೆಯ ಹಂಚಿಕೆಯು ಎಲ್ಲೆಡೆಯೂ ಸಮನಾಗಿಲ್ಲ. ಅದಕ್ಕೆ ಭೌಗೋಳಿಕ ಮತ್ತು ಸಾಂಸ್ಕೃತಿಕ ಅಂಶಗಳು ಕಾರಣವಾಗಿವೆ. ಸಮತಟ್ಟಾದ, ಫಲವತ್ತಾದ ಮೈದಾನ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚು, ಆದರೆ ಗುಡ್ಡಗಾಡು ಮತ್ತು ಮರುಭೂಮಿ ಪ್ರದೇಶಗಳಲ್ಲಿ ಜನಸಂಖ್ಯೆ ವಿರಳವಾಗಿರುತ್ತದೆ.

**9. ಜನಸಾಂದ್ರತೆ ಮತ್ತು ಜನಸಂಖ್ಯೆಗಳಿಗಿರುವ ವ್ಯತ್ಯಾಸವೇನು?**

**ಉತ್ತರ :** ಪ್ರತಿ ಚದರಕಿಲೋಮೀಟರ್‌ನಲ್ಲಿ ವಾಸಿಸುವ ಜನರ ಸಂಖ್ಯೆಗೆ 'ಜನಸಾಂದ್ರತೆ' ಎಂದು ಕರೆಯಲಾಗಿದೆ. ಅದರೆ ನಿಗದಿತದ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಗೆ 'ಜನಸಂಖ್ಯೆ' ಎನ್ನುವರು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಜನಸಂಖ್ಯೆಯ ಬೆಳವಣಿಗೆಯನ್ನು ತಿಳಿಸಿ.**

**ಉತ್ತರ : ಭಾರತದ ಜನಸಂಖ್ಯೆಯ ಬೆಳವಣಿಗೆಯನ್ನು ಮೂರು ಹಂತಗಳಲ್ಲಿ ವಿಂಗಡಿಸಬಹುದು.**

➢ಹಂತ ಒಂದು – 1901ರಿಂದ 1921ರವರೆಗಿನ ಭಾರತದ ಜನಸಂಖ್ಯಾ ಬೆಳವಣಿಗೆಯು ನಿಧಾನದ ಗತಿಯಲ್ಲಿತ್ತು. ಇದಕ್ಕೆ ಕಾರಣ ಅಧಿಕ ಮರಣದರ. ಮಾರಣಾಂತಿಕ ಕಾಯಿಲೆ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದಾಗಿ ಮರಣದರ ಹೆಚ್ಚಾಗಿತ್ತು.

➢ಹಂತ ಎರಡು – 1921 ರಿಂದ 1951ರ ಅವಧಿಯಲ್ಲಿ ಸಾಧಾರಣ ಜನಸಂಖ್ಯಾ ಬೆಳವಣಿಗೆ. ಇದಕ್ಕೆ ಭಯಂಕರ ಪಿಡುಗಗಳ ನಿಯಂತ್ರಣ, ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆಗಳಿಂದಾಗಿ ಮರಣದರದಲ್ಲಿ ಇಳಿಕೆಯಾದುದು ಮುಖ್ಯ ಕಾರಣ.

➢ಹಂತ ಮೂರು – 1951ರಿಂದ 1991ರ ಅವಿಧಿಯಲ್ಲಿ ಜನಸಂಖ್ಯಾ ಬೆಳವಣಿಗೆ ದರವು ತ್ವರಿತವಾಯಿತು. ಇದಕ್ಕೆ ಕಾರಣ ಮರಣದರದಲ್ಲಿ ಇನ್ನಷ್ಟು ಇಳಿತ. ಪ್ರತಿಯಾಗಿ ಜನನ ದರದ ಹೆಚ್ಚಳ.

**2. ಜನಸಂಖ್ಯಾ ಬೆಳವಣಿಗೆಗೆ ಕಾರಣಗಳೇನು?**

**ಉತ್ತರ : ಜನಸಂಖ್ಯಾ ಬೆಳವಣಿಗೆಗೆ ಕಾರಣಗಳು**

➢ಬಾಲ್ಯವಿವಾಹ, ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು, ಬಹುಪತ್ನಿತ್ವ, ಬಡತನ, ಅನಕ್ಷರತೆ, ಉಷ್ಣವಲಯದ ವಾಯುಗುಣ ಮೊದಲಾದವು ಜನನ ದರ ಹೆಚ್ಚಾಗಲು ಕಾರಣಗಳಾಗಿವೆ.

➢ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ, ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ, ಶಿಶು ಮರಣದಲ್ಲಿ ಕುಸಿತ, ಶಿಕ್ಷಣದ ಪ್ರಗತಿ ಇತ್ಯಾದಿಗಳಿಂದ ಮರಣದರದಲ್ಲಿ ಇಳಿತವಾಗುತ್ತ ಬಂದಿತು.

**3. ಜನಸಂಖ್ಯೆಯ ಬೆಳವಣಿಗೆಯ ಪರಿಣಾಮಗಳೇನು? ಅಥವಾ**

**ಇಂದು ಜನಸಂಖ್ಯೆಯು ದೇಶದ ಸಂಪನ್ಮೂಲ ವಾಗಿರುವದರ ಬದಲಾಗಿ ಬಹು ದೊಡ್ಡ ಸಮಸ್ಯೆಯಾಗಿದೆ. ಈ ಹೇಳಿಕೆಯನ್ನು ವಿಶ್ಲೇಷಿಸಿ.**

**ಉತ್ತರ : ಜನಸಂಖ್ಯೆಯ ಬೆಳವಣಿಗೆಯ ಪರಿಣಾಮಗಳು**

➢ದೇಶದ ಜನಸಂಖ್ಯಾ ಸ್ಫೋಟವು ಜನತೆಯನ್ನು ಸಂಪನ್ಮೂಲವನ್ನಾಗಿಸುವುದರ ಬದಲು ದೇಶಕ್ಕೆ ಹೊರೆಯಾಗಿ ಮಾಡಿದೆ.

➢ನಿರುದ್ಯೋಗ, ಆಹಾರದ ಕೊರತೆ ಮತ್ತು ಅಪೌಷ್ಠಿಕತೆ ಉಂಟಾಗುತ್ತದೆ.

➢ಹೆಚ್ಚು ಸಾಮಾಜಿಕ ಹೊಣೆ ಮತ್ತು ಮೂಲ ಸೌಲಭ್ಯಗಳ ಕೊರತೆ ಉಂಟಾಗುತ್ತದೆ.

➢ಕಡಿಮೆ ತಲಾದಾಯ, ನಿಧಾನ ಗತಿಯ ಆರ್ಥಿಕಾಭಿವೃದ್ಧಿಯಾಗುತ್ತದೆ.

➢ಬಡತನ, ಜೀವನ ಮಟ್ಟದಲ್ಲಿ ಕುಸಿತ ಉಂಟಾಗುತ್ತದೆ.

➢6.ಪರಿಸರ ಮಾಲಿನ್ಯ, ರಾಜಕೀಯ ಅರಾಜಕತೆ ಉಂಟಾಗುತ್ತವೆ.

**4. ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

**ಉತ್ತರ : ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ ಕ್ರಮಗಳು**

ಉತ್ತರ : ಭಾರತ ಸರಕಾರವು ತ್ವರಿತಗತಿಯಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದೆ. ಅವುಗಳಲ್ಲಿ

➢ಕುಟುಂಬ ಯೋಜನೆ,

➢ಮಹಿಳಾ ಕಲ್ಯಾಣ ಯೋಜನೆ,

➢ಶಿಶು ಮರಣ ತಡೆಗಟ್ಟುವದು,

➢ಪ್ರಚಾರ ಮತ್ತು ಜಾಹಿರಾತು,

➢ಕುಟುಂಬ ಯೋಜನಾ ಶಿಬಿರಗಳು

➢ಗ್ರಾಮೀಣ ಪ್ರದೇಶಗಳಲ್ಲಿ ಜನರಲ್ಲಿ ಜನಸಂಖ್ಯಾ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು.

**5. ಜನಸಂಖ್ಯೆ ಹಂಚಿಕೆಯನ್ನು ನಿಯಂತ್ರಿಸುವ ಅಂಶಗಳು ಯಾವುವು?**

ಉತ್ತರ : ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮೊದಲಾದ ಅಂಶಗಳು ಭಾರತದ ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರುತ್ತವೆ. ಅವುಗಳೆಂದರೆ – 1. ಮೇಲ್ಮೈ ಲಕ್ಷಣಗಳು, 2. ವಾಯುಗುಣ, 3. ಮಣ್ಣು, 4. ಸಂಪನ್ಮೂಲಗಳ ಹಂಚಿಕೆ, 5. ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳು, 6. ನೀರಿನ ಪೂರೈಕೆ, 7. ಪ್ರವಾಸೋದ್ಯಮ ನೀತಿ, 8. ಜನರು ಮತ್ತು ಅವರ ಆಸ್ತಿಗಳಿಗೆ ದೊರೆಯುವ ರಕ್ಷಣೆ ಮತ್ತು ಭದ್ರತೆಗಳೂ ಸಹ ಜನಸಂಖ್ಯೆಯ ಹಂಚಿಕೆಯ ಮೇಲೆ ಪ್ರಭಾವ ಬೀರುತ್ತವೆ.

## ಅರ್ಥಶಾಸ್ತ್ರ

## ಅಧ್ಯಾಯ 1 ಅಭಿವೃದ್ಧಿ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. 2014ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ – **0.586 ರಷ್ಟು.**

2. 2014ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ 187 ರಾಷ್ಟ್ರಗಳ ಪೈಕಿ ______ ನೇ ಸ್ಥಾನ ಪಡೆದಿತ್ತು. – **135ನೇ ಸ್ಥಾನ.**

3. 2012ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕದ ಮೌಲ್ಯ – **0.554 ರಷ್ಟು.**

4. 2011ರ ಜನಗಣತಿಯ ಪ್ರಕಾರ ಭಾರತದಲ್ಲಿರುವ ಲಿಂಗ ಅನುಪಾತ – **945 / 1000.**

5. 2011ರ ಜನಗಣತಿಯ ಪ್ರಕಾರ ಮಹಿಳೆಯರ ಸಾಕ್ಷರತಾ ಧರ – **ಶೇ. 65.46.**

6. 2011ರ ಜನಗಣತಿಯ ಪ್ರಕಾರ ಪುರುಷರ ಸಾಕ್ಷರತಾ ಧರ – **ಶೇ. 82.14**

7. ಆರ್ಥಿಕ ಅಭಿವೃದ್ಧಿಯು ಒಂದು – **ಪ್ರಕ್ರಿಯೆ.**

8. ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು–ಸೇವೆಗಳ ಮೌಲ್ಯವನ್ನು ______ ಎನ್ನುವರು. – **ರಾಷ್ಟ್ರೀಯ ವರಮಾನ.**

9. ಮಾನವ ಅಭಿವೃದ್ಧಿಯು ________ ಗಳ ವಿಸ್ತರಣೆಯನ್ನು ಸೂಚಿಸುತ್ತದೆ. – **ಕನಿಷ್ಠ ಅವಶ್ಯಕತೆ.**

10. ಅನಾಭಿವೃದ್ಧಿ ರಾಷ್ಟ್ರದಲ್ಲಿ ಪ್ರಮುಖವಾಗಿ ______ ಕಡಿಮೆ ಇರುವುದು. – **ತಲಾ ವರಮಾನ.**

11. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ – **ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ.**

12. ಆರ್ಥಿಕ ಅಭಿವೃದ್ಧಿಯೆಂದರೆ ಜನರ ಆರ್ಥಿಕ ಕಲ್ಯಾಣದ ಹೆಚ್ಚಳವೆಂದು ಹೇಳಿದವರು – **ಪ್ರೊ. ಕೋಲಿನ್ ಕ್ಲಾರ್ಕ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಆರ್ಥಿಕ ಅಭಿವೃದ್ಧಿ ಎಂದರೇನು?**

ಉತ್ತರ : ಒಂದು ರಾಷ್ಟ್ರದ ಜನರ ಆರ್ಥಿಕ ಆಶೋತ್ತರಗಳನ್ನು ಪೂರೈಸುವ ಸಾಮರ್ಥ್ಯ ಹೆಚ್ಚಿಸಿ, ಬಡತನ, ನಿರುದ್ಯೋಗ, ಅಸಮಾನತೆ, ಹಣದುಬ್ಬರಗಳಂಥ ಆರ್ಥಿಕ ಸಮಸ್ಯೆಗಳನ್ನು ನಿಯಂತ್ರಿಸುವುದನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯಬಹುದು.

**2. ಪ್ರೊ. ಮೇಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ ಆರ್ಥಿಕ ಅಭಿವೃದ್ಧಿ ಎಂದರೇನು?**

ಉತ್ತರ : ಪ್ರೊ. ಮೇಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ "ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವೀಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ"ಯಾಗಿದೆ.

**3. ಪ್ರೊ. ಮೇಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ ಆರ್ಥಿಕ ಅಭಿವೃದ್ಧಿಯು ಯಾವ ಅಂಶಗಳನ್ನು ಒತ್ತಿ ಹೇಳುತ್ತದೆ?**

ಉತ್ತರ : ಪ್ರೊ. ಮೇಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ ಆರ್ಥಿಕ ಅಭಿವೃದ್ಧಿಯು ಮೂರು ಅಂಶಗಳನ್ನು ಒತ್ತಿ ಹೇಳುತ್ತದೆ. ಅವೆಂದರೆ – 1. ಒಂದು ಪ್ರಕ್ರಿಯೆ, 2. ನೈಜ ರಾಷ್ಟ್ರೀಯ ವರಮಾನದ ಹೆಚ್ಚಳ ಮತ್ತು 3. ದೀರ್ಘಾವಧಿ ಹೆಚ್ಚಳ.

**4. ಆರ್ಥಿಕಾಭಿವೃದ್ಧಿಯಲ್ಲಿ ಒಂದು ಪ್ರಕ್ರಿಯೆಯು ಏನನ್ನು ಸೂಚಿಸುತ್ತದೆ?**

ಉತ್ತರ : ಆರ್ಥಿಕಾಭಿವೃದ್ಧಿಯಲ್ಲಿ ಒಂದು ಪ್ರಕ್ರಿಯೆ ಎಂಬ ಪದವು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.

**5. ಅಭಿವೃದ್ಧಿ ಎಂದರೇನು?**

ಉತ್ತರ : ಯಾವುದೇ ಒಂದು ಕ್ಷೇತ್ರ ಇಲ್ಲವೇ ವ್ಯಕ್ತಿಗಳ ಪ್ರಗತಿಯನ್ನು ಸೂಚಿಸುವುದನ್ನು ಅಭಿವೃದ್ಧಿ ಎನ್ನುತ್ತೇವೆ.

**6. ರಾಷ್ಟ್ರೀಯ ವರಮಾನ ಎಂದರೇನು?**

ಉತ್ತರ : ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು ಸೇವೆಗಳ ಒಟ್ಟು ಮೌಲ್ಯವನ್ನು ರಾಷ್ಟ್ರೀಯ ವರಮಾನ ಎಂದು ಕರೆಯುತ್ತಾರೆ.

**7. ರಾಷ್ಟ್ರೀಯ ವರಮಾನದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ. ಹೇಗೆ? ಅಥವಾ**

**ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ ಏಕೆ?**

ಉತ್ತರ : ರಾಷ್ಟ್ರೀಯ ವರಮಾನದ ಜೊತೆ ಜೊತೆಗೆ ಜನಸಂಖ್ಯೆಯ ಹೆಚ್ಚಳವೂ ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ. ಆದ್ದರಿಂದ ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡಲು ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ.

**8. ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಪಟ್ಟಿಮಾಡಿರಿ.**

ಉತ್ತರ : ಪ್ರಥಮ ಹಂತದಲ್ಲಿ ಅಮೇರಿಕ, ಕೆನಡಾ, ಜಪಾನ್, ಜರ್ಮನಿ, ಇಂಗ್ಲೆಂಡ್, ಆಸ್ಟ್ರೇಲಿಯಾ, ಪಶ್ಚಿಮ ಯುರೋಪ್‌ನ ರಾಷ್ಟ್ರಗಳು; 1950 ನಂತರದಲ್ಲಿ ಸಿಂಗಪುರ, ಹಾಂಗ್‌ಕಾಂಗ್, ಮಲೇಷ್ಯಾ, ಚೀನಾ ಹಾಗೂ ಇನ್ನೂ ಹಲವು ರಾಷ್ಟ್ರಗಳ ವರಮಾನವು ದೀರ್ಘಾವಧಿ ಏರಿಕೆ ಕಂಡಿದ್ದರಿಂದ ಅವುಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ವರ್ಗೀಕರಿಸಲಾಗಿದೆ.

**9. ತಲಾ ವರಮಾನ ಎಂದರೇನು?**

ಉತ್ತರ : ತಲಾ ವರಮಾನವು ಒಂದು ದೇಶದ ಜನರ ಸರಾಸರಿ ವರಮಾನವಾಗಿದೆ.

**10. ತಲಾಆದಾಯವನ್ನು ಹೇಗೆ ಕಂಡು ಹಿಡಿಯಲಾಗುತ್ತದೆ?**
ಉತ್ತರ : ದೇಶದ ರಾಷ್ಟ್ರೀಯ ವರಮಾನವನ್ನು ಅಲ್ಲಿನ ಒಟ್ಟು ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾ ವರಮಾನವನ್ನು ಕಂಡುಹಿಡಿಯಲಾಗುತ್ತದೆ.

**11. ತಲಾ ವರಮಾನವು ಅಭಿವೃದ್ಧಿಯ ನೈಜ ಮಾಪಕವಾಗಲಾರದು ಹೇಗೆ?**
ಉತ್ತರ : ತಲಾ ವರಮಾನವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆಂದರೆ ತಲಾ ವರಮಾನವು ಒಂದು ಬಹು ಜನಪ್ರಿಯ ಮಾನದಂಡವಾಗಿದ್ದರೂ ಅದು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲ. ಅಲ್ಲದೇ ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ.

**12. ಅಮಾರ್ತ್ಯಸೇನ್ ಪ್ರಕಾರ ಮಾನವ ಅಭಿವೃದ್ಧಿ ಎಂದರೇನು?**
ಉತ್ತರ : ಅಮಾರ್ತ್ಯಸೇನ್ ಪ್ರಕಾರ ಮಾನವ ಅಭಿವೃದ್ಧಿ ಎಂದರೆ ಮಾನವನ ಸಾಮರ್ಥ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯೇ ಮಾನವ ಅಭಿವೃದ್ಧಿಯಾಗಿದೆ. ಮಾನವರು ಬಯಸುವ ಪ್ರಮುಖ ಸಾಮರ್ಥ್ಯಗಳೆಂದರೆ ಆರೋಗ್ಯ, ಶಿಕ್ಷಣ ಮತ್ತು ವರಮಾನ.

**13. ಮಾನವ ಅಭಿವೃದ್ಧಿ ಸೂಚ್ಯಾಂಕ ಎಂಬ ಮಾನದಂಡವನ್ನು ರಚಿಸಿದ್ದು ಯಾರು?**
ಉತ್ತರ : ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (UNDP) ವಿಭಾಗವು 'ಮಾನವ ಅಭಿವೃದ್ಧಿ ಸೂಚ್ಯಾಂಕ' ಎಂಬ ಮಾನದಂಡವನ್ನು ರಚಿಸಿ ರಾಷ್ಟ್ರಗಳ ಪ್ರಗತಿಯನ್ನು ಮಾಪನ ಮಾಡುತ್ತಿದೆ.

**14. ನೀರಿಕ್ಷತ ಜೀವಿತಾವಧಿಯನ್ನು ನಿರ್ಧರಿಸುವ ಅಂಶಗಳು ಯಾವವು?**
ಉತ್ತರ : ನಿರೀಕ್ಷಿತ ಜೀವಿತಾವಧಿಯು ಒಂದು ದೇಶದಲ್ಲಿರುವ ಜನರು ಜೀವಿಸುವ ಸರಾಸರಿ ಆಯಸ್ಸು ಆಗಿದೆ. ಪೌಷ್ಟಿಕ ಆಹಾರ, ಆರೋಗ್ಯ ಮತ್ತು ನೈರ್ಮಲ್ಯ, ಸ್ವಚ್ಚ ಪರಿಸರ ಮುಂತಾದವುಗಳ ಲಭ್ಯತೆಯು ನಿರೀಕ್ಷಿತ ಜೀವಿತಾವಧಿಯನ್ನು ನಿರ್ಧರಿಸುತ್ತದೆ.

**15. 2012ರ ವರದಿಯಂತೆ ಮಾನವ ಅಭಿವೃದ್ಧಿ ಸೂಚ್ಯಂಕದ ವರದಿಯನ್ನು ವಿವರಿಸಿ.**
ಉತ್ತರ : 2012ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕವು 0.554 ಇದ್ದು, 186 ರಾಷ್ಟ್ರಗಳ ಪೈಕಿ 136ನೆಯ ಸ್ಥಾನವನ್ನು ಪಡೆದಿತ್ತು. ಸೂಚ್ಯಂಕದ ಈ 0.554 ಮೌಲ್ಯವು 65.8 ವರ್ಷಗಳ ನಿರೀಕ್ಷಿತ ಜೀವಿತಾವಧಿ, 4.4 ವರ್ಷಗಳ ಸರಾಸರಿ ಶಾಲಾ ಕಲಿಕೆಯ ಅವಧಿ ಹಾಗೂ $3203 ತಲಾ ವರಮಾನದ ಸರಾಸರಿ ಫಲಿತವಾಗಿದೆ.

**16. ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.**
ಉತ್ತರ : ಪುರುಷರಷ್ಟೇ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

**17. ಲಿಂಗಾನುಪಾತ ಎಂದರೇನು?**
ಉತ್ತರ : ಪ್ರತಿ ಸಾವಿರ ಪುರುಷರಿಗೆ ಇರುವ ಸ್ತ್ರೀಯರ ಸರಾಸರಿ ಸಂಖ್ಯೆಯೇ ಲಿಂಗಾನುಪಾತವಾಗಿದೆ.

**18. ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿದೆ ಏಕೆ?**
ಉತ್ತರ : ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ, ಹತ್ತೆಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ. ಇದರಿಂದ ಲಿಂಗಾನುಪಾತ ಕುಸಿಯುತ್ತಿದೆ.

**19. ಸ್ವಸಹಾಯ ಸಮೂಹಗಳನ್ನು ಏಕೆ ಸ್ಥಾಪಿಸಲಾಗಿದೆ?**
ಉತ್ತರ : ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಅನಭಿವೃದ್ಧಿ ದೇಶದ ಲಕ್ಷಣಗಳಾವವು?**
**ಉತ್ತರ : ಅನಭಿವೃದ್ಧಿ ದೇಶದ ಲಕ್ಷಣಗಳು.**
- 'ಅನಾಭಿವೃದ್ಧಿ ಎಂಬ ಶಬ್ದವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ.
- ದೇಶದಲ್ಲಿ ಒಟ್ಟಾರೆ ಉತ್ಪಾದನೆ ಕಡಿಮೆ ಇದ್ದು, ಜನಸಂಖ್ಯೆ ಅಪಾರವಾಗಿರುವದರಿಂದ ತಲಾ ಆದಾಯವು ಅತ್ಯಂತ ಕಡಿಮೆ ಇರುತ್ತದೆ.
- ಬಹತೇಕ ಜನರಿಗೆ ಕನಿಷ್ಠ ಮೂಲಭೂತ ಅವಶ್ಯಕತೆಗಳಾದ ಊಟ, ಬಟ್ಟೆ & ವಸತಿಯನ್ನು ಪಡೆಯುವುದು ಕಷ್ಟವಾಗಿರುತ್ತದೆ.
- ಬಹುಸಂಖ್ಯಾತ ಜನರು ಅನಕ್ಷರಸ್ತರಾಗಿದ್ದು, ಮೂಡನಂಬಿಕೆಗಳಲ್ಲಿ ಮುಳುಗಿರುತ್ತಾರೆ.
- ಜನರು ಆರೋಗ್ಯ & ನೈರ್ಮಲ್ಯದ ಸೌಲಭ್ಯಗಳಿಲ್ಲದೆ ಅನಾರೋಗ್ಯದಿಂದ ಬಳಲುತ್ತಿರುತ್ತಾರೆ.

**2. ಪಾಕಿಸ್ತಾನದ ಅರ್ಥಶಾಸ್ತ್ರಜ್ಞರಾದ ಮಹಬೂಬ್ ಉಲ್ ಹಕ್ ಅವರು ಮಾನವರು ಘನತೆಯುತ ಜೀವನ ನಡೆಸಲು ಯಾವ ಅಂಶಗಳು ಮುಖ್ಯ ಎಂದು ಹೇಳಿದ್ದಾರೆ?**
ಉತ್ತರ : ಅಮರ್ತ್ಯಸೇನ್ ಅವರ ಚಿಂತನೆಗಳನ್ನು ಬಳಸಿಕೊಂಡು ಪಾಕಿಸ್ತಾನದ ಅರ್ಥಶಾಸ್ತ್ರಜ್ಞರಾದ ಮಹಬೂಬ್ ಉಲ್ ಹಕ್ ಅವರು ಮಾನವರು ಘನತೆಯುತ ಜೀವನ ನಡೆಸಲು ಬೇಕಾಗಿರುವ ಅತ್ಯಂತ ಮಹತ್ವದ ಅಂಶಗಳನ್ನು ತಿಳಿಸಿದ್ದಾರೆ. ಅವುಗಳೆಂದರೆ – 1. ಸುದೀರ್ಘವಾದ ಆರೋಗ್ಯಯುತ ಜೀವನ ನಡೆಸುವುದು, 2. ಜ್ಞಾನವಂತರಾಗಿರುವುದು, 3. ಜೀವನಕ್ಕೆ ಅವಶ್ಯವಿರುವ ಕನಿಷ್ಠ ಸೌಲಭ್ಯಗಳನ್ನು ಖರೀದಿಸಲು ಅವಶ್ಯವಿರುವ ವರಮಾನದ ಪ್ರಮಾಣ ಹೊಂದುವುದು ಎಂದು ತಿಳಿಸಿದ್ದಾರೆ.

**3. ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ದೇಶದ ಅಭಿವೃದ್ಧಿಯನ್ನು ಹೇಗೆ ಅಳೆಯಲಾಗುತ್ತದೆ?**
ಉತ್ತರ : ಮಾನವ ಅಭಿವೃದ್ಧಿ ಸೂಚ್ಯಂಕವು ಪ್ರಮುಖ ಸಾಮರ್ಥ್ಯಗಳನ್ನು ಅಳೆಯಬಹುದಾದ ಸೂಚಿಗಳನ್ನು ಬಳಸಿ, ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರಚಿಸಲಾಗಿದೆ. ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿ, ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣ ಹಾಗೂ ಖರೀದಿ ಶಕ್ತಿಯನ್ನು ತಲಾ ವರಮಾನ ಬಳಸಿ ಅಳೆಯಲಾಗುತ್ತದೆ.

**4. ಮಹಿಳೆಯರನ್ನು ಸಬಲೀಕರಣ ಮಾಡುವಲ್ಲಿ ಸ್ವಸಹಾಯ ಸಮೂಹಗಳ ಪಾತ್ರವನ್ನು ತಿಳಿಸಿ. ಅಥವಾ**
**ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಸಮರ್ಥಿಸಿ.**
**ಉತ್ತರ : ಮಹಿಳೆಯರನ್ನು ಸಬಲೀಕರಣ ಮಾಡುವಲ್ಲಿ ಸ್ವಸಹಾಯ ಸಮೂಹಗಳ ಪಾತ್ರ –**

ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಹೇಗೆಂದರೆ –
- ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಅಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.
- ಒಂದು ಸ್ವಸಹಾಯ ಸಮೂಹವು 20 ಸಮಾನ ಮನಸ್ಕ ಮಹಿಳೆಯರ ಒಂದು ಸಂಘವಾಗಿದೆ.
- ಸಂಘದ ಸದಸ್ಯರು ತಮ್ಮಲ್ಲಿರುವ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಡಿಕರಿಸಿ, ಬಾಹ್ಯ ಸಹಾಯವನ್ನು ಪಡೆದು, ವ್ಯವಹಾರ ಆರಂಭಿಸಿ, ವರಮಾನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ.
- ಲೆಕ್ಕ ನಿರ್ವಹಣೆ, ಬ್ಯಾಂಕಿನ ಜೊತೆ ವ್ಯವಹರಿಸುವುದಲ್ಲದೇ ವರಮಾನ ಸೃಷ್ಟಿಸುವಂಥ ಉದ್ಯೋಗಗಳ ಕುರಿತು ಅವರಿಗೆ ತರಬೇತಿ ನೀಡಲಾಗುತ್ತದೆ.
- ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ಧಿಗೆ ಕಾರಣವಾಗಿದೆಯಲ್ಲದೇ, ಅವರು ತಮ್ಮ ಇಚ್ಛಾನುಸಾರ ಖರ್ಚು ಮಾಡವುದಕ್ಕೂ ಅನುವು ಮಾಡಿಕೊಟ್ಟಿವೆ.
- ಇದರಿಂದಾಗಿ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

**5. ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ ಮತ್ತು ಅಭಿವೃದ್ಧಿ ಪ್ರಕ್ರಿಯೆಯ ವಿವರಣೆ ನೀಡಿ.**
ಉತ್ತರ : ಯಾವುದೇ ಒಂದು ಕ್ಷೇತ್ರ ಇಲ್ಲವೇ ವ್ಯಕ್ತಿಗಳ ಪ್ರಗತಿಯನ್ನು ಸೂಚಿಸುವುದನ್ನು ಅಭಿವೃದ್ಧಿ ಎನ್ನುತ್ತೇವೆ.
- ಇಲ್ಲಿ ಪ್ರಕ್ರಿಯೆ ಎಂಬ ಪದವು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.
- ಉತ್ಪಾದನಾಂಗಗಳ ಪೂರೈಕೆಯು ಹೊಸ ಸಂಪನ್ಮೂಲಗಳ ಶೋಧ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಬಂಡವಾಳ ಸಂಚಯನ, ಜನಸಂಖ್ಯಾ ಬೆಳವಣಿಗೆ, ಉತ್ತಮ ತಾಂತ್ರಿಕತೆಯ ಕಾರಣಗಳಿಂದಾಗಿ ಬದಲಾವಣೆಯಾಗುತ್ತದೆ.
- ಅದೇ ರೀತಿ ಜನಸಂಖ್ಯೆಯ ಬೆಳವಣಿಗೆ ಮತ್ತು ಅದರ ಲಕ್ಷಣಗಳ ಬದಲಾವಣೆ, ವರಮಾನದ ಮಟ್ಟ ಹಾಗೂ ಅದರ ಹಂಚಿಕೆಯಲ್ಲಿನ ಬದಲಾವಣೆ, ಜನರ ಅಭಿರುಚಿಗಳಲ್ಲಿನ ಬದಲಾವಣೆ, ಮುಂತಾದವುಗಳಿಂದಾಗಿ ಸರಕುಗಳ ಬೇಡಿಕೆಯಲ್ಲಿ ಬದಲಾವಣೆ ಉಂಟಾಗುತ್ತದೆ. ಈ ಬದಲಾವಣೆಗಳು ರಾಷ್ಟ್ರೀಯ ವರಮಾನದ ಹೆಚ್ಚಳಕ್ಕೆ ಪೂರಕವಾಗುತ್ತವೆ.

**6. ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?**
ಉತ್ತರ : 'ಅನಾಭಿವೃದ್ಧಿ' ಎಂಬ ಶಬ್ದವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ.

ಅನಾಭಿವೃದ್ಧಿಗೆ ಕಾರಣಗಳೆಂದರೆ – ಕಡಿಮೆ ವರಮಾನ, ಬಡತನ, ನಿರುದ್ಯೋಗ, ಅಸಮಾನತೆ, ಸಂಪನ್ಮೂಲಗಳ ಸಮರ್ಪಕ ಸದ್ಬಳಕೆ ಇಲ್ಲದಿರುವುದು ಕಾರಣಗಳಾಗಿವೆ.

**7. ಮಾನವ ಅಭಿವೃದ್ಧಿ ಸೂಚ್ಯಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತೀರಿ.**

ಉತ್ತರ : ಒಂದು ದೇಶದ ಜನರ ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ ಹಾಗೂ ತಲಾವರಮಾನ ಆ ದೇಶದ ಜನರ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತದೆ. ಈ ಮೂರು ಅಂಶಗಳನ್ನು ಮಾನವ ಅಭಿವೃದ್ಧಿಯ ಸೂಚಕಗಳು ಎನ್ನುತ್ತಾರೆ. ಈ ಮೂರು ಸೂಚಕಗಳ ಸರಾಸರಿಯೇ 'ಮಾನವ ಅಭಿವೃದ್ಧಿ ಸೂಚಿ'ಯಾಗಿದೆ

- ಮಾನವ ಅಭಿವೃದ್ಧಿ ಸೂಚ್ಯಂಕವು ಪ್ರಮುಖ ಸಾಮರ್ಥ್ಯಗಳನ್ನು ಅಳೆಯಬಹುದಾದ ಸೂಚಿಗಳನ್ನು ಬಳಸಿ, ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರಚಿಸಲಾಗಿದೆ. ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿ, ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣ ಹಾಗೂ ಖರೀದಿ ಶಕ್ತಿಯನ್ನು ತಲಾ ವರಮಾನ ಬಳಸಿ ಲೆಕ್ಕ ಹಾಕಲಾಗುತ್ತದೆ.

**8. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.**

ಉತ್ತರ : ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣಗಳೆಂದರೆ – ಆಹಾರದ ಕೊರತೆ, ವಸತಿಯ ಕೊರತೆ, ಶಿಕ್ಷಣದ ಕೊರತೆ, ಆರೋಗ್ಯದ ಕೊರತೆ, ಸಾಮಾಜಿಕ ಭದ್ರತೆಯ ಕೊರತೆ, ಶುದ್ಧ ಕುಡಿಯುವ ನೀರಿನ ಕೊರತೆ, ಶುದ್ಧ ಗಾಳಿಯ ಕೊರತೆ, ಸ್ವಚ್ಛ ಪರಿಸರದ ಕೊರತೆಯಿಂದಾಗಿ ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇದೆ.

9. ಲಿಂಗ ಸಮಾನತೆಯನ್ನು ಹೇಗೆ ಸಾಧಿಸುವುದು? ಅಥವಾ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸುವ ಅಂಶಗಳು ಯಾವುವು?

ಉತ್ತರ : ಲಿಂಗ ಸಮಾನತೆಯನ್ನು ಈ ಕೆಳಗಿನ ಅಂಶಗಳ ಮೂಲಕ ಸಾಧಿಸಬಹುದು.

**ಮಹಿಳೆಯರನ್ನು ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸುವ ಅಂಶಗಳು**

- ಮಹಿಳೆಯರ ಸಬಲೀಕರಣ
- ಮಹಿಳೆಯರ ವಿರುದ್ಧದ ಹಿಂಸೆಯನ್ನು ತಡೆಗಟ್ಟುವ ಕಾನೂನುಗಳನ್ನು ಜಾರಿಗೊಳಿಸುವುದು.
- ಸ್ತ್ರೀ–ಪುರುಷರಿಗೆ ಸಮಾನ ವೇತನ ನೀಡುವುದು.
- ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವುದು.

10. ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೆ ಸ್ವಾತಂತ್ರ್ಯ ಸಮಾನತೆ ನೀಡಿದ್ದರೂ ತಾರತಮ್ಯತೆ ಇನ್ನೂ ಕಡಿಮೆಯಾಗಿಲ್ಲ ಏಕೆ?

ಉತ್ತರ : . ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೆ ಸ್ವಾತಂತ್ರ್ಯ ಸಮಾನತೆ ನೀಡಿದ್ದರೂ ತಾರತಮ್ಯತೆ ಇನ್ನೂ ಕಡಿಮೆಯಾಗಿಲ್ಲ ಏಕೆಂದರೆ –

- ಪುರುಷಶಾಹಿ ಸಮಾಜದಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಗೆ ಆದ್ಯತೆ ಹೆಚ್ಚು.
- ಲಿಂಗಾಧಾರಿತ ಭ್ರೂಣ ಹತ್ಯೆ ನಡೆಯುತ್ತಿದೆ.
- ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮಹಿಳೆಯರಿಗೆ ಪುರುಷ ಸಮಾಜ ಅವಕಾಶ ಕೊಡುತ್ತಿಲ್ಲ.
- ಉನ್ನತ ಶಿಕ್ಷಣದ ಅವಕಾಶಗಳು ಹುಡುಗರಿಗೆ ಹೋಲಿಸಿದರೆ ಹೆಣ್ಣುಮಕ್ಕಳಿಗೆ ಕಡಿಮೆ.
- ಬಾಲ್ಯ ವಿವಾಹ, ವರದಕ್ಷಿಣೆ ಪದ್ದತಿಗಳು ಇನ್ನೂ ಜೀವಂತವಾಗಿವೆ.

## ಅಧ್ಯಾಯ 2 – ಗ್ರಾಮೀಣ ಅಭಿವೃದ್ಧಿ

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. 2011ರ ಜನಗಣತಿಯ ಪ್ರಕಾರ ಶೇ. ________ ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. **– ಶೇ. 68.84 ರಷ್ಟು ಜನರು.**

2. 'ಭಾರತದ ನೈಜ ಅಭಿವೃದ್ಧಯೆಂದರೆ ಗ್ರಾಮಗಳ ಅಭಿವೃದ್ಧಿ' ಎಂದವರು – **ಮಹಾತ್ಮ ಗಾಂಧೀಜಿ.**

3. ಸ್ವಾತಂತ್ರ್ಯಾನಂತರ ಸರ್ಕಾರಗಳು ಅನುಸರಿಸಿದ ಅಭಿವೃದ್ಧಿ ತಂತ್ರಗಳು ________ ಕೇಂದ್ರಿತ ಅಭಿವೃದ್ಧಿಗೆ ಅವಕಾಶ ನೀಡಿದವು. **– ನಗರ ಕೇಂದ್ರಿತ.**

4. ಭಾರತದಲ್ಲಿ ಮೂರು ಹಂತದ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದದ್ದು ಸಂವಿಧಾನದ ಈ ತಿದ್ದುಪಡಿಯಿಂದ **– 73ನೇ ತಿದ್ದುಪಡಿ.**

5. ಭಾರತದಲ್ಲಿ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದದ್ದು **– 1993ರಲ್ಲಿ.**

6. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಜಾರಿಗೆ ಬಂದ ಯೋಜನೆ – **ಮಹಿಳಾ ಸ್ವಸಹಾಯ ಸಂಘ (ಸ್ತ್ರೀ ಶಕ್ತಿ ಸಂಘ)**

7. ಪಂಚಾಯತ ಸಂಸ್ಥೆಗಳು ________ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ. **– ವಿಕೇಂದ್ರೀಕರಣ.**

8. ಭಾರತದ ಆಡಳಿತ ವ್ಯವಸ್ಥೆಯಲ್ಲಿ 73ನೇ ಸಂವಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಏಕೆಂದರೆ – **ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.**

ಉತ್ತರ : ಗ್ರಾಮೀಣ ಪ್ರದೇಶದಲ್ಲಿ ಕೃಷಿ & ಕೃಷಿ ಸಂಬಂಧಿಸಿದ ಚಟುವಟಿಕೆಗಳ ಅಭಿವೃದ್ಧಿಯ ಜೊತೆಗೆ ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ, ಸಂಪರ್ಕ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸುವದನ್ನು ಗ್ರಾಮೀಣಾಭಿವೃದ್ಧಿ ಎಂದು ಕರೆಯಬಹುದಾಗಿದೆ.

**2. ಅಧಿಕಾರ ವಿಕೇಂದ್ರೀಕರಣ ಎಂದರೇನು?**

ಉತ್ತರ : ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನಬಹುದು.

**3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.**

ಉತ್ತರ : ಸರ್ಕಾರವು 1993ರಲ್ಲಿ ಸಂವಿಧಾನದ 73 ನೇ ತಿದ್ದುಪಡಿಯ ಪ್ರಕಾರ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳೆಂದರೆ –

1. ಗ್ರಾಮ ಪಂಚಾಯ್ತಿ, 2. ತಾಲ್ಲೂಕು ಪಂಚಾಯ್ತಿ, 3. ಜಿಲ್ಲಾ ಪಂಚಾಯ್ತಿ.

**4. ಸರಕಾರ ಜಾರಿಗೆ ತಂದ ವಸತಿ ಯೋಜನೆಗಳನ್ನು ಹೆಸರಿಸಿ.**

**ಉತ್ತರ : ಸರ್ಕಾರ ಜಾರಿಗೆ ತಂದ ವಸತಿ ಯೋಜನೆಗಳು**

1. ಇಂದಿರಾ ಅವಾಸ್ ಯೋಜನೆ, 2. ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ, 3. ಆಶ್ರಯ ಯೋಜನೆ

**5. ಸರ್ಕಾರ ಬಡತನ ನಿವಾರಣೆಗೆ ಜಾರಿಗೊಳಿಸಿರುವ ಪ್ರಮುಖ ಯೋಜನೆಗಳನ್ನು ಹೆಸರಿಸಿ.**

ಉತ್ತರ : ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸ್ವರ್ಣಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆ.

**7. ಸ್ತ್ರೀ ಶಕ್ತಿ ಸಂಘಗಳ ಸ್ಥಾಪನೆಯ ಉದ್ದೇಶವೇನು?**

ಉತ್ತರ : ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಸ್ತ್ರೀ ಶಕ್ತಿ ಸಂಘಗಳ ಸ್ಥಾಪಿಸಲಾಗಿದೆ.

**8. ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ?**

ಉತ್ತರ : ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ.

### ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಸ್ವಾತಂತ್ರ್ಯಾನಂತರದಲ್ಲಿ ಗ್ರಾಮೀಣ ಪ್ರದೇಶಗಳು ಸಾಕಷ್ಟು ದುಸ್ಥಿತಿಗೆ ತಲುಪಲು ಕಾರಣಗಳೇನು?**

**ಉತ್ತರ : ಸ್ವಾತಂತ್ರ್ಯಾನಂತರದಲ್ಲಿ ಗ್ರಾಮೀಣ ಪ್ರದೇಶಗಳು ಸಾಕಷ್ಟು ದುಸ್ಥಿತಿಗೆ ತಲುಪಲು ಕಾರಣವಾದ ಅಂಶಗಳು**

- ಸ್ವಾತಂತ್ರ್ಯಾನಂತರದಲ್ಲಿ ಆಧುನಿಕ ಉದ್ದಿಮೆಗಳ ಪೈಪೋಟಿಯಿಂದಾಗಿ ಗ್ರಾಮೀಣ ಕೈಗಾರಿಕೆಗಳು ದುಸ್ಥಿತಿಯನ್ನು ಅನುಭವಿಸಿದವು.
- ಕೃಷಿಯು ನಿಯಮಿತ ಉದ್ಯೋಗ ಮತ್ತು ಸೂಕ್ತ ಕೂಲಿ ಒದಗಿಸಲು ಅಸಮರ್ಥವಾಗಿದ್ದರಿಂದ ಜನರು ನಗರಗಳೆಡೆ ವಲಸೆ ಬರಲು ಪ್ರಾರಂಭಿಸಿದರು.
- ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳ ಜಾರಿಯಿಂದಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ತನ್ನದಾಗಿಸಿಕೊಂಡ ಕೈಗಾರಿಕೆ ಮತ್ತು ಸೇವಾ ವಲಯಗಳು ತೀವ್ರವಾಗಿ ವಿಸ್ತರಣೆಗೊಳ್ಳುವ ಪ್ರಕ್ರಿಯೆಗೆ ಮತ್ತಷ್ಟು ಉತ್ತೇಜನ ದೊರಕಿತು. ಈ ಕಾರಣಗಳಿಂದಾಗಿ ಗ್ರಾಮೀಣ ಪ್ರದೇಶಗಳು ದುಸ್ಥಿತಿಗೆ ತಲುಪಿದವು.

**2. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

**ಉತ್ತರ : ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ –**

- ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮತ್ತು ಹೈನುಗಾರಿಕೆ ಸಂಬಂಧಿ ಉದ್ಯೋಗಗಳು ಪ್ರಧಾನವಾಗಿ ಕಂಡುಬರುತ್ತವೆ.
- ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆಯು ಹೆಚ್ಚಾಗಿ ಕಂಡುಬರುತ್ತದೆ.

- ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ.
- ಆಧುನಿಕತೆಯ ಹೊಡೆತಕ್ಕೆ ಸಿಲುಕಿ ಗ್ರಾಮೀಣ ಗುಡಿಕೈಗಾರಿಕೆಗಳು ನಶಿಸಿಹೋಗಿವೆ.
- ಸುಮಾರು ಶೇ. 60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದರೂ, ರಾಷ್ಟ್ರೀಯ ಆದಾಯಕ್ಕೆ ಈ ವಲಯದ ಕೊಡುಗೆ ಅತ್ಯಂತ ಕಡಿಮೆಯಿದೆ.
- ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ.
- ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಶಿಕ್ಷಣ, ಆರೋಗ್ಯ, ನೈರ್ಮಲ್ಯ ಮೊದಲಾದ ಮೂಲ ಸೌಕರ್ಯಗಳ ಕೊರತೆಯನ್ನು ಕಾಣಬಹುದಾಗಿದೆ.

**3. ಇಂದು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅತ್ಯಾವಶ್ಯಕವಾಗಿದೆ. ಏಕೆ?**

**ಉತ್ತರ : ಇಂದು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅತ್ಯಾವಶ್ಯಕವಾಗಿದೆ. ಏಕೆಂದರೆ –**

- ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ.
- ಸುಮಾರು ಶೇ. 60ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದು, ರಾಷ್ಟ್ರೀಯ ವರಮಾನಕ್ಕೆ ಈ ವಲಯದ ಕೊಡುಗೆ ಬಹಳ ಕಡಿಮೆ ಇದೆ.
- ಇಂದು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ.
- ಈ ಅಸಮತೋಲನವನ್ನು ಹೋಗಲಾಡಿಸಿ, ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅತ್ಯವಶ್ಯವಾಗಿದೆ.

**4. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ವಿವರಿಸಿ.**

**ಉತ್ತರ : ಗ್ರಾಮೀಣಾಭಿವೃದ್ಧಿಯ ಮಹತ್ವ.**

- ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಮೂಲ ಸೌಕರ್ಯಗಳ ಕೊರತೆಯನ್ನು ಹೋಗಲಾಡಿಸುವದು.
- ಗ್ರಾಮೀಣ ಜನರಿಗೆ ಶಿಕ್ಷಣ, ತರಬೇತಿ, ಆರೋಗ್ಯ, ನೈರ್ಮಲ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಬೇಕು.
- ಕೃಷಿಯ ಜೊತೆಗೆ ಪಶುಪಾಲನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಕೋಳಿಸಾಕಣೆ ಮುಂತಾದ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಬೇಕು.
- ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ, ಮಾರುಕಟ್ಟೆ ಮುಂತಾದ ಅಗತ್ಯ ಸೌಕರ್ಯಗಳನ್ನು ಗ್ರಾಮೀಣ ಜನರಿಗೆ ಒದಗಿಸಿಕೊಡಬೇಕು.
- ಸಣ್ಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸಬೇಕು.
- ಕೃಷಿಕಾರ್ಮಿಕರು, ಹಿಂದುಳಿದ ಹಾಗೂ ಬಡ ವರ್ಗದ ಜನರಿಗೆ ನಿರಂತರವಾಗಿ ಉದ್ಯೋಗವಕಾಶಗಳನ್ನು ಒದಗಿಸಿಕೊಡಬೇಕು.

**5. ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳನ್ನು ತಿಳಿಸಿ.**

**ಉತ್ತರ : ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳೆಂದರೆ –**

- ಮಾನವ ಸಂಪನ್ಮೂಲ ಅಭಿವೃದ್ಧಿ.
- ಸಾಕ್ಷರತೆ, ಅದರಲ್ಲೂ ಮಹಿಳಾ ಸಾಕ್ಷರತೆ, ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ.
- ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗಯದ ಸುಧಾರಣೆ.
- ಭೂ ಸುಧಾರಣೆ.
- ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ.
- ವಿದ್ಯುತ್ ಶಕ್ತ, ನೀರಾವರಿ, ಹಣಕಾಸು, ಮಾರುಕಟ್ಟೆಗಳು, ಸಾರಿಗೆ, ಕೃಷಿ ಸಂಶೋಧನೆ ಮತ್ತು ವಿಸ್ತರಣೆ ಹಾಗೂ ಮಾಹಿತಿ ಪ್ರಸರಣಗಳನ್ನೊಳಗೊಂಡ ಮೂಲಭೂತ ಸೌಕರ್ಯಗಳ ಅಭಿವೃದ್ಧಿ.
- ಬಡತನ ನಿರ್ಮೂಲನೆಯ ನಿರ್ದಿಷ್ಟ ಯೋಜನೆಗಳು

**6. ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.**

**ಉತ್ತರ : ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳು**

- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳುಳ್ಳ ಮೂರು ಹಂತದ ಪಂಚಾಯತಿ ವ್ಯವಸ್ಥೆ ಇದ್ದು ಗ್ರಾಮಸಭೆಯು ಅದರ ತಳಹದಿಯಾಗಿದೆ.
- ನೇರ ಹಾಗೂ ನಿಯಮಿತ ಚುನಾವಣೆಗಳು.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗಾಗಿ ಸ್ಥಾನ ಮೀಸಲಾತಿ.
- ಹಣಕಾಸು, ಆಡಳಿತಾತ್ಮಕ, ಮುಂಗಡಪತ್ತ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿಗಳ ನೀಡಿಕೆ.
- ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ.
- ಪಂಚಾಯತಿಯನ್ನು ವಿಸರ್ಜಿಸುವಾಗ ಅನುಸರಿಸಬೇಕಾದ ಕಟ್ಟು ನಿಟ್ಟಿನ ಕ್ರಮಗಳು ಮತ್ತು ವಿಸರ್ಜನೆಗೊಂಡ ಆರು ತಿಂಗಳುಗಳ ಒಳಗೆ ಕಡ್ಡಾಯ ಚುನಾವಣೆ ನಡೆಸುವುದು.

**7. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.**

**ಉತ್ತರ : ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ –**

- ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು.
- ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆ ಮುಂತಾದ ಸಮುದಾಯಕ್ಕೆ ಉಪಯೋಗವಾಗುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಿದೆ.
- ಬಡತನ ನಿರ್ಮೂಲನೆ, ಜೀವನೋಪಾಯ ಭದ್ರತೆ ಹಾಗೂ ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವ ಯೋಜನೆಗಳ ಅನುಷ್ಠಾನದಲ್ಲಿ ಈ ಸಂಸ್ಥೆಗಳ ಜವಾಬ್ದಾರಿ ಮಹತ್ವದ್ದಾಗಿದೆ.
- ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ.
- ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವಲ್ಲಿಯೂ ಪಂಚಾಯತ್ ಸಂಸ್ಥೆಗಳು ಕಾರ್ಯ ನಿರ್ವಹಿಸಬೇಕಾಗಿದೆ.
- ಗ್ರಾಮಗಳಲ್ಲಿನ ಪಡಿತರ ವ್ಯವಸ್ಥೆಯನ್ನು ಬಲಪಡಿಸಿ, ಅರ್ಹ ಬಡಜನರಿಗೆ ಅಗತ್ಯ ಆಹಾರ ಧಾನ್ಯಗಳು ಸಮರ್ಪಕವಾಗಿ ದೊರೆಯುವಂತೆ ಮಾಡುವುದು.
- ಗ್ರಾಮಗಳಲ್ಲಿನ ವಯೋವೃದ್ಧರು, ಅಂಗವಿಕಲರು, ವಿಧವೆಯರು, ಮಾನಸಿಕ ಅಸ್ವಸ್ಥರು ಮುಂತಾದವರನ್ನು ಗುರುತಿಸಿ ಅವರಿಗೆ ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ದೊರಕಿಸಿಕೊಡುವ ಮೂಲಕ ಸಾಮಾಜಿಕ ಕಲ್ಯಾಣ ಸೇವೆಗಳನ್ನು ಒದಗಿಸಬಹುದಾಗಿದೆ.
- ಮಹಿಳಾ ಸ್ವಸಹಾಯ ಸಂಘಗಳನ್ನು ಸಂಘಟಿಸಿ, ಉತ್ಪಾದಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು.
- ಕೆರೆ ಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆಗಳ ನಿರ್ವಹಣೆ ಮುಂತಾದ ಕಾರ್ಯಗಳ ಮೂಲಕ ಕೃಷಿ ನೀರಾವರಿಗಳನ್ನು ವಿಸ್ತರಿಸಬಹುದಾಗಿದೆ.
- ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು.

**3. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರಿಕರಣದ ಹಿನ್ನೆಲೆಯಲ್ಲಿ ತಿಳಿಸಿ.**

ಉತ್ತರ : ಅಧಿಕಾರ ವಿಕೇಂದ್ರೀಕರಣದ ಹಿನ್ನಲೆಯಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆ –

- ಪ್ರತಿಯೊಂದು ಹಳ್ಳಿಯು ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ದಿಯ ಜವಬ್ದಾರಿಯನ್ನು ಹಳ್ಳಿಯ ಜನರಿಗೆ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರಿಕರಣ ಎನ್ನುತ್ತಾರೆ.
- ವಿಕೇಂದ್ರಿಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮ್ಮದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
- ವಿಕೇಂದ್ರಿಕರಣವು ಎಲ್ಲಾ ರೀತಿಯ ಶೋಷಣೆಯನ್ನು ತಡೆಯುತ್ತದೆ.
- ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ.

➢ ವಿಕೇಂದ್ರೀಕರಣದ ಜಾರಿಗಾಗಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

➢ 1993ರ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ದೇಶದಲ್ಲಿ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ.

➢ ದೇಶದಲ್ಲಿ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು – 1. ಗ್ರಾಮ ಪಂಚಾಯತಿ 2. ತಾಲ್ಲೂಕ ಪಂಚಾಯತಿ. 3. ಜಿಲ್ಲಾ ಪಂಚಾಯತಿ.

**6. ಭಾರತದ ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವೇನು?**

**ಉತ್ತರ : ಭಾರತದ ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ.**

➢ ಕೃಷಿ, ಪಶುಪಾಲನೆ, ಮೀನುಗಾರಿಕೆ, ರೇಷ್ಮೆ ಕೃಷಿ, ತೋಟಗಾರಿಕೆ, ಪುಷ್ಪಕೃಷಿ, ಕೋಳಿಸಾಕಣೆಯ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚಾಗಿ ದುಡಿಯುತ್ತಿದ್ದಾರೆ.

➢ ಸರ್ಕಾರಿ ಕಛೇರಿಗಳಲ್ಲಿ ಪುರುಷರಿಗೆ ಸರಿಸಮವಾಗಿ ಸಕಲ ಕೆಲಸ ಕಾರ್ಯಗಳಲ್ಲಿ ದುಡಿಯುತ್ತಿದ್ದಾರೆ.

➢ ರಾಜಕೀಯ ಕ್ಷೇತ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದು ಮಹಿಳೆಯರು ದೇಶದ ಪ್ರಗತಿಗೆ ಶ್ರಮಿಸುತ್ತಿದ್ದಾರೆ.

➢ ಗ್ರಾಮಾಂತರ ಪ್ರದೇಶಗಳಲ್ಲಿ ಸ್ತ್ರೀಶಕ್ತಿ ಸಂಘಗಳು ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

➢ ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ಮಹಿಳೆಯರು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಾರೆ.

## <u>ಅಧ್ಯಾಯ – 3 ಹಣ ಮತ್ತು ಸಾಲ</u>

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. ಭಾರತೀಯ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯು ______ರಲ್ಲಿ ಜಾರಿಗೆ ಬಂದಿತು. – **1949**
2. ಭಾರತದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣಗೊಂಡದ್ದು ______ ರಲ್ಲಿ. – **1969**
3. ಭಾರತದಲ್ಲಿ ಗ್ರಾಮೀಣ ಬ್ಯಾಂಕುಗಳು ________ರಲ್ಲಿ ಅಸ್ತಿತ್ವಕ್ಕೆ ಬಂದವು. – **1976**
4. ಭಾರತೀಯ ರಿಜರ್ವ ಬ್ಯಾಂಕ ________ ರಂದು ಸ್ಥಾಪಿಸಲಾಯಿತು. – **1935 ಎಪ್ರಿಲ್ 1.**
5. ಸಾಟಿ ವಿನಿಮಯ ಪದ್ಧತಿಯಲ್ಲಿ ವಸ್ತುಗಳ ಬದಲಿಗೆ ________ ವಿನಿಮಯ ಮಾಡಲಾಗುತ್ತಿತ್ತು. – **ವಸ್ತುಗಳನ್ನು**
6. ಚೆಕ್‌ಗಳು ________ ಹಣದ ಸಾಧನವಾಗಿವೆ. – **ಬ್ಯಾಂಕು ಹಣ.**
7. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು _________ ರಲ್ಲಿ ರಾಷ್ಟ್ರೀಕರಿಸಿತು. – **1969**
8. ಕಿರಿದಾದ ಹಣದ ಪೂರೈಕೆಯನ್ನು ______ ಮತ್ತು ________ ಮೂಲಕ ಅಳೆಯುತ್ತೇವೆ. – **M1 ಮತ್ತು M2**
9. ವಿಶಾಲ ಹಣದ ಪೂರೈಕೆಯನ್ನು ______ ಮತ್ತು ______ ಮೂಲಕ ಅಳೆಯುತ್ತೇವೆ. – **M3 ಮತ್ತು M4**
10. ಹಣದುಬ್ಬರವು ಹಣದ ಪೂರೈಕೆಯು ಸರಕು–ಸೇವೆಗಳ ಪೂರೈಕೆಗಿಂತ ________ ಇದ್ದಾಗ ಸಂಭವಿಸುತ್ತದೆ. – **ಅಧಿಕ**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಹಣ ಅರ್ಥ ತಿಳಿಸಿ.**

ಉತ್ತರ : ದೈನಂದಿನ ವ್ಯವಹಾರ ನಡೆಸುವುದನ್ನು ಸುಗಮಗೊಳಿಸಿ, ಸರಕು–ಸೇವೆಗಳ ಮೌಲ್ಯ ನಿರ್ಣಯ, ಮೌಲ್ಯ/ಸಂಪತ್ತಿನ ಸಂಗ್ರಹಗಳಿಗೆ ಅನುಕೂಲತೆ ಒದಗಿಸುವ ಸಾಧನವನ್ನು ಹಣ ಎಂದು ಅರ್ಥೈಸಲಾಗಿದೆ.

**2. ರಾಬರ್ಟಸನ್ ಅವರ ಪ್ರಕಾರ ಹಣ ಎಂದರೇನು?**

ಉತ್ತರ : ರಾಬರ್ಟಸನ್ ಅವರ ಪ್ರಕಾರ "ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಿಕ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ".

**3. ಸಾಟಿ (ವಸ್ತು) ವಿನಿಮಯ ಪದ್ಧತಿ ಎಂದರೇನು?**

ಉತ್ತರ : ಪುರಾತನ ಕಾಲದಲ್ಲಿ ಜನರು ಹಣವನ್ನು ಬಳಸದೆ ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು. ಈ ರೀತಿ ವಿನಿಮಯ ಮಾಡಿಕೊಳ್ಳುವುದನ್ನು ಸಾಟಿ (ವಸ್ತು) ವಿನಿಮಯ ಪದ್ಧತಿ ಎನ್ನುತ್ತಾರೆ.

**4. ಹಣದ ವಿಕಾಸದ ಹಂತಗಳನ್ನು ತಿಳಿಸಿ.**

ಉತ್ತರ : ಹಣದ ವಿಕಾಸದ ಹಂತಗಳೆಂದರೆ – ಸಾಟಿ ವಿನಿಮಯ ಪದ್ಧತಿ, ವಸ್ತು ರೂಪದ ಹಣ, ಲೋಹದ ಹಣ, ಕಾಗದದ ಹಣ, ಬ್ಯಾಂಕ ಹಣ. ಪ್ಲಾಸ್ಟಿಕ್ ಹಣ.

5. ಪ್ರಪಂಚದ ಪ್ರಮುಖ ದೇಶಗಳಲ್ಲಿ ಬಳಕೆಯಲ್ಲಿರುವ ಕಾಗದದ ಹಣಕ್ಕೆ ಉದಾಹರಣೆ ಕೊಡಿ

ಉತ್ತರ : ಭಾರತದಲ್ಲಿ ರೂಪಾಯಿ, ಅಮೇರಿಕಾದಲ್ಲಿ ಡಾಲರ್, ಇಂಗ್ಲೆಂಡಿನಲ್ಲಿ ಪೌಂಡ್, ಜಪಾನ್‌ನಲ್ಲಿ ಯೆನ್, ಚೀನಾದಲ್ಲಿ ಯುವಾನ್ ಇತ್ಯಾದಿ ಹೆಸರಿನ ಹಣ ಬಳಕೆಯಲ್ಲಿದೆ.

**6. ಬ್ಯಾಂಕ್ ಹಣಕ್ಕೆ ಉದಾಹಣೆ ಕೊಡಿ.**

ಉತ್ತರ : ಬ್ಯಾಂಕ್ ಹಣಕ್ಕೆ ಉದಾಹರಣೆ ಎಂದರೆ – ಚೆಕ್ಕುಗಳು, ಡ್ರಾಫ್ಟ್‌ಗಳು, ಠೇವಣಿ ರಸೀದಿ. ಇತ್ಯಾದಿ.

**7. ಇ–ಹಣ ಎಂದರೇನು?**

ಉತ್ತರ : ಡೆಬಿಟ್, ಕ್ರೆಡಿಟ್ ಕಾರ್ಡಗಳನ್ನು ಬಳಸಿ ವಿದ್ಯುನ್ಮಾನ ಸಾಧನಗಳ ಮೂಲಕ ವ್ಯವಹಾರ ನಡೆಸುವುದರಿಂದ ಅದನ್ನು ಇ–ಹಣ ಎನ್ನುತ್ತಾರೆ.

**8. ಪ್ಲಾಸ್ಟಿಕ್ ಹಣ ಎಂದರೇನು?**

ಉತ್ತರ : ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡುಗಳನ್ನು ನೀಡಿ ಅದರ ಮೂಖಾಂತರ ವ್ಯವಹಾರ ಮಾಡುವ ಅನುಕೂಲತೆ ಕಲ್ಪಿಸಿವೆ. ಇವುಗಳನ್ನು ಪ್ಲಾಸ್ಟಿಕ್‌ನಿಂದ ಮಾಡಿದ್ದರಿಂದ ಇವುಗಳನ್ನು ಪ್ಲಾಸ್ಟಿಕ್ ಹಣವೆಂದು ಕರೆಯುತ್ತಾರೆ.

**9. ಹಣದ ಕಾರ್ಯಗಳನ್ನು ತಿಳಿಸಿ.**

ಉತ್ತರ : ಹಣದ ಕಾರ್ಯಗಳಲ್ಲಿ ಎರಡು ಪ್ರಕಾರಗಳಿವೆ. – 1. ಪ್ರಾಥಮಿಕ ಅಥವಾ ಮುಖ್ಯ ಕಾರ್ಯಗಳು 2. ಪೂರಕ ಕಾರ್ಯಗಳು

**10. ಬ್ಯಾಂಕಿಂಗ್ ಎಂದರೇನು?**

ಉತ್ತರ : ಬ್ಯಾಂಕಿಂಗ್ ಎಂದರೆ "ಸಾಲ ನೀಡುವ ಅಥವಾ ಬಂಡವಾಳ ಹೂಡುವ ಉದ್ದೇಶದಿಂದ ಸಾರ್ವಜನಿಕರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸಿ, ಬೇಡಿಕೆ ಅಥವಾ ಇತರೆ ಆಧಾರದ ಮೇಲೆ ಹಣ ಮರುಪಾವತಿಸುವುದಲ್ಲದೇ, ಚೆಕ್ಕುಗಳು, ಡ್ರಾಫ್ಟುಗಳು, ಆದೇಶಗಳು ಮುಂತಾದವುಗಳ ಮೂಲಕ ಹಣ ಹಿಂಪಡೆಯುವ ಪ್ರಕ್ರಿಯೆಯೇ ಬ್ಯಾಂಕಿಂಗ್ ಆಗಿರುತ್ತದೆ".

**11. ಭಾರತೀಯ ರಿಜರ್ವ ಬ್ಯಾಂಕ್ ಯಾವಾಗ ರಾಷ್ಟ್ರೀಕರಣಗೊಂಡಿತು?**

ಉತ್ತರ : ಭಾರತೀಯ ರಿಜರ್ವ ಬ್ಯಾಂಕನ್ನು ಜನವರಿ 1, 1949ರಂದು ರಾಷ್ಟ್ರೀಕರಣ ಮಾಡಲಾಯಿತು.

**12. ಡಿಮಾಂಡ್ ಠೇವಣಿಗಳು ಅಥವಾ ಬೇಡಿಕೆ ಎಂದರೇನು?**

ಉತ್ತರ : ಬ್ಯಾಂಕುಗಳಲ್ಲಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿರುವ ಹಣವನ್ನು ಬ್ಯಾಂಕುಗಳಿಂದ ಅಲ್ಪಾವಧಿ ಸೂಚನೆ ನೀಡಿ ಅಥವಾ ಬೇಡಿಕೆಯಾಧಾರದ ಮೇಲೆ ಹೊರ ತೆಗೆಯಬಹುದಾದ್ದರಿಂದ ಇವುಗಳನ್ನು ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದು ಕರೆಯುತ್ತಾರೆ.

**13. ಹಣಕಾಸು ನೀತಿ ಎಂದರೇನು?**

ಉತ್ತರ : ಹಣದ ಪೂರೈಕೆ ಮತ್ತು ಸಾಲದ ಪ್ರಮಾಣ ಮತ್ತು ಬಡ್ಡಿ ದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳನ್ನು ಹಣಕಾಸು ನೀತಿ ಎಂದು ಕರೆಯುತ್ತೇವೆ.

**14. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ ನಾಲ್ಕು ಪರಿಕಲ್ಪನೆಗಳು ಯಾವುವು?**

ಉತ್ತರ : ಭಾರತದಲ್ಲಿ ಹಣ ಪೂರೈಕೆಯ ನಾಲ್ಕು ಪರಿಕಲ್ಪನೆಗಳನ್ನು ಬಳಸಲಾಗುತ್ತದೆ. ಅವುಗಳನ್ನು M1, M2, M3 ಮತ್ತು M4.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಹಣದ ಕಾರ್ಯಗಳನ್ನು ತಿಳಿಸಿ.**

**ಉತ್ತರ : ಹಣದ ಕಾರ್ಯಗಳು.**

➢ ವಿನಿಮಯ ಮಾಧ್ಯಮ ಅಥವಾ ಸಂದಾಯ ಸಾಧನ

➢ ಮೌಲ್ಯ ನಿರ್ಣಯ

➢ ವಿಳಂಬಿತ ಸಂದಾಯದ ಪ್ರಮಾಣ

➢ ಮೌಲ್ಯ ಅಥವಾ ಖರೀದಿ ಶಕ್ತಿಯ ಸಂಗ್ರಹ

➢ ಮೌಲ್ಯ ವರ್ಗಾವಣೆ ಅಥವಾ ಖರೀದಿ ಶಕ್ತಿಯ ವರ್ಗಾವಣೆ

**3. ಬ್ಯಾಂಕುಗಳ ಮಹತ್ವ ತಿಳಿಸಿ.**

**ಉತ್ತರ : ಬ್ಯಾಂಕುಗಳ ಮಹತ್ವ.**

➢ ಆರ್ಥಿಕಾಭಿವೃದ್ಧಿಯಲ್ಲಿ ಬ್ಯಾಂಕುಗಳು ಮಹತ್ವದ ಪಾತ್ರ ವಹಿಸುತ್ತವೆ.

➢ ಬ್ಯಾಂಕುಗಳು ಸಾರ್ವಜನಿಕರ ಉಳಿತಾಯವನ್ನು ಸಂಗ್ರಹಣೆ ಮಾಡಿ ಅವುಗಳನ್ನು ಹೂಡಿಕೆದಾರರಿಗೆ ಒದಗಿಸುತ್ತವೆ.

➢ ಬ್ಯಾಂಕುಗಳು ಬಂಡವಾಳ ಸಂಗ್ರಹಣೆ ಮತ್ತು ಸಂಚಯನದಲ್ಲಿ ಅವು ಪ್ರಮುಖ ಪಾತ್ರ ವಹಿಸುತ್ತವೆ.

- ವಿವಿಧ ಸಾಧನಗಳ ಮೂಲಕ ಗ್ರಾಹಕರಿಗೆ ಹಣಸಂದಾಯದ ಅನುಕೂಲಕರ ಮಾರ್ಗಗಳನ್ನು ಒದಗಿಸಿವೆ.
- ನಿರ್ದಿಷ್ಟ ಅವಧಿ ಠೇವಣಿಗಳಿಗೆ ಅಧಿಕ ಬಡ್ಡಿ ದರ ನೀಡುವುದಲ್ಲದೇ ಕೃಷಿ, ಕೈಗಾರಿಕೆ ಮತ್ತು ಸೇವಾವಲಯಗಳ ಅಭಿವೃದ್ಧಿಗಾಗಿ ಸಾಲಗಳನ್ನು ಬ್ಯಾಂಕುಗಳು ನೀಡುತ್ತವೆ.
- ಹುಂಡಿಗಳನ್ನು ವಟ್ಟಾಯಿಸುತ್ತವೆಯಲ್ಲದೇ ಡ್ರಾಫ್ಟುಗಳು, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳನ್ನು ನೀಡಿ ಸುಗಮ ವ್ಯವಹಾರಕ್ಕೆ ಇಂಬು ಕೊಡುತ್ತವೆ.

**4. ಭಾರತೀಯ ರಿಜರ್ವ ಬ್ಯಾಂಕಿನ ಕಾರ್ಯಗಳನ್ನು ತಿಳಿಸಿ.**

**ಉತ್ತರ : ಭಾರತೀಯ ರಿಜರ್ವ ಬ್ಯಾಂಕಿನ ಕಾರ್ಯಗಳು**
- ನೋಟು ಚಲಾವಣೆಯ ಏಕಸ್ವಾಮ್ಯ.
- ಸರ್ಕಾರದ ಬ್ಯಾಂಕ ಆಗಿ ಕಾರ್ಯ ನಿರ್ವಹಣೆ.
- ಬ್ಯಾಂಕುಗಳ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ.
- ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯ ನಿರ್ವಹಣೆ.
- ಸಾಲ ಪ್ರಮಾಣದ ನಿಯಂತ್ರಕ
- ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ.
- ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ.

**5. ಭಾರತದಲ್ಲಿ ಬಳಸಲಾಗುತ್ತಿರುವ ಹಣದ ಪೂರೈಕೆಯ ವಿವಿಧ ಪರಿಕಲ್ಪನೆಗಳನ್ನು ವಿವರಿಸಿ.**

ಉತ್ತರ : ಭಾರತದಲ್ಲಿ ಹಣ ಪೂರೈಕೆಯ ನಾಲ್ಕು ಪರಿಕಲ್ಪನೆಗಳನ್ನು ಬಳಸಲಾಗುತ್ತದೆ. ಅವುಗಳನ್ನು M1, M2, M3 ಮತ್ತು M4. ಅವುಗಳನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಬಹುದು.
- M1 = ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಠೇವಣಿಗಳು.
- M2 = M1 + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು.
- M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು.
- M4 = M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು.

**6. ಆರ್‌ಬಿಐ ಬಳಸುವ ಸಾಲ ನಿಯಂತ್ರಕ ಕ್ರಮಗಳನ್ನು ವಿವರಿಸಿ.**

ಉತ್ತರ : ಆರ್‌ಬಿಐ ಬಳಸುವ ಸಾಲ ನಿಯಂತ್ರಕ ಕ್ರಮಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ 1. ಪರಿಮಾಣಾತ್ಮಕ, 2. ಗುಣಾತ್ಮಕ ಕ್ರಮಗಳು

**1. ಪರಿಮಾಣಾತ್ಮಕ ಸಾಲ ನಿಯಂತ್ರಕ ಕ್ರಮಗಳು**
- ಬ್ಯಾಂಕ್ ದರ
- ಮುಕ್ತ ಮಾರುಕಟ್ಟೆ ಕಾರ್ಯಾಚರಣೆ
- ಮೀಸಲು ಅನುಪಾತದ ಅವಶ್ಯಕತೆಯನ್ನು ಏರಿಳಿತಗೊಳಿಸುವುದು.

**2. ಗುಣಾತ್ಮಕ ಸಾಲ ನಿಯಂತ್ರಕ ಕ್ರಮಗಳು**
- ಮಾರ್ಜಿನ್ ಪ್ರಮಾಣದ ಬದಲಾವಣೆ
- ಸಾಲದ ಗರಿಷ್ಠ ಮಿತಿ ನಿಗದಿ
- ನೈತಿಕ ಒತ್ತಡ
- ನೇರ ಕ್ರಮ

## ಅಧ್ಯಾಯ – 4 ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು ________ನೀತಿಯ ಮೂಲಕ ನಿರ್ವಹಿಸುತ್ತದೆ. – **ಕೋಶೀಯ ನೀತಿ**

2. ಕೇಂದ್ರ ಸರ್ಕಾರದಲ್ಲಿ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು – **ಹಣಕಾಸು ಸಚಿವರು**

3. ಸರ್ಕಾರವು ಆಂತರಿಕ ಹಾಗೂ ವಿದೇಶಿ ಸಾಲಗಳ ಮೂಲಕ ಸಂಗ್ರಹಿಸುವ ವರಮಾನವನ್ನು ಹೀಗೆ ಎನ್ನುತ್ತಾರೆ. – **ಬಂಡವಾಳ ವರಮಾನ.**

5. ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸುತ್ತದೆ. ಅದನ್ನು ಹೀಗೆ ಕರೆಯುವರು. – **ಸಾರ್ವಜನಿಕ ವರಮಾನ.**

6. ಸರ್ಕಾರವು ವಿವಿಧ ತೆರಿಗೆಗಳು & ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು ಹೀಗೆ ಕರೆಯುವರು. – **ಕಂದಾಯ ವರಮಾನ**

7. ಸರ್ಕಾರದ ಒಂದು ವರ್ಷದ ಅಂದಾಜು ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ – **ಆಯವ್ಯಯ**

8. ಕಂದಾಯ ಆದಾಯ & ಸಾಲೇತರ ಆದಾಯದಲ್ಲಿ ಒಟ್ಟು ವೆಚ್ಚವನ್ನು ಕಳೆದಾಗ ಲಭ್ಯವಾಗುವುದೆ – **ವಿತ್ತೀಯ ನೀತಿ.**

9. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ________ ಆಯ–ವ್ಯಯ ಸೂಕ್ತ. – **ಕೊರತೆಯ ಆಯ–ವ್ಯಯ.**

10. ಆಯ–ವ್ಯಯವು ________ ದಿನಾಂಕದೊಳಗಾಗಿ ಎರಡು ಸದನಗಳ ಅನುಮೋದನೆಯನ್ನು ಪಡೆಯಬೇಕು. – **ಮಾರ್ಚ 31ರ ಒಳಗೆ.**

11. ಆಯ–ವ್ಯಯದಲ್ಲಿ ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು ________ ಎಂದು ಕರೆಯುತ್ತಾರೆ. – **ಉಳಿತಾಯ ಆಯವ್ಯಯ.**

12. ಜಿಎಸ್‌ಟಿ ________ ದಿನಾಂಕದಿಂದ ಜಾರಿಗೆ ಬಂದಿದೆ. – **01/07/2017 ರಿಂದ.**

13. ಕೋಶೀಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯ್ದೆ ಜಾರಿಗೆ ಬಂದ ವರ್ಷ – **2003ರಲ್ಲಿ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ವೈಯಕ್ತಿಕ ಹಣಕಾಸು ಎಂದರೇನು?**

ಉತ್ತರ : ವ್ಯಕ್ತಿ ಅಥವಾ ಕುಟುಂಬದ ವರಮಾನ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿ ಕೊಡುವುದನ್ನು 'ವೈಯಕ್ತಿಕ ಹಣಕಾಸು' ಎನ್ನುತ್ತೇವೆ.

**2. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.**

ಉತ್ತರ : ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸಿನ ಅರ್ಥವಾಗಿದೆ.

**3. ಡಾಲ್ಟನ್‌ರವರ ಪ್ರಕಾರ ಸಾರ್ವಜನಿಕ ಹಣಕಾಸು ಎಂದರೇನು?**

ಉತ್ತರ : ಸರ್ಕಾರದ ವರಮಾನ ಹಾಗೂ ವೆಚ್ಚಗಳ ನಿರ್ವಹಣೆ ಮತ್ತು ಅವುಗಳಲ್ಲಿನ ಹೊಂದಾಣಿಕೆ ಮಡುವ ಪ್ರಕ್ರಿಯೆ ಬಗ್ಗೆ ಅಭ್ಯಸಿಸುವುದೇ ಸಾರ್ವಜನಿಕ ಹಣಕಾಸು ಎಂದು ಡಾಲ್ಟನ್‌ರವರು ವ್ಯಾಖ್ಯಾನಿಸಿದ್ದಾರೆ.

**4. ಕೋಶೀಯ ನೀತಿ ಅಥವಾ ವಿತ್ತೀಯ ನೀತಿ ಎಂದರೇನು?**

ಉತ್ತರ : ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರವು ತನ್ನ ಆದಾಯ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ ಕೋಶೀಯ ನೀತಿ ಅಥವಾ ವಿತ್ತೀಯ ನೀತಿ ಎನ್ನುತ್ತಾರೆ.

**5. ವಿತ್ತೀಯ ನೀತಿಯ ಪ್ರಮುಖ ಉದ್ದೇಶಗಳೇನು?**

ಉತ್ತರ : ಆರ್ಥಿಕ ಬೆಳವಣಿಗೆ ಮತ್ತು ಸ್ಥಿರತೆ ಸಾಧಿಸಿ ವರಮಾನದ ಸಮಾನ ಹಂಚಿಕೆಯನ್ನು ಸಾಧಿಸುವುದು ವಿತ್ತೀಯ ನೀತಿಯ ಪ್ರಮುಖ ಉದ್ದೇಶವಾಗಿದೆ.

**6. ಭಾರತದಲ್ಲಿ ಹಣಕಾಸು ಯಾವಾಗ ಆರಂಭವಾಗಿ ಯಾವಾಗ ಮುಗಿಯುತ್ತದೆ?**

ಉತ್ತರ : ಭಾರತದಲ್ಲಿ ಹಣಕಾಸು ವರ್ಷವು ಎಪ್ರಿಲ್ 1ರಂದು ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ 31ಕ್ಕೆ ಮುಕ್ತಾಯವಾಗುತ್ತದೆ.

**7. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಕೊರತೆಯ ಆಯ–ವ್ಯಯ ಸೂಕ್ತ. ಈ ಹೇಳಿಕೆಯನ್ನು ವಿಶ್ಲೇಷಿಸಿ.**

ಉತ್ತರ : ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ರಾಷ್ಟ್ರಗಳಲ್ಲಿ ಸರ್ಕಾರಗಳು ಕೊರತೆಯ ಆಯ–ವ್ಯಯವನ್ನು ಮಂಡಿಸುವ ಮೂಲಕ ಅಧಿಕ ಪ್ರಮಾಣದ ವೆಚ್ಚ ಮಾಡಿ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತವೆ.

**8. ಸಾರ್ವಜನಿಕ ವೆಚ್ಚ ಎಂದರೇನು?**

ಉತ್ತರ : ಸರ್ಕಾರವು ರಾಷ್ಟ್ರ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಟಿಯಿಂದ ವಿವಿಧ ಚಟುವಟಿಕೆಗಳಿಗೆ ಹಣವನ್ನು ವೆಚ್ಚ ಮಾಡುತ್ತದೆ. ಇದನ್ನು ಸಾರ್ವಜನಿಕ ವೆಚ್ಚ ಎನ್ನುತ್ತಾರೆ.

**9. ಸಾರ್ವಜನಿಕ ವರಮಾನ ಎಂದರೇನು?**

ಉತ್ತರ : ಸಾರ್ವಜನಿಕ ವರಮಾನವೆಂದರೆ ವಿವಿಧ ಆರ್ಥಿಕ ಚಟುವಟಿಕೆಗಳ ಹಾಗೂ ವ್ಯಕ್ತಿಗಳ ಮೇಲೆ ವಿಧಿಸಿದ ತೆರಿಗೆಗಳಿಂದ, ಸರ್ಕಾರದ ಉದ್ದಿಮೆಗಳಿಂದ ದೊರಕಿದ ವರಮಾನದಿಂದ, ಅನುದಾನ ಮುಂತಾದವುಗಳಿಂದ ದೊರೆತ ವರಮಾನವಾಗಿದೆ.

**10. ಕಂದಾಯ ವರಮಾನ ಎಂದರೇನು?**

ಉತ್ತರ : ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು ಕಂದಾಯ ವರಮಾನವೆಂದು ಕರೆಯುತ್ತಾರೆ.

**11. ತೆರಿಗೆಯ ವರಮಾನ ಎಂದರೇನು?**

ಉತ್ತರ : ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ವಂತಿಕೆಯನ್ನು ತೆರಿಗೆ ವರಮಾನ ಎನ್ನುತ್ತಾರೆ.

**12. ಪ್ರತ್ಯಕ್ಷ ತೆರಿಗೆ ಎಂದರೇನು?**

ಉತ್ತರ : ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ತೆರಿಗೆಯನ್ನು ಪಾವತಿಸಿದರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತಾರೆ. ಉದಾ : ವರಮಾನ ತೆರಿಗೆ, ಸ್ಟಾಂಪು ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ ಇತ್ಯಾದಿ.

**13. ಪರೋಕ್ಷ ತೆರಿಗೆ ಎಂದರೇನು?**

ಉತ್ತರ : ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ, ಅಂತಹ ತೆರಿಗೆಯನ್ನು ಪರೋಕ್ಷ ತೆರಿಗೆ ಎನ್ನುತ್ತಾರೆ. ಉದಾ:-ಅಬಕಾರಿ ತೆರಿಗೆ, ಆಮದು-ರಫ್ತು ತೆರಿಗೆ, ಸರಕು ಸೇವಾ ತೆರಿಗೆ ಇತ್ಯಾದಿ.

**14. ತೆರಿಗೆಯೇತರ ವರಮಾನ ಎಂದರೇನು?**

ಉತ್ತರ : ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದಲೂ ವರಮಾನವನ್ನು ಸಂಗ್ರಹಿಸುತ್ತದೆ. ಇದಕ್ಕೆ ತೆರಿಗೆಯೇತರ ವರಮಾನ ಎನ್ನವರು. ಉದಾ : ಭಾರತೀಯ ರೈಲ್ವೆ ಗಳಿಸುವ ಲಾಭ

**15. ಆಂತರಿಕ ಸಾಲ ಎಂದರೇನು?**

ಉತ್ತರ : ದೇಶದಲ್ಲಿರುವ ಪ್ರಜೆಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಉದ್ಯಮ ಸಂಸ್ಥೆಗಳು ಮುಂತಾದವುಗಳಿಂದ ಸಂಗ್ರಹಿಸುವ ಸಾಲವನ್ನೇ ಆಂತರಿಕ ಸಾಲ ಎಂದು ಕರೆಯುತ್ತಾರೆ.

**16. ವಿದೇಶಿ ಸಾಲ ಎಂದರೇನು?**

ಉತ್ತರ : ವಿದೇಶಿ ಹಣಕಾಸು ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲವನ್ನು ವಿದೇಶಿ ಸಾಲ ಎನ್ನುತ್ತಾರೆ.

**17. ಹೂಡಿಕೆ ಹಿಂತೆಗೆತ ಎಂದರೇನು?**

ಉತ್ತರ : ಸರ್ಕಾರವು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುತ್ತದೆ. ಇದಕ್ಕೆ ಹೂಡಿಕೆ ಹಿಂತೆಗೆತ ಎನ್ನುತ್ತಾರೆ.

**18. ಸಾಲೇತರ ಬಂಡವಾಳ ಆದಾಯ ಎಂದರೇನು?**

ಉತ್ತರ : ರಾಜ್ಯ ಸರಕಾರಗಳು ಕೇಂದ್ರ ಸರಕಾರದಿಂದ ಪಡೆದಿರುವ ಸಾಲ ಮತ್ತು ಹಣಕಾಸಿನ ನೆರವನ್ನು ಕಾಲಕಾಲಕ್ಕೆ ಮರುಪಾವತಿ ಮಾಡುತ್ತವೆ. ಹೀಗೆ ಹೂಡಿಕೆ ಹಿಂತೆಗೆತ ಮತ್ತು ಸಾಲ ಮರುಪಾವತಿಯಿಂದ ಸಂಗ್ರಹವಾಗುವ ಹಣವನ್ನು ಸಾಲೇತರ ಬಂಡವಾಳ ಆದಾಯ ಎನ್ನತ್ತೇವೆ.

19. ಕೊರತೆಯ ಹಣಕಾಸು ಎಂದರೇನು?

ಉತ್ತರ : ಸರ್ಕಾರವು ತನ್ನ ವರಮಾನ ಮತ್ತು ವೆಚ್ಚದ ನಡುವಿನ ಅಂತರವನ್ನು ಭಾರತೀಯ ರಿಜರ್ವ ಬ್ಯಾಂಕಿನಿಂದ ಸಾಲ ಪಡೆಯುವದು, ಆಂತರಿಕ ಮತ್ತು ವಿದೇಶ ಮೂಲಗಳಿಂದ ಸಾಲ ಪಡೆಯುವುದು ಮತ್ತು ಹೊಸ ಹಣ ಸೃಷ್ಟಿಸುವುದು ಮುಂತಾದ ಕ್ರಮಗಳ ಮೂಲಕ ತುಂಬಿಕೊಳ್ಳುತ್ತದೆ. ಸರ್ಕಾರ ಹೀಗೆ ಹಣಕಾಸನ್ನು ಸರಿದೂಗಿಸುವುದನ್ನು ಕೊರತೆಯ ಹಣಕಾಸು ಎಂದು ಕರೆಯುತ್ತೇವೆ.

20. ಕೊರತೆಯ ಹಣಕಾಸಿನ ವಿಧಗಳನ್ನು ತಿಳಿಸಿ.

ಉತ್ತರ : ಭಾರತದಲ್ಲಿ ನಾಲ್ಕು ವಿಧದ ಕೊರತೆಯ ಹಣಕಾಸಿನ ವಿಧಗಳಿವೆ ಅವುಗಳೆಂದರೆ–

1. ವಿತ್ತೀಯ ಕೊರತೆ, 2. ರೆವೆನ್ಯೂ ಕೊರತೆ, 3. ಪ್ರಾಥಮಿಕ ಕೊರತೆ, 4. ಮುಂಗಡಪತ್ರ ಅಥವಾ ಆಯ-ವ್ಯಯ ಕೊರತೆ.

**21. ವಿತ್ತೀಯ ಕೊರತೆ ಎಂದರೇನು?**

ಉತ್ತರ : ಆಯವ್ಯಯದಲ್ಲಿ ಸರ್ಕಾರದ ಕಂದಾಯ ವರಮಾನ ಮತ್ತು ಸಾಲೇತರ ಬಂಡವಾಳ ವರಮಾನಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ, ಅದನ್ನು ವಿತ್ತೀಯ ಕೊರತೆ ಎನ್ನುತ್ತಾರೆ. ಅದನ್ನು ಹೀಗೆ ಕಂಡುಹಿಡಿಯುತ್ತೇವೆ.

ವಿತ್ತೀಯ ಕೊರತೆ = (ಕಂದಾಯ ವರಮಾನ + ಸಾಲೇತರ ಬಂಡವಾಳ ವರಮಾನ) – ಒಟ್ಟು ವೆಚ್ಚ.

**22. ರೆವೆನ್ಯೂ ಕೊರತೆ ಹೇಗೆ ಉಂಟಾಗುತ್ತದೆ?**

ಉತ್ತರ : ರೆವೆನ್ಯೂ ಖಾತೆಯ ವೆಚ್ಚವು ರೆವೆನ್ಯೂ ಖಾತೆಯ ವರಮಾನಕ್ಕಿಂತ ಹೆಚ್ಚಾಗಿದ್ದಾಗ ರೆವೆನ್ಯೂ ಕೊರತೆ ಉಂಟಾಗುತ್ತದೆ. ಅದರ ಸೂತ್ರವು–

ರೆವೆನ್ಯೂ ಕೊರತೆ = ರೆವೆನ್ಯೂ ಖಾತೆಯ ವರಮಾನ – ರೆವೆನ್ಯೂ ಖಾತೆಯ ವೆಚ್ಚ.

**23. ಪ್ರಾಥಮಿಕ ಕೊರತೆ ಹೇಗೆ ದೊರೆಯುತ್ತದೆ?**

ಉತ್ತರ : ಚಾಲ್ತಿ ವರ್ಷದ ವಿತ್ತೀಯ ಕೊರತೆಯಿಂದ ಕಳೆದ ವರ್ಷದ ಬಡ್ಡಿ ಪಾವತಿಯನ್ನು ವಜಾಗೊಳಿಸಿದಾಗ ಪ್ರಾಥಮಿಕ ಕೊರತೆ ದೊರೆಯುತ್ತದೆ.

ಪ್ರಾಥಮಿಕ ಕೊರತೆ = ವಿತ್ತೀಯ ಕೊರತೆ – ಬಡ್ಡಿ ಪಾವತಿ.

**24. ಆಯ-ವ್ಯಯ ಕೊರತೆಯನ್ನು ಸೂತ್ರ ತಿಳಿಸಿ.**

ಉತ್ತರ : ಆಯ-ವ್ಯಯ ಕೊರತೆ = ಒಟ್ಟು ವರಮಾನ – ಒಟ್ಟು ವೆಚ್ಚ.

**25. ಅಧಿಕ ಪ್ರಮಾಣದ ಕೊರತೆಗಳು ಆರ್ಥಿಕ ವ್ಯವಸ್ಥೆಗೆ ಉತ್ತಮವಲ್ಲ ಏಕೆ?**

ಉತ್ತರ : ಅಧಿಕ ಪ್ರಮಾಣದ ಕೊರತೆಗಳು ಆರ್ಥಿಕ ವ್ಯವಸ್ಥೆಗೆ ಉತ್ತಮವಲ್ಲ ಏಕೆಂದರೆ ಅವು ರಾಷ್ಟ್ರಕ್ಕೆ ಹೊರೆ ಸೃಷ್ಟಿಸುತ್ತವೆಯಲ್ಲದೇ ಅನಿಯಂತ್ರಿ ಕೊರತೆಗಳು ಹಣಕಾಸಿನ ಅಶಿಸ್ತು ತೋರಿಸುತ್ತವೆ. ಅದು ಹಣದುಬ್ಬರವನ್ನೂ ಹೆಚ್ಚಿಸುತ್ತದೆ.

**26. ಸರಕಾರವು ಯಾವ ವಿಧದ ತೆರಿಗೆಗಳನ್ನು ವಿಧಿಸುತ್ತದೆ?**

ಉತ್ತರ : ಸರಕಾರವು ಉಖ್ಯವಾಗಿ ಎರಡು ವಿಧದ ತೆರಿಗೆಗಳನ್ನು ವಿಧಿಸುತ್ತದೆ. ಅವುಗಳೆಂದರೆ – 1. ಪ್ರತ್ಯಕ್ಷ ತೆರಿಗೆ, 2. ಪರೋಕ್ಷ ತೆರಿಗೆ.

**27. ಕೊರತೆಯ ಹಣಕಾಸನ್ನು ನಿಯಂತಿಸಲು ಭಾರತ ಸರ್ಕಾರವು ಯಾವ ಕಾಯ್ದೆಯನ್ನು ಜಾರಿಗೆ ತಂದಿತು?**

ಉತ್ತರ : ಕೊರತೆಯ ಹಣಕಾಸಿನ ಪ್ರವೃತ್ತಿಗಳನ್ನು ನಿಯಂತ್ರಿಸಲು 2003ರಲ್ಲಿ ಭಾರತ ಸರ್ಕಾರವು ಕೋಶೀಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯೆಯನ್ನು ಜಾರಿಗೆ ತಂದಿತು.

**28. 2017-18ರ ಆಯ-ವ್ಯಯದಲ್ಲಿ ಬಡ್ಡಿ ಪಾವತಿಯ ಪ್ರಮಾಣ ಎಷ್ಟು?**

ಉತ್ತರ : 2017-18ರ ಆಯ-ವ್ಯಯದಲ್ಲಿ ಬಡ್ಡಿ ಪಾವತಿಯ ಪ್ರಮಾಣ 5,23,078 ಕೋಟಿ ರೂಪಾಯಿಗಳು. (ಶೇ. 24.36%)

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಆಯ-ವ್ಯಯ ಎಂದರೇನು? ಆಯ-ವ್ಯಯದ ವಿಧಗಳನ್ನು ತಿಳಿಸಿರಿ.**

ಉತ್ತರ : ಸರ್ಕಾರದ ಒಂದು ವರ್ಷದ ವರಮಾನ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಆಯ-ವ್ಯಯ ಪತ್ರ ಅಥವಾ ಮುಂಗಡ ಪತ್ರ ಎಂದು ಕರೆಯುತ್ತಾರೆ.

**ಆಯ-ವ್ಯಯದಲ್ಲಿ ಮೂರು ಪ್ರಕಾರಗಳನ್ನು ಕಾಣಬಹುದು.**

1. **ಉಳಿತಾಯ ಆಯ-ವ್ಯಯ** :- ಸರ್ಕಾರದ ವರಮಾನವು ಸರ್ಕಾರದ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಉಳಿತಾಯ ಆಯ-ವ್ಯಯ ಎನ್ನುತ್ತಾರೆ.
2. **ಸಮತೋಲನ ಆಯ-ವ್ಯಯ** :- ಸರ್ಕಾರದ ವರಮಾನ ಮತ್ತು ವೆಚ್ಚಗಳೆರಡು ಸಮವಾಗಿದ್ದರೆ ಅದನ್ನು ಸಮತೋಲನ ಆಯ-ವ್ಯಯ ಎನ್ನುತ್ತಾರೆ.
3. **ಕೊರತೆಯ ಆಯ-ವ್ಯಯ** :- ಸರ್ಕಾರದ ವರಮಾನವು ಸರ್ಕಾರದ ವೆಚ್ಚಕ್ಕಿಂತ ಕಡಿಮೆಯಿದ್ದರೆ ಅದನ್ನು ಕೊರತೆಯ ಆಯ-ವ್ಯಯ ಎನ್ನುತ್ತಾರೆ.

**2. ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳೇನು?**

**ಉತ್ತರ : ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳು**

- ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು.
- ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು.
- ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.
- ಸಮತುಲಿತ ಪ್ರಾದೇಶಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.
- ಸಾಮಾಜಿಕ – ಆರ್ಥಿಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು.
- ಸಂಪೂರ್ಣ ಉದ್ಯೋಗ ಸಾಧಿಸುವುದು.
- ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು.

**3. ಪ್ರಗತಿಪರ ತೆರಿಗೆ ನೀತಿ ಎಂದರೇನು?**

ಉತ್ತರ : ಸರ್ಕಾರವು ತೆರಿಗೆಗಳನ್ನು ವಿಧಿಸುವಾಗ ಹೆಚ್ಚು ವರಮಾನವುಳ್ಳವರ ಮೇಲೆ ಹೆಚ್ಚಿನ ತೆರಿಗೆಯನ್ನು, ಕಡಿಮೆ ವರಮಾನವುಳ್ಳವರ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತದೆ. ಬಡವರಿಗೆ ವರಮಾನ ತೆರಿಗೆಯಲ್ಲಿ ವಿನಾಯಿತಿ ನೀಡಿದೆ. ಅದೇ ರೀತಿಯಲ್ಲಿ ಶ್ರೀಮಂತರ ಬಳಸುವ ಸರಕು-ಸೇವೆಗಳ ಮೇಲೆ ಹೆಚ್ಚಿನ ತೆರಿಗೆಯನ್ನೂ ಮತ್ತು ಸಾಮಾನ್ಯ ಜನರು ಬಳಸುವ ಸರಕು-ಸೇವೆಗಳ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತದೆ. ಸರ್ಕಾರ ತೆರಿಗೆ ವಿಧಿಸುವಲ್ಲಿ ಅನುಸರಿಸುವ ಈ ನೀತಿಯನ್ನು ಪ್ರಗತಿಪರ ತೆರಿಗೆ ನೀತಿ ಎನ್ನುತ್ತಾರೆ.

**4. ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ. (ಏಪ್ರಿಲ್ 2015) (ಏಪ್ರಿಲ್ 2016)**

**ಉತ್ತರ : ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳು**

- ಭಾರತೀಯ ರಿಜರ್ವ ಬ್ಯಾಂಕ್ ಗಳಿಸುವ ನಿವ್ವಳ ಲಾಭ.
- ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ.
- ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ.
- ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ.
- ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ.
- ವಿವಿಧ ರೀತಿಯ ಶುಲ್ಕಗಳು, ದಂಡಗಳು ಇತ್ಯಾದಿ.

**5. ಭಾರತ ಸರ್ಕಾರ 2003ರಲ್ಲಿ ಕೋಶಿಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯ್ದೆ ಜಾರಿಗೆ ತಂದ ಉದ್ದೇಶವೇನು?**

**ಉತ್ತರ : ಭಾರತ ಸರ್ಕಾರ 2003ರಲ್ಲಿ ಕೋಶಿಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯ್ದೆ ಜಾರಿಗೆ ತಂದ ಉದ್ದೇಶ –**

- ಹಣಕಾಸಿನ ಶಿಸ್ತನ್ನು ಪಾಲಿಸುವುದು.
- ಕೊರತೆಯನ್ನು ಕಮ್ಮಿ ಮಾಡುವುದು.
- ಆರ್ಥಿಕ ನಿರ್ವಹಣೆಯನ್ನು ಉತ್ತಮಪಡಿಸುವುದು.
- ಸಾರ್ವಜನಿಕ ನಿಧಿಗಳ ಸೂಕ್ತ ನಿರ್ವಹಣೆಯ ಮೂಲಕ ಮುಂಗಡಪತ್ರದಲ್ಲಿ ಸಮತೋಲನ ಸಾಧಿಸುವ ಗುರಿ ಹೊಂದಿದೆ.

**6. ಜಿಎಸ್‌ಟಿಯ ಪ್ರಾಮುಖ್ಯತೆ ತಿಳಿಸಿ.**

**ಉತ್ತರ : ಜಿಎಸ್‌ಟಿಯ ಪ್ರಾಮುಖ್ಯತೆ.**

- ಜಿಎಸ್‌ಟಿಯನ್ನು ಸರಕು ಮತ್ತು ಸೇವಾ ತೆರಿಗೆ ಎಂದು ಕರೆಯುತ್ತೇವೆ.
- ಜಿಎಸ್‌ಟಿಯು ಬಹು ವಿಧ ತೆರಿಗೆ ಆಕರಣೆ ಹಾಗೂ ಅದರ ಪರಿಣಾಮಗಳನ್ನು ತಡೆಗಟ್ಟಿ, ದೇಶಾದ್ಯಂತ ಒಂದೇ ಸಾಮಾನ್ಯ ಮಾರುಕಟ್ಟೆ ಸ್ಥಾಪಿಸಲು ಸಹಾಯಕವಾಗಿದೆ.
- ತೆರಿಗೆಯ ಸರಳೀಕರಣದಿಂದಾಗಿ ಅದರ ಆಡಳಿತ ಹಾಗೂ ಜಾರಿ ಸುಲಭವಾಗುತ್ತದೆ.
- ಬಳಕೆದಾರರ ದೃಷ್ಟಿಯಿಂದ ನೋಡುವುದಾದರೆ ಅತ್ಯಂತ ಪ್ರಮುಖ ಪ್ರಯೋಜನವು ತೆರಿಗೆ ಹೊರೆಯ ಇಳಿಕೆಯಾಗುತ್ತದೆ.
- ಸರಕುಗಳು ಮುಕ್ತವಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಾಗಾಟವಾಗುತ್ತವೆ. ಮತ್ತು ದಾಖಲೀಕರಣದ ಹೊರೆ ಕಡಿಮೆಯಾಗುತ್ತದೆ.

**7. ಸಾರ್ವಜನಿಕ ವೆಚ್ಚದ ಹೇರಿಕೆಗೆ ಕಾರಣಗಳನ್ನು ತಿಳಿಸಿ.**

**ಉತ್ತರ : ಸಾರ್ವಜನಿಕ ವೆಚ್ಚದ ಹೇರಿಕೆಗೆ ಕಾರಣಗಳು –**

- ಸರ್ಕಾರವು ರಾಷ್ಟ್ರದ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಟಿಯಿಂದ ವಿವಿಧ ಚಟುವಟಿಕೆಗಳಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಇದನ್ನು ಸಾರ್ವಜನಿಕ ವೆಚ್ಚ ಎನ್ನುವರು.
- 20ನೇ ಶತಮಾನದಲ್ಲಿ ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಆಧುನಿಕ ಸರ್ಕಾರಗಳ ಕಾರ್ಯಕ್ಷೇತ್ರ ಮತ್ತು ಪಾತ್ರ ವಿಸ್ತರಣೆಯಾಗಿದ್ದರಿಂದ ಸಾರ್ವಜನಿಕ ವೆಚ್ಚ ಹೆಚ್ಚಾಗುತ್ತಿದೆ.
- ಸಾರ್ವಜನಿಕ ವೆಚ್ಚವು ಆರ್ಥಿಕ ಅಭಿವೃದ್ಧಿಯನ್ನು ಪೋಷಿಸುವ ಸೌಕರ್ಯಗಳನ್ನು ಸೃಷ್ಟಿಸಿ ಪೊರೆಯಬೇಕಾಗುತ್ತದೆ.
- ಬಂಡವಾಳ ಹೂಡಿಕೆಗೆ ಇರುವ ವಾತಾವರಣವನ್ನು ಸುಧಾರಿಸಬೇಕಾಗುತ್ತದೆ.
- ಉಳಿತಾಯ, ಹೂಡಿಕೆ ಮತ್ತು ಆವಿಷ್ಕಾರಗಳಿಗೆ ಉತ್ತೇಜನಗಳನ್ನು ಒದಗಿಸಬೇಕಾಗುತ್ತದೆ. ಈ ಕಾರಣಗಳಿಗಾಗಿ ಸಾರ್ವಜನಕ ವೆಚ್ಚ ಹೆಚ್ಚಾಗುತ್ತಿದೆ.

**8. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ಸಾರ್ವಜನಿಕ ಹಣಕಾಸಿನ ಮಹತ್ವ**

- ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು.
- ಸರ್ಕಾರವು ಸಾಮಾನ್ಯವಾಗಿ ತಾನು ಸಂಗ್ರಹಿಸಿದ ವರಮಾನವನ್ನು ಅಥವಾ ಪಡೆದ ಸಾಲದ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳ ಮೇಲೆ ವ್ಯಯಿಸುತ್ತದೆ.
- ಇದು ಬೆಳವಣಿಗೆಯ ದರವನ್ನು ವೃದ್ಧಿಸಿ ಎಲ್ಲರಿಗೂ ಪ್ರಯೋಜನ ದೊರಕಿಸುತ್ತದೆ.
- ಆರ್ಥಿಕ ಹಿಂಜರಿತದ ಸಂದರ್ಭಗಳಲ್ಲಿ ವೆಚ್ಚವನ್ನು ಹಿಗ್ಗಿಸಿ ಆರ್ಥಿಕ ಹಿಗ್ಗುವಿಕೆ ಸಂದರ್ಭಗಳಲ್ಲಿ ವೆಚ್ಚವನ್ನು ಕುಗ್ಗಿಸಿ, ಸರ್ಕಾರವು ಆರ್ಥಿಕ ಸ್ಥಿರತೆಯನ್ನು ಸಾಧಿಸುತ್ತದೆ.
- ಸರ್ಕಾರದ ವರಮಾನ, ವೆಚ್ಚ ಮತ್ತು ಅವುಗಳ ನಡುವಿನ ಹೊಂದಾಣಿಕೆಗಳು ವಾರ್ಷಿಕ ಆಯ-ವ್ಯಯ ಅಥವಾ ಮುಂಗಡ ಪತ್ರಗಳ ಭಾಗವಾಗಿರುವುದರಿಂದ, ಸಾರ್ವಜನಿಕ ಹಣಕಾಸಿನ ಅಧ್ಯಯನವು ಆಯ-ವ್ಯಯಗಳ ವಿಶ್ಲೇಷಣೆಗೂ ಸಹಾಯಾರಿಯಾಗುತ್ತದೆ.

## ವ್ಯವಹಾರ ಅಧ್ಯಯನ ಅಧ್ಯಾಯ 1. ಬ್ಯಾಂಕು ವ್ಯವಹಾರಗಳು

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. ಬ್ಯಾಂಕ್ ಎಂಬ ಪದವು ಇಟಾಲಿಯನ್ ಈ ಪದದಿಂದ ಬಂದಿದೆ. – **ಬ್ಯಾಂಕೋ**
2. ಬ್ಯಾಂಕ್ ಎಂಬ ಪದವು ಪ್ರೆಂಚ್‌ನ ಈ ಪದದಿಂದ ಬಂದಿದೆ. – **ಬ್ಯಾಂಕ್**
3. ಬ್ಯಾಂಕ ಪದದ ಅರ್ಥ – **ಬೆಂಚು ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್,**
4. ATM ಇದರ ವಿಸ್ತೃತ ರೂಪ : – **Automatic Teller Machine**
5. ಬ್ಯಾಂಕುಗಳ ಬ್ಯಾಂಕ್(ಬ್ಯಾಂಕುಗಳ ತಾಯಿ) – **ರಿಜರ್ವ ಬ್ಯಾಂಕ್**
6. ರಾಷ್ಟ್ರೀಕೃತ ಬ್ಯಾಂಕಿಗೆ ಉದಾಹರಣೆ – **ಭಾರತೀಯ ಸ್ಟೇಟ್ ಬ್ಯಾಂಕ್**
7. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಈ ಇಲಾಖೆಯು ನೀಡುತ್ತದೆ.– **ಭಾರತೀಯ ಅಂಚೆ ಇಲಾಖೆ**
8. ಜನರು ಹಣ ಉಳಿತಾಯ ಮಾಡಲು ಈ ಖಾತೆ ಸಹಾಯ ಮಾಡುತ್ತದೆ. – **ಉಳಿತಾಯ ಖಾತೆ**
9. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ – **ಚಾಲ್ತಿ ಖಾತೆ**
10. ಬ್ಯಾಂಕುಗಳು ಬಡ್ಡಿಯನ್ನು ನೀಡದಿರುವ ಖಾತೆ – **ಚಾಲ್ತಿ ಖಾತೆ**
11. ಬ್ಯಾಂಕುಗಳು ಈ ಖಾತೆಗೆ ಸೇವಾಶುಲ್ಕ ವಸೂಲು ಮಾಡುತ್ತವೆ. – **ಚಾಲ್ತಿ ಖಾತೆ**
12. ಬ್ಯಾಂಕುಗಳು ಈ ಖಾತೆಯ ಠೇವಣಿಗಳಿಗೆ ಬಡ್ಡಿ ಕೊಡುವುದಿಲ್ಲ. – **ಚಾಲ್ತಿ ಖಾತೆ**
13. ಸಾಮಾನ್ಯವಾಗಿ ವ್ಯಾಪಾರಸ್ಥರು, ಉದ್ಯಮಿಗಳು ಈ ಖಾತೆಯನ್ನು ತೆರೆಯುತ್ತಾರೆ. – **ಚಾಲ್ತಿ ಖಾತೆ**
14. ಯಾವ ಖಾತೆಗೆ ಬ್ಯಾಂಕುಗಳು ಓವರ್‌ಡ್ರಾಫ್ಟ್ ಸೌಲಭ್ಯವನ್ನು ನೀಡಿರುತ್ತವೆ.– **ಚಾಲ್ತಿ ಖಾತೆ**
15. ಭವಿಷ್ಯದ ಅವಶ್ಯಕತೆಗಳಿಗೆ ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡುವ ಖಾತೆ –**ಆವರ್ತ ಠೇವಣಿ ಖಾತೆ**
16. ಮದುವೆ, ಗೃಹ ನಿರ್ಮಾಣ, ಆಸ್ತಿ ಖರೀದಿ ಮೊದಲಾದ ಭವಿಷ್ಯದ ಅವಶ್ಯಕತೆಗಾಗಿ ಈ ಖಾತೆಯನ್ನು ತೆರೆಯಬಹುದು – **ಆವರ್ತ ಠೇವಣಿ ಖಾತೆ,**
17. ಯಾವ ಖಾತೆಯಲ್ಲಿ ಒಂದು ನಿಶ್ಚಿತ ಅವಧಿಗೆ ಠೇವಣಿಗಳನ್ನು ಇಡಲಾಗುತ್ತದೆ.– **ನಿಶ್ಚಿತ ಠೇವಣಿ ಖಾತೆ**
18. ಪ್ರತಿಯೊಬ್ಬರೂ ಬ್ಯಾಂಕ್ ಖಾತೆ ಹೊಂದಲು ಕೇಂದ್ರ ಸರಕಾರ ಜಾರಿಗೆ ತಂದ ಯೋಜನೆ – **ಜನಧನ ಯೋಜನೆ**

### ಪ್ರಶ್ನೆ 2] ದೀರ್ಘ ಉತ್ತರದ ಪ್ರಶ್ನೆಗಳು

**1. ಬ್ಯಾಂಕು ಎಂದರೇನು?**

**ಉತ್ತರ :** ಬ್ಯಾಂಕ್ ಎಂಬ ಪದವು ಹಣಕಾಸಿನ ವ್ಯವಹಾರಗಳಿಗೆ ಸಂಬಂಧಪಟ್ಟಿದೆ. ಇದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ. ಬ್ಯಾಂಕಿನಲ್ಲಿರುವ ಸೇವೆಗಳನ್ನು ಉಪಯೋಗಿಸಿಕೊಳ್ಳುವ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.

**2. ಬ್ಯಾಂಕ್ & ಗ್ರಾಹಕರ ಸಂಬಂಧವನ್ನು ತಿಳಿಸಿ.**

**ಉತ್ತರ :** ಬ್ಯಾಂಕ್ & ಗ್ರಾಹಕರಿಗೂ ಇರುವ ಸಂಬಂಧವನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು.

**1. ಸಾಮಾನ್ಯ ಸಂಬಂಧ –**

1. ಪ್ರಾಥಮಿಕ ಸಂಬಂಧ – ಸಾಲಿಗ & ಸಾಲಗಾರನ ಸಂಬಂಧ,
2. ಸಹಾಯಕ ಅಥವಾ ಉಪಕಾರ ಸಂಬಂಧ,
3. ಕಾರುಬಾರಿ ಅಥವಾ ನಿಯೋಗಿ & ಮುಖ್ಯಸ್ಥನ ಸಂಬಂಧ.

2. ವಿಶೇಷ ಸಂಬಂಧ –

ಚೆಕ್ಕುಗಳನ್ನು ಮನ್ನಣೆ ಮಾಡುವುದು. ಗ್ರಾಹಕರ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

**3. ಭಾರತೀಯ ಅಂಚೆ ಕಛೇರಿಯು ಯಾವ ರೀತಿ ಬ್ಯಾಂಕಿಂಗ್ ವ್ಯವಹಾರ ಮಾಡುತ್ತದೆ? ಅಥವಾ**

**ಅಂಚೆ ಇಲಾಖೆಯು ಕೈಗೊಂಡಿರುವ ಹಣಕಾಸಿನ ವ್ಯವಹಾರಗಳು ಯಾವುವು?**

**ಉತ್ತರ :** ಅಂಚೆ ಕಛೇರಿಯು ಬ್ಯಾಂಕಿಂಗ್ ವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉಳಿತಾಯ ಪತ್ರಗಳು, ಅಂಚೆ ಉಳಿತಾಯ ಖಾತೆಗಳು, ಕಿಸಾನ ವಿಕಾಸ ಪತ್ರಗಳು ಮಾಹೆಯಾನ ತೀರು ಠೇವಣಿಗಳು, ಅಂಚೆ ವಿಮೆ, ನಿವೃತ್ತಿ ವೇತನ & ಹಣವನ್ನು ವರ್ಗಾಯಿಸುವುದು ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಮಾಡುತ್ತದೆ.

**4. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆ ಗಳಾವವು?**

ಉತ್ತರ : ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು

1. ಉಳಿತಾಯ ಖಾತೆ 2. ಚಾಲ್ತಿ ಖಾತೆ 3. ಆವರ್ತ ಠೇವಣಿ ಖಾತೆ 4. ನಿಶ್ಚಿತ ಠೇವಣಿ ಖಾತೆ.

**5. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.**

**ಉತ್ತರ : ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣವೆಂದರೆ–**

- ಉಳಿತಾಯ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.
- ಸಾಮಾನ್ಯವಾಗಿ ವೇತನ ಪಡೆಯುವವರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು & ಪಿಂಚಣಿದಾರರು ಕೂಡ ಖಾತೆ ತೆರೆಯಲು ಅವಕಾಶವಿದೆ.
- ಇತ್ತೀಚಿನ ದಿನಗಳಲ್ಲಿ ಸರ್ಕಾರ ನೀಡುವ ಎಲ್ಲಾ ರೀತಿಯ ರಿಯಾಯತಿ, ಧನಸಹಾಯ & ವಿದ್ಯಾರ್ಥಿ ವೇತನ ಮುಂತಾದವು ನೇರವಾಗಿ ಸಿಗುವಂತೆ ಮಾಡಿರುವುದು.

➢ ಈ ಕಾರಣಗಳಿಂದ ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ.

**6. ಬ್ಯಾಂಕುಗಳ ಪ್ರಮುಖ ವಿಧಗಳಾವವು?**

**ಉತ್ತರ : ಬ್ಯಾಂಕಿನ ವಿಧಗಳೆಂದರೆ –**

➢ ಕೇಂದ್ರಬ್ಯಾಂಕು ಅಥವಾ ಭಾರತೀಯರಿಜರ್ವ ಬ್ಯಾಂಕು

➢ ವಾಣಿಜ್ಯ ಬ್ಯಾಂಕುಗಳು

➢ ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು

➢ ಸ್ಥಳೀಯ ಬ್ಯಾಂಕುಗಳು

➢ ಭೂ-ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು

➢ ಸಹಕಾರಿ ಬ್ಯಾಂಕುಗಳು

**7. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳನ್ನು ಪಟ್ಟಿಮಾಡಿ.**

**ಉತ್ತರ : ಬ್ಯಾಂಕುಗಳ ಗುಣಲಕ್ಷಣಗಳು**

➢ ಬ್ಯಾಂಕುಗಳು ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.

➢ ಬ್ಯಾಂಕ್ ಒಬ್ಬ ವ್ಯಕ್ತಿ, ಒಂದು ಸಂಸ್ಥೆ ಅಥವಾ ಒಂದು ಕಂಪನಿಯಾಗಿರಬಹುದು.

➢ ಇದು ಹಣಕಾಸಿವ ವ್ಯವಹಾರ ಮಾಡುವ ಸಂಸ್ಥೆ ಯಾಗಿದೆ.

➢ ಬ್ಯಾಂಕುಗಳು ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತವೆ.

➢ ಗ್ರಾಹಕರಿಗೆ ವಿವಿಧ ಉದ್ದೇಶಗಳಿಗಾಗಿ ಹಣವನ್ನು ಸಾಲರೂಪದಲ್ಲಿ ಕೊಡುತ್ತವೆ.

➢ ಬ್ಯಾಂಕು ಸೇವೆಯ ಮನೋಭಾವ ಹೊಂದಿದ್ದು ಲಾಭ ಪಡೆಯುವ ಒಂದು ಸಂಸ್ಥೆಯಾಗಿದೆ.

➢ ಬ್ಯಾಂಕುಗಳು ನಿರ್ಧಿಷ್ಟವಾದ ಹೆಸರಿನಿಂದ ವ್ಯವಹರಿಸು ತ್ತವೆ. ಉದಾ – ಸ್ಟೇಟ್ ಬ್ಯಾಂಕ್ ಆಫ್ ಮೈಸೂರು.

**8. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವವು?**

**ಉತ್ತರ : ಬ್ಯಾಂಕ್ ನಿರ್ವಹಿಸುವ ಕಾರ್ಯಗಳು.**

➢ ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿ ಗಳನ್ನು ಅಂಗೀಕರಿಸುವುದು.

➢ ಸಾರ್ವಜನಿಕರಿಗೆ & ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.

➢ ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.

➢ ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.

➢ ಸಾಲಪತ್ರಗಳನ್ನು & ಜವಬ್ದಾರಿ ಪತ್ರಗಳನ್ನು ಕೊಡುವುದು.

➢ ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.

➢ ವಿದೇಶಿ ವಿನಿಮಯ ವ್ಯವಹಾರಗಳನ್ನು ನಿರ್ವಹಿಸುವದು.

➢ ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿಗಳಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.

**9. ಬ್ಯಾಂಕು ಸಲ್ಲಿಸುವ ಸೇವೆಗಳಾವವು?**

**ಉತ್ತರ : ಬ್ಯಾಂಕು ಸಲ್ಲಿಸುವ ಸೇವೆಗಳು.**

➢ ಜಮಾ ಕಾರ್ಡು (ಅಡಿಜಜಬಣ ಛಿಚಿಡಿಜ)ಗಳನ್ನು ಕೊಡುವುದು.

➢ ಖಾಸಗಿ ಸಾಲಗಳನ್ನು ಕೊಡುವುದು.

➢ ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.

➢ ವ್ಯಾಪಾರಕ್ಕೆ ಬೇಕಾದ ಸಾಲಗಳನ್ನು ಕೊಡುವುದು.

➢ ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.

➢ ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.

➢ ಸಹಿಗಳಿಗೆ ಜವಬ್ದಾರಿ ಹಾಕುವುದು.

**10. ಭಾರತೀಯ ರಿಜರ್ವ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಎಂದು ಕರೆಯಲು ಕಾರಣಗಳೇನು?**

**ಉತ್ತರ :**

➢ ಭಾರತೀಯ ರಿಜರ್ವ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಅಥವಾ ಬ್ಯಾಂಕುಗಳ ತಾಯಿ ಎಂದು ಕರೆಯುತ್ತಾರೆ.

➢ ಭಾರತದಲ್ಲಿ ಬ್ಯಾಂಕುಗಳ ಎಲ್ಲಾ ಚಟುವಟಿಕೆಗಳು ರಿಜರ್ವ ಬ್ಯಾಂಕಿನ ಹತೋಟಿಯಲ್ಲಿರುತ್ತವೆ.

➢ ರಿಜರ್ವ ಬ್ಯಾಂಕು ದೇಶದ ಕೇಂದ್ರ ಬ್ಯಾಂಕಾಗಿದೆ.

➢ ಇದು ಹಣಕಾಸಿನ ಕಾರ್ಯ ನೀತಿಯನ್ನು ರೂಪಿಸುತ್ತದೆ.

➢ ಈ ಕಾರ್ಯ ನೀತಿಯನ್ನು ಎಲ್ಲಾ ಬ್ಯಾಂಕುಗಳು ಪಾಲಿಸಬೇಕಾಗುತ್ತದೆ.

➢ ರಿಜರ್ವ ಬ್ಯಾಂಕ್ ನೋಟುಗಳ ಚಲಾವಣೆಯ ಏಕಸ್ವಾಮ್ಯವನ್ನು ಹೊಂದಿದೆ.

➢ ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕನಂತೆ ಕಾರ್ಯ ನಿರ್ವಹಿಸುತ್ತದೆ.

➢ ಕೃಷಿಯ ಅಭಿವೃದ್ಧಿಗೆ ಪರೋಕ್ಷವಾಗಿ ಹಣಕಾಸಿನ ಸಹಾಯವನ್ನು ಒದಗಿಸುತ್ತದೆ.

**11. ಭಾರತದಲ್ಲಿರುವ ಅಂಚೆ ಬ್ಯಾಂಕಿನ ಬಗ್ಗೆ ವಿವರಿಸಿ.**

**ಅಥವಾ**

**ಭಾರತದ ಗ್ರಾಮೀಣ ಪ್ರದೇಶಗಳಿ ಅಂಚೆ ಬ್ಯಾಂಕಿಂಗ್ ವರವಾಗಿದೆ ಹೇಗೆ? ವಿವರಿಸಿ**

ಉತ್ತರ :

➢ ಭಾರತೀಯ ಅಂಚೆ ಇಲಾಖೆಯು ,ಭಾರತೀಯ ಅಂಚೆ ಬ್ಯಾಂಕ್'ನ ಜಾವನ್ನು ಅಂಚೆ ಕಛೇರಿಗಳೊಡನೆ ದೇಶದಾದ್ಯಂತ ಪ್ರಾರಂಭ ಮಾಡಲು ಯೋಜನೆಯನ್ನು ರೂಪಿಸಿದೆ.

➢ ಇವುಗಳಲ್ಲಿ ಶೇ90 ರಷ್ಟು ಗ್ರಾಮಾಂತರ ಮತ್ತು ಸಣ್ಣ ನಗರಗಳಲ್ಲಿ ಪ್ರಾರಂಭಿಸಲು ನಿರ್ಧರಿಸಿದೆ.

➢ ಅಂಚೆ ಇಲಾಖೆಯು ಈಗಾಗಲೇ ರಾಷ್ಟ್ರೀಯ ಉಳಿತಾಯ ಪತ್ರ, ಕಿಸಾನ್ ವಿಕಾಸ ಪತ್ರ, ಆವರ್ತ ಠೇವಣಿಗಳು, ಅಂಚೆ ವಿಮೆ, ನಿವೃತ್ತಿ ವೇತನ, ಹಣವನ್ನು ವರ್ಗಾಯಿಸುವುದು ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ.

➢ ಅಂಚೆ ಇಲಾಖೆಯು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಬ್ಯಾಂಕು ವ್ಯವಹಾರದಲ್ಲಿ ತೊಡಗಿಸಲು ಯೋಜನೆ ಹಾಕಿಕೊಂಡಿದೆ.

**12. ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಕ್ರಮಗಳನ್ನು ತಿಳಿಸಿ.**

**ಉತ್ತರ : ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಕ್ರಮಗಳು**

➢ ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು.

➢ ನಿಮಗೆ ಅನುಕೂಲವಾದ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು.

➢ ಪ್ರಸ್ತಾವನೆ ಅರ್ಜಿ-ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬುವುದು.

➢ ಪರಿಚಿತರ ಉಲ್ಲೇಖನವನ್ನು ಕೊಡುವುದು.

➢ ಬ್ಯಾಂಕ್ ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.

➢ ಬ್ಯಾಂಕು ಅಧಿಕಾರಿಯ ಒಪ್ಪಿಗೆ ಪಡೆಯುವುದು.

➢ ಬ್ಯಾಂಕ್ ಅಧಿಕಾರಿಯ ಒಪ್ಪಿಗೆಯ ನಂತರ ಪ್ರಾರಂಭಿಕ ಠೇವಣಿಯನ್ನು ತುಂಬುವುದು.

**13. ಉಳಿತಾಯ ಖಾತೆ & ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳೇನು?**

**ಉತ್ತರ : ಉಳಿತಾಯ ಖಾತೆ & ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳು**

**ಉಳಿತಾಯ ಖಾತೆ**

➢ ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ.

➢ ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.

➢ ಉಳಿತಾಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ.

➢ ಈ ಖಾತೆಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುತ್ತವೆ.

➢ ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ.

**ಚಾಲ್ತಿ ಖಾತೆ**

➢ ಚಾಲ್ತಿ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ.

➢ ಇಲ್ಲಿ ಠೇವಣಿಗಳ ಮೂಲಕ ಮತ್ತು ಬೇಡಿಕೆ ಠೇವಣಿಗಳ ಮೂಲಕ ಹಣವನ್ನು ಹಿಂಪಡೆಯಲ ಸಾಧ್ಯವಾಗುತ್ತದೆ.

➢ ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು. ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು.

➢ 4.ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ.

➢ ಬ್ಯಾಂಕುಗಳು ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತದೆ.

**14. ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳಾವವು? ಅಥವಾ**

**ಬ್ಯಾಂಕ್ ಖಾತೆ ಅನುಕೂಲಕರವಾದದ್ದು ಹೇಗೆ?**

**ಉತ್ತರ : ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳು.**

➢ ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.

➢ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
➢ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
➢ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ ಮಾಡಿಕೊಡುತ್ತದೆ.
➢ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.
➢ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.

## ಅಧ್ಯಾಯ 2.ಉದ್ಯಮಗಾರಿಕೆ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಉದ್ಯಮಿ ಎಂಬ ಪದವು ಫ್ರೆಂಚ್ ಭಾಷೆಯ ಈ ಪದದಿಂದ ಬಂದಿದೆ. – **ಎಂಟ್ರ ಪ್ರೆಂಡೆ**
2. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು **ಜಿಲ್ಲಾ ಕೈಗಾರಿಕಾ** ಕೇಂದ್ರಗಳನ್ನು ___ ರಲ್ಲಿ ಸ್ಥಾಪಿಸಲಾಯಿತು. – **ಕ್ರಿಶ 1978**
3. **ಅಪೋಲೋ** ಆಸ್ಪತ್ರೆಯ ರೂವಾರಿಗಳು – **ಡಾ. ಪ್ರತಾಪರೆಡ್ಡಿ**
4. **ಜೆಟ್** ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು– **ನರೇಶ್ ಗೋಯಲ್**
5. ಭಾರತದ ಅತಿದೊಡ್ಡ ಆಂತರಿಕ ವಾಯುಮಾರ್ಗ – **ಜೆಟ್ ವಾಯುಮಾರ್ಗ**
6. **1999** ರಲ್ಲಿ ಭಾರತದಲ್ಲಿ ಇನ್ಫೋಸಿಸ್ ತಂತ್ರಜ್ಞಾನ ನಿಗಮವನ್ನು ಸ್ಥಾಪಿಸಿದವರು – **ನಾರಾಯಣಮೂರ್ತಿಯವರು**
7. **NASDAQ** ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ – **ಇನ್ಫೋಸಿಸ್**
8. **ಬಿಳಿಕ್ರಾಂತಿಯ ಪಿತಾಮಹ** ಎಂದು ಕರೆಯಲ್ಪಡುವವರು–**ವರ್ಗೀಸ್ ಕುರಿಯನ್**
9. **ವರ್ಗೀಸ್ ಕುರಿಯನ್**ರವರು ಗುಜರಾತ್ ರಾಜ್ಯದ ಕೈರಾ ಜಿಲ್ಲೆಯಲ್ಲಿ ___ ಹೈನುಗಾರಿಕೆ ಕೇಂದ್ರವನ್ನು ಆರಂಭಿಸಿದರು. – **ಆನಂದ್ ಹೈನುಗಾರಿಕೆ**
10. ಧೀರೂಬಾಯಿ ಅಂಬಾನಿಯವರು ___ ಎಂಬಲ್ಲಿ ವಾರಾಂತ್ಯದ ಭಜನೆಗಳ ಪುಸ್ತಕಗಳೊಂದಿಗೆ ಉದ್ಯಮ ಪ್ರಾರಂಭಿಸಿದರು. – **ಮೌಂಟ್‌ಗಿರ್‌ನಾರ್**
11. ಧೀರೂಬಾಯಿ ಅಂಬಾನಿಯವರು ___ ಸಂಸ್ಥೆ ಪ್ರಪಂಚದಲ್ಲೇ ಮುಖ್ಯ ಉದ್ಯಮವಾಗಿದೆ.– **ರಿಲಯನ್ಸ್**
12. ಸಾಪ್ಟವೇರ್ ದಿಸೆಯಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಸಂಸ್ಥೆ – **ವಿಪ್ರೋ ತಂತ್ರಜ್ಞಾನ ಸಂಸ್ಥೆ**
13. **ವಿಪ್ರೋ** ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು – **ಅಜೀಮ್ ಪ್ರೇಮ್‌ಜಿ,**
14. ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರು – **ಏಕ್ತಾ ಕಪೂರ್,**
15. ಭಾರತದ ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ – **ಏಕ್ತಾಕಪೂರ್**
16. **2001** ರಲ್ಲಿ ಶ್ರೇಷ್ಠ ಉದ್ಯಮಿ ಪ್ರಶಸ್ತಿಯನ್ನು ______ ಗೆ ನೀಡಿ ಗೌರವಿಸಿದೆ. – **ಏಕ್ತಾಕಪೂರ್,**
17. **ಬಯೋಕಾನ್** ನಿಗಮದ ಅಧ್ಯಕ್ಷರು – **ಕಿರಣ್ ಮುಜುಮ್‌ದಾರ್ ಷಾ**
18. **ಕಿರಣ್ ಮುಜುಮ್‌ದಾರ್ ಷಾ**ರವರು ಜೀವ ವಿಜ್ಞಾನ ತಂತ್ರಜ್ಞಾನ ಸಂಸ್ಥೆ _____ ರಲ್ಲಿ ಪ್ರಾರಂಭಿಸಿದರು. – **ಕ್ರಿಶ 1978**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಉದ್ಯಮಿ ಎಂದರೇನು?**

ಉತ್ತರ : ಹೊಸ ಕಲ್ಪನೆ ಮತ್ತು ಆಡಳಿತ ನಿರ್ವಹಣೆಯ ಕೌಶಲ್ಯದಿಂದ ಉದ್ಯಮವನ್ನು ಯಶಸ್ವಿಯಾಗಿ ನಡೆಸುವವನನ್ನು ಉದ್ಯಮಿ ಎನ್ನುತ್ತೇವೆ.

**2. ಉದ್ಯಮಗಾರಿಕೆ ಎಂದರೇನು?**

ಉತ್ತರ : ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಗಾರಿಕೆ ಎನ್ನುತ್ತೇವೆ.

**3. ಬಿಳಿಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ? ಏಕೆ?**

ಉತ್ತರ : ವರ್ಗೀಸ್ ಕುರಿಯನ್‌ರವರನ್ನು ಬಿಳಿಕ್ರಾಂತಿಯ ಪಿತಾಮಹ ಎಂದು ಕರೆಯುತ್ತಾರೆ. ಏಕೆಂದರೆ ಲಕ್ಷಾಂತರ ಲೀಟರ್ ಹಾಲಿನ ಉತ್ಪಾದನೆಯ ಕಲ್ಪನೆಯೊಂದಿಗೆ ಹಾಲಿನ ಹೊಳೆ ಹರಿಸುವದರ ಮೂಲಕ ಬೇಸಾಯದ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?**

**ಉತ್ತರ : ಉದ್ಯಮಗಾರಿಕೆಯ ಗುಣಲಕ್ಷಣಗಳು –**

1. ಸೃಜನಾತ್ಮಕ, 2. ಕ್ರಿಯಾತ್ಮಕ,
3. ಗುಂಪು ಕಟ್ಟುವದು, 4. ಸಮಸ್ಯೆಯ ಪರಿಹಾರ,
5. ನಷ್ಟಭರಿತಕ್ಕೆ ಸಿದ್ಧ, 6. ವಚನಬದ್ಧತೆ,
7. ಹೊಸ ಪದ್ಧತಿಯನ್ನು ರೂಢಿಸಿತರುವುದು, 8. ನಾಯಕತ್ವ,
9. ಪ್ರಚೋದನೆಯ ಸಾಧನೆ,
10. ಗುರಿಮುಟ್ಟುವಿಕೆ,
11. ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.

**2. ಉದ್ಯಮಿಯ ಕಾರ್ಯಗಳು ಯಾವುವು?**

**ಉತ್ತರ : ಉದ್ಯಮಿಯ ಕಾರ್ಯಗಳು**

➢ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
➢ಉದ್ಯಮಿಯು ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
➢ಉದ್ಯಮಗಾರನು ಉತ್ಪಾದಿಸಿದ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
➢ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
➢ಉದ್ಯಮಿಯು ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
➢ಉದ್ಯಮಿಯು ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತದೆ.
➢ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ ಅದು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ.

**3. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ?**

**ಉತ್ತರ : ಉದ್ಯಮಗಾರಿಕೆಯು ಒಂದು ಸಾಹಸ ಕಾರ್ಯವಾಗಿದೆ. ಹೇಗೆಂದರೆ**

➢ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ.
➢ಇದು ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸೃಜನಾತ್ಮಕ ಚಟುವಟಿಕೆಯಾಗಿದೆ.
➢ಇದು ಬೇರೆಯವರಿಂದ ಕಷ್ಟಸಾಧ್ಯವಾದ ಗೊಂದಲಮಯ, ವಿರೋಧಾತ್ಮಕ ಮತ್ತು ಅಸ್ತವ್ಯಸ್ತತೆಯಿಂದ ಕೂಡಿದ ಒಂದು ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ.
➢ಉದ್ಯಮಗಾರಿಕೆಯು ಅವಕಾಶಗಳನ್ನು ಅನ್ವೇಷಿಸಿ ಅಥವಾ ಹುಡುಕಿ, ನಷ್ಟಗಳನ್ನು ಲೆಕ್ಕಾಚಾರ ಹಾಕಿ ಅದರಿಂದ ಲಾಭಪಡೆಯಲು ಒಂದು ಸಾಹಸ ಕಾರ್ಯವನ್ನು ಸ್ಥಾಪಿಸುವದೇ ಆಗಿದೆ.

**4. ಉದ್ದಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ. ಅಥವಾ**
**ದೇಶದ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವೇನು? ತಿಳಿಸಿ.**

**ಉತ್ತರ : ಉದ್ದಿಮೆಯ ಪ್ರಾಮುಖ್ಯತೆ ಅಥವಾ**
**ದೇಶದ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರ.**

➢ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯ ಗಳನ್ನು ಬಂಡವಾಳ ರೂಪದಲ್ಲಿ ಉಪಯೋಗಿಸುತ್ತಾರೆ.
➢ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ & ಕಸುಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.
➢ಉದ್ಯಮಿಗಳು ಒಂದು ದೇಶದ ನಿವ್ವಳದೇಶಿಯ ಉತ್ಪನ್ನ ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
➢ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ, ಅವರ ಜೀವನಮಟ್ಟವನ್ನು ಉತ್ತಮಗೊಳಿಸಲು ಶ್ರಮಿಸುತ್ತಾರೆ.
➢ಉದ್ಯಮಿಗಳು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುತ್ತಾರೆ.
➢ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

**5. ಸ್ವ ಉದ್ಯೋಗ ಸ್ಥಾಪಿಸಲು ವ್ಯಕ್ತಿಯು ಆಯ್ದುಕೊಳ್ಳಬಹುದಾದ ಸಂಸ್ಥೆಗಳು ಯಾವುವು? ಅಥವಾ**
**ಯಾರೇ ಒಬ್ಬ ಮನುಷ್ಯನಾಗಲಿ ಸ್ವ–ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಸಲಹೆ ಸೌಕರ್ಯಗಳಿಗೆಆರಿಸಿಕೊಳ್ಳಬೇಕಾದ ಸಂಸ್ಥೆಗಳು ಯಾವುವು?**

**ಉತ್ತರ : ಸ್ವ ಉದ್ಯೋಗ ಸ್ಥಾಪಿಸಲು ವ್ಯಕ್ತಿಯು ಆಯ್ದು ಕೊಳ್ಳಬಹುದಾದ ಸಂಸ್ಥೆಗಳು.**

➢ಜಾಹಿರಾತು ಸೇವಾ ಸಂಸ್ಥೆಗಳು,
➢ಛಾಯಾಪ್ರತಿ ತೆಗೆಯುವ ಕೇಂದ್ರಗಳು,
➢ಮಾರುಕಟ್ಟೆ ಸಲಹಾ ಸಂಸ್ಥೆ,
➢ಅಂತರ್ಜಾಲ * ಸಂಹವನ ಅಂಗಡಿಗಳು
➢ಕೈಗಾರಿಕಾ ಸಲಹಾ ಸಂಸ್ಥೆ,
➢ಕ್ರೆಜ್ ಮತ್ತು ಬ್ಯೂಟಿ ಪಾರ್ಲರ್‌ಗಳು
➢ವಸ್ತುಗಳನ್ನು ಬಾಡಿಗೆಗೆ & ಗುತ್ತಿಗೆಗೆ ನೀಡುವ ಸಂಸ್ಥೆಗಳು,
➢ಕೈಗಾರಿಕಾ ಸಂಶೋಧನೆ & ಅಭಿವೃದ್ಧಿ ಪ್ರಯೋಗಾಲಯಗಳು
➢ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು

- ದೂರದರ್ಶನ ಜಾಲ ಬಂದದ ಸೇವಾಕ್ಷೇತ್ರಗಳು

**6. ಸ್ವ ಉದ್ಯೋಗದ ಯೋಜನೆಗೆ ಸಾಲ ಕೊಡುವ ಸಂಸ್ಥೆಗಳು ಯಾವುವು?**

**ಉತ್ತರ : ಸ್ವ ಉದ್ಯೋಗದ ಯೋಜನೆಗೆ ಸಾಲ ಕೊಡುವ ಸಂಸ್ಥೆಗಳು.**

- ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
- ಆಮದು ಮತ್ತು ರಫ್ತು ಬ್ಯಾಂಕು
- ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕ್
- ಭಾರತೀಯ ಕೈಗಾರಿಕಾ ಹಣಕಾಸು ಬ್ಯಾಂಕು
- ಭಾರತೀಯ ವಾಣಿಜ್ಯ & ಇತರೆ ಬ್ಯಾಂಕುಗಳು
- ರಾಜ್ಯ ಹಣಕಾಸು ನಿಗಮ
- ಭಾರತೀಯ ಜೀವವಿಮಾ ನಿಗಮ
- ಯುನಿಟ್ ಟ್ರಸ್ಟ್ ಆಫ್ ಇಂಡಿಯಾ

**7. ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳು ಯಾವುವು?**

**ಉತ್ತರ : ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳು.**

- ಜಿಲ್ಲಾ ಕೈಗಾರಿಕೆ ಕೇಂದ್ರಗಳು
- ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
- ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
- ಸಣ್ಣ ಪ್ರಮಾಣದ ಕೈಗಾರಿಕೆ ಸಂಸ್ಥೆ
- ಖಾದಿ & ಗ್ರಾಮೋದ್ಯೋಗ ಮಂಡಳಿ
- ತಾಂತ್ರಿಕ ಸಲಹಾ ಸಂಸ್ಥೆಗಳು

**ಟಿಪ್ಪಣಿ ಬರೆಯಿರಿ.**

**1. ಡಾ. ಪ್ರತಾಪರಡ್ಡಿ**

- ಇವರು ಭಾರತದಲ್ಲಿ ಆರೋಗ್ಯಕ್ಷೇತ್ರದಲ್ಲಿ ವೈದ್ಯಶಾಲೆ ಗಳ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಿದವರಲ್ಲಿ ಮೊದಲಿಗರಾಗಿದ್ದಾರೆ.
- ಇವರು ಹುಟ್ಟುಹಾಕಿದ "ಅಪೋಲೋ" ವೈದ್ಯಶಾಲೆ ಗಳ ಗುಂಪು ಸುಮಾರು 750 ಆಧುನಿಕ ರೀತಿಯ ದವಖಾನೆಗಳನ್ನು ಹೊಂದಿವೆ.
- ಇವರ ವೈದ್ಯಕೀಯ ಕ್ಷೇತ್ರದ ಸಾಧನೆ ಭಾರತದ ಸಾಮಾನ್ಯ ಜನರಿಗೂ ದೊರಕುವಂತಹುದೇ ಆಗಿದೆ.

**2. ನರೇಶ್ ಗೋಯಲ್**

- ಇವರು ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು & ಅದರ ಅಧ್ಯಕ್ಷರಾಗಿದ್ದಾರೆ.
- ಈ ವಾಯುಮಾರ್ಗವು ಭಾರತದ ಅತಿದೊಡ್ಡ ಆಂತರಿಕ ವಾಯುಮಾರ್ಗವಾಗಿದೆ.
- ಗೋಯಲ್‌ರವರು ಭಾರತ ಸರ್ಕಾರದ 1917 ರ ತೆರೆದ ಅಂತರಿಕ್ಷ ನೀತಿಯ ಸದವಕಾಶಗಳನ್ನು ಉಪಯೋಗಿಸಿಕೊಂಡು ಜೆಟ್ ವಾಯುಮಾರ್ಗವನ್ನು ಆಂತರಿಕ ಸಂಚಾರಕ್ಕಾಗಿ ಭಾರತದಲ್ಲಿ ನಿಶ್ಚಿತ ವೇಳೆಗಳಲ್ಲಿ ಓಡಾಡಲು ಪ್ರಾರಂಭಿಸಿದರು.

**3. ನಾರಾಯಣ ಮೂರ್ತಿ**

- ಇವರು 1999ರಲ್ಲಿ ಭಾರತದಲ್ಲಿ ಇನ್‌ಫೋಸಿಸ್ ತಂತ್ರಜ್ಞಾನ ನಿಗಮವನ್ನು ಪ್ರಾರಂಭಿಸಿದವರಲ್ಲಿ ಒಬ್ಬರಾಗಿದ್ದಾರೆ.
- NASDAQ ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನದ ಸಂಸ್ಥೆಯು ಇನ್‌ಫೋಸಿಸ್ ಆಗಿದೆ.
- 2006ರ ವೇಳೆಗೆ ಈ ಸಂಸ್ಥೆಯು 50000ಕ್ಕೂ ಮಿಗಿಲಾದ ಕೆಲಸಗಾರರನ್ನು ನೇಮಿಸಿಕೊಂಡು ಎರಡು ಬಿಲಿಯನ್ ಡಾಲರ್‌ಗಳಿಗಿಂತ ಮಿಗಿಲಾದ ವ್ಯಾಪಾರ ವಹಿವಾಟನ್ನು ನಡೆಸುತ್ತಿದೆ.
- ಮೂರ್ತಿಯವರ ಪ್ರಮಾಣಿಕತೆ, ಸತ್ಯಸಂದತೆ, ನೀತಿಪೂರ್ಣ ಸಮಗ್ರತೆಯಂತಹ ಅಂಶಗಳು ಅವರ ವಹಿವಾಟುಗಳ ಸಮಗ್ರ ಯಶಸ್ಸಿಗೆ ಕಾರಣಗಳಾಗಿವೆ.

**4. ವರ್ಗಿಸ್ ಕುರಿಯನ್**

- ಇವರನ್ನು ಬಿಳಿ ಕ್ರಾಂತಿಯ ಪಿತಾಮಹ ಎಂದು ಕರೆಯುತ್ತಾರೆ.
- ಅಮುಲ್ ಹಾಲು & ಹಾಲಿನ ಉತ್ಪನ್ನಗಳ ತಯಾರಿಕೆ ಇವರ ಸಾಧನೆಯಾಗಿದೆ.
- ಇವರು ದೇಶದಲ್ಲಿಯೇ ಅತ್ಯಂತ ದೊಡ್ಡದಾಗಿ ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.

**5. ಏಕ್ತಾ ಕಪೂರ್**

- ಭಾರತದ ದೂರದರ್ಶನ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ"ಯೆಂದೆ ಹೆಸರು ಮಾಡಿದ್ದಾರೆ.
- ಇವರು ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರಾಗಿದ್ದು 2001ರಲ್ಲಿ ಇವರಿಗೆ ವರ್ಷದ ಶ್ರೇಷ್ಠ ಉದ್ಯಮಿಯ ಪ್ರಶಸ್ತಿಯನ್ನು ಸಂಸ್ಥೆ ನೀಡಿ ಗೌರವಿಸಿದೆ.
- ಇವರು ತಮ್ಮ 19ನೇ ವರ್ಷಕ್ಕೆ ದೂರದರ್ಶನ ಅನುಕ್ರಮ ಪ್ರಸಾರದ ರೂವಾರಿಯಾದರು.

**6. ಕಿರಣ್ ಮುಜುಮ್‌ದಾರ್ ಷಾ**

- ಇವರು ಬಯೋಕಾನ್ ನಿಗಮದ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರಾಗಿದ್ದಾರೆ.
- ಈ ನಿಗಮವು ಭಾರತದಲ್ಲಿ ಜೀವವಿಜ್ಞಾನ ತಂತ್ರಜ್ಞಾನದ ಅತಿ ದೊಡ್ಡ ಸಂಸ್ಥೆಯಾಗಿದ್ದು 1978ರಲ್ಲಿ ಒಂದು ಸಣ್ಣ ಬಾಡಿಗೆಯ ಮೋಟಾರು ನಿಲ್ಲಿಸುವ ಜಾಗದಲ್ಲಿ ಪ್ರಾರಂಭವಾಯಿತು.
- ಪ್ರಾರಂಭದಲ್ಲಿ ಇವರು ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೆ ಎಲ್ಲವನ್ನೂ ಎದುರಿಸಿ ಜೀವವಿಜ್ಞಾನ ತಂತ್ರಜ್ಞಾನವು ಯಶಸ್ಸನ್ನು ಪಡೆಯಲು ಸಾದ್ಯಪಡಿಸಿದರು.

## ಅಧ್ಯಾಯ 3 ವ್ಯವಹಾರದ ಜಾಗತೀಕರಣ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಜಾಗತೀಕರಣವು ತೀವ್ರ ಪ್ರಗತಿ ಸಾಧಿಸಿದ್ದು ಕ್ರಿಶ ____ ರಲ್ಲಿ. – **1980**

2. ಜಾಗತೀಕರಣದ ತೀವ್ರ ಪ್ರಗತಿ ______ ರಾಷ್ಟ್ರಗಳ ಆರ್ಥಿಕ ಸುಧಾರಣೆಗಳಲ್ಲಿ ಬೆಳಕು ತಂದಿತು – **ಅಭಿವೃದ್ಧಿ ಶೀಲ ರಾಷ್ಟ್ರಗಳ**

3. ಜಾಗತೀಕರಣದಿಂದ ಈ ಸಂಸ್ಥೆಗಳ ಪಾತ್ರ ಹೆಚ್ಚಾಗಿದೆ – **ಐ.ಎಂ.ಎಫ್ ಮತ್ತು ಡಬ್ಲ್ಯುಟಿ.ಓ**

4. ವಿಶ್ವ ವ್ಯಾಪಾರ ಸಂಘಟನೆಯಲ್ಲಿ __ ಸದಸ್ಯ ರಾಷ್ಟ್ರಗಳಿವೆ – **149**

5. ಜಾಗತೀಕರಣ ಮುಕ್ತ ವ್ಯಾಪಾರ ವಲಯ ಸೃಷ್ಟಿಸುವುದು ಹೇಗೆಂದರೆ – **ಆಮದು ಮತ್ತು ರಫ್ತು ಸುಂಕಗಳನ್ನು ನಿರ್ಮೂಲನ ಮಾಡುವುದರ ಮೂಲಕ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಜಾಗತೀಕರಣ ಎಂದರೇನು?**

ಉತ್ತರ : ಭಾರತದಅರ್ಥವ್ಯವಸ್ಥೆಯನ್ನು ವಿಶ್ವದ ಅರ್ಥವ್ಯವಸ್ಥೆಯೊಂದಿಗೆ ಒಗ್ಗೂಡಿಸುವ ಪ್ರಕ್ರಿಯೆಯನ್ನು ಜಾಗತೀಕರಣ ಎನ್ನುತ್ತೇವೆ.

2. ಅಂತರರಾಷ್ಟ್ರೀಯ ಹಣಕಾಸು ನಿಧಿಯು (IMF) ಜಾಗತೀರಣವನ್ನು ಹೇಗೆ ವ್ಯಾಖಾನಿಸಿದೆ?

ಉತ್ತರ : ಅಂತರರಾಷ್ಟ್ರೀಯ ಹಣಕಾಸು ನಿಧಿಯು (IMF) ಜಾಗತೀಕರಣವನ್ನು " ಸರಕು ಮತ್ತು ಸೇವೆಗಳು ಹಾಗೂ ಅಂತರರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ ಮತ್ತು ವ್ಯಾಪಕವಾದ ತಾಂತ್ರಿಕತೆಯ ಪ್ರಸರಣಗಳ ಮೂಲಕ ವಿಶ್ವದಾದ್ಯಂತ ಹೆಚ್ಚಿನ ಪ್ರಮಾಣದ ವೈವಿದ್ಯತೆಯ ಗಡಿಯಾಚೆಗಿನ ವ್ಯವಹಾರಗಳಿಂದಾಗಿ ಹೆಚ್ಚುತ್ತಿರುವ ದೇಶಗಳ ಅಂತರ ಸ್ವಾವಲಂಬನೆ" ಎಂದು ವ್ಯಾಖ್ಯಾನಿಸಿದೆ.

**3. WTO ಇದನ್ನು ವಿಸ್ತರಿಸಿ.**

ಉತ್ತರ : **WTO** ಇದರ ವಿಸ್ತೃತ ರೂಪ – World Trade Organisation(ವಿಶ್ವ ವ್ಯಾಪಾರ ಸಂಘಟನೆ).

**4. ವಿಶ್ವ ವ್ಯಾಪಾರ ಸಂಘಟನೆ ಯಾವಾಗ ಅಸ್ಥಿತ್ವಕ್ಕೆ ಬಂದಿತು? ಇದರ ಕೇಂದ್ರ ಕಛೇರಿ ಎಲ್ಲಿದೆ?**

ಉತ್ತರ : ವಿಶ್ವ ವ್ಯಾಪಾರ ಸಂಘಟನೆಯು 1995 ರ ಜನವರಿ 1 ರಂದು ಅಸ್ಥಿತ್ವಕ್ಕೆ ಬಂದಿತು. ಇದರ ಕೇಂದ್ರ ಕಛೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಜಾಗತೀಕರಣ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಗುಲಾಮಗಿರಿ ಮತ್ತು ಬಾಲ ಕಾರ್ಮಿಕ ಪದ್ಧತಿಗೆ ಕಾರಣವಾಗಬಹುದು. ಹೇಗೆ? ವಿವರಿಸಿ.**

**ಉತ್ತರ :**

- ವೆಚ್ಚವನ್ನು ಕಡಿಮೆ ಮಾಡುವ ದಿಸೆಯಲ್ಲಿ ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಉತ್ಪಾದನೆಯಲ್ಲಿ ಹೊರಮೂಲಗಳಿಂದ ರೂಢಿಗೆ ತಂದು ನೌಕರಶಾಹಿ ಕೆಲಸವನ್ನು ಉತ್ತೇಜಿಸುತ್ತದೆ.
- ಇದರಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗುಲಾಮಿತನ ಹಾಗೂ ಬಾಲಕಾರ್ಮಿಕ ಪದ್ಧತಿಗಳು ಉಂಟಾಗುವ ಸಾಧ್ಯತೆಗಳಿವೆ.

**2. ಜಾಗತೀಕರಣ ಸಾಂಪ್ರದಾಯಿಕ ಆಹಾರ ಸೇವನೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ. ವಿವರಿಸಿ**

**ಉತ್ತರ :**

- ಜಾಗತೀಕರಣದಿಂದ ಶೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡುತ್ತವೆ. ಉದಾ:-ಎ.ಈ.ಅ. ಒಭಿಜಂಟಿಚಿಟಜ.
- ಇದರಿಂದ ಪ್ರಯೋಜಕಾರಿಯಲ್ಲದ ಆಹಾರ ಸೇವನೆ ಜಾಸ್ತಿಯಾಗಿ ಜನರ ಆರೋಗ್ಯ ಅವನತಿಯ ಕಡೆಗೆ ಸಾಗುತ್ತದೆ.
- ಅಲ್ಲದೆ ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವ

**3. ಜಾಗತೀಕರಣದಿಂದ ಅಭಿವೃದ್ಧಿ ಶೀಲ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯವನ್ನೇ ನಾಶಮಾಡಬಹುದು. ಈಹೇಳಿಕೆಯನ್ನು ವಿಮರ್ಶಿಸಿ**

**ಉತ್ತರ :**

- ಜಾಗತೀಕರಣದ ಪೈಪೋಟಿಯ ಪರಿಣಾಮವಾಗಿ ಅಭಿವೃದ್ಧಿ ಶೀಲ ರಾಷ್ಟ್ರಗಳ ಹೊಸ ಕೈಗಾರಿಕೆಗಳ ಸ್ಥಾಪನೆ ಸಾಧ್ಯವಾಗುವುದಿಲ್ಲ.
- ಅಲ್ಲದೆ ಈ ರಾಷ್ಟ್ರಗಳಿಗೆ ಮುಂದುವರೆದ ರಾಷ್ಟ್ರಗಳಿಂದ ಅಧಿಕ ಪ್ರಮಾಣದಲ್ಲಿ ಸರಕುಗಳು ಬರುತ್ತವೆ.
- ಇದರ ಪರಿಣಾಮವಾಗಿ ಸ್ಥಳೀಯ ವಸ್ತುಗಳ ಬೇಡಿಕೆ ಕಡಿಮೆಯಾಗಿ ಕ್ರಮೇಣ ಅಭಿವೃದ್ಧಿ ಶೀಲ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯವೇ ನಾಶವಾಗುತ್ತದೆ.

**4. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಾಯಕವಾಗಿದೆ? ಅಥವಾ**

**ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳಾವವು?**

**ಉತ್ತರ : ಈ ಕೆಳಗಿನ ಅಂಶಗಳಿಂದ ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಸಹಾಯಕವಾದದ್ದನ್ನು ತಿಳಿಯಬಹುದು.**

- ರಾಜಕೀಯ ಅರಿಕೆಗಳಿಂದ ಗಡಿಭಾಗಗಳ ಸಂಬಂಧಗಳ ಮೂಲಕ ಅಂತರಾಷ್ಟ್ರೀಯ ಬಂಡವಾಳ & ವ್ಯಾಪಾರವನ್ನು ಪ್ರೋತ್ಸಾಹಿಸುವದು.
- ಆಮದು & ರಪ್ತುಗಳ ಸುಂಕಗಳನ್ನು ನಿರ್ಮೂಲನ ಮಾಡಿ ಮುಕ್ತ ವಲಯಗಳನ್ನು ಸೃಷ್ಟಿಸುವದು.
- ಬಂಡವಾಳ ಹತೋಟಿಯನ್ನು ಕಡಿಮೆಮಾಡುವದು. ಅಥವಾ ನಿರ್ಮೂಲನ ಮಾಡುವದು.
- ಸಾರಿಗೆ ವೆಚ್ಚವನ್ನು ಸಮುದ್ರಯಾನದಲ್ಲಿ ಕಂಟೈನರ್ ಸೇವೆಗೆ ಅಳವಡಿಕೆಯಿಂದ ಕಡಿಮೆ ಮಾಡುವದು.
- 5.ವಿಶ್ವವ್ಯಾಪಿ ಸಂಸ್ಥೆಗಳಿಗೆ ಪ್ರೋತ್ಸಾಹ ದನ ಸೃಷ್ಟಿಸುವುದು.

**5. ಜಾಗತೀಕರಣದಲ್ಲಿ ಗುರುತಿಸಬಹುದಾದ ಲಕ್ಷಣಗಳನ್ನು ಪಟ್ಟಿಮಾಡಿ.**

**ಉತ್ತರ : ಜಾಗತೀಕರಣದ ಮುಖ್ಯ ಲಕ್ಷಣಗಳು**

- ಜಾಗತೀಕರಣವು ವಿಶ್ವದ ಆರ್ಥಿಕತೆಯ ಏಳಿಗೆಗಿಂತ ತೀವ್ರವಾದ ಅಂತರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
- ಅಂತರಾಷ್ಟ್ರೀಯ ಬಂಡವಾಳವನ್ನು ವೃದ್ಧಿಸಿ ಬಂಡವಾಳದ ಹರಿವನ್ನು ಮತ್ತು ಬಂಡವಾಳದ ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ.
- ವಿಶ್ವ ಹಣಕಾಸಿನ ನೀತಿಯನ್ನು ಅಭಿವೃದ್ಧಿಪಡಿಸುತ್ತದೆ.
- ಅಂತರಾಷ್ಟ್ರೀಯ ಸಂಸ್ಥೆಗಳಾದ ವಿಶ್ವವ್ಯಾಪಾರ ಸಂಘಟನೆ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಗಳ ಪಾತ್ರ ಹಚ್ಚಿಸುತ್ತದೆ.
- ಅಂತರಾಷ್ಟ್ರೀಯ ಸಂಚಾರ & ಪರ್ಯಟನೆಗಳಿಗೆ ಅವಕಾಶಗಳನ್ನು ಒದಗಿಸುತ್ತದೆ.
- ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ.

**6. ಜಾಗತೀಕರಣದಿಂದಾಗುವ ಅನುಕೂಲಗಳಾವುವು?**

**ಉತ್ತರ : ಜಾಗತೀಕರಣದಿಂದಾಗುವ ಅನುಕೂಲಗಳು**

**( ಸಕಾರಾತ್ಮಕ ಪರಿಣಾಮಗಳು )**

- ಜಾಗತೀಕರಣವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ, ಹೆಚ್ಚಿನ ಸರಕು & ಸೇವೆಗಳು ಉತ್ಪಾದನೆ ಯಾಗಲು ಸಹಾಯ ಮಾಡುತ್ತದೆ.
- ಜಾಗತೀಕರಣದಿಂದ ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಾಧ್ಯವಾಗುತ್ತದೆ.
- ಜಾಗತೀಕರಣವು ದೇಶದ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ.
- ಜಾಗತೀಕರಣವು ಒಂದು ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.
- ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆ ಇರುತ್ತವೆ.
- ಬೇರೆ ಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುವದರಿಂದ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡುಬರುತ್ತದೆ.

**7. ಜಾಗತೀಕರಣದಿಂದ ಉಂಟಾಗುವ ನಕರಾತ್ಮಕ ಪರಿಣಾಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ. ಅಥವಾ**

**ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ ಹೇಗೆ?**

**ಉತ್ತರ : ಜಾಗತೀಕರಣದ ನಕಾರಾತ್ಮಕ ಪರಿಣಾಮಗಳು**

- ಜಾಗತೀಕರಣದಿಂದ ವಿಶ್ವಮಾರುಕಟ್ಟೆಯಲ್ಲಿ ತೀವ್ರವಾದ ಪೈಪೋಟಿ ಉಂಟಾಗಿ ಅನೇಕ ನೀತಿಬಾಹಿರ ಪದ್ಧತಿಗಳು ವ್ಯವಹಾರ ವಹಿವಾಟುಗಳಲ್ಲಿ ರೂಢಿಗೆ ಬರುವ ಸಾಧ್ಯತೆ ಇದೆ.
- ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುವ ಸಾಧ್ಯತೆ ಉಂಟಾಗಿದೆ.
- ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಒಂದು ಊಟಕ್ಕೂ ಶ್ರಮಪಡಬೇಕಾಗುತ್ತದೆ.
- ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ.
- ಅಗ್ಗದ ವಸ್ತುಗಳ ಆಮದಿನಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಉತ್ಪಾದನೆಯು ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ.
- ಶೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡಿ ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.

**8. ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳು ಯಾವುವು?**

ಉತ್ತರ : **ವಿಶ್ವ ವ್ಯಾಪಾರ ಸಂಘಟನೆಯ ಇತರ ಗುರಿಗಳು**

- ಜೀವನ ವೆಚ್ಚವನ್ನು ಕಡಿಮೆಮಾಡಿ ಸದಸ್ಯ ರಾಷ್ಟ್ರಗಳ ಜನರ ಜೀವನಮಟ್ಟ ಹೆಚ್ಚಿಸುವುದು.
- ಸದಸ್ಯ ರಾಷ್ಟ್ರಗಳ ನಡುವೆ ಉದ್ಭವಿಸುವ ವ್ಯಾಪಾರ ವ್ಯಾಜ್ಯಗಳನ್ನು ಬಗೆಹರಿಸುವುದು.
- ಸದಸ್ಯ ರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಹೆಚ್ಚು ಉದ್ಯೋಗವಕಾಶಗಳನ್ನು ಕಲ್ಪಿಸುವುದು.
- ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವೆಚ್ಚಗಳನ್ನು ಕಡಿಮೆ ಮಾಡುವುದು.
- ಸದಸ್ಯ ರಾಷ್ಟ್ರಗಳಲ್ಲಿ ಉತ್ತಮ ಸರ್ಕಾರ ರಚಿಸಲು ಸಹಾಯ ಮಾಡುವುದು.
- ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ, ಸ್ಥಿರತೆ ಅಥವಾ ದೃಡತೆ ಕಾಪಾಡಲು ಸಹಕರಿಸುವುದು.

**9. ವಿಶ್ವವ್ಯಾಪಾರ ಸಂಘಟನೆಗಳ ಉದ್ದೇಶಗಳು ಯಾವುವು?**

ಉತ್ತರ : **ವಿಶ್ವವ್ಯಾಪಾರ ಸಂಘಟನೆಗಳ ಉದ್ದೇಶಗಳು**

- ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವದು.
- ಬಹುಪಕ್ಷೀಯ ವ್ಯಾಪಾರ ವ್ಯವಹಾರಗಳ ನಡುವೆ ಮಧ್ಯವರ್ತಿಯಾಗಿ ಕೆಲಸಮಾಡುವದು.
- ವಿಶ್ವದಾದ್ಯಂತ ಮುಕ್ತ ಹಾಗೂ ಸ್ವತಂತ್ರ ಅಂತರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವದು.
- ವಿವಿಧ ದೇಶಗಳ ನಡುವೆ ಉದ್ಭವಿಸುವ ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬರೆಹರಿಸುವದು.
- ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಯನ್ನು ಕಡಿಮೆ ಮಾಡುವದು.
- ಅಂತರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೊಳಪಡಿಸುವದು.
- ಅಂತರಾಷ್ಟ್ರೀಯ ವ್ಯಾಪಾರದಿಂದ ಹಿಂದುಳಿದ ರಾಷ್ಟ್ರಗಳು ಹೆಚ್ಚು ಪ್ರಯೋಜನ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

## ಅಧ್ಯಾಯ – 4 ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. ಸೇವೆ ಮತ್ತು ವಸ್ತುಗಳನ್ನು ಬಳಸುವವರನ್ನು ಸ್ವಯಂಸೇವಾ ಸಂಸ್ಥೆಗಳು ____ ಎಂದು ಕರೆದವು– **ಬಳಕೆದಾರ.**
2. ಬಳಕೆದಾರರಿಂದ ಹಣಪಡೆದು ವಸ್ತು ಅಥವಾ ಸೇವೆಗಳನ್ನು ನೀಡುವವನೇ ______ – **ಪೂರೈಕೆದಾರ.**
3. ಗ್ರಾಹಕ ಸಂರಕ್ಷಣೆಯ ಅಂದೋಲನ ಮೊದಲಿಗೆ _______ ದೇಶದಲ್ಲಿ ನಡೆಯಿತು. – **ಅಮೆರಿಕ ಸಂಯುಕ್ತ ಸಂಸ್ಥಾನ.**
4. ಭಾರತದಲ್ಲಿ ಯೋಜನಾ ಆಯೋಗವು ಭಾರತದ ಗ್ರಾಹಕ ಸಂಘದ ಸ್ಥಾಪನೆಗೆ ________ ರಲ್ಲಿ ಒತ್ತು ಕೊಟ್ಟಿತು. – **1956.**
5. ಮೊಟ್ಟ ಮೊದಲಿಗೆ ಭಾರತದಲ್ಲಿ _______ರಲ್ಲಿ ಮುಂಬೈ ಪಟ್ಟಣದ ಕೆಲವು ಮಹಿಳೆಯರು ________ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. – **1965, "ಅವೇರ್" ಸಂಸ್ಥೆ.**

6. ಗ್ರಾಹಕನ್ನು ________ ಎಂದು ಕರೆಯುವುದು ಆಕರ್ಷಕವಾದ ಘೋಷನೆಯಾಗಿದೆ. – **ಮಾರುಕಟ್ಟೆಯ ರಾಜ.**

7. ಭಾರತ ಸರಕಾರವು ಗ್ರಾಹಕ ಸಂರಕ್ಷಣಾ ಕಾಯ್ದೆಯನ್ನು ______ ರಲ್ಲಿ ಜಾರಿಗೆ ತಂದಿತು. – **1986.**

8. ವಿಶ್ವ ಗ್ರಾಹಕ ಅಂದೋಲನದ ಚರಿತ್ರೆಯಲ್ಲಿ ________ ಒಂದು ಮಹತ್ತವದ ದಿನವಾಗಿದೆ. – **ಮಾರ್ಚ 15, 1962.**

9. ಗ್ರಾಹಕ ಸಂರಕ್ಷಣಾ ಕಾಯ್ದೆಯು ________ ಮಂಡಳಿಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿತು. – **ಕೇಂದ್ರ ಸಂರಕ್ಷಣಾ ಮಂಡಳಿ.**

10. ಜಿಲ್ಲಾ ಗ್ರಾಹಕ ವೇದಿಕೆಯು ________ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ. – **20 ಲಕ್ಷ ರೂಪಾಯಿಗಳು.**

11. ರಾಷ್ಟ್ರೀಯ ಗ್ರಾಹಕ ಆಯೋಗವು ________ ರೂ.ಗಿಂತ ಹೆಚ್ಚು ಮೌಲ್ಯದಿಂದ ಕೂಡಿದ್ದರೆ ಅಂತಹ ದೂರುಗಳನ್ನು ಇತ್ಯರ್ಥ ಮಾಡುತ್ತದೆ. – **ಒಂದು ಲಕ್ಷ ರೂ.ಗಿಂತ ಹಚ್ಚು.**

12. ಗ್ರಾಹಕನಿಗಿರುವ ಇನ್ನೊಂದು ಹೆಸರು – **ಬಳಕೆದಾರ.**

13. ಹಣಪಡೆದು ವಸ್ತು ಅಥವಾ ಸೇವೆಯನ್ನು ನೀಡುವಾತ – **ವ್ಯಾಪಾರಿ.**

14. ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದರೆ ದೂರನ್ನು _______ ಆಯೋಗಕ್ಕೆ ಸಲ್ಲಿಸಬೇಕು. – **ರಾಜ್ಯ ಗ್ರಾಹಕ ಸಂರಕ್ಷಣಾ ಆಯೋಗ.**

## ಪ್ರಶ್ನೆ : 2] ಒಂದು ಅಂಕದ ಪ್ರಶ್ನೆಗಳು

**1. 'ಟೆಲಿಷಾಪಿಂಗ್' ಎಂದರೇನು?**

ಉತ್ತರ : ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ಇಂದು ಮನೆಯಲ್ಲೇ ಕುಳಿತು ವಸ್ತುಗಳನ್ನು ಕೊಳ್ಳಬಹುದಾಗಿದೆ. ಇದನ್ನು 'ಟೆಲಿಷಾಪಿಂಗ್' ಎನ್ನುತ್ತಾರೆ.

**2. ಗ್ರಾಹಕ ಎಂದರೆ ಯಾರು?**

ಉತ್ತರ : ಗ್ರಾಹಕರೆಂದರೆ ವಸ್ತುಗಳನ್ನು ಕೊಳ್ಳುವವರು ಅಥವಾ ಸೇವೆಗಳನ್ನು ಬೆಲೆಯ ರೂಪದಲ್ಲಿ ಹಣ ಅಥವಾ ವೇತನ ಪ್ರತಿಫಲ ಕೊಟ್ಟು ಕೆಲಸ ಮಾಡಿಸಿಕೊಳ್ಳುವವರಾಗಿದ್ದಾರೆ ಅಥವಾ ಪದಾರ್ಥಗಳನ್ನು ಬಳಸಿಕೊಳ್ಳುವವ ರಾಗಿದ್ದಾರೆ.

**3. ವ್ಯಾಪಾರ ಎಂದರೇನು?**

ಉತ್ತರ : ಯಾವುದೇ ವ್ಯವಹಾರವನ್ನು ಲಾಭದ ಉದ್ದೇಶದಿಂದ ಮಾಡಿದರೆ ಅದನ್ನು ವ್ಯಾಪಾರ ಎನ್ನುತ್ತೇವೆ.

**4. ಗ್ರಾಹಕ ರಕ್ಷಣೆ ಎಂದರೇನು?**

ಉತ್ತರ : ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು ಗ್ರಾಹಕ ರಕ್ಷಣೆ ಎನ್ನುತ್ತಾರೆ.

**5. ಗ್ರಾಹಕರ ಹಕ್ಕುಗಳು ಎಂದರೇನು?**

ಉತ್ತರ : ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಅನೇಕ ಹಕ್ಕುಗಳನ್ನು ಮತ್ತು ಭರವಸೆಗಳನ್ನು ಕೊಡಲಾಗಿದೆ. ಈ ಭರವಸೆಗಳನ್ನು ಗ್ರಾಹಕರ ಹಕ್ಕುಗಳು ಎನ್ನತ್ತೇವೆ.

**6. ಗ್ರಾಹಕರನ್ನು ನಿರಂತರ ಶೋಷಣೆಯಿಂದ ರಕ್ಷಿಸಲು ಇದುವರೆಗೆ ಬಂದ ಕಾಯ್ಕೆಗಳು ಯಾವುವು?**

ಉತ್ತರ : ಗ್ರಾಹಕರನ್ನು ನಿರಂತರ ಶೋಷಣೆಯಿಂದ ರಕ್ಷಿಸಲು ಸರ್ಕಾರ ಇದುವರೆಗೂ ಜಾರಿಗೆ ತಂದ ಪ್ರಮುಖ ಕಾಯ್ದೆಗಳೆಂದರೆ – ಅಗತ್ಯ ವಸ್ತುಗಳ ಕಾಯ್ದೆ, ತೂಕ ಮತ್ತು ಅಳತೆ ಕಾಯ್ದೆ, ಆಹಾರ ಕಲಬೆರಕೆ ಪ್ರತಿಬಂಧಕ ಕಾಯ್ದೆ, ಗ್ರಾಹಕ ಸಂರಕ್ಷಣಾ ಕಾಯ್ದೆ ಇತ್ಯಾದಿ.

**7. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.**

**ಉತ್ತರ : ಮೂರು ಹಂತದ ಗ್ರಾಹಕ ನ್ಯಾಯಾಲಯಗಳು –**

1. ಜಿಲ್ಲಾ ವೇದಿಕೆ, 2. ರಾಜ್ಯ ಆಯೋಗ, 3. ರಾಷ್ಟ್ರೀಯ ಆಯೋಗ.

**8. ರಾಜ್ಯ ಗ್ರಾಹಕ ಆಯೋಗವು ಎಂತಹ ದೂರುಗಳನ್ನು ತೆಗೆದುಕೊಳ್ಳುತ್ತದೆ?**

ಉತ್ತರ : ರಾಜ್ಯ ಗ್ರಾಹ ಆಯೋಗವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು, ಒಂದು ಕೋಟಿ ರೂಪಾಯಿಯವರೆಗಿನ ಮೌಲ್ಯದ ದೂರುಗಳನ್ನು ತೆಗೆದುಕೊಳ್ಳುತ್ತದೆ.

**9. ಗ್ರಾಹಕ ಅಂದೋಲನದ ಮೂಲ ಆಶಯ ಯಾವುದು?**

ಉತ್ತರ : ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ತಪ್ಪಿಸುವುದು ಗ್ರಾಹಕ ಅಂದೋಲನದ ಮೂಲ ಆಶಯವಾಗಿದೆ.

**10. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕು ಯಾವುದು?**

ಉತ್ತರ : ಗ್ರಾಹಕನು ನೀಡುವ ಹಣಕ್ಕೆ ಪ್ರತಿಫಲವಾಗಿ ಯೋಗ್ಯಮಟ್ಟದ ವಸ್ತು ಮತ್ತು ಸೇವೆಗಳನ್ನು ಪಡೆಯುವುದು. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕಾಗಿದೆ.

**11. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ?**

ಉತ್ತರ : ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ರಾಜ್ಯ ಸರಕಾರ ನೇಮಿಸುತ್ತದೆ.

**12. ಒಬ್ಬ ಗ್ರಾಹಕನು ತಾನು ಕೊಂಡ ವಸ್ತುವಿಗೆ ಗ್ಯಾರಂಟಿ ಇದ್ದಾಗ್ಯೂ ತಿರಸ್ಕರಿಸಲ್ಪಟ್ಟಾಗ ಆತನು ಏನು ಮಾಡಬಹುದು?**

ಉತ್ತರ : ಒಬ್ಬ ಗ್ರಾಹಕನು ತಾನು ಕೊಂಡ ವಸ್ತುವಿಗೆ ಗ್ಯಾರಂಟಿ ಇದ್ದಾಗ್ಯೂ ತಿರಸ್ಕರಿಸಲ್ಪಟ್ಟಾಗ ಆತನು ಗ್ರಾಹಕ ಸಂರಕ್ಷಣಾ ಕಾಯ್ದೆಯ ಪ್ರಕಾರ ಸರಿಯಾದ ಸಾಕ್ಷಾಧಾರಗಳ ಸಮೇತ ದೂರು ನೀಡಿ ನ್ಯಾಯಪಡೆಯಬಹುದು.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ವಿಶ್ವ ಗ್ರಾಹಕ ಅಂದೋಲನದ ಚರಿತ್ರೆಯಲ್ಲಿ ಮಾರ್ಚ 15, 1962 ಒಂದು ಮಹತ್ತವದ ದಿನವಾಗಿದೆ. ಏಕೆ? ಅಥವಾ**

**ಮಾರ್ಚ 15 ನೇ ತಾರೀಖನ್ನು ವಿಶ್ವ ಗ್ರಾಹಕರ ಹಕ್ಕುಗಳ ದಿನ ಎಂದು ಆಚರಿಸಲಾಗುತ್ತಿದೆ ಏಕೆ?**

ಉತ್ತರ : ವಿಶ್ವ ಗ್ರಾಹಕರ ಚರಿತ್ರೆಯಲ್ಲಿ ಮಾರ್ಚ 15, 1962 ಒಂದು ಮಹತ್ವದ ದಿನವಾಗಿದೆ. ಅಂದು ಅಂದಿನ ಅಮೇರಿಕದ ಅಧ್ಯಕ್ಷರಾಗಿದ್ದ ಜಾನ್. ಎಫ್. ಕೆನಡಿ ಅವರು ಅಲ್ಲಿನ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು. ಈ ಕಾರಣದಿಂದ ಪ್ರತಿ ವರ್ಷವು ಮಾರ್ಚ 15ನೇ ತಾರೀಖಿನಿಂದ ವಿಶ್ವಗ್ರಾಹಕರ ಹಕ್ಕುಗಳ ದಿನ ಆಚರಿಸಲಾಗುತ್ತದೆ.

**2. ವಿಶ್ವ ಗ್ರಾಹಕರ ಹಕ್ಕುಗಳ ಕಾಯ್ದೆಯ ಉದ್ದೇಶಗಳೇನು?**

**ಉತ್ತರ : ವಿಶ್ವ ಗ್ರಾಹಕರ ಹಕ್ಕುಗಳ ಕಾಯ್ದೆಯ ಉದ್ದೇಶಗಳು.**

- ಗ್ರಾಹಕ ಸಂರಕ್ಷಣಾ ಕಾಯ್ದೆಯು ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಶಸ್ತ್ಯ ನೀಡುವುದು.
- ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.
- ಮಾರುಕಟ್ಟೆಯಲ್ಲಿ ನಡಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಟ್ಟುವುದು.
- ಗುಣಮಟ್ಟ, ಅಳತೆ, ತೂಕ, ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು.
- ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸುವುದು.
- ಗ್ರಾಹಕ ಶಿಕ್ಷಣ ನೀಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.
- ಆರೋಗ್ಯಕರ ಸ್ಪರ್ಧೆಯೊಂದಿಗೆ ಯೋಗ್ಯ ಬೆಲೆಗೆ ಉತ್ತಮ ಗುಣಮಟ್ಟದ ವಸ್ತು ಅಥವಾ ಸೇವೆ ದೊರೆಯುವಂತೆ ಮಾಡುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿದೆ.

**2. ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕರ ಯಾವ ಹಿತಾಸಕ್ತಿಗಳನ್ನು ಕಾಪಾಡುತ್ತದೆ? ಅಥವಾ ಗ್ರಾಹಕರ ಹಕ್ಕುಗಳನ್ನು ಪಟ್ಟಿ ಮಾಡಿ.**

**ಉತ್ತರ : ಗ್ರಾಹಕ ಸಂರಕ್ಷಣಾ ಕಾಯಿದೆಯು ಈ ಕೆಳಗಿನಂತೆ ಗ್ರಾಹಕ ಹಿತಾಸಕ್ತಿಗಳನ್ನು ಕಾಪಾಡುತ್ತದೆ. –**

**ಗ್ರಾಹಕರ ಹಕ್ಕುಗಳು :–**

- ಗ್ರಾಹಕ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿ ಪಡೆಯುವ ಹಕ್ಕು
- ವಸ್ತುಗಳ ಆಯ್ಕೆಯ ಹಕ್ಕು
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು
- ಶೋಷಣೆ ವಿರುದ್ಧ ಪರಿಹಾರ ಕೇಳುವ ಹಕ್ಕು
- ಗ್ರಾಹಕ ಶಿಕ್ಷಣ ಹಕ್ಕು
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು.

**3. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿ ಗಳಾವುವು?**

**ಉತ್ತರ : ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು : –**

- ದೂರುಗಳು ಕೈಬರಹದ ಅಥವಾ ಬೆರಳಚ್ಚಿನ ಮಾದರಿಯಲ್ಲಿರಬೇಕು.
- ಈ ಮಾಹತಿಯಲ್ಲಿ ದೂರುಕೊಡುವವನ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆ ಸರಿಯಾಗಿ ನಮೂದಿಸಿರಬೇಕು.
- ಯಾವ ವ್ಯಾಪಾರಿ ಅಥವಾ ಪೂರೈಕೆದಾರನ ವಿರುದ್ಧ ದೂರು ಕೊಡಬೇಕೆಂಬುದನ್ನು ಪೂರ್ಣವಾಗಿ ನಮೂದಿಸಿರಬೇಕು.
- ಯಾವ ವಸ್ತುವಿನಿಂದ ನಷ್ಟವಾಗಿದೆ ಅಥವಾ ಮೋಸವಾಗಿದೆ ಎಂಬುದು ಮತ್ತು ನಷ್ಟ ಹೊಂದಿರುವ ಮೊಬಲಗೆಷ್ಟೆಂಬುದನ್ನು ಸರಯಾಗಿ ನಮೂದಿಸಿರಬೇಕು.
- ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಇದಕ್ಕೆ ಸಂಬಂಧಪಟ್ಟ ರಸೀದಿ ಅಥವಾ ಬಿಲ್ಲನ್ನು ಲಗತ್ತಿಸಬೇಕು.

➢ ದೂರಿಗೆ ಯಾವುದೇ ಶುಲ್ಕ ಅಥವಾ ನೊಂದಾವಣಿ ಶುಲ್ಕ ಇರುವುದಿಲ್ಲ.
➢ ಗ್ರಾಹಕನೇ ನೇರವಾಗಿ ತನ್ನ ದೂರನ್ನು ಅಧ್ಯಕ್ಷರ ಮುಂದೆ ವಾದಿಸಬಹುದು ವಕೀಲರು ಬೇಕಾಗಿಲ್ಲ.

**4. ರಾಜ್ಯ ಗ್ರಾಹಕ ರಕ್ಷಣಾ ಆಯೋಗದ ರಚನೆಯನ್ನು ತಿಳಿಸಿ.**

**ಉತ್ತರ : ರಾಜ್ಯ ಗ್ರಾಹಕ ಸಂರಕ್ಷಣಾ ಆಯೋಗದ ರಚನೆ –**

➢ ಈ ಆಯೋಗಕ್ಕೆ ರಾಜ್ಯದ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಲಿ ಅಥವಾ ಹಾಲಿ ನ್ಯಾಯಾಧೀಶರಾಗಲಿ ಅಧ್ಯಕ್ಷರಾಗಿರುತ್ತಾರೆ.
➢ ಇದರಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಸಾಮರ್ಥ್ಯವನ್ನು ಹೊಂದಿರುವ ಇಬ್ಬರು ಸದಸ್ಯರಿರುತ್ತಾರೆ.
➢ ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ.
➢ ಈ ಆಯೋಗವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಒಂದು ಕೋಟಿ ರೂಪಾಯಿವರೆಗಿನ ಮೌಲ್ಯದ ಗ್ರಾಹಕ ದೂರುಗಳನ್ನು ತೆಗೆದುಕೊಳ್ಳುತ್ತದೆ.

**5. ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ಆಯೋಗದ ರಚನೆ ತಿಳಿಸಿ.**

**ಉತ್ತರ : ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ಆಯೋಗದ ರಚನೆ –**

➢ ಈ ಆಯೋಗವು ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರ ಅಧ್ಯಕ್ಷತೆಯಿಂದ ಕೂಡಿರುತ್ತದೆ.
➢ ಇಲ್ಲಿ ಇತರೆ ನಾಲ್ಕು ಸದಸ್ಯರಿರುತ್ತಾರೆ. ಇವರು ಸಾರ್ವಜನಿಕ ವ್ಯವಹಾರ ಅಥವಾ ಆಡಳಿತದಲ್ಲಿ ನುರಿತವರಾಗಿರಬೇಕು.
➢ ಇವರಲ್ಲಿ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ.
➢ ಈ ಆಯೋಗವು ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದಿಂದ ಕೂಡಿದ್ದರೆ ಅಂತಹ ದೂರುಗಳನ್ನು ಇತ್ಯರ್ಥ ಮಾಡುತ್ತದೆ.

**6. ಜಿಲ್ಲಾ ಗ್ರಾಹಕ ಸಂರಕ್ಷಣಾ ವೇದಿಕೆಯ ರಚನೆಯನ್ನು ತಿಳಿಸಿ.**

**ಉತ್ತರ : ಜಿಲ್ಲಾ ಗ್ರಾಹಕ ಸಂರಕ್ಷಣಾ ವೇದಿಕೆಯ ರಚನೆ –**

➢ ಜಿಲ್ಲಾ ವೇದಿಕೆಯ ನ್ಯಾಯ ಪೀಠಕ್ಕೆ ರಾಜ್ಯ ಸರ್ಕಾರದಿಂದ ನಾಮಾಮಂಕಿತಗೊಂಡ ಜಿಲ್ಲಾ ನ್ಯಾಯಾಧೀಶರ ಅರ್ಹತೆಯುಳ್ಳ ವ್ಯಕ್ತಿಯು ಅಧ್ಯಕ್ಷರಾಗಿರುತ್ತಾರೆ.
➢ ಇದರಲ್ಲಿ ಇಬ್ಬರು ಸದಸ್ಯರಿದ್ದು ಅವರಲ್ಲಿ ಒಬ್ಬರು ಮಹಿಳೆಯಾಗಿರುತ್ತಾರೆ.
➢ ಈ ವೇದಿಕೆಯು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ.

**7. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?**

ಉತ್ತರ : ಅನೇಕ ಸಂದರ್ಭಗಳಲ್ಲಿ ಮಾರಟಗಾರರು ಗ್ರಾಹಕರನ್ನು ನಿರ್ಲಕ್ಷ್ಯ ಮಾಡುತ್ತಾರೆ. ಅವರನ್ನು ಶೋಷಿಸುತ್ತಾರೆ. ಹಾಗೂ ಮೋಸಗೊಳಿಸುತ್ತಾರೆ. ಗ್ರಾಹಕರಿಗೆ ನೀಡುವ ಹಣಕ್ಕೆ ಪ್ರತಿಫಲವಾಗಿ ಯೋಗ್ಯಮಟ್ಟದ ವಸ್ತು ಮತ್ತು ಸೇವೆಗಳು ಲಭಿಸುವುದಿಲ್ಲ. ಹಾಗಾಗಿ ನಷ್ಟವನ್ನು ಅನುಭವಿಸುತ್ತಾರೆ.

**8. ಬಳಕೆದಾರರ ಶೋಷಣೆಗೆ ಕಾರಣಗಳಾವುವು?**

**ಉತ್ತರ : ಬಳಕೆದಾರರ ಶೋಷಣೆಗೆ ಕಾರಣಗಳು**

➢ ಒಂದು ಹಂತದಲ್ಲಿ ಉತ್ಪಾದಕರು ಸೇವೆ ಮತ್ತು ಸರಕುಗಳನ್ನು ಗ್ರಾಹಕರಿಗೆ ನೇರವಾಗಿ ತಲುಪಿಸುತ್ತಿದ್ದರು. ಇಲ್ಲಿ ಮಧ್ಯವರ್ತಿಗಳ ಹಾವಳಿ ಇರಲಿಲ್ಲ.
➢ ಬೇಸಾಯದ ಉದ್ಯಮವು ಬೆಳೆದಂತೆ ಗ್ರಾಹಕ ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿ ಇವರಿಬ್ಬರ ನಡುವೆ ನೇರ ವ್ಯವಹಾರ ಇಲ್ಲದಾಯಿತು.
➢ ಉತ್ಪಾದಕರು ಮತ್ತು ಗ್ರಾಹಕರು ಕೂಡಿ ನಿರ್ಧರಿಸಬೇಕಾದ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸತೊಡಗಿದರು. ಇದರಿಂದ ಗ್ರಾಹಕರಿಗೆ ಕಷ್ಟ, ನಷ್ಟ ಮತ್ತು ಸಮಸ್ಯೆಗಳಾದವು.

**9. ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನು?**

**ಉತ್ತರ : ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನೆಂದರೆ–**

➢ ನಿರಂತರ ಶೋಷಣೆಯಿಂದ ಬಳಕೆದಾರನ ಅಸಹಾಯಕತೆಯನ್ನು ಅರಿತು ಗ್ರಾಹಕರ ಪರವಾದ ಹೋರಾಟ, ಚಳುವಳಿಗಳನ್ನು ನಡೆಸುವುದು.
➢ ಗ್ರಾಹಕರ ಹಿತಾಸಕ್ತಿಗಳನ್ನು ಕಾಪಾಡುವುದು.

PSG